ಶನಿವಾರ, ಮೇ 9, 2026| ₹ 7.00

prajavani.net prajavani

www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಬೆಂಬಲ

ಟಿವಿಕೆ ಮತ್ತು ಕಾಂಗ್ರೆಸ್ ಪಕ್ಷಗಳನ್ನು ಬೆಂಬಲಿಸಿ ಚೆನ್ನೈನಲ್ಲಿ ಮಹಿಳೆಯೊಬ್ಬರು ಭಿತ್ತಿಪತ್ರವನ್ನು ಪ್ರದರ್ಶಿಸಿದರು

ಕಾರ್ತಿಕ್ ಮಿಂಚು

ಕೋಲ್ಕತ್ತ ನೈಟ್ ರೈಡರ್ಸ್ ತಂಡದ ವೇಗಿ ಕಾರ್ತಿಕ್ ತ್ಯಾಗಿ ಅವರು ಶುಕ್ರವಾರ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಐಪಿಎಲ್ ಪಂದ್ಯದಲ್ಲಿ ಎರಡು ವಿಕೆಟ್ ಪಡೆದು ಮಿಂಚಿದರು

LAUNCHING CASAGRAND CASABLANCA PHASE 2

OFF KANAKAPURA ROAD | 5 MINS FROM FORUM MALL

LUXURIOUS 2, 3 & 4 BHK APTS. & 5 BHK FLOOR VILLAS FROM ₹1.2CR - ₹3.37CR*

*T&C APPLY

27	674	24	2.5	130+
ACRES ROMAN-THEMED COMMUNITY	LUXURY HOMES IN PHASE 2	ACRES OF OPEN SPACE	ACRES OF MONUMENTAL CLUBHOUSES	WORLD-CLASS AMENITIES

PHASE I SOLD OUT 785 HAPPY FAMILIES

PRICE BENEFITS

MARKET PRICE, OFF KANAKAPURA RD. ~~₹9000/SFT.~~

CASAGRAND LAUNCH PRICE ~~₹8399/SFT.~~

CASAGRAND EARLY-BIRD PRICE
₹7999/SFT.
(FOR FIRST 25 BOOKINGS)

BLOCKBUSTER PRICE ADVANTAGE

TYPE	SIZE	LAUNCH PRICE	EARLY BIRD PRICE
2 BHK	1410-1661 SFT.	₹1.25CR-₹1.5CR*	₹1.2CR-₹1.44CR*
3 BHK	1923-2171 SFT.	₹1.71CR-₹1.98CR*	₹1.64CR-₹1.9CR*
4 BHK	2742 SFT.	₹2.46CR*	₹2.37CR*
5 BHK FLOOR VILLA	3939 SFT.	₹3.51CR*	₹3.37CR*

PHASE 2 UNITS - 674 | UNITS SOLD - 183 | AVAILABLE UNITS - 491 | **HANDOVER IN 36 MONTHS**

CREDAI

EXCLUSIVE SITE VISIT AVAILABLE.
VISIT MODEL HOUSE AT SITE. | 93840 54982

SCAN TO WATCH THE PREMIERE OF BLOCKBUSTER LIFE

CASAGRAND building aspirations

PRM/KA/RERA/1251/310/PR/040524/006862
WWW.RERA.KARNATAKA.GOV.IN

LAUNCHING
CASAGRAND CASABLANCA
PHASE 2

LUXURIOUS 2, 3 & 4 BHK APTS. & 5 BHK FLOOR VILLAS
OFF KANAKAPURA ROAD | 5 MINS FROM FORUM MALL

₹1.2CR* ONWARDS

*T&C APPLY

A TRUE BLOCKBUSTER LIFE YOU WON'T FIND ANYWHERE ELSE

COMMUNITY
- An iconic Roman-themed community of 1400+ homes
- 19 acres of lush landscapes with a tropical forest
- Vehicle-free community with basement parking for safer living
- 7-star styled double-height entrance & lift lobbies
- Resort like ambience for luxury living

AMENITIES
- Grand 28000 sft. temperature-controlled swimming pools
- 25+ sports courts like badminton, squash, table tennis, basketball & pickleball
- Leisure zones with 5 amphitheatres, forest walkways, koi & lily ponds, themed gardens & more

CONVENIENCE
- 2 independent entrances for seamless accessibility
- Multi-layer safety & security system
- All-in-one hub: supermarket, cafeteria, clinic, laundry & more
- 100% hassle-free living with assured maintenance services
- Casagrand exclusive community events, festivals & social experiences

FLOOR PLAN AND SPECIFICATIONS
- Spacious homes for maximum functionality, comfort & privacy
- Huge ceiling height windows for 2x brighter & breezier living
- Vaastu-compliant homes with no space wastage
- Convertible balcony in bedrooms offer 3x more ventilation & scenic views
- High-end specifications like Italian marble flooring, digital door lock & luxury bath fittings

LOCATION
- 6 mins signal free access to NICE road
- 5 mins from Vajarahalli metro station
- 10 mins from Forum mall & Global tech park
- Close proximity to schools, colleges, business centers & IT parks

LOCATION BENEFITS
BANNERGHATTA RD. 10 MINS
RR NAGAR 15 MINS
JP NAGAR 18 MINS
BANASHANKARI 20 MINS
ELECTRONIC CITY 25 MINS
JAYANAGAR 28 MINS
BTM LAYOUT 30 MINS



130+ ACTION PACKED AMENITIES

Indoor Amenities

Entertainment
Multipurpose Hall, AV Room, Cricket Simulator, Video Games Room, Entertainment Lounge, Guest Lounge, Terrace Sky Cinema, Rooftop Café & More

Kids Play Area
Ball Pool, Kids Gym, Rock Climbing, Adventurous Play Area & More

Learning
Library, Arts & Crafts Room, Crechè, Business Centre & More

Gym
Digital Interactive Gym, Boxing Corner, Functional Training & More

Health & Fitness
Yoga/Meditation Zone, Steam Room, Indoor Jacuzzi, Salon & Spa

Indoor Sports
Squash Courts, Badminton Courts, Table Tennis, Foosball, Billiards, Pool Table, Indoor Golf Area, Air Hockey & More

Outdoor Amenities

Kids
Rock Climbing Wall, Kids Jungle Gym, Children's Play Area, Trampoline, Skating Rink & More

Sports, Fitness & Wellbeing
Yoga Deck, Pickle Ball Court, Basket Ball Court, Multipurpose Sports Court, Cricket Practice Net, Tennis Court, Kabaddi Court & More

Facilities
Car Charging Bay, Laundry Room, Convenio Store, Clinic, Pharmacy, Guest Rooms & More

Features & Entertainment
Amphitheatre, Party Lawn, Pets Park, Jogging & Walking Track, Cycling Track, Hammock Garden, Koi Pond, Fruit Orchard, Maze Garden, Mini Miyawaki Forest, Multipurpose Lawn & More

Swimming Pool Amenities
Adults Pool, Kids Pool, Pool Side Party Lawn, Water Slide, Sunken Seating, Jacuzzi & More

WHY CASAGRAND?

Top 7 Ranked in India	**Top 2** Ranked in South India	**No.1** Ranked in Chennai for last 8 years*	**22+ years** of Trust & Legacy	**7000+** Homes sold in FY '24 – 25	**6 Cities** Chennai, Bengaluru, Hyderabad, Pune, Coimbatore & Dubai
2 months Guaranteed rental	**6 months** Guaranteed resale	**7 years** Warranty	**10 years** Maintenance by us	**2000+** Quality checks	**On-time** Delivery of projects

CREDAI
EXCLUSIVE SITE VISIT AVAILABLE.
VISIT MODEL HOUSE AT SITE.
93840 54982

SCAN TO EXPERIENCE THE BLOCKBUSTER LIFE

CASAGRAND
building aspirations

*Based on CBRE report 2024

Casagrand Premier Builder Limited is proposing, subject to receipt of requisite approvals, market conditions and other considerations, to make an initial public offer of its equity shares and has filed a draft red herring prospectus ("**DRHP**") with the Securities and Exchange Board of India ("**SEBI**"). The DRHP is available on the website of our Company, at www.casagrand.co.in, the SEBI at www.sebi.gov.in as well as on the websites of the book running lead managers Motilal Oswal Investment Advisors Limited and DAM Capital Advisors Limited at www.motilaloswalgroup.com and www.damcapital.in respectively, and the websites of the stock exchange(s) at www.nseindia.com and www.bseindia.com, respectively. Any potential investor should note that investment in equity shares involves a high degree of risk and for details relating to such risk, see "Risk Factors" of the RHP, when available. Potential investors should not rely on the DRHP filed with SEBI for making any investment decision.

The Equity Shares have not been and will not be registered under the U.S. Securities Act of 1933, as amended ("U.S. Securities Act") or any other applicable law of the United States and, unless so registered, may not be offered or sold within the United States except pursuant to an exemption from, or in a transaction not subject to, the registration requirements of the U.S. Securities Act and applicable state securities laws. Accordingly, the Equity Shares are being offered and sold outside the United States in "offshore transactions" as defined in and in compliance with Regulation S under the U.S. Securities Act and the applicable laws of the jurisdiction where those offers and sales occur.

ಶನಿವಾರ, ಮೇ 9, 2026| ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಮಹಿಳೆಯರದ್ದೇ ಪಾರುಪತ್ಯ

ಇತ್ತೀಚೆಗೆ ನಡೆದ ಐದು ವಿಧಾನಸಭೆಗಳ ಚುನಾವಣೆಯಲ್ಲಿ ಮಹಿಳಾ ಮತದಾರರ ಪ್ರಮಾಣ ಪುರುಷರಿಗಿಂತ ಅಧಿಕವಾಗಿತ್ತು ಎಂದು ಚುನಾವಣಾ ಆಯೋಗ ತಿಳಿಸಿದೆ

ವೈದೇಹಿ ಸೆಮಿಗೆ

ಗುಜರಾತ್‌ನ ಟೆನಿಸ್ ಆಟಗಾರ್ತಿ ವೈದೇಹಿ ಚೌಧರಿ ಅವರು ತುಮಕೂರಿನಲ್ಲಿ ನಡೆಯುತ್ತಿರುವ ಐಟಿಎಫ್ ಡಬ್ಲ್ಯು–35 ಮಹಿಳಾ ಟೆನಿಸ್ ಟೂರ್ನಿಯ ಸಿಂಗಲ್ಸ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿದರು

भारत सरकार | सोमनाथ अनंत ऊर्जा का अनुभव

सोमलिङ्गं नरो दृष्ट्वा सर्वपापैः प्रमुच्यते।
लभते फलं मनोवाञ्छितं मृतः स्वर्गं समाश्रयेत्॥

ಸೋಮನಾಥ

ಪರಂಪರೆಯ 75 ವರ್ಷಗಳು

ಸೋಮನಾಥ ಭಾರತದ ಅದಮ್ಯ ನಾಗರಿಕತೆಯ ಪ್ರತೀಕವಾಗಿದೆ. 1000 ವರ್ಷಗಳ ಕಾಲ ವಿನಾಶಕಾರಿ ಪ್ರಹಾರಗಳಿಗೆ ಈಡಾಗಿದ್ದರೂ, ಇಂದಿಗೂ ಕೂಡ ಸೋಮನಾಥ ನಮ್ಮ ಆತ್ಮಗೌರವ ಮತ್ತು ಸಾಹಸಗಳ ಪ್ರತಿರೂಪವಾಗಿ ತಲೆಯೆತ್ತಿ ನಿಂತಿದೆ.
75 ವರ್ಷಗಳ ಹಿಂದೆ, ಉಕ್ಕಿನ ಮನುಷ್ಯ ಸರದಾರ್ ವಲ್ಲಭಭಾಯಿ ಪಟೇಲ್‌ರವರ ಸಂಕಲ್ಪದಿಂದ ಆಧುನಿಕ ಸೋಮನಾಥ ಮಾರ್ಗ ನಿರ್ಮಾಣಗೊಂಡಿತು. ಈಗ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ ನೇತೃತ್ವದಲ್ಲಿ, ಈ ಪವಿತ್ರ ಕ್ಷೇತ್ರವು ಭಾರತದ ಸಾಂಸ್ಕೃತಿಕ ಪುನರುತ್ಥಾನವನ್ನು ಹೆಮ್ಮೆಯಿಂದ ಸಾರುತ್ತಿದೆ.

ಈ ಅವಿಸ್ಮರಣೀಯ ಸಂದರ್ಭಕ್ಕೆ ಸಾಕ್ಷಿಯಾಗೋಣ ಬನ್ನಿ

“ಸೋಮನಾಥ ಆಶಾ ಗೀತೆಯು, ಸೃಷ್ಟಿಯ ಶಕ್ತಿಯು ವಿನಾಶಕ್ಕಿಂತ ಅಧಿಕ ಪ್ರಬಲವಾಗಿರುತ್ತದೆ, ಎಂಬುದನ್ನು ನಮಗೆ ಕಲಿಸುತ್ತದೆ.”
–ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ (ಅಧ್ಯಕ್ಷರು, ಶ್ರೀ ಸೋಮನಾಥ ಟ್ರಸ್ಟ್)

ಸೋಮನಾಥದ ದಿವ್ಯತೆ ಮತ್ತು ಭವ್ಯತೆಗೆ ಕೊಡುಗೆ ಸಲ್ಲಿಸಲು ಹಾಗೂ ಗೌರವಶಾಲಿ ಇತಿಹಾಸದ ಭಾಗವಾಗಿರಲು ಇಲ್ಲಿ **ಸ್ಕ್ಯಾನ್ ಮಾಡಿ**

ಈಜಲು ಹೋದ ಬಾಲಕರು ಸಾವು

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲೂಕಿನ ಬನ್ನೇರುಘಟ್ಟ ಪೊಲೀಸ್ ಠಾಣೆ ವ್ಯಾಪ್ತಿಯ ಬೆಂಕಿಹಳ್ಳಿ ಗ್ರಾಮದ ಬೆಗಿಹಳ್ಳಿ ಕೆರೆಗೆ ಈಜಲು ಹೋಗಿದ್ದ ಇಬ್ಬರು ಯುವಕರು ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಯಾದಗಿರಿ ಜಿಲ್ಲೆಯ ಶಹಾಪುರದ ಅಂಬರೀಶ್ (22) ಮತ್ತು ಆನಂದ್(21) ಮೃತರು.

ಶುಕ್ರವಾರ ಮಧ್ಯಾಹ್ನ ನಾಲ್ಕು ಮಂದಿ ಯುವಕರು ಬೆಗಿಹಳ್ಳಿ ಕೆರೆಯಲ್ಲಿ ಈಜಲು ಹೋಗಿದ್ದಾರೆ. ಈಜು ಬಾರದೆ ಇಬ್ಬರು ಯುವಕರು ಕೆರೆಯಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಉಳಿದ ಇಬ್ಬರು ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಆನೇಕಲ್ ಮತ್ತು ಎಲೆಕ್ಟ್ರಾನಿಕ್ ಸಿಟಿ ಅಗ್ನಿಶಾಮಕದಳದ ಸಿಬ್ಬಂದಿ ಶುಕ್ರವಾರ ಸಂಜೆಯಿಂದಲೂ ಕಾರ್ಯಾಚರಣೆ ನಡೆಸಿದರು. ಮೃತ ದೇಹಗಳು ಇನ್ನೂ ಪತ್ತೆಯಾಗಿಲ್ಲ. ರಾತ್ರಿ ಆದ್ದರಿಂದ ಕಾರ್ಯಾಚರಣೆ ಸ್ಥಗಿತಗೊಳಿಸಿ ಶನಿವಾರ ಬೆಳಗ್ಗೆಯಿಂದಲೂ ಮೃತ ದೇಹಗಳಿಗಾಗಿ ಹುಡುಕಾಟ ಮುಂದುವರಿಸಲಾಗುವುದು ಎಂದು ಅಗ್ನಿಶಾಮಕ ದಳ ಸಿಬ್ಬಂದಿ ಮತ್ತು ಪೊಲೀಸರು ತಿಳಿಸಿದ್ದಾರೆ.

ಮೇಲ್ಸೇತುವೆ: ಅಕ್ಟೋಬರ್‌ಗೆ ಮುಕ್ತ

ಈಜಿಪುರ: ಸೇಂಟ್ ಜಾನ್ಸ್ ಆಸ್ಪತ್ರೆ ಬಳಿ ಅಡ್ಡಿ ನಿವಾರಣೆ: ರಾಘವೇಂದ್ರ ಪ್ರಸಾದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂಬತ್ತು ವರ್ಷಗಳಿಂದ ನಿರ್ಮಾಣ ಹಂತದಲ್ಲಿಯೇ ಇರುವ ಈಜಿಪುರ ಮೇಲ್ಸೇತುವೆ ಅಕ್ಟೋಬರ್ ಅಂತ್ಯಕ್ಕೆ ಸಂಚಾರಕ್ಕೆ ಮುಕ್ತವಾಗುವ ಭರವಸೆ ಮೂಡಿದೆ.

ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಈಜಿಪುರ ಮೇಲ್ಸೇತುವೆ ಕಾಮಗಾರಿಗೆ ಹೆಚ್ಚಿನ ವೇಗ ನೀಡಲಾಗಿದ್ದು, ಮೇಲ್ಸೇತುವೆ ಕಾಮಗಾರಿ ಅಕ್ಟೋಬರ್ ಅಂತ್ಯದೊಳಗಾಗಿ ಮುಕ್ತವಾಗಲಿದೆ ಎಂದು ಈಜಿಪುರ ಮೇಲ್ಸೇತುವೆ ಯೋಜನೆಯ ಮುಖ್ಯ ಎಂಜಿನಿಯರ್ ರಾಘವೇಂದ್ರ ಪ್ರಸಾದ್ ಅವರು ಶುಕ್ರವಾರ ತಿಳಿಸಿದರು.

‘ಈಜಿಪುರ-ಕೇಂದ್ರೀಯ ಸದನ ಮೇಲ್ಸೇತುವೆ’ ಕಾಮಗಾರಿ ಅಂತಿಮ ಹಂತದಲ್ಲಿದ್ದು, ಸೇಂಟ್ ಜಾನ್ಸ್ ಆಸ್ಪತ್ರೆ ಸಮೀಪದಲ್ಲಿದ್ದ ಅತ್ಯಂತ ಜಟಿಲವಾದ ‘ಪೋರ್ಟಲ್ ಫ್ರೇಮ್’ ನಿರ್ಮಾಣದ ಅಡ್ಡಿಯನ್ನು ಫೆಬ್ರುವರಿಯಲ್ಲಿ ನಿವಾರಿಸಲಾಗಿದೆ. ಈ ನಂತರ ಕಾಮಗಾರಿ ಮತ್ತಷ್ಟು ವೇಗವಾಗಿದೆ’ ಎಂದರು.

‘ಪ್ರಮುಖ ಮೇಲ್ಸೇತುವೆ ಕಾಮಗಾರಿಯನ್ನು ಅಕ್ಟೋಬರ್ ಅಂತ್ಯದೊಳಗಾಗಿ ಪೂರ್ಣಗೊಳಿಸಿದ ಬಳಿಕ, ರ‍್ಯಾಂಪ್‌ಗಳು ಹಾಗೂ ಇನ್ನಿತರೆ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗಾಗಿ ಮುಗಿಸಿ, ಈ ವರ್ಷವೇ ಸಾರ್ವಜನಿಕ ಸಂಚಾರಕ್ಕೆ ಎಲ್ಲ ಮಾರ್ಗಗಳನ್ನೂ ಮುಕ್ತಗೊಳಿಸಲಾಗುವುದು’ ಎಂದು ಮಾಹಿತಿ ನೀಡಿದರು.

ಕಾಮಗಾರಿಯ ಪ್ರಗತಿ: 2017ರ ಮೇ 4ರಂದು ₹203.20 ಕೋಟಿ ವೆಚ್ಚದ 2.38 ಕಿ.ಮೀ ಉದ್ದದ ಮೇಲ್ಸೇತುವೆ ಕಾಮಗಾರಿಯನ್ನು ಸಿಂಪ್ಲೆಕ್ಸ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್‌ಗೆ ವಹಿಸಲಾಗಿತ್ತು. ಆದರೆ, 4 ವರ್ಷ 6 ತಿಂಗಳು ಕಳೆದರೂ ಸಂಸ್ಥೆಯು ಕೇವಲ ಶೇ 42.80ರಷ್ಟು ಭೌತಿಕ ಪ್ರಗತಿ ಮಾತ್ರ ಸಾಧಿಸಿತ್ತು. ಒಟ್ಟು 762 ಸೆಗ್‌ಮೆಂಟ್‌ಗಳಲ್ಲಿ ಕೇವಲ 191 (ಶೇ 25.07) ಮಾತ್ರ ನಿರ್ಮಾಣವಾಗಿದ್ದವು. ನಾಲ್ಕು ಕ್ರೇನ್ ಮತ್ತು ಎರಡು ಲಾಂಚಿಂಗ್ ಗರ್ಡರ್‌ಗಳ ಬದಲು, ಕೇವಲ ಎರಡು ಕ್ರೇನ್ ಮತ್ತು ಒಂದು ಲಾಂಚಿಂಗ್ ಗರ್ಡರ್ ಬಳಸಿ ಕಾಮಗಾರಿಯನ್ನು ನಿಧಾನಗೊಳಿಸಲಾಗಿತ್ತು. ಉಪ ಗುತ್ತಿಗೆದಾರರಿಗೆ ಹಣ ಪಾವತಿಸದ ಪರಿಣಾಮ ಕಾಮಗಾರಿ ಸ್ಥಗಿತಗೊಂಡಿತ್ತು. ಅಂತಿಮವಾಗಿ, ಹೈಕೋರ್ಟ್ ಆದೇಶದ ಮೇರೆಗೆ 2022ರ ಮಾರ್ಚ್ 9ರಂದು ‘ರಿಸ್ಕ್ ಆ್ಯಂಡ್ ಕಾಸ್ಟ್’ ಅಡಿಯಲ್ಲಿ ಗುತ್ತಿಗೆಯನ್ನು ರದ್ದುಪಡಿಸಲಾಯಿತು.

ಈಜಿಪುರ ಮೇಲ್ಸೇತುವೆಯ ಕಾಮಗಾರಿ

ಮೇಲ್ಸೇತುವೆಯ ಬಾಕಿ ಕಾಮಗಾರಿಗಾಗಿ ಬಿ.ಎಸ್.ಸಿ.ಪಿ.ಎಲ್ ಇನ್‌ಫ್ರಾಸ್ಟ್ರಕ್ಚರ್ಸ್ ಲಿಮಿಟೆಡ್‌ಗೆ 2023ರ ನವೆಂಬರ್ 15ರಂದು ಕಾರ್ಯಾದೇಶ ನೀಡಲಾಯಿತು. ಹೊಸ ಗುತ್ತಿಗೆದಾರರು ಸ್ಥಳದ ವಾಸ್ತವ ಸ್ಥಿತಿಯನ್ನು ಪರಿಶೀಲಿಸಿ, ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸಿಕೊಂಡು ಕಾಮಗಾರಿಯನ್ನು ಪೂರ್ಣಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಂಡಿದ್ದಾರೆ.

ಯೋಜನೆಯ ಮುಖ್ಯ ಮಾರ್ಗದ ಕಾಮಗಾರಿಗೆ ಸೇಂಟ್ ಜಾನ್ಸ್ ಆಸ್ಪತ್ರೆ ಸಮೀಪ ‘ಪೋರ್ಟಲ್ ಫ್ರೇಮ್’ ನಿರ್ಮಾಣಕ್ಕಾಗಿ ಭೂಸ್ವಾಧೀನ ಸಮಸ್ಯೆ ಎದುರಾಗಿತ್ತು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಜಿಬಿಎ ಮುಖ್ಯ ಆಯುಕ್ತ ಸಮಯನ್ವಯ, ನಿರಂತರ ಮೇಲ್ವಿಚಾರಣೆಯಿಂದ ಸೇಂಟ್ ಜಾನ್ ಆಡಳಿತ ಮಂಡಳಿ ತಮ್ಮ ಜಮೀನಿನಲ್ಲಿ ಕಾಮಗಾರಿಗೆ ಅನುಮತಿ ನೀಡಿತು. ಹಲವು ವರ್ಷಗಳಿಂದ ಬಾಕಿ ಉಳಿದಿದ್ದ ಈ ಸಮಸ್ಯೆಗೆ ಫೆಬ್ರುವರಿಯಲ್ಲಿ ಪರಿಹಾರ ದೊರೆಯಿತು ಎಂದು ರಾಘವೇಂದ್ರ ಪ್ರಸಾದ್ ಹೇಳಿದರು.

728 ಸೆಗ್‌ಮೆಂಟ್ ಅಳವಡಿಕೆ

ಈಜಿಪುರ ಮೇಲ್ಸೇತುವೆಯ ಎಲ್ಲ ಪೈಲ್ಸ್, ಪೈಲ್ ಕ್ಯಾಪ್‌ಗಳು ಹಾಗೂ ಪಿಯರ್ಸ್ ನಿರ್ಮಾಣ ಪೂರ್ಣಗೊಂಡಿವೆ. ಮುಖ್ಯ ಮಾರ್ಗಕ್ಕೆ ಅಗತ್ಯವಿರುವ ಪೋರ್ಟಲ್ ಬೀಮ್‌ಗಳ ಸ್ಟೇಜಿಂಗ್ ಕಾಮಗಾರಿ ಪ್ರಗತಿಯಲ್ಲಿದೆ. ಒಟ್ಟು 762 ಸೆಗ್‌ಮೆಂಟ್‌ಗಳಲ್ಲಿ 728 ಸೆಗ್‌ಮೆಂಟ್‌ಗಳು ಈಗಾಗಲೇ ಕಾಸ್ಟ್ ಆಗಿದ್ದು, ಕೇವಲ 15 ಸ್ಪಾನ್‌ಗಳ ಅಳವಡಿಕೆ ಮಾತ್ರ ಬಾಕಿ ಇದೆ. ಗ್ರೇಡ್ ಮಟ್ಟದ ರಸ್ತೆಯಲ್ಲಿ ಏಕರೂಪ ಪಾದಚಾರಿ ಮಾರ್ಗ ಹಾಗೂ ರಸ್ತೆ ವಿಸ್ತರಣೆ ಅಗಲೀಕರಣಕ್ಕಾಗಿ ಸೇಂಟ್ ಜಾನ್ಸ್ ಆಸ್ಪತ್ರೆಯ ಜಾಗ ಸೇರಿದಂತೆ ಒಟ್ಟು 5998.6 ಚದರ ಮೀಟರ್ ಖಾಸಗಿ/ಸರ್ಕಾರಿ ಜಮೀನು ಹಸ್ತಾಂತರ ಪ್ರಕ್ರಿಯೆಗೆ ಭೂಸ್ವಾಧೀನ ಹಾಗೂ ಸಂಬಂಧಿತ ವಿಭಾಗದಿಂದ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ರಾಘವೇಂದ್ರ ಪ್ರಸಾದ್ ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

‘ಬೆಂಬಲ ಬೆಲೆಯಡಿ ಸೂರ್ಯಕಾಂತಿ ಖರೀದಿ’

ವಿಜಯಪುರ: ‘2025-26ನೇ ಸಾಲಿನ ಹಿಂಗಾರು ಹಂಗಾಮಿನ ಸೂರ್ಯಕಾಂತಿಯನ್ನು ಬೆಂಬಲ ಬೆಲೆ ಯೋಜನೆ ಅಡಿ ಪ್ರತಿ ಕ್ವಿಂಟಲ್‌ಗೆ ₹7,721 ದರದಲ್ಲಿ ಖರೀದಿಸಲಾಗುವುದು’ ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಅವರು ತಿಳಿಸಿದ್ದಾರೆ.

‘ಕೇಂದ್ರ ಸರ್ಕಾರದ ಬೆಂಬಲ ಬೆಲೆ ಮಾರ್ಗ ಸೂಚಿಗಳ ಅನ್ವಯ ಅಗತ್ಯಕ್ಕೆ ಅನುಗುಣವಾಗಿ ಖರೀದಿ ಕೇಂದ್ರಗಳನ್ನು ತೆರೆದು, ಸೂರ್ಯಕಾಂತಿ ಖರೀದಿಗೆ ಕ್ರಮ ಕೈಗೊಳ್ಳಿ’ ಎಂದು ಸಚಿವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ವಿಜಯಪುರ, ಚಾಮರಾಜನಗರ, ಚಿತ್ರದುರ್ಗ, ಗದಗ, ಕಲಬುರಗಿ, ವಿಜಯನಗರ, ರಾಯಚೂರು, ಧಾರವಾಡ ಜಿಲ್ಲೆಗಳಲ್ಲಿ ಖರೀದಿಸಲಾಗುತ್ತದೆ.

‘ನೋಂದಣಿ ಅವಧಿಯನ್ನು 50 ದಿನ ಮತ್ತು ಖರೀದಿ ಅವಧಿಯನ್ನು 60 ದಿನ ನಿಗದಿಪಡಿಸಲಾಗಿದೆ. ನೋಂದಣಿ ಜೊತೆಗೆ ಖರೀದಿ ಪ್ರಕ್ರಿಯೆ ಆರಂಭಿಸಬೇಕು’ ಎಂದು ಸೂಚಿಸಿದ್ದಾರೆ.

‘ನಾಫೆಡ್ ಮತ್ತು ಎನ್‌ಸಿಸಿಎಫ್ ಸಂಸ್ಥೆಗಳನ್ನು ಕೇಂದ್ರ ಸರ್ಕಾರದ ಖರೀದಿ ಸಂಸ್ಥೆಗಳನ್ನಾಗಿ ಹಾಗೂ ಕರ್ನಾಟಕ ಸಹಕಾರಿ ಎಣ್ಣೆಬೀಜ ಬೆಳೆಗಾರರ ಮಹಾಮಂಡಳವನ್ನು ರಾಜ್ಯ ಸರ್ಕಾರದ ಖರೀದಿ ಸಂಸ್ಥೆಯನ್ನಾಗಿ ನಿಯೋಜಿಸಲಾಗಿದೆ’ ಎಂದಿದ್ದಾರೆ.

‘ಮೋದಿಗೆ ಮೈಸೂರು ಪೇಟ’

ಬೆಂಗಳೂರು: ‘ಪಶ್ಚಿಮ ಬಂಗಾಲ ಸೇರಿ ವಿವಿಧ ರಾಜ್ಯಗಳಲ್ಲಿ ಬಿಜೆಪಿಗೆ ದೊಡ್ಡ ಗೆಲುವು ತಂದು ಕೊಟ್ಟ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮೇ 10 ರಂದು ನಗರಕ್ಕೆ ಭೇಟಿ ನೀಡುತ್ತಿದ್ದು, ಜನರ ಪರವಾಗಿ ಅವರಿಗೆ ಅಭಿನಂದನೆ ಸಲ್ಲಿಸಲಾಗುವುದು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ಹೇಳಿದರು.

ಎಚ್‌ಎಎಲ್ ಬಳಿ ನಡೆಯುವ ಕಾರ್ಯಕ್ರಮದ ಪೂರ್ವ ತಯಾರಿ ವೀಕ್ಷಿಸಿದ ಬಳಿಕ ಮಾತನಾಡಿದ ಅವರು, ‘ಮೋದಿ ಅವರ ವರ್ಚಸ್ಸು, ಅವರ ಜಾಣ್ಮೆ, ಚಾಣಕ್ಯತನ ನಮಗೆ ಉಪಯೋಗವಾಗಿದೆ. ವಿಮಾನ ನಿಲ್ದಾಣದಲ್ಲಿ 30 ನಿಮಿಷ ಭಾಷಣ ಮಾಡುತ್ತಾರೆ. ಪ್ರಧಾನಿಗೆ ಮೈಸೂರು ಪೇಟ ತೊಡಿಸಿ, ರೇಷ್ಮೆ ಶಾಲು ಹೊದಿಸಿ ಗೌರವಿಸಲಾಗುವುದು. ಸುಮಾರು 15-20 ಸಾವಿರ ಜನರು ಬರಲಿದ್ದಾರೆ’ ಎಂದು ಹೇಳಿದರು.

ಮಾಜಿ ಸಚಿವ ಅರವಿಂದ ಲಿಂಬಾವಳಿ, ರಾಜ್ಯ ಪ್ರಧಾನ ಕಾರ್ಯದರ್ಶಿ ನಂದೀಶ್ ರೆಡ್ಡಿ, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್.ಹರೀಶ್, ಮಾಜಿ ಮೇಯರ್ ಗೌತಮ್‌ಕುಮಾರ್ ಉಪಸ್ಥಿತರಿದ್ದರು.

ತಪ್ಪು ಮುಚ್ಚಿಟ್ಟ ಕೆಕೆಆರ್‌ಟಿಸಿ: ₹25 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸ್ ಅಪಘಾತದಲ್ಲಿ ಪ್ರಯಾಣಿಕ ಸಾವನ್ನಪ್ಪಿದ ಪ್ರಕರಣವೊಂದರಲ್ಲಿ ಚಾಲಕನ ತಪ್ಪು ಮುಚ್ಚಿಟ್ಟು, ನ್ಯಾಯಾಲಯದ ಹಾದಿ ತಪ್ಪಿಸಲು ಯತ್ನಿಸಿದ ಪ್ರಕರಣದಲ್ಲಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ (ಕೆಕೆಆರ್‌ಟಿಸಿ) ಚಾಟಿ ಬೀಸಿರುವ ಹೈಕೋರ್ಟ್ ₹25 ಸಾವಿರ ದಂಡ ವಿಧಿಸಿದೆ.

‘ಮೋಟಾರು ವಾಹನ ಅಪಘಾತಗಳ ಪರಿಹಾರ ನ್ಯಾಯಮಂಡಳಿ’ ಆದೇಶ ಪ್ರಶ್ನಿಸಿ ಕೆಕೆಆರ್‌ಟಿಸಿ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ದಾವೆದಾರರು ನ್ಯಾಯಾಲಯಕ್ಕೆ ಶುದ್ಧಹಸ್ತರಾಗಿ ಬರಬೇಕು. ತಪ್ಪು ಮಾಹಿತಿ ನೀಡಿದಲ್ಲಿ ಯಾವುದೇ ಪರಿಹಾರ ಪಡೆಯಲು ಅರ್ಹರಾಗಿರುವುದಿಲ್ಲ. ಇಂತಹ ನಡವಳಿಕೆ ನ್ಯಾಯಾಂಗದ ಪಾವಿತ್ರ್ಯಕ್ಕೆ ಧಕ್ಕೆ ತರುತ್ತದೆ’ ಎಂದು ನ್ಯಾಯಪೀಠ ನಿಗಮವನ್ನು ತರಾಟೆಗೆ ತೆಗೆದುಕೊಂಡಿದೆ.

‘ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ₹25 ಸಾವಿರ ದಂಡ ಪಾವತಿಸಬೇಕು. ದಂಡದ ಮೊತ್ತವನ್ನು ಈ ಮೊಕದ್ದಮೆ ಹೂಡಲು ಕಾರಣರಾದ ಅಧಿಕಾರಿಗಳಿಂದಲೇ ವಸೂಲಿ ಮಾಡಬೇಕು. ಇಂತಹ ದ್ವಂದ್ವ ನಿಲುವುಗಳನ್ನು ತಡೆಗಟ್ಟಲು ನಿಗಮವು ಪ್ರತ್ಯೇಕ ಪರಿಶೀಲನಾ ಸಮಿತಿ ರಚಿಸಬೇಕು. ಈ ಸಂಬಂಧ ಸೂಕ್ತ ಸುತ್ತೋಲೆ ಹೊರಡಿಸಬೇಕು’ ಎಂದು ನ್ಯಾಯಪೀಠ, ಕೆಕೆಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕರಿಗೆ ತಾಕೀತು ಮಾಡಿದೆ.

ಪ್ರಕರಣವೇನು?: ವಿನೋದ್ ಕುಮಾರ್ ಮಾನೆ ಎಂಬುವವರು ಬಸ್ ಅಪಘಾತದಲ್ಲಿ ಮೃತಪಟ್ಟಿದ್ದರು. ಪ್ರಕರಣದ ವಿಚಾರಣೆ ನಡೆಸಿದ್ದ ‘ಮೋಟಾರು ವಾಹನಗಳ ಅಪಘಾತ ಪರಿಹಾರ ನ್ಯಾಯಮಂಡಳಿ’ ಮೃತರ ಕುಟುಂಬಕ್ಕೆ ಅಪಘಾತ ನಡೆದ ದಿನದಿಂದ ಶೇ 6ರ ಬಡ್ಡಿ ದರದಲ್ಲಿ ₹1.10 ಕೋಟಿ ಪರಿಹಾರ ನೀಡುವಂತೆ 2025ರ ಮಾರ್ಚ್ 14ರಂದು ಕೆಕೆಆರ್‌ಟಿಸಿಗೆ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ನಿಗಮವು ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು.

ಮಕ್ಕಳಿಗೆ ಬರೆ: ಜಾಮೀನು ಮಂಜೂರು

ಚಾಕು ಬಿಸಿ ಮಾಡಿ ತಮ್ಮ ಮಕ್ಕಳ ಕೈ-ಕಾಲು ಹಾಗೂ ಬೆನ್ನಿಗೆ ಬರೆಯಿಟ್ಟ ಮತ್ತು ಬಾಸುಂಡೆ ಬರುವಂತೆ ಕೋಲಿನಿಂದ ಹೊಡೆದ ಪ್ರಕರಣವೊಂದರಲ್ಲಿ ಮಕ್ಕಳನ್ನು ಹೆತ್ತ ತಾಯಿ, ಮಲತಂದೆ, ಅಜ್ಜಿ-ತಾತನಿಗೆ ಹೈಕೋರ್ಟ್ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ನಿರೀಕ್ಷಣಾ ಜಾಮೀನು ಕೋರಿ ಚಾಮರಾಜನಗರ ತಾಲ್ಲೂಕಿನ ಕಳ್ಳೀಪುರ ನಿವಾಸಿಗಳಾದ ಮಕ್ಕಳ ತಾಯಿ ರಂಜಿತಾ, ಮಲತಂದೆ ಕೆಂಡಗಣ್ಣ ಸ್ವಾಮಿ, ಅವರ ತಂದೆ ಸ್ವಾಮಿ ಮತ್ತು ರಂಜಿತಾ ಅವರ ತಾಯಿ ಮಹದೇವಮ್ಮ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರ ರಜಾಕಾಲದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿ ಈ ಕುರಿತಂತೆ ಆದೇಶಿಸಿದೆ.

‘ಅರ್ಜಿದಾರರು ಈಗಾಗಲೇ ತನಿಖಾಧಿಕಾರಿ ಮುಂದೆ ಹಾಜರಾಗಿ ತಮ್ಮ ಹೇಳಿಕೆ ದಾಖಲಿಸಿದ್ದಾರೆ. ತನಿಖೆ ಪೂರ್ಣಗೊಂಡಿದ್ದು ಸಂಬಂಧಿಸಿದ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಹಾಗಾಗಿ, ದೋಷಾರೋಪ ಪಟ್ಟಿ ಪ್ರಕಾರ ಅರ್ಜಿದಾರರ ಬಂಧನದ ಅಗತ್ಯ ಕಂಡುಬರುತ್ತಿಲ್ಲ’ ಎಂದು ನ್ಯಾಯಪೀಠ ತಿಳಿಸಿದೆ.

‘ಅರ್ಜಿದಾರರು ತಲಾ ₹50 ಸಾವಿರ ವೈಯಕ್ತಿಕ ಬಾಂಡ್ ಮತ್ತು ಅಷ್ಟೇ ಮೊತ್ತಕ್ಕೆ ಒಬ್ಬರ ಭದ್ರತಾ ಖಾತರಿ ಒದಗಿಸಬೇಕು. ಸಾಕ್ಷ್ಯಾಧಾರ ತಿರುಚಲು ಹಾಗೂ ನಾಶಪಡಿಸಲು ಯತ್ನಿಸಬಾರದು. ಒಂದು ವಾರದೊಳಗೆ ವಿಚಾರಣಾ ನ್ಯಾಯಾಲಯದ ಮುಂದೆ ಹಾಜರಾಗಬೇಕು. ನ್ಯಾಯಾಲಯದ ಪೂರ್ವಾನುಮತಿ ಪಡೆಯದೇ ಚಾಮರಾಜನಗರ ಜಿಲ್ಲೆ ತೊರೆಯಬಾರದು’ ಎಂದು ನ್ಯಾಯಪೀಠ ಅರ್ಜಿದಾರರಿಗೆ ಷರತ್ತು ವಿಧಿಸಿದೆ.

ಮಕ್ಕಳ ಮೊದಲ ತಂದೆ ನಂಜೇಗೌಡ ಅವರ ತಂದೆ ಮಾದೇಗೌಡ ನೀಡಿದ ಮಾಹಿತಿ ಆಧರಿಸಿ ಚಾಮರಾಜನಗರ ಜಿಲ್ಲೆಯ ಮಕ್ಕಳ ಸಂರಕ್ಷಣಾ ಘಟಕದ ಸಮನ್ವಯ ಅಧಿಕಾರಿ ಎಲ್.ಸಿದ್ದರಾಜು 2025ರ ಡಿಸೆಂಬರ್ 4ರಂದು ಚಾಮರಾಜನಗರ ಮಹಿಳಾ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಇದರನ್ವಯ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ಆರೋಪಿಗಳಿಗೆ ಚಾಮರಾಜನಗರದ ಜಿಲ್ಲಾ ಪ್ರಧಾನ ಸಿವಿಲ್ (ಹಿರಿಯ) ಮತ್ತು ಸಿಜೆಎಂ ನ್ಯಾಯಾಲಯ ನಿರೀಕ್ಷಣಾ ಜಾಮೀನು ನಿರಾಕರಿಸಿ 2026ರ ಜನವರಿ 12ರಂದು ಆದೇಶಿಸಿತ್ತು.

ಮಧ್ಯಪ್ರದೇಶ ಸರ್ಕಾರದ ವಿರುದ್ಧ ‘ಸುಪ್ರೀಂ’ ಬೇಸರ

ನವದೆಹಲಿ: ಸಚಿವ ಕುನ್ವಾರ್ ವಿಜಯ್ ಶಾ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವ ಸಂಬಂಧ ನಿರ್ಧಾರ ಕೈಗೊಳ್ಳಲು ವಿಳಂಬ ಮಾಡುತ್ತಿರುವ ಮಧ್ಯಪ್ರದೇಶ ಸರ್ಕಾರದ ನಡೆಗೆ ಸುಪ್ರೀಂ ಕೋರ್ಟ್ ಶುಕ್ರವಾರ ಅತೃಪ್ತಿ ವ್ಯಕ್ತಪಡಿಸಿದೆ.

‘ಆಪರೇಷನ್ ಸಿಂಧೂರ’ದ ಬಗ್ಗೆ 2025ರಲ್ಲಿ ಮಾಧ್ಯಮಗೋಷ್ಠಿ ನಡೆಸಿದ್ದ ಮಹಿಳಾ ಅಧಿಕಾರಿ ಕಲೋನಿಯಲ್ ಸೋಫಿಯಾ ಖುರೇಷಿ ಅವರ ಕುರಿತು ಕುನ್ವಾರ್ ಅವರು ಆಕ್ಷೇಪಾರ್ಹ ಹೇಳಿಕೆ ನೀಡಿದ್ದರು. ಸುಪ್ರೀಂ ಕೋರ್ಟ್‌ನ ನಿರ್ದೇಶನದ ಮೇರೆಗೆ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ದಳ (ಎಸ್‌ಐಟಿ) ಸಚಿವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ಸರ್ಕಾರಕ್ಕೆ ಮನವಿ ಮಾಡಿತ್ತು. ಸರ್ಕಾರದ ನಿರ್ಧಾರ ವಿಳಂಬವಾದ ಹಿನ್ನೆಲೆಯಲ್ಲಿ ಭಾರತದ ಮುಖ್ಯನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠವು ಬೇಸರ ವ್ಯಕ್ತಪಡಿಸಿದೆ.

ಕೇಬಲ್ ಬದಲಾವಣೆ: ಮೇಲ್ಸೇತುವೆಯ ಸಾಮರ್ಥ್ಯ ಪರೀಕ್ಷೆ ಯಶಸ್ವಿ

ಪೀಣ್ಯ ಮೇಲ್ಸೇತುವೆ: ಸಂಚಾರಕ್ಕೆ ಮುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೀಣ್ಯ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ-4ರ ಪೀಣ್ಯ ಮೇಲ್ಸೇತುವೆ (ಶಿವಕುಮಾರ ಸ್ವಾಮೀಜಿ ಮೇಲ್ಸೇತುವೆ) ಸಾಮರ್ಥ್ಯ ಪರೀಕ್ಷೆ ಯಶಸ್ವಿಯಾಗಿದ್ದು, ಶುಕ್ರವಾರ ಬೆಳಿಗ್ಗೆ 11ರ ಬಳಿಕ ವಾಹನ ಸಂಚಾರಕ್ಕೆ ಮುಕ್ತವಾಗಿದೆ.

ಕೇಬಲ್ ಬದಲಾವಣೆ ಹಾಗೂ ಕೇಬಲ್‌ಗಳ ಸಾಮರ್ಥ್ಯ ಪರೀಕ್ಷೆಗೆಂದು ನಾಲ್ಕು ದಿನ ಮೇಲ್ಸೇತುವೆಯಲ್ಲಿ ವಾಹನ ಸಂಚಾರ ಬಂದ್ ಮಾಡಲಾಗಿತ್ತು. ಪರೀಕ್ಷೆ ಯಶಸ್ವಿಯಾದ ಬೆನ್ನಲ್ಲೇ ಕೆನ್ನಮೆಟಲ್ ವಿಡಿಯಾದ ಅಪ್ಪರ್ ರ‍್ಯಾಂಪ್‌ನಿಂದ ಎಸ್‌ಆರ್‌ಎಸ್ ಡೌನ್ ರ‍್ಯಾಂಪ್ ವರೆಗೆ ಎರಡೂ ಕಡೆಯಲ್ಲಿ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ.

ಪೀಣ್ಯ ಮೇಲ್ಸೇತುವೆ

ಮೇಲ್ಸೇತುವೆಯ 1,422 ‘ಪ್ರಿಸ್ಟ್ರೆಸ್ಸಿಂಗ್ ಕೇಬಲ್’ ಬದಲಿಸಲಾಗಿತ್ತು. ₹32 ಕೋಟಿ ವೆಚ್ಚದಲ್ಲಿ ಹೊಸ ಕೇಬಲ್‌ಗಳನ್ನು ಅಳವಡಿಸಿದ್ದ ಬಳಿಕ ಸೇತುವೆಯ ಸಾಮರ್ಥ್ಯ ಮತ್ತು ಸುರಕ್ಷತೆ ಖಚಿತಪಡಿಸಿಕೊಳ್ಳಲು ಭಾರ ಪರೀಕ್ಷೆ ನಡೆಸಲಾಗಿದೆ. ಅಲ್ಲದೇ ಮೇಲ್ಸೇತುವೆ ಸ್ವಚ್ಛತಾ ಕಾರ್ಯವನ್ನೂ ನಡೆಸಲಾಗಿದೆ. ತಲಾ 32 ಟನ್ ಭಾರ ಹೊತ್ತ ಎಂಟು ಟ್ರಕ್‌ಗಳನ್ನು ಆಯ್ಕೆ ಮಾಡಲಾದ ನಾಲ್ಕು ನಿರ್ದಿಷ್ಟ ಸ್ಪ್ಯಾನ್‌ಗಳ ಮೇಲೆ ನಿಲ್ಲಿಸಿ, ಪರೀಕ್ಷೆ ನಡೆಸಲಾಗಿದೆ. ಸೇತುವೆಯ ರಚನಾತ್ಮಕ ಬದಲಾವಣೆಗಳನ್ನು ಗೇಜ್‌ಗಳ ಮೂಲಕ ಅಳೆಯಲಾಗಿದೆ. ನಾಲ್ಕು ದಿನ ಪರೀಕ್ಷೆ ನಡೆಸಲಾಗಿದ್ದು, ಸೇತುವೆ ಸುಭದ್ರ ಆಗಿರುವುದು ಕಂಡುಬಂದಿದೆ ಎಂದು ಮೂಲಗಳು ಹೇಳಿವೆ.

ಎಸ್‌ಐಆರ್ ನ್ಯಾಯಮಂಡಳಿ: ನ್ಯಾ. ಶಿವಜ್ಞಾನಂ ರಾಜೀನಾಮೆ

ಕೋಲ್ಕತ್ತ (ಪಿಟಿಐ): ಮತದಾರರ ವಿಶೇಷ ಪರಿಷ್ಕರಣೆ(ಎಸ್‌ಐಆರ್) ಪ್ರಕ್ರಿಯೆಯಲ್ಲಿ ಹೆಸರು ಕೈಬಿಟ್ಟಿರುವುದನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಮೇಲ್ಮನವಿಗಳ ವಿಚಾರಣೆ ನಡೆಸುತ್ತಿದ್ದ ನ್ಯಾಯಮಂಡಳಿಗೆ ಕಲ್ಕತ್ತ ಹೈಕೋರ್ಟ್ ಮಾಜಿ ಮುಖ್ಯನ್ಯಾಯಮೂರ್ತಿ ಟಿ.ಎಸ್ ಶಿವಜ್ಞಾನಂ ಅವರು ಶುಕ್ರವಾರ ರಾಜೀನಾಮೆ ನೀಡಿದ್ದಾರೆ.

ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಎಸ್‌ಐಆರ್ ಮೇಲನ್ಮವಿ ವಿಚಾರಣೆಗಾಗಿ ಚುನಾವಣಾ ಆಯೋಗವು ನೇಮಿಸಿದ್ದ 19 ನಿವೃತ್ತ ನ್ಯಾಯಮೂರ್ತಿಗಳಲ್ಲಿ ಇವರು ಒಬ್ಬರಾಗಿದ್ದರು.

‘ಕಲ್ಕತ್ತ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳಿಗೆ ರಾಜೀನಾಮೆ ಪತ್ರ ಸಲ್ಲಿಸಿದ್ದೇನೆ’ ಎಂದು ನ್ಯಾಯಮೂರ್ತಿ ಶಿವಜ್ಞಾನಂ ಅವರು ತಿಳಿಸಿದ್ದಾರೆ.


ನ್ಯಾ. ಟಿ.ಎಸ್ ಶಿವಜ್ಞಾನಂ

ನ್ಯಾಯಮಂಡಳಿಯ ಮೂಲಕ ನ್ಯಾ.ಶಿವಜ್ಞಾನಂ ಅವರು ನೀಡಿದ ಆದೇಶಗಳಲ್ಲಿ, ಎಸ್‌ಐಆರ್ ಪ್ರಕ್ರಿಯೆ ವೇಳೆ ಮತದಾರರ ಪಟ್ಟಿಯಿಂದ ಕೈಬಿಡಲಾಗಿದ್ದ ಮೊತಾಬ್ ಶೇಕ್ ಅವರ ಹೆಸರನ್ನು ಮತ್ತೆ ಸೇರಿಸುವಂತೆ ನೀಡಿರುವ ಆದೇಶವು ಮಹತ್ವದ್ದಾಗಿದೆ. ಆ ಬಳಿಕ ಶೇಕ್ ಅವರು ಕಾಂಗ್ರೆಸ್ ಶಾಸಕರಾಗಿ ಆಯ್ಕೆಯಾಗಿದ್ದಾರೆ.

ಸಿ.ವಿ. ಶಿವಶಂಕರ ನುಡಿನಮನ ಕಾರ್ಯಕ್ರಮದಲ್ಲಿ ಜಯಮಾಲಾ

‘ಕನ್ನಡ ಕುವರ’ ಬಿಡುಗಡೆಗೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ವಿ. ಶಿವಶಂಕರ ನಿರ್ಮಿಸಿದ್ದ ‘ಕನ್ನಡ ಕುವರ’ ಚಿತ್ರ ಬಿಡುಗಡೆಯಾಗಿಲ್ಲ. ಸಿನಿಮಾ ಬಿಡುಗಡೆಗೆ ಕ್ರಮ ವಹಿಸಲಾಗುವುದು ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಜಯಮಾಲಾ ಹೇಳಿದರು.

ಸಿ.ವಿ. ಶಿವಶಂಕರ ಕಲಾ ಪ್ರತಿಷ್ಠಾನ ಶುಕ್ರವಾರ ಹಮ್ಮಿಕೊಂಡಿದ್ದ ನುಡಿನಮನ, ಪುಸ್ತಕ ಜನಾರ್ಪಣೆ, ಸಿ.ವಿ. ಶಂಕರ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಸಿರಿವಂತನಾದರೂ ಕನ್ನಡ ನಾಡಲ್ಲೆ ಮೆರೆವೆ, ಭಿಕ್ಷುಕನಾದರೂ ಕನ್ನಡ ನಾಡಲ್ಲೇ ಮಡಿವೆ’ ಎಂಬ ಹಾಡು ಜನಜನಿತವಾಗಿದೆ. ಆದರೆ, ಆ ಹಾಡು ಇರುವ ಸಿನಿಮಾ ಬಿಡುಗಡೆಯಾಗಿಲ್ಲ ಎಂಬುದು ನೋವಿನ ಸಂಗತಿ. ಡಿಜಿಟಲ್ ಯುಗ ಆರಂಭವಾದ ಮೇಲೆ ಹಳೇ ಸಿನಿಮಾಗಳ ಪ್ರಿಂಟ್, ನೆಗೆಟಿವ್‌ಗಳೆಲ್ಲ ಬೂದಿಯಾಗಿ ಹೋಗಿವೆ. ನಾನೇ ನಟಿಸಿದ ತುಳು ಸಿನಿಮಾಗಳು ಇಂದು ಸಿಗುತ್ತಿಲ್ಲ. ಕನ್ನಡ ಕುವರ ಸಿನಿಮಾದ ಪ್ರಿಂಟ್ ಇದೆ ಎಂಬುದು ಗೊತ್ತಿದ್ದರೆ ಈಗಾಗಲೇ ಪ್ರದರ್ಶನ ಮಾಡಬಹುದಿತ್ತು. ಮುಂದಿನ ವರ್ಷ ಚಿತ್ರ ಪ್ರದರ್ಶನ ಮಾಡಲಾಗುವುದು’ ಎಂದು ತಿಳಿಸಿದರು.

ಸಂದೀಪ್ ಸುಂಕದ ಹಾಗೂ ಕವಿರಾಜ್ ಅವರಿಗೆ ಸಿ.ವಿ. ಶಿವಶಂಕರ್ ನೆನಪಿನ ಪ್ರಶಸ್ತಿ ಪ್ರದಾನ ಮಾಡಲಾಯಿತು. ವೆಂಕಟ್ ಭಾರದ್ವಾಜ್, ಸದಾಶಿವ ಶೆಣೈ, ಗಿರಿಜಾ ಲೋಕೇಶ್, ಮದನ್ ಪಟೇಲ್, ಜಯಮಾಲಾ, ಹಾಗೂ ಲಕ್ಷ್ಮಣ್ ಭಾರದ್ವಾಜ್ ಹಾಜರಿದ್ದರು ಪ್ರಜಾವಾಣಿ ಚಿತ್ರ

‘ಹಾಡಿನಲ್ಲಿ ಮಾನವೀಯತೆಯನ್ನು ಬೆರೆಸಿದ ಶಿವಶಂಕರ್ ಸ್ವಾಭಿಮಾನಿ ವ್ಯಕ್ತಿಯಾಗಿದ್ದರು. ಸರಳವಾಗಿ ಬದುಕಿದ್ದರು. ಹಣ, ಗಿಮಿಕ್‌ಗಳು ಆ ಕ್ಷಣಕ್ಕೆ ಆಕರ್ಷಣೆಗೆ ಒಳಗಾಗಬಹುದು. ಸರಳವಾಗಿ ಬದುಕಿದವರ ಹೆಜ್ಜೆ ಗುರುತುಗಳು ಅವರ ಕಾಲಾನಂತರವೂ ಉಳಿಯುತ್ತವೆ’ ಎಂದರು.

ನಟಿ ಗಿರಿಜಾ ಲೋಕೇಶ್ ಮಾತನಾಡಿ, ‘ನನ್ನ ನೃತ್ಯಗುರುಗಳಾದ ಶಿವಶಂಕರ್ ಅವರು ನನಗೆ ಬದುಕಿನ ದಾರಿ ತೋರಿದವರು. ಕನ್ನಡಕ್ಕಾಗಿ ನಿರಂತರ ಕೆಲಸ ಮಾಡಿದವರು’ ಎಂದು ನೆನಪು ಮಾಡಿಕೊಂಡರು.

ಸಿ.ವಿ. ಶಿವಶಂಕರ್ ಸ್ಮರಣಾರ್ಥ ಭರವಸೆಯ ಬರಹಗಾರ ಪ್ರಶಸ್ತಿಯನ್ನು ಚಲನಚಿತ್ರ ಸಾಹಿತಿ ಕವಿರಾಜ್ ಅವರಿಗೆ, ನಿಷ್ಣಾತ ನಿರ್ದೇಶಕ ಪ್ರಶಸ್ತಿಯನ್ನು ಸಂದೂಪ್ ಸುಂಕದ ಅವರಿಗೆ ಪ್ರದಾನ ಮಾಡಲಾಯಿತು. ಚಿತ್ರ ನಿರ್ದೇಶಕ ಮದನ್ ಪಟೇಲ್, ಪತ್ರಕರ್ತ ಸದಾಶಿವ ಶೆಣೈ ಉಪಸ್ಥಿತರಿದ್ದರು.

ಶನಿವಾರ ಮೇ 9 2026 ₹ 7.00
www.prajavani.net

ಪ್ರಜಾ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪ

ಜೂನ್ ಮೂರನೇ ವಾರ ಚುನಾವಣೆ

ಐದು ನಗರ ಪಾಲಿಕೆಗಳ ಮತದಾನ ದಿನ ಮುಂದಿನ ವಾರ ಪ್ರಕಟ: ಸಂಗ್ರೇಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳಿಗೆ ಜೂನ್ 14ರಿಂದ 24ರ ಅವಧಿಯಲ್ಲಿ ಚುನಾವಣೆ ನಡೆಸಲಾಗುವುದು. ಇನ್ನೊಂದು ವಾರದಲ್ಲಿ ದಿನಾಂಕ ಪ್ರಕಟಿಸಿ, ಅಧಿಸೂಚನೆ ಹೊರಡಿಸಲಾಗುವುದು ಎಂದು ರಾಜ್ಯ ಚುನಾವಣಾ ಆಯೋಗದ ಆಯುಕ್ತ ಸಿ.ಎಸ್. ಸಂಗ್ರೇಶಿ ಹೇಳಿದರು.

ಸಂಗ್ರೇಶಿ

ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್, ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಹರೀಶ್ ಕುಮಾರ್, ನಗರ ಪಾಲಿಕೆಗಳ ಆಯುಕ್ತರಾದ ಡಿ.ಎಸ್. ರಮೇಶ್, ಪೊಮ್ಮಲ ಸುನಿಲ್ ಕುಮಾರ್, ಕೆ.ವಿ. ರಾಜೇಂದ್ರ ಸೇರಿದಂತೆ ಚುನಾವಣಾ ಆಯೋಗದ ಹಿರಿಯ ಅಧಿಕಾರಿಗಳ ಜತೆಗೆ ಶುಕ್ರವಾರ ಸಮಾಲೋಚನೆ ನಡೆಸಿದ ನಂತರ ಸುದ್ದಿಗಾರರಿಗೆ ಮಾಹಿತಿ ನೀಡಿದರು.

'ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಹಿರಿಯ ಅಧಿಕಾರಿಗಳು ತಮ್ಮ ಸಮಸ್ಯೆಗಳನ್ನು ಹೇಳಿಕೊಂಡಿದ್ದಾರೆ. ಮಳೆಗಾಲ, ಪರೀಕ್ಷೆ, ಜನಗಣತಿ, ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ಐಆರ್), ಸಿಬ್ಬಂದಿ ಕೊರತೆ ಇರುವುದರಿಂದ ಸ್ವಲ್ಪ ಕಾಲ ಮುಂದೂಡುವಂತೆ ಜಿಬಿಎ ಮನವಿ ಸಲ್ಲಿಸಿದೆ. ಆದರೆ, ಸುಪ್ರೀಂ ಕೋರ್ಟ್‌ನ ಸ್ಪಷ್ಟ ನಿರ್ದೇಶನ ಇರುವುದರಿಂದ ಜೂನ್ 30ರೊಳಗೆ ಚುನಾವಣೆ ಪ್ರಕ್ರಿಯೆ ಮುಗಿಸಲೇಬೇಕು. ಹಾಗಾಗಿ ಚುನಾವಣೆ ಮುಂದೂಡುವ ಅಧಿಕಾರ ನನಗೆ ಇಲ್ಲ' ತಿಳಿಸಿದರು.

'ಜೂನ್ 14ರಿಂದ 24ರ ಅವಧಿಯಲ್ಲಿ ಮತದಾನಕ್ಕೆ ಒಂದು ದಿನಾಂಕ ತಿಳಿಸುವಂತೆ ಜಿಬಿಎಗೆ ಕೇಳಿದ್ದೇವೆ. ಜಿಬಿಜಿಎ ಕಾಯ್ದೆಯಲ್ಲಿನ ಸೆಕ್ಷನ್ 34ರ ಪ್ರಕಾರ ಜಿಬಿಎ ಮುಖ್ಯ ಆಯುಕ್ತರೊಂದಿಗೆ ಸಮಾಲೋಚನೆ ಸಭೆ ನಡೆಸಲಾಗಿದೆ. ಮುಂದಿನ ಒಂದು ವಾರ ಅಥವಾ ಹತ್ತು ದಿನದಲ್ಲಿ ಅವರು ದಿನಾಂಕ ತಿಳಿಸಲಿ, ಬಿಡಲಿ, ಆಯೋಗದ ಅಧಿಕಾರ ಬಳಸಿ, ಚುನಾವಣೆಯ ದಿನಾಂಕವನ್ನು ಘೋಷಿಸಲಾಗುವುದು' ಎಂದರು.

'ಚುನಾವಣೆಗೆ ಮತಪತ್ರ ಬಳಸಲಾಗುತ್ತದೆ ಎಂಬುದನ್ನು ಈ ಹಿಂದೆಯೇ ಹೇಳಲಾಗಿದೆ. ಎಲ್ಲ ವಿವರಗಳನ್ನು ಚುನಾವಣೆಯ ದಿನಾಂಕ ಪ್ರಕಟಿಸುವ ದಿನದಂದು ನೀಡಲಾಗುವುದು' ಎಂದು ಹೇಳಿದರು.

'ನಮ್ಮ ಮುಂದೆ ಈಗ ಇರುವುದು ನಗರ ಪಾಲಿಕೆಗಳ ಚುನಾವಣೆ. ಸುಪ್ರೀಂ ಕೋರ್ಟ್‌ನ ತೂಗುಗತ್ತಿ ನಮ್ಮ ಮೇಲೆ ಇದೆ. ಕೋರ್ಟ್ ಆದೇಶ ಪಾಲನೆ ಮಾಡಲಾಗುವುದು' ಎಂದರು.

> ಐದೂ ನಗರ ಪಾಲಿಕೆ ಚುನಾವಣೆ ಸಿದ್ಧತೆಗಳ ಕುರಿತಂತೆ ಚುನಾವಣಾ ಆಯೋಗದ ಆಯುಕ್ತರಿಗೆ ಮಾಹಿತಿ ನೀಡಲಾಗಿದೆ. ಆಯೋಗ ಅಂತಿಮ ತೀರ್ಮಾನ ಕೈಗೊಳ್ಳಲಿದೆ
>
> **ಮಹೇಶ್ವರ ರಾವ್,** ಜಿಬಿಎ ಮುಖ್ಯ ಆಯುಕ್ತ

'ಆಯೋಗದಲ್ಲಿ ಹಣವಿದೆ'

'ಜಿಬಿಎ ಅಧಿಕಾರಿಗಳು ಸಮಸ್ಯೆ ಹೇಳಿಕೊಂಡ ಮಾತ್ರಕ್ಕೆ ಚುನಾವಣೆಗೆ ಸರ್ಕಾರ ಸಹಕಾರ ನೀಡುತ್ತಿಲ್ಲ ಎಂಬ ಮಾತನ್ನು ಒಪ್ಪುವುದಿಲ್ಲ. ಹಣ ಹಾಗೂ ಸಿಬ್ಬಂದಿ ನೀಡದಿದ್ದರೆ ಅಸಹಕಾರವಾಗುತ್ತದೆ. ಆದರೆ, ಸರ್ಕಾರ ಎಲ್ಲಾ ರೀತಿಯ ಸಹಕಾರ ನೀಡುತ್ತಿದೆ. ತಾಂತ್ರಿಕ ಕಾರಣದಿಂದ ಅನುದಾನ ಬರುವುದು ಸ್ವಲ್ಪ ವಿಳಂಬವಾಗಿರಬಹುದು. ಸರ್ಕಾರ ಆಯೋಗಕ್ಕೆ ಅನುದಾನ ನೀಡಿದೆ' ಎಂದು ಸಂಗ್ರೇಶಿ ಸ್ಪಷ್ಟಪಡಿಸಿದರು.

ನಾಳೆ ಹೊಸಹಳ್ಳಿ–ಕಬ್ಬನ್ ಪಾರ್ಕ್ ಮೆಟ್ರೊ ಸ್ಥಗಿತ

ಬೆಂಗಳೂರು: ನಮ್ಮ ಮೆಟ್ರೊ ನೇರಳೆ ಮಾರ್ಗದಲ್ಲಿ ಮೇ 10ರ ಭಾನುವಾರ ಬೆಳಿಗ್ಗೆ 7ರಿಂದ ಎರಡು ಗಂಟೆ ಭಾಗಶಃ ಸಂಚಾರ ಸ್ಥಗಿತವಾಗಲಿದೆ.

ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ನಿಲ್ದಾಣ ಮತ್ತು ಸೆಂಟ್ರಲ್ ಕಾಲೇಜಿನ ಸರ್ ಎಂ. ವಿಶ್ವೇಶ್ವರಯ್ಯ ಮೆಟ್ರೊ ನಿಲ್ದಾಣಗಳ ನಡುವೆ ನಿರ್ವಹಣಾ ಕಾಮಗಾರಿ ನಡೆಯಲಿದೆ. ಹಾಗಾಗಿ ಭಾನುವಾರ ಬೆಳಿಗ್ಗೆ 7ರಿಂದ 9ರವರೆಗೆ ಹೊಸಹಳ್ಳಿ ಬಾಲ ಗಂಗಾಧರನಾಥ ಸ್ವಾಮೀಜಿ ನಿಲ್ದಾಣ ಮತ್ತು ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣಗಳ ನಡುವೆ ಮೆಟ್ರೊ ಸಂಚಾರ ತಾತ್ಕಾಲಿಕವಾಗಿ ಸ್ಥಗಿತಗೊಳ್ಳಲಿದೆ.

ಈ ಮಾರ್ಗದಲ್ಲಿ ಚಲ್ಲಘಟ್ಟದಿಂದ ವಿಜಯನಗರವರೆಗೆ, ಎಂ.ಜಿ. ರಸ್ತೆಯಿಂದ ವೈಟ್‌ಫೀಲ್ಡ್‌ವರೆಗೆ (ಕಾಡುಗೋಡಿ) ಸಂಚಾರ ಎಂದಿನಂತೆ ಇರಲಿದೆ. ಮಾದಾವರ –ರೇಷ್ಮೆ ಸಂಸ್ಥೆ ನಡುವಿನ ಹಸಿರು ಮಾರ್ಗದಲ್ಲಿ ಆರ್.ವಿ. ರಸ್ತೆ – ಬೊಮ್ಮಸಂದ್ರ ನಡುವಿನ ಹಳದಿ ಮಾರ್ಗದಲ್ಲಿ ಯಾವುದೇ ವ್ಯತ್ಯಯಗಳು ಇರುವುದಿಲ್ಲ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

12 ಗಂಟೆ ಗುಂಡಿಯಲ್ಲಿ ಕಳೆದ ಮಗು

ಪ್ರಜಾವಾಣಿ ವಾರ್ತೆ

ಮೂಡಿಗೆರೆ (ಚಿಕ್ಕಮಗಳೂರು): ಬಾಳೂರು ಹೋಬಳಿಯ ಕೆಳಗೂರು ಗ್ರಾಮದ ಮೇಗೂರು ಕಾಫಿ ಎಸ್ಟೇಟ್‌ನಲ್ಲಿ ಕೂಲಿ ಕಾರ್ಮಿಕರ ಕುಟುಂಬದ ಒಂದೂವರೆ ವರ್ಷದ ಮಗು ಶಿವಂ ನಾಪತ್ತೆಯಾಗಿ, ಮಳೆ ಮತ್ತು ಕತ್ತಲೆ ನಡುವೆಯೂ 12 ಗಂಟೆಗಳ ನಿರಂತರ ಹುಡುಕಾಟದ ನಂತರ ಪತ್ತೆಯಾಗಿದೆ.

ಮಧ್ಯ ಪ್ರದೇಶದ ಕೂಲಿ ಕಾರ್ಮಿಕರ ಕುಟುಂಬ ಮಕ್ಕಳನ್ನು ಮನೆಯಲ್ಲಿ ಬಿಟ್ಟು ಕೂಲಿ ಕೆಲಸಕ್ಕೆ ತೆರಳಿತ್ತು. ಅಕ್ಕಪಕ್ಕದ ಮಕ್ಕಳ ಜೊತೆ ಆಟವಾಡುತ್ತಿದ್ದಾಗ ಮಗು ನಾಪತ್ತೆಯಾಗಿತ್ತು. ಸಂಜೆ ಕೆಲಸ ಮುಗಿಸಿ ಮನೆಗೆ ಬಂದ ಪೋಷಕರು ಮಗು ಕಾಣಿಸದಿರುವುದನ್ನು ಗಮನಿಸಿ ಆತಂಕಕ್ಕೀಡಾಗಿದ್ದರು.

ತಕ್ಷಣವೇ ಬಾಳೂರು ಠಾಣೆ ಪೊಲೀಸರು, ಸ್ಥಳೀಯರು, ಡಾಗ್ ಸ್ಕ್ವಾಡ್ ತಂಡ ಶೋಧ ಆರಂಭಿಸಿತು. ಮಳೆಯ ನಡುವೆಯೇ ಇಡೀ ರಾತ್ರಿ ಪೊಲೀಸರು ತೀವ್ರ ಶೋಧ ನಡೆಸಿದರು.

ಮೂಡಿಗೆರೆ ಸರ್ಕಲ್ ಇನ್‌ಸ್ಪೆಕ್ಟರ್ ರಾಜಶೇಖರ್ ನೇತೃತ್ವದಲ್ಲಿ, ಬಣಕಲ್ ಸಬ್ ಇನ್‌ಸ್ಪೆಕ್ಟರ್ ದಿಲೀಪ್ ಹಾಗೂ ಬಾಳೂರು ಠಾಣೆಯ ಪೊಲೀಸರು ಕಾರ್ಯಾಚರಣೆ ನಡೆಸಿದರು.

ನಸುಕಿನಲ್ಲಿ ಮನೆಯಿಂದ 500 ಮೀಟರ್ ದೂರದ ಹಳ್ಳದ ಸಮೀಪದ ಗುಂಡಿಯಲ್ಲಿ ಮಳೆ ಮಧ್ಯೆ ಮಗು ನಡುಗುತ್ತಾ ಕುಳಿತಿತ್ತು. ಮಗು ಕಂಡ ಕ್ಷಣ ಸ್ಥಳೀಯರು, ಕುಟುಂಬದವರು ಕಣ್ಣೀರಿಟ್ಟರು.

ತೆರವಾಗದ ಮರಗಳು

ರಸ್ತೆ ಹಾಗೂ ಪಾದಚಾರಿ ಮಾರ್ಗಗಳಲ್ಲಿ ಬಿದ್ದಿರುವ ಮರ– ಕೊಂಬೆಗಳ ಮಾಹಿತಿಯನ್ನು ಚಿತ್ರಗಳೊಂದಿಗೆ 'ಪ್ರಜಾವಾಣಿ'ಗೆ ಕಳುಹಿಸಿಕೊಡಿ.

DH DECCAN HERALD
ಪ್ರಜಾವಾಣಿ
ಸಿಟಿಜನ್ ಕನೆಕ್ಟ್
ಉತ್ತಮ ಬೆಂಗಳೂರಿಗಾಗಿ ಸಹಯೋಗ
96060 38256
dhpvcitizenconnect@printersmysore.co.in

ಜಯನಗರದ ಅಶೋಕ ಪಿಲ್ಲರ್ ರಸ್ತೆಯಲ್ಲಿ ತೆರವಾಗದೇ ಉಳಿದಿರುವ ಮರ ಕೊಂಬೆಗಳು ಪ್ರಜಾವಾಣಿ ಚಿತ್ರ. ಪ್ರಶಾಂತ್ ಎಚ್.ಜಿ.

ಬುಲ್ ಟೆಂಪಲ್ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಉಳಿದಿರುವ ಮರ–ಕೊಂಬೆಗಳು

ಪದ್ಮನಾಭನಗರದ 20ನೇ ಮುಖ್ಯರಸ್ತೆಯಲ್ಲಿ ತೆರವಾಗದೇ ಉಳಿದಿರುವ ಮರದ ಕೊಂಬೆಗಳ ರಾಶಿ – ಪ್ರಜಾವಾಣಿ ಚಿತ್ರ:ರಂಜು ಪಿ.

ಕಬ್ಬನ್ ರಸ್ತೆಯಲ್ಲಿ ಉಳಿದಿರುವ ಮರ–ಕೊಂಬೆಗಳು

ಕುರ್ಚಿ ತೆರವಿನ ಆಸಕ್ತಿ, ಬಿದ್ದರುವ ಮರ ತೆರವಿನಲ್ಲಿಲ್ಲ: ಅಶೋಕ

ಬೆಂಗಳೂರು: 'ನಗರದಲ್ಲಿ 500ಕ್ಕೂ ಹೆಚ್ಚು ಮರಗಳು ನೆಲಕ್ಕುರುಳಿ, ವಾರ ಕಳೆದರೂ ರಸ್ತೆ ಬದಿಯಲ್ಲೇ ಕೊಳೆಯುತ್ತಿವೆ. ಪಾದಚಾರಿ ಮಾರ್ಗಗಳು ಬಂದ್ ಆಗಿವೆ. ಜನ ಜೀವ ಕೈಯಲ್ಲಿ ಹಿಡಿದು ರಸ್ತೆಗಳಲ್ಲಿ ನಡೆಯುವ ಪರಿಸ್ಥಿತಿ ಇದೆ. ಆದರೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮರ ತೆರವುಗಿಂತ, ಸಿಎಂ ಕುರ್ಚಿ ತೆರವುಗೊಳಿಸುವ ರಾಜಕೀಯದಲ್ಲಿ ಬ್ಯುಸಿಯಾಗಿದ್ದಾರೆ. ಹೈಕಮಾಂಡ್ ದೆಹಲಿಗೆ ಕರೆದು 'ಶುಭ ಸುದ್ದಿ' ಕೊಡುತ್ತಾರೆ ಎಂದು ಹಗಲುಗನಸು ಕಾಣುತ್ತಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಟೀಕಿಸಿದ್ದಾರೆ.

'ಪ್ರಜಾವಾಣಿ'ಯಲ್ಲಿ ಮೇ 8ರಂದು ಪ್ರಕಟವಾಗಿರುವ 'ತೆರವಾಗದ ಮರ; ಸಂಚಾರಕ್ಕೆ ಸಂಚಕಾರ' ವರದಿಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿರುವ ಅವರು, '30 ತಂಡಗಳನ್ನು ನಿಯೋಜಿಸಿದ್ದೇವೆ ಎಂದು ಸರ್ಕಾರ ಘೋಷಣೆ ಮಾಡುತ್ತದೆ. ಆದರೆ ವಾಸ್ತವದಲ್ಲಿ ಕಾಣಿಸುವುದು ಏನು? ಅಸ್ತವ್ಯಸ್ತವಾಗಿ ಬಿದ್ದಿರುವ ಕೊಂಬೆಗಳ ರಾಶಿ... ನಿರ್ಲಕ್ಷ್ಯದ ಆಡಳಿತ. ಫ್ಲೆಕ್ಸ್‌ಗಳಲ್ಲಿ, ಜಾಹೀರಾತುಗಳಲ್ಲಿ 'ಬ್ರ್ಯಾಂಡ್ ಬೆಂಗಳೂರು' ಕಟ್ಟುವ ಸರ್ಕಾರಕ್ಕೆ, ರಸ್ತೆಯ ಮೇಲೆ ಬಿದ್ದ ಒಂದು ಮರವನ್ನು ತೆರವುಗೊಳಿಸುವ ಸಾಮರ್ಥ್ಯವೂ ಇಲ್ಲವೇ? ಇದು ಕೇವಲ ಆಡಳಿತ ವೈಫಲ್ಯವಲ್ಲ, ಇದು ಬೆಂಗಳೂರಿನ ಜನರ ಸುರಕ್ಷತೆಯ ಮೇಲಿನ ನಿರ್ಲಕ್ಷ್ಯ. ಬಜೆಟ್ ಇಲ್ಲವೇ? ಇಚ್ಛಾಶಕ್ತಿ ಇಲ್ಲವೇ? ಅಥವಾ ಮರ ತೆರವಿಗೂ 'ಕಮಿಷನ್' ಬೇಕೇ? ಬೆಂಗಳೂರು ಜನ ಉತ್ತರ ಕೇಳುತ್ತಿದ್ದಾರೆ' ಎಂದಿದ್ದಾರೆ.

ದೆಹಲಿ ಆಟದಲ್ಲಿ ಆಸಕ್ತಿ: ನಾರಾಯಣಸ್ವಾಮಿ

ವಿಧಾನಪರಿಷತ್‌ನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರೂ ವರದಿಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿ, 'ಮನೆ ಗೆದ್ದು ಮಾರು ಗೆಲ್ಲು ಎಂಬ ಗಾದೆಗೆ ವಿರುದ್ಧವಾಗಿ, ರಾಜ್ಯದ ಕಾಂಗ್ರೆಸ್ ಸರ್ಕಾರ ಮಾರು ಗೆಲ್ಲುವುದು ಹಾಗಿರಲಿ, ರಸ್ತೆಯಲ್ಲಿ ಬಿದ್ದ ಮರಗಳನ್ನೂ ಗೆಲ್ಲಲೂ ಸಾಧ್ಯವಾಗುತ್ತಿಲ್ಲ. ಪಾದಚಾರಿಗಳು ಜೀವವನ್ನು ಕೈಯಲ್ಲಿ ಹಿಡಿದು ರಸ್ತೆಯಲ್ಲಿ ಓಡಾಡುತ್ತಿದ್ದಾರೆ. ಆದರೆ ನಮ್ಮ 'ಬ್ರ್ಯಾಂಡ್ ಬೆಂಗಳೂರು' ಶಿಲ್ಪಿಗಳು ಸಿಎಂ ಕುರ್ಚಿ ತೆರವುಗೊಳಿಸಲು ದೆಹಲಿ ಆಟದಲ್ಲಿ ಹೆಚ್ಚು ಆಸಕ್ತಿ ವಹಿಸಿದ್ದಾರೆ' ಎಂದು ಟೀಕಿಸಿದ್ದಾರೆ.

'ಸುಪ್ರೀಂ' ಮೆಟ್ಟಿಲೇರಿದ ರಾಜೇಗೌಡ

ಪ್ರಜಾವಾಣಿ ವಾರ್ತೆ

ನವದೆಹಲಿ: ಶೃಂಗೇರಿ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆಗೆ ಸೂಚಿಸಿದ್ದ ಕರ್ನಾಟಕ ಹೈಕೋರ್ಟ್‌ನ ಆದೇಶ ಪ್ರಶ್ನಿಸಿ ಮಾಜಿ ಶಾಸಕ ಟಿ.ಡಿ.ರಾಜೇಗೌಡ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಶುಕ್ರವಾರ ಒಪ್ಪಿದೆ.

'ಚಲಾವಣೆಯಾಗಿರುವ 1,811 ಅಂಚೆ ಮತಗಳ ಪೈಕಿ ತಿರಸ್ಕೃತಗೊಂಡಿರುವ 279 ಅಂಚೆ ಮತಗಳನ್ನು ಮರು ಪರಿಶೀಲಿಸಿ, ನಂತರ ಎಲ್ಲ ಅಂಚೆ ಮತಗಳನ್ನು ಮರು ಎಣಿಕೆ ಮಾಡಿ ಫಲಿತಾಂಶ ಪ್ರಕಟಿಸಬೇಕು' ಎಂದು ನಿರ್ದೇಶಿಸಿದ್ದ ಹೈಕೋರ್ಟ್‌ನ ಏಪ್ರಿಲ್ 6ರ ಆದೇಶವನ್ನು ಅವರು ಮೇಲ್ಮನವಿಯಲ್ಲಿ ಪ್ರಶ್ನಿಸಿದ್ದಾರೆ.

ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠದ ಎದುರು ಹಿರಿಯ ವಕೀಲ ದೇವದತ್ ಕಾಮತ್ ವಿಷಯ ಪ್ರಸ್ತಾಪಿಸಿ, ಮೇಲ್ಮನವಿಯನ್ನು ಮೇ 11ರಂದು ತುರ್ತಾಗಿ ಪಟ್ಟಿ ಮಾಡುವಂತೆ ಕೋರಿದರು.

'ಮರುಎಣಿಕೆ ಪ್ರಕ್ರಿಯೆಗೆ ಆದೇಶಿಸುವ ಮೂಲಕ ಹೈಕೋರ್ಟ್ ಲೋಪ ಎಸಗಿದೆ. ಇದರ ಪರಿಣಾಮವಾಗಿ ಅಂತಿಮವಾಗಿ ಬಿಜೆಪಿ ಮುಖಂಡ ಡಿ.ಎನ್. ಜೀವರಾಜ್ ಅವರನ್ನು ಶೃಂಗೇರಿಯ ಚುನಾಯಿತ ಶಾಸಕ ಎಂದು ಘೋಷಿಸಲಾಯಿತು' ಎಂದು ಕಾಮತ್ ಪೀಠದ ಗಮನಕ್ಕೆ ತಂದರು.

2023ರ ವಿಧಾನಸಭಾ ಚುನಾವಣೆಯಲ್ಲಿ ರಾಜೇಗೌಡ ಅವರು ಜೀವರಾಜ್ ಅವರನ್ನು 201 ಮತಗಳ ಅಂತರದಿಂದ ಸೋಲಿಸಿದ್ದರು. 1,811 ಅಂಚೆಮತಗಳು ಚಲಾವಣೆಯಾಗಿದ್ದವು.

ರಾಜೇಗೌಡಅವರ ಸಮೀಪದ ಪ್ರತಿಸ್ಪರ್ಧಿ ಡಿ.ಎನ್.ಜೀವರಾಜ್ ಹೈಕೋರ್ಟ್‌ಗೆ ಚುನಾವಣಾ ತಕರಾರು ಅರ್ಜಿ ಸಲ್ಲಿಸಿ, '1951ರ ಜನ ಪ್ರಾತಿನಿಧ್ಯ ಕಾಯ್ದೆ ಮತ್ತು ಭಾರತ ಚುನಾವಣಾ ಆಯೋಗ ಹೊರಡಿಸಿದ ಚುನಾವಣಾ ಅಧಿಕಾರಿಯ ಕೈಪಿಡಿಯ ನಿಬಂಧನೆಗಳ ಪ್ರಕಾರ, ಪ್ರತಿವಾದಿ ವಿಜೇತ ಅಭ್ಯರ್ಥಿಯು ಚುನಾವಣೆಯಲ್ಲಿ ಎಸಗಿರುವ ದುಷ್ಕೃತ್ಯಗಳು, ಅಪರಾಧಗಳು, ಅನೈತಿಕ ಕೃತ್ಯಗಳು ಮತ್ತು ಲೋಪಗಳ ಆರೋಪಗಳನ್ನು ಪರಿಗಣಿಸಬೇಕು. ಕ್ಷೇತ್ರದಲ್ಲಿ ಚಲಾವಣೆಯಾದ ಮತಗಳನ್ನು ಕಾನೂನಿನ ಪ್ರಕಾರ ಮರು ಎಣಿಕೆ ಮಾಡಲು ಆದೇಶಿಸಿ ಫಲಿತಾಂಶ ಗಳನ್ನು ಹೊಸದಾಗಿ ಘೋಷಿಸಲು ಆದೇಶಿಸಬೇಕು' ಎಂದು ಕೋರಿದ್ದರು. ಹೈಕೋರ್ಟ್ ಆದೇಶದ ಪ್ರಕಾರ, ಕಳೆದ ಶನಿವಾರ ಮರು ಮತ ಎಣಿಕೆ ನಡೆಸಲಾಗಿತ್ತು.

2023ರಲ್ಲಿ ಸಿಂಧುವಾಗಿದ್ದ 1,540 ಮತಗಳಲ್ಲಿ 255 ಮತಗಳು ಮರು ಮತ ಎಣಿಕೆ ವೇಳೆ ಅಸಿಂಧುವಾಗಿದ್ದರಿಂದ ರಾಜೇಗೌಡ ಅವರ ಶಾಸಕ ಸ್ಥಾನಕ್ಕೆ ಕುತ್ತು ಉಂಟಾಗಿತ್ತು. 52 ಮತಗಳ ಮುನ್ನಡೆ ಸಾಧಿಸಿದ್ದ ಜೀವರಾಜ್ ಅವರನ್ನು ಚುನಾಯಿತ ಎಂದು ಘೋಷಿಸಲಾಗಿತ್ತು.

ಪೀಠ ಸಮ್ಮತಿ

ತ್ವರಿತ ವಿಚಾರಣೆಯ ಕೋರಿಕೆಯನ್ನು ಪರಿಗಣಿಸುವುದಾಗಿ ಪೀಠ ಹೇಳಿದೆ.

'ಸಾಮಾನ್ಯವಾಗಿ, ನಾವು ಇಂತಹ ವಿಷಯಗಳಲ್ಲಿ ತಡೆಯಾಜ್ಞೆ ನೀಡುತ್ತೇವೆ. ಆದರೆ, ನಾವು ನಿಮ್ಮ ಮೇಲ್ಮನವಿಯನ್ನು ಪರಿಶೀಲಿಸುತ್ತೇವೆ' ಎಂದು ಪೀಠ ಹೇಳಿದೆ.

ಕಾವೇರಿ ವನ್ಯಧಾಮ ಗಂಡಾನೆ ಸಾವು

ಹನೂರು (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಕಾವೇರಿ ವನ್ಯಧಾಮದಲ್ಲಿ ಗಾಯಗೊಂಡಿದ್ದ ಗಂಡಾನೆ ಶುಕ್ರವಾರ ಮೃತಪಟ್ಟಿತು.

ವನ್ಯಜೀವಿ ವಲಯದ ಗೋಪಿನಾಥಂ ಜಲಾಶಯದಲ್ಲಿ ನೀರು ಕುಡಿಯಲು ತೆರಳಿದ್ದ ಕಾಡಾನೆ ಹೊರ ಬರಲಾಗದೆ ಜಲಾಶಯದ ಪಾತ್ರದಲ್ಲೇ ಉಳಿದಿತ್ತು. ಕಾಲಿಗೆ ಗಾಯ ಆಗಿರಬಹುದೆಂದು ಸ್ಥಳೀಯರು ಅರಣ್ಯಾಧಿಕಾರಿಗಳ ಗಮನಕ್ಕೆ ತಂದ ಬಳಿಕ ಪಟಾಕಿ ಸಿಡಿಸಿ ಕಾಡಿಗೆ ಓಡಿಸಲಾಗಿತ್ತು.

'ಆನೆಯ ಸೊಂಡಿಲಿಗೆ ಗಂಭೀರ ಗಾಯವಾಗಿದ್ದು ಆಹಾರ ಸೇವಿಸಲಾಗದೆ ನಿತ್ರಾಣಗೊಂಡು ಮೃತಪಟ್ಟಿದೆ' ಎನ್ನಲಾಗಿದೆ. 'ಚಿಕಿತ್ಸೆ ಸಹಿತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳದ್ದರಿಂದ ಮೃತಪಟ್ಟಿದೆ' ಎಂದು ಸ್ಥಳೀಯರೊಬ್ಬರು ದೂರಿದರು.

ಸಾವಿನ ಕಾರಣ ಕುರಿತು ಮಾಹಿತಿ ಪಡೆಯಲು ಕಾವೇರಿ ವನ್ಯಧಾಮದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸುರೇಂದ್ರ ಅವರಿಗೆ ಕರೆ ಮಾಡಿದರೂ ಸಂಪರ್ಕಕ್ಕೆ ಸಿಗಲಿಲ್ಲ.

ಬಿಎಸ್‌ವೈ ಅಭಿಮಾನೋತ್ಸವ ಇಂದು; ಅಮಿತ್ ಶಾ ಆಗಮನ

ಕೇಸರಿ ರಂಗಿನಲ್ಲಿ ಕೋಟೆನಗರಿ

● ಎಂ.ಎನ್. ಯೋಗೇಶ್

ಚಿತ್ರದುರ್ಗ: ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರು ರಾಜಕಾರಣದಲ್ಲಿ 50 ವರ್ಷ ಪೂರೈಸಿದ ಅಂಗವಾಗಿ ಶನಿವಾರ (ಮೇ 9) ನಗರದಲ್ಲಿ ನಡೆಯುವ 'ಬಿಎಸ್‌ವೈ ಅಭಿಮಾನೋತ್ಸವ' ಕಾರ್ಯಕ್ರಮಕ್ಕೆ ಕೋಟೆನಗರಿ ಸಜ್ಜಾಗಿದೆ. ಇಡೀ ನಗರ ಕೇಸರಿಮಯವಾಗಿದ್ದು ಬಂಟಿಂಗ್ಸ್, ಕಟೌಟ್‌ಗಳು ರಾರಾಜಿಸುತ್ತಿವೆ.

ಮಾದಾರ ಚನ್ನಯ್ಯ ಗುರುಪೀಠದ ಪಕ್ಕದ ವಿಶಾಲ ಮೈದಾನದಲ್ಲಿ ಮಧ್ಯಾಹ್ನ 2 ಗಂಟೆಯಿಂದಲೇ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಪಶ್ಚಿಮ ಬಂಗಾಳದ ನೂತನ ಮುಖ್ಯಮಂತ್ರಿ ಪ್ರಮಾಣವಚನ ಸಮಾರಂಭದಲ್ಲಿ ಪಾಲ್ಗೊಂಡ ಬಳಿಕ ನಗರಕ್ಕೆ ಬರಲಿದ್ದು, ಸಂಜೆ 4 ಗಂಟೆಗೆ ವೇದಿಕೆಗೆ ಆಗಮಿಸಲಿದ್ದಾರೆ.

ಐತಿಹಾಸಿಕ ಹಿನ್ನೆಲೆಯ ಚಿತ್ರದುರ್ಗದ ಪ್ರಮುಖ ಸ್ಮಾರಕಗಳು, ಬೀದಿಗಳು, ವೃತ್ತಗಳನ್ನು ವಿಶೇಷವಾಗಿ ಅಲಂಕರಿಸಲಾಗಿದೆ. ರಾಷ್ಟ್ರೀಯ ಹೆದ್ದಾರಿ– 48ರಲ್ಲಿ 6 ಕಿ.ಮೀ.ವರೆಗೆ ಕೇಸರಿ ಬಂಟಿಂಗ್ಸ್, ಅಭಿಮಾನೋತ್ಸವದ ಧ್ವಜ ಅಳವಡಿಸಲಾಗಿದೆ. ನಗರದಲ್ಲಿ ಹಾದುಹೋಗಿರುವ ಹಳೇ ರಾಷ್ಟ್ರೀಯ ಹೆದ್ದಾರಿ ಸಂಪೂರ್ಣವಾಗಿ ಕೇಸರಿಮಯವಾಗಿದೆ. ರಾಜ್ಯದ ವಿವಿಧೆಡೆಯಿಂದ ಬರುವ ಲಕ್ಷಾಂತರ ಜನರ ವಾಹನಗಳಿಗೆ 10ಕ್ಕೂ ಹೆಚ್ಚು ಕಡೆಗಳಲ್ಲಿ ನಿಲುಗಡೆ ವ್ಯವಸ್ಥೆ ಮಾಡಲಾಗಿದೆ.

ಅಭಿಮಾನೋತ್ಸವದ ಅಂಗವಾಗಿ ಶುಕ್ರವಾರ ಪುರಪ್ರವೇಶ ಮಾಡಿದ ಬಿ.ಎಸ್.ಯಡಿಯೂರಪ್ಪ ಅವರು ಮೆರವಣಿಗೆ ವೇಳೆ ಜನರತ್ತ ಕೈಬೀಸಿದರು

ವಿಶಾಲ ಮೈದಾನದಲ್ಲಿ 3 ವೇದಿಕೆಗಳನ್ನು ನಿರ್ಮಿಸಲಾಗಿದೆ. ಮುಖ್ಯ ವೇದಿಕೆಯಲ್ಲಿ ಕೇಂದ್ರ ಸಚಿವರಾದ ಅಮಿತ್ ಶಾ, ಪ್ರಲ್ಹಾದ ಜೋಶಿ, ವಿ.ಸೋಮಣ್ಣ, ಶೋಭಾ ಕರಂದ್ಲಾಜೆ, ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ, ಸಂಸದರಾದ ಜಗದೀಶ ಶೆಟ್ಟರ್, ಬಸವರಾಜ ಬೊಮ್ಮಾಯಿ, ಗೋವಿಂದ ಕಾರಜೋಳ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಪಾಲ್ಗೊಳ್ಳಲಿದ್ದಾರೆ.

ಮುಖ್ಯವೇದಿಕೆ ಬಲಬದಿಯ ವೇದಿಕೆಯಲ್ಲಿ ರಾಜ್ಯದ ವಿವಿಧೆಡೆಯಿಂದ ಬರುವ ಸಾವಿರಕ್ಕೂ ಹೆಚ್ಚು ಸ್ವಾಮೀಜಿಗಳು ಆಸೀನರಾಗಲಿದ್ದಾರೆ. ಮಧ್ಯಾಹ್ನ 2 ಗಂಟೆಯಿಂದಲೇ ಸ್ವಾಮೀಜಿಗಳ ಆಶೀರ್ವಚನ ಆರಂಭವಾಗಲಿದೆ. ಎಡಭಾಗದ ಇನ್ನೊಂದು ವೇದಿಕೆಯನ್ನು ಪಕ್ಷದ ಸಂಸದರು, ಶಾಸಕರು, ಮಾಜಿ ಶಾಸಕರು, ಮಾಜಿ ಸಚಿವರು ಹಾಗೂ ಪ್ರಮುಖ ಮುಖಂಡರಿಗೆ ಮೀಸಲಿಡಲಾಗಿದೆ.

ವಿವಿಧೆಡೆಯಿಂದ 10 ಲಕ್ಷಕ್ಕೂ ಅಧಿಕ ಜನರು ಬರಬಹುದು ಎಂಬ ನಿರೀಕ್ಷೆ ಇದೆ. ಎಲ್ಲರಿಗೂ ಬೆಳಿಗ್ಗೆ ತಿಂಡಿ ಹಾಗೂ ಮಧ್ಯಾಹ್ನ ಊಟದ ವ್ಯವಸ್ಥೆ ಮಾಡಲಾಗಿದೆ. 5 ವಿಭಾಗಗಳಲ್ಲಿ ನಿರಂತರವಾಗಿ ದಾಸೋಹ ನಡೆಯಲಿದೆ. ಬೇಸಿಗೆಯ ಕಾರಣಕ್ಕೆ ಇಡೀ ಸಭಾಂಗಣದಲ್ಲಿ ಫ್ಯಾನ್ ಅಳವಡಿಸಲಾಗಿದೆ. 30ಕ್ಕೂ ಹೆಚ್ಚು ಕಡೆ ಮಜ್ಜಿಗೆ ವಿತರಣೆ ಮಾಡುವ ಕೌಂಟರ್ ತೆರೆಯಲಾಗಿದೆ.

ಯಡಿಯೂರಪ್ಪ ಅವರ ಜೀವನ ಚರಿತ್ರೆ 'ಕೆಂದಾವರೆ– ಕಮಲ ಅರಳಿದ ಕಥೆ', 'ಸದನ ಶಿಕಾರಿ– ಯಡಿಯೂರಪ್ಪನವರ ಗುಡುಗಿನ ನುಡಿಗಳು' ಕೃತಿಗಳು ಕಾರ್ಯಕ್ರಮದಲ್ಲಿ ಬಿಡುಗಡೆಯಾಗಲಿವೆ.

f prajavani.net prajavani
ಶನಿವಾರ, ಮೇ 9, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 128 | ಪುಟ 26
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 77,328 | ನಿಫ್ಟಿ 24,176 | $/₹ 93.51 | ಚಿನ್ನ (Std. 10g) ₹1,57,250 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,68,800 (ಬೆಂಗಳೂರು)

‘ಮಾವು’ ಸಂಭ್ರಮ

ಮಂಗಳೂರಿನ ಕದ್ರಿ ಉದ್ಯಾನದಲ್ಲಿ ನಡೆಯುತ್ತಿರುವ ಗೇರು, ಮಾವು, ಹಲಸು ಮೇಳದಲ್ಲಿ ಯುವತಿಯೊಬ್ಬರು ಮಾವಿನ ಹಣ್ಣಿನೊಂದಿಗೆ ಸಂಭ್ರಮಿಸಿದರು

ಚಿತ್ರಕಲಾ चित्रकला
Karnataka Chitrakala Parishath
150+ ಭಾರತದ ಆಹ್ವಾನಿತ ಕಲಾವಿದರು
ನೂರಾರು ಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟ
ಮೇ 10 ಭಾನುವಾರದವರೆಗೆ | ಬೆಳಿಗ್ಗೆ 11.00 ರಿಂದ ರಾತ್ರಿ 8.00ರವರೆಗೆ
ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರ ಕೃಪ ರಸ್ತೆ, ಬೆಂಗಳೂರು - 01
ಬನ್ನಿ. ನೋಡಿ. ಸಂಗ್ರಹಿಸಿ.
ನಮ್ಮ art Bengaluru VISHVA KALA SANGAMA

118 ಸಂಖ್ಯೆಗೆ ರಾಜ್ಯಪಾಲರ ಪಟ್ಟು

ಎಡಪಕ್ಷಗಳ ಬೆಂಬಲದೊಂದಿಗೆ 116ಕ್ಕೆ ಏರಿದ ಟಿವಿಕೆ; ವಿಸಿಕೆ ಬೆಂಬಲ ಸಾಧ್ಯತೆ

ಪ್ರಜಾವಾಣಿ ವಾರ್ತೆ/ ಪಿಟಿಐ

ಚೆನ್ನೈ: ನಟ ವಿಜಯ್ ನೇತೃತ್ವದ ತಮಿಳಗ ವೆಟ್ರಿ ಕಳಗಂ (ಟಿವಿಕೆ), ಇತರ ಕೆಲ ಪಕ್ಷಗಳ ಜತೆಗೂಡಿ ‘ಮ್ಯಾಜಿಕ್ ಸಂಖ್ಯೆ’ 118ರ ಸನಿಹ ತಲುಪಿದರೂ ತಮಿಳುನಾಡಿನಲ್ಲಿ ನೂತನ ಸರ್ಕಾರ ರಚನೆಯ ಕುರಿತ ಗೊಂದಲ ಮುಂದುವರಿದಿದೆ.

ಸಿಪಿಐ ಮತ್ತು ಸಿಪಿಎಂ ಪಕ್ಷಗಳು ಟಿವಿಕೆಗೆ ಶುಕ್ರವಾರ ಅಧಿಕೃತವಾಗಿ ತಮ್ಮ ಬೆಂಬಲ ಘೋಷಿಸಿದವು. ವಿಡುದಲೈ ಚಿರುತ್ತೈಗಳ್ ಕಚ್ಚಿ (ವಿಸಿಕೆ) ಕೂಡಾ ವಿಜಯ್ ಅವರನ್ನು ಬೆಂಬಲಿಸುವ ಸೂಚನೆ ನೀಡಿದೆ. ಆದರೆ ಶನಿವಾರವಷ್ಟೇ ಅಧಿಕೃತ ಘೋಷಣೆ ಮಾಡುವ ಸಾಧ್ಯತೆಯಿದೆ.

ಎಡ ಪಕ್ಷಗಳು ಬೆಂಬಲ ಘೋಷಿಸಿದ ಕೆಲ ಗಂಟೆಗಳ ಬಳಿಕ ವಿಜಯ್ ಅವರು ಸರ್ಕಾರ ರಚನೆಗೆ ಆಹ್ವಾನ ಪಡೆಯುವ ಸಂಬಂಧ ರಾಜ್ಯಪಾಲ ರಾಜೇಂದ್ರ ವಿಶ್ವನಾಥ ಅರ್ಲೇಕರ್ ಅವರನ್ನು ಭೇಟಿಯಾದರು. ವಿಜಯ್ ಅವರು 116 ಶಾಸಕರ ಬೆಂಬಲ ಇರುವ ಪತ್ರವನ್ನು ರಾಜ್ಯಪಾಲರಿಗೆ ಸಲ್ಲಿಸಿದ್ದಾರೆ. ಆದರೆ ಸರಳ ಬಹುಮತಕ್ಕೆ ಅಗತ್ಯವಿರುವ 118 ಶಾಸಕರ ಬೆಂಬಲದೊಂದಿಗೆ ಬರುವಂತೆ ರಾಜ್ಯಪಾಲರು ವಿಜಯ್ ಅವರಿಗೆ ಸೂಚಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ವಿಜಯ್

ದಿನದ ಬೆಳವಣಿಗೆ

- ಸರ್ಕಾರ ರಚನೆಗೆ ಟಿವಿಕೆಯನ್ನು ಆಹ್ವಾನಿಸಲು ರಾಜ್ಯಪಾಲರಿಗೆ ನಿರ್ದೇಶನ ನೀಡುವಂತೆ ಕೋರಿ ಪಕ್ಷದ ಸದಸ್ಯರಾದ ಕೆ.ಎಝಿಲರಸಿ ಶುಕ್ರವಾರ ಸುಪ್ರೀಂ ಕೋರ್ಟ್ ಮೊರೆ ಹೋದರು
- ರಾಜ್ಯಪಾಲರ ಭೇಟಿ ಬಳಿಕ ಸಿಪಿಎಂ, ಸಿಪಿಐ ಕಚೇರಿಗೆ ತೆರಳಿ ಧನ್ಯವಾದ ಸಲ್ಲಿಸಿದ ವಿಜಯ್
- ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾಜಾ ಅವರ ಜತೆ ಮಾತನಾಡಿ, ಟಿವಿಕೆಯನ್ನು ಬೆಂಬಲಿಸುವಂತೆ ಕೋರಿದರು
- ಏಕೈಕ ಸ್ಥಾನ ಗೆದ್ದಿರುವ ಎಎಂಎಂಕೆ, ವಿಜಯ್‌ಗೆ ಬೆಂಬಲ ನೀಡುವುದಿಲ್ಲ ಎಂದಿದೆ

‘ಶನಿವಾರ ಪ್ರಮಾಣ ವಚನ ಸ್ವೀಕರಿಸಲು ಆಹ್ವಾನಿಸುವಂತೆ ವಿಜಯ್ ಅವರು ರಾಜ್ಯಪಾಲರನ್ನು ಕೋರಿದ್ದಾರೆ. ಆದರೆ, ಸರ್ಕಾರ ರಚನೆಗೆ ಅಗತ್ಯ ಸಂಖ್ಯಾಬಲ ಇರುವುದನ್ನು ತೋರಿಸುವಂತೆ ರಾಜ್ಯಪಾಲರು ಪಟ್ಟು ಹಿಡಿದಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

▶6

ಬಂಗಾಳದಲ್ಲಿ ಇನ್ನು ಸುವೇಂದು ‘ಅಧಿಕಾರ’

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಒಂದೂವರೆ ದಶಕ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಆಡಳಿತದ ಬಳಿಕ ಸುವೇಂದು ಅಧಿಕಾರಿಯ (55) ಕೈಗೆ ಬಿಜೆಪಿಯು ಅಧಿಕಾರದ ದಂಡವನ್ನು ನೀಡಿದೆ.

ಪಶ್ಚಿಮ ಬಂಗಾಳದ ಬಿಜೆಪಿ ಶಾಸಕಾಂಗ ಪಕ್ಷದ ನಾಯಕನಾಗಿ ಸುವೇಂದು ಅಧಿಕಾರಿ ಹೆಸರನ್ನು ಕೇಂದ್ರ ಗೃಹ ಸಚಿವ, ಬಿಜೆಪಿ ವೀಕ್ಷಕ ಅಮಿತ್ ಶಾ ಶುಕ್ರವಾರ ಔಪಚಾರಿಕವಾಗಿ ಘೋಷಿಸಿದರು. ಸುವೇಂದು ಅವರು ಬಂಗಾಳದ ಒಂಬತ್ತನೆಯ ಹಾಗೂ ಬಿಜೆಪಿಯ ಮೊದಲ ಮುಖ್ಯಮಂತ್ರಿಯಾಗಿ ಶನಿವಾರ ಅಧಿಕಾರ ಸ್ವೀಕರಿಸಲಿದ್ದಾರೆ.

ರಾಶ್‌ಬೆಹಾರಿಯಿಂದ ಗೆದ್ದ ಸಾಮಿಕ್ ಭಟ್ಟಾಚಾರ್ಯ ಮತ್ತು ಸ್ವಪನ್ ದಾಸ್‌ಗುಪ್ತ ಅವರ ಹೆಸರುಗಳು ಕೂಡ ಬಂಗಾಳದ ಮುಖ್ಯಮಂತ್ರಿ ಹುದ್ದೆಗೆ ಚರ್ಚೆಯಲ್ಲಿದ್ದರೂ, ಬಿಜೆಪಿಯ ಕೇಂದ್ರ ನಾಯಕತ್ವವು ಅಧಿಕಾರಿ ಅವರನ್ನೇ ಅಧಿಕಾರದ ಸ್ಥಾನದಲ್ಲಿ ಕೂರಿಸಿದೆ. ಇದಕ್ಕೆ ಮುಖ್ಯ ಕಾರಣ, ಅಧಿಕಾರಿ ಅವರ ಸಂಘಟನಾ ಸಾಮರ್ಥ್ಯ ಮತ್ತು ಸಾಂಸ್ಥಿಕ ಜಾಲ.

ದಶಕದ ಹಿಂದೆ ಟಿಎಂಸಿಯ ಬೇರುಗಳನ್ನು ಬಂಗಾಳದ ಗ್ರಾಮೀಣ ಮಟ್ಟದಲ್ಲಿ ಬಲವಾಗಿ ತಳವೂರುವಂತೆ ಮಾಡಿದ್ದು ಇದೇ ಅಧಿಕಾರಿ. ಇದೇ ಸಾಂಸ್ಥಿಕ ಬಲವನ್ನು ಬಳಸಿಕೊಂಡು ಬಿಜೆಪಿ ಈ ಬಾರಿ ಬಂಗಾಳದಲ್ಲಿ ಕಮಲ ಅರಳುವಂತೆ ಮಾಡಿದೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಿರುದ್ಧದ ನೇರ ಗೆಲುವು ಕೂಡ, ಅಧಿಕಾರಿಗೆ ಮುಖ್ಯಮಂತ್ರಿ ಕುರ್ಚಿಯ ಹಾದಿಯನ್ನು ಸುಗಮಗೊಳಿಸಿದೆ.

‘ಬಂಗಾಳದಲ್ಲಿ ಕಮ್ಯುನಿಸ್ಟ್ ಯುಗದಲ್ಲಿ ಸೃಷ್ಟಿಯಾಗಿದ್ದ ವಾತಾವರಣವನ್ನು ಮಮತಾ ಬ್ಯಾನರ್ಜಿ ಇನ್ನಷ್ಟು ಬಲಪಡಿಸಿದರು, ಅಲ್ಲಿ ಮತ ಚಲಾಯಿಸುವುದು ಅಸಾಧ್ಯವಾಗಿತ್ತು. ಬಂಗಾಳದ ಜನರಿಗೆ ಧನ್ಯವಾದ’ ಎಂದು ಸುವೇಂದು ಅಧಿಕಾರಿ ಅವರು ಹೇಳಿದ್ದಾರೆ.

ಕೇರಳಂ ಸಿ.ಎಂ ಆಯ್ಕೆ: ಖರ್ಗೆಗೆ ವರದಿ ಸಲ್ಲಿಕೆ

ನವದೆಹಲಿ (ಪಿಟಿಐ): ಕೇರಳಂ ಮುಖ್ಯಮಂತ್ರಿ ಆಯ್ಕೆಗೆ ಸಂಬಂಧಿಸಿದಂತೆ ಶಾಸಕರ ಅಭಿಪ್ರಾಯ ಸಂಗ್ರಹಿಸಿದ್ದ ಕಾಂಗ್ರೆಸ್ ವೀಕ್ಷಕರು ತಮ್ಮ ವರದಿಯನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಶುಕ್ರವಾರ ಸಲ್ಲಿಸಿದ್ದಾರೆ. ಮುಖ್ಯಮಂತ್ರಿ ಅಭ್ಯರ್ಥಿಯ ಆಯ್ಕೆ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳುವಂತೆ ಪಕ್ಷದ ಹೈಕಮಾಂಡ್‌ಗೆ ಮನವಿ ಮಾಡಿದ್ದಾರೆ.

ಎಐಸಿಸಿ ವೀಕ್ಷಕರಾದ ಮುಕುಲ್ ವಾಸ್ನಿಕ್ ಮತ್ತು ಅಜಯ್ ಮಾಕನ್ ಅವರು ಕಾಂಗ್ರೆಸ್ ಶಾಸಕರೊಂದಿಗೆ ಗುರುವಾರ ಸಭೆ ನಡೆಸಿ, ಅಭಿಪ್ರಾಯ ಪಡೆದುಕೊಂಡಿದ್ದರು. ನೂತನ ಶಾಸಕರು ವ್ಯಕ್ತಪಡಿಸಿರುವ ಅಭಿಪ್ರಾಯದ ಕುರಿತು ಖರ್ಗೆ ಅವರೊಂದಿಗೆ ಚರ್ಚಿಸಿದ್ದಾರೆ.

▶6

ಐಎಫ್‌ಎಸ್; ಬಸವರಾಜ ಕೆಂಪವಾಡಗೆ ಮೊದಲ ರ‍್ಯಾಂಕ್

ನವದೆಹಲಿ (ಪಿಟಿಐ): ಭಾರತೀಯ ಅರಣ್ಯ ಸೇವೆ ಪರೀಕ್ಷೆಯ (2025ನೇ ಸಾಲಿನ) ಫಲಿತಾಂಶವನ್ನು ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ಶುಕ್ರವಾರ ಪ್ರಕಟಿಸಿದ್ದು, ಬಸವರಾಜ ಕೆಂಪವಾಡ ಮೊದಲ ರ‍್ಯಾಂಕ್ ಪಡೆದಿದ್ದಾರೆ.

ಉಳಿದಂತೆ ಅನ್ಸುಮಾನ್ ಕುಮಾರ್ ಸಿಂಗ್, ಸಿದ್ಧಾರ್ಥ್ ಕ್ರಮವಾಗಿ ಎರಡು ಹಾಗೂ ಮೂರನೇ ರ‍್ಯಾಂಕ್ ಪಡೆದಿದ್ದಾರೆ.

ಫಲಿತಾಂಶವು ಆಯೋಗದ ವೆಬ್‌ಸೈಟ್ www.upsc.gov.in.ನಲ್ಲಿ ಲಭ್ಯವಿದೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ

‘ಮಾರಾಟದಲ್ಲಿ ಭಾಗಿಯಾಗಿ ಮೇಲ್ಮನವಿ ಸಲ್ಲಿಸುವಂತಿಲ್ಲ’

ಪ್ರಜಾವಾಣಿ ವಾರ್ತೆ

ನವದೆಹಲಿ: ಪಿಟಿಸಿಎಲ್ ಭೂಮಿ ಪರಭಾರೆಗೆ ಸಂಬಂಧಿಸಿದಂತೆ ಮಹತ್ವದ ತೀರ್ಪು ನೀಡಿರುವ ಸುಪ್ರೀಂಕೋರ್ಟ್, ಭೂಮಿ ವರ್ಗಾವಣೆ ಪ್ರಕ್ರಿಯೆಯಲ್ಲಿ ಪಾಲುದಾರರಾಗಿರುವ ವ್ಯಕ್ತಿಗಳು ನಂತರ ಅದರ ಮಾರಾಟ ಪ್ರಕ್ರಿಯೆಯನ್ನು ಪ್ರಶ್ನಿಸುವಂತಿಲ್ಲ ಎಂದು ತಿಳಿಸಿದೆ.

ಕರ್ನಾಟಕ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ (ನಿರ್ದಿಷ್ಟ ಭೂಮಿಯ ವರ್ಗಾವಣೆಯ ನಿರ್ಬಂಧ–ಪಿಟಿಸಿಎಲ್) ಕಾಯ್ದೆ ಅಡಿಯ ಭೂ ವರ್ಗಾವಣೆ ಪ್ರಕರಣದಲ್ಲಿ ನ್ಯಾಯಮೂರ್ತಿಗಳಾದ ಕೆ. ವಿನೋದ್ ಚಂದ್ರನ್ ಮತ್ತು ಸಂಜಯ್ ಕುಮಾರ್ ಅವರಿದ್ದ ವಿಭಾಗೀಯ ಪೀಠ ಈ ತೀರ್ಪು ನೀಡಿದೆ.

ಈ ವಿವಾದಿತ ಭೂಮಿಯನ್ನು 1977ರಲ್ಲಿ ಮಂಜೂರು ಮಾಡಲಾಗಿತ್ತು. ನಂತರ 1997ರಲ್ಲಿ ಈ ಭೂಮಿಯು ಮೊದಲ ವರ್ಗಾವಣೆಯಾಗಿತ್ತು. 2003ರಲ್ಲಿ ಮೇಲ್ಮನವಿದಾರರಾದ ಸೀತಮ್ಮ ಎಂಬವರು ಖರೀದಿ ಮಾಡಿದ್ದರು. ಆದರೆ, ಈ ಮಾರಾಟ ಪ್ರಕ್ರಿಯೆ ಕಾನೂನುಬದ್ಧವಾಗಿಲ್ಲ. ಅದನ್ನು ರದ್ದುಗೊಳಿಸಬೇಕು ಎಂದು ಕೋರಿ ಮೂಲ ಮಂಜೂರುದಾರರ ಮಕ್ಕಳು 2006ರಲ್ಲಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಪಿಟಿಸಿಎಲ್ ಕಾಯ್ದೆಯ ಸೆಕ್ಷನ್ 4ರ ಅನುಸಾರ ಈ ಭೂಮಿಯನ್ನು ಮಾರಾಟ ಮಾಡುವ ಮೊದಲು ಸರ್ಕಾರದ ಅನುಮತಿ ಪಡೆಯುವುದು ಕಡ್ಡಾಯ ಎಂಬುದು ಅರ್ಜಿದಾರರ ವಾದವಾಗಿತ್ತು. ಇದನ್ನು ಪರಿಗಣಿಸಿದ್ದ ಹೈಕೋರ್ಟ್ ಮಾರಾಟ ಪ್ರಕ್ರಿಯೆಯನ್ನು ರದ್ದುಗೊಳಿಸಿ ಆದೇಶ ಹೊರಡಿಸಿತ್ತು. ಕಾಯ್ದೆಯ ಸೆಕ್ಷನ್ 4ರ ಪ್ರಕಾರ, ಸರ್ಕಾರದ ಪೂರ್ವಾನುಮತಿ ಇಲ್ಲದೆ ಯಾವುದೇ ವರ್ಗಾವಣೆ ಅಮಾನ್ಯ ಎಂದು ಹೈಕೋರ್ಟ್ ಅಭಿಪ್ರಾಯ ಪಟ್ಟಿತ್ತು. ಈ ಆದೇಶ ಪ್ರಶ್ನಿಸಿ ಸೀತಮ್ಮ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ‘ಮಂಜೂರಾದ 15 ವರ್ಷಗಳ ಬಳಿಕವಷ್ಟೇ ಜಮೀನಿನ ಮೊದಲ ವರ್ಗಾವಣೆ ಆಗಿದೆ. 1978ರ ಕಾಯ್ದೆಯು ಈ ಜಮೀನಿಗೆ ಅನ್ವಯಿಸುವುದಿಲ್ಲ’ ಎಂದು ಮೇಲ್ಮನವಿದಾರರ ಪರ ವಕೀಲರು ವಾದಿಸಿದ್ದರು.

ವಿಚಾರಣೆ ನಡೆಸಿದ ನ್ಯಾಯಪೀಠವು, ‘ಅರ್ಜಿದಾರರು ಮೂಲ ವರ್ಗಾವಣೆ ಪ್ರಕ್ರಿಯೆಯಲ್ಲಿ ಪಾಲುದಾರರಾಗಿದ್ದರು. ಆಗ ಅವರಿಗೆ 35 ಹಾಗೂ 25 ವರ್ಷ ಆಗಿತ್ತು. ಅವರಿಗೆ ಹಿಂದಿನ ಮಂಜೂರಾತಿ, ಮೊದಲ ವರ್ಗಾವಣೆ ಹಾಗೂ ಮಾರಾಟ ಪ್ರಕ್ರಿಯೆಯ ಕುರಿತು ಮಾಹಿತಿ ಇತ್ತು.ಅಲ್ಲದೆ, ಮಾರಾಟ ಪ್ರಕ್ರಿಯೆ ನಡೆದ 9 ವರ್ಷಗಳ ನಂತರ ಮೇಲ್ಮನವಿ ಸಲ್ಲಿಸಲಾಗಿತ್ತು. ಈ ವಿಳಂಬವನ್ನು ಹೈಕೋರ್ಟ್ ಗಂಭೀರವಾಗಿ ಪರಿಗಣಿಸಬೇಕಿತ್ತು’ ಎಂದು ಅಭಿಪ್ರಾಯಪಟ್ಟಿದೆ. ಮಾರಾಟ ಪ್ರಕ್ರಿಯೆಯನ್ನು ಅನರ್ಹಗೊಳಿಸಿದ್ದ ಹೈಕೋರ್ಟ್ ಆದೇಶವನ್ನು ರದ್ದುಗೊಳಿಸಿದೆ.

BirthRight Fertility
BY RAINBOW HOSPITALS

Rainbow Children's Hospital | BirthRight BY RAINBOW HOSPITALS
WOMEN CARE | CHILD CARE | FERTILITY

ಅನೇಕ ಫಲವತ್ತತೆ ಪ್ರಯಾಣಗಳನ್ನು ರೂಪಿಸಿದ ವಿಶ್ವಾಸಾರ್ಹ ಹೆಸರು,
ಈಗ ಬರ್ಥ್‌ರೈಟ್ ಫರ್ಟಿಲಿಟಿ
ಮಹಾದೇವಪುರದಲ್ಲಿ
ಸ್ವಾಗತಿಸುತ್ತೇವೆ
ಡಾ. ಮಂಜು ನಾಯರ್
ಕ್ಲಿನಿಕಲ್ ಡೈರೆಕ್ಟರ್ - ಫಲವತ್ತತೆ ಸೇವೆಗಳು
ಮತ್ತು ತಂಡ

ಮಾತೃತ್ವ ಆರೈಕೆಯಲ್ಲಿ ವಿಶ್ವಾಸಾರ್ಹ ಹೆಸರು,
ಈಗ ರೈನ್‌ಬೋ ಆಸ್ಪತ್ರೆ
ಹೆಚ್‌ಆರ್‌ಬಿಆರ್‌ದಲ್ಲಿ
ಸ್ವಾಗತಿಸುತ್ತೇವೆ
ಡಾ. ಮಂಜುಳಾ ದೀಪಕ್
ಲೀಡ್ ಕನ್ಸಲ್ಟಂಟ್ – ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು
ಮತ್ತು ತಂಡ

Areas of Expertise:
- Recurrent IVF Failure
- Recurrent Pregnancy Loss
- Poor Ovarian Reserve
- Low AMH
- PCOS & Endometriosis Associated Infertility
- Complex Fertility Preservation
- Personalized IVF Protocol Optimization
- Fertility Sparing Surgeries
- Oncofertility Care
- Advanced Endoscopic Procedures
- Stem Cell Therapy for Ovarian and Endometrial Rejuvenation

ಮಹಾದೇವಪುರ
ಸೋಮವಾರ - ಶನಿವಾರ
ಬೆಳಗ್ಗೆ 7:00 ರಿಂದ ಮಧ್ಯಾಹ್ನ 3:00 ರವರೆಗೆ

ಹೆಚ್‌ಆರ್‌ಬಿಆರ್
ಸೋಮವಾರ - ಶನಿವಾರ
ಸಂಜೆ 4:00 ರಿಂದ 6:00 ರವರೆಗೆ

ಬರ್ಥ್‌ರೈಟ್ ಫರ್ಟಿಲಿಟಿ, ಮಹಾದೇವಪುರ, ಬೆಂಗಳೂರು

Areas of Expertise:
- Management of Normal and High-Risk Pregnancies
- Safe Labour and Delivery Management
- Comprehensive Antenatal and Postnatal Care
- PCOD and Pre-conception management
- Laparoscopic and Minimally Invasive Gynaecological Surgeries
- Management of Complex Gynaecological Conditions

ಹೆಚ್‌ಆರ್‌ಬಿಆರ್
ಸೋಮವಾರ, ಮಂಗಳವಾರ, ಗುರುವಾರ ಮತ್ತು ಶನಿವಾರ
ಬೆಳಿಗ್ಗೆ 9:30 ರಿಂದ ಮಧ್ಯಾಹ್ನ 3:00 ಮತ್ತು ಸಂಜೆ 6:00 ರಿಂದ 8:00
ಮಂಗಳವಾರ ಮತ್ತು ಶುಕ್ರವಾರ
ಬೆಳಿಗ್ಗೆ 9:30 ರಿಂದ ಸಂಜೆ 4:00
ಬರ್ತ್‌ರೈಟ್ ಬೈ ರೈನ್‌ಬೋ ಆಸ್ಪತ್ರೆ, ಹೆಚ್‌ಆರ್‌ಬಿಆರ್, ಬೆಂಗಳೂರು

ನೇಮಕಾತಿಗಾಗಿ ಕರೆ ಮಾಡಿ 1800 2122 www.rainbowhospitals.in

ಬೆಂಗಳೂರು ಪಶ್ಚಿಮ ನಗರ ಪಾಲಿಕೆ

ಆಯುಕ್ತರವರ ಕಛೇರಿ, ಬೆಂಪನಪಾ, 16ನೇ ಅಡ್ಡರಸ್ತೆ, ಐಪಿಪಿ ಕಟ್ಟಡ, ವಯ್ಯಾಲಿಕಾವಲ್, ಮಲ್ಲೇಶ್ವರಂ, ಬೆಂಗಳೂರು-560003

ನಂ.: ಬೆಂಪನಪಾ/ಆಯುಕ್ತರು/ಪಿಎಸ್ಆರ್(ಜಿ)/264/2026-27 ದಿನಾಂಕ: 08.05.2026

ನಮೂನೆ-I
ಪ್ರಕಟಣೆ {ಸೆಕ್ಷನ್ 14ಬಿ(4)(i)}ರಂತೆ

ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯಿದೆ 1961ರ ಸೆಕ್ಷನ್ 14-ಬಿ(4) ರಡಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತಾ, **ನಾಯಂಡಹಳ್ಳಿ ವೃತ್ತದಿಂದ ವಿ-ಲೆಗಸಿ ರಸ್ತೆವರೆಗೆ ಸರ್ವಿಸ್ ರಸ್ತೆಯ ರಚನೆ ಒಳಗೊಂಡಂತೆ ರಾಜಕಾಲುವೆ / ಬಫರ್ ಜೋನ್‌ನ ರಕ್ಷಣೆ ಮತ್ತು ಅಭಿವೃದ್ಧಿಗಾಗಿ** ನಿರ್ದೇಶಕರು ತಾಂತ್ರಿಕ, ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಬಿ-ಸ್ಮೈಲ್) ಇವರಿಗೆ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶಗಳು ಅವಶ್ಯವಿರುತ್ತದೆ. ಸಾರ್ವಜನಿಕ ಉದ್ದೇಶಕ್ಕೆ ಅವಶ್ಯವಾಗಿ ಬೇಕಾಗಿರುವ ಪ್ರದೇಶಗಳ ಭೂ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ತಮ್ಮ ಸಂಬಂಧಪಟ್ಟ ದಾಖಲೆಗಳ ಪ್ರತಿಯೊಂದಿಗೆ ಅಂದರೆ, (1) ಮಾರಾಟ/ವಿಭಾಗ/ಇತರೆ ಮಾಲೀಕತ್ವದ ಡೀಡ್‌ಗಳು, (2) ಇತ್ತೀಚಿನ ಆರ್‌ಟಿಸಿಗಳು, (3) ಮ್ಯುಟೇಷನ್ ಪ್ರತಿ, (4) ತೆರಿಗೆ ಪಾವತಿ ರಸೀದಿಗಳು, (5) ಕೃಷಿಯೇತರ ಬಳಕೆಗಾಗಿ ಭೂ ಪರಿವರ್ತನಾ ಆದೇಶ, (6) ಕಂದಾಯ ಸ್ಕೆಚ್, (7) ಆಕಾರ್ ಬಂದ್ ಇತರೆಗಳನ್ನು ಈ ಅಧಿಸೂಚನೆ ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳ ಒಳಗೆ ಕೆಳಗಿನ ವಿಳಾಸದಲ್ಲಿ ಸೂಚಿಸಿರುವಂತೆ ಸ್ಥಳದಲ್ಲಿ ಖುದ್ದಾಗಿ ಹಾಜರಾಗಿ ಅಂತಹ ಭೂಮಿಯ ಮೇಲಿನ ತಮ್ಮ ಹಿತಾಸಕ್ತಿಯನ್ನು ತಿಳಿಸಬೇಕು.

ಭೂ ಮಾಲೀಕರು/ಆಸಕ್ತ ವ್ಯಕ್ತಿಗಳು ಹಾಜರಾಗಬೇಕಾದ ಹಾಗೂ ಅವರ ಹಕ್ಕುಗಳನ್ನು ಸಲ್ಲಿಸಬಹುದಾದ ಸ್ಥಳ	ವಿಭಾಗೀಯ / ಉಪ ವಿಭಾಗೀಯ / ಶಾಖೆ ಕಛೇರಿಗಳ ಹೆಸರು ಮತ್ತು ವಿಳಾಸ	ದಿನಾಂಕ ಮತ್ತು ಸಮಯ
ಉಪ ಆಯುಕ್ತರು (ಎಲ್ಎಕ್ಯೂ & ಟಿಡಿಆರ್), ಬೆಂಗಳೂರು ಪಶ್ಚಿಮ ನಗರ ಪಾಲಿಕೆ, # 72, 16ನೇ ಅಡ್ಡರಸ್ತೆ, ವಯ್ಯಾಲಿಕಾವಲ್, ಮಲ್ಲೇಶ್ವರಂ, ಬೆಂಗಳೂರು-560003	ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಬಿ-ಸ್ಮೈಲ್), ಕೊಠಡಿ ಸಂಖ್ಯೆ: 30/1, 3ನೇ ಮಹಡಿ, ತಿಮ್ಮಯ್ಯರಸ್ತೆ, ಮಿಲ್ಲರ್ಸ್ ಟ್ಯಾಂಕ್ ಬಂಡ್, ವಸಂತನಗರ, ಬೆಂಗಳೂರು-560051	ಅಧಿಸೂಚನೆ ದಿನಾಂಕದಿಂದ 30 ದಿನಗಳು, ಸಮಯ: ಬೆಳಗ್ಗೆ 10:00 ರಿಂದ ಸಂಜೆ 5:00 ಗಂಟೆವರೆಗೆ

ಸ್ವಾಧೀನಪಡಿಸಿಕೊಳ್ಳಬೇಕಾದ ನಿಗದಿತ ಆಸ್ತಿಗಳ ಭೂಮಾಲೀಕರು / ಆಸಕ್ತ ವ್ಯಕ್ತಿಗಳು ಅಭಿವೃದ್ಧಿ ಹಕ್ಕುಗಳ ಮಂಜೂರಾತಿಗೆ ಆಯುಕ್ತರು, ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಅವರಿಗೆ ಒಪ್ಪಿಗೆ ನೀಡಬೇಕು.

ಆರ್ಥಿಕ ಪರಿಹಾರಗಳ ಬದಲಾಗಿ ಸ್ವಾಧೀನಕ್ಕೊಳಪಟ್ಟ ಭೂಮಿಯ ಎರಡರಷ್ಟು ಭೂಪ್ರದೇಶವನ್ನು ಭೂ ಮಾಲೀಕರು ಡಿಆರ್‌ಗಳಂತೆ (ಪರಿಗಣಿಸಲಾದ ಭೂಮಿ) ಹಾಗೂ ಕಟ್ಟಡವನ್ನು ಕಟ್ಟಿರುವ ಭೂಮಿಯ ಮಾರುಕಟ್ಟೆ ಮೌಲ್ಯವನ್ನು, ಒಪ್ಪಿಸಿದ ಕಟ್ಟಡ ಪ್ರದೇಶದ ಮೌಲ್ಯವನ್ನು ಭಾಗಿಸಿದ ಅಂದಾಜಿನಂತೆ ಎರಡು ಬಾರಿ ಕಟ್ಟಡ ಪ್ರದೇಶವನ್ನು ಪಡೆಯುತ್ತಾರೆ. ಮೂಲ ಪ್ಲಾಟ್ ಮತ್ತು ಸ್ವೀಕರಿಸಿದ ಪ್ಲಾಟ್‌ಗಳ ಮಾರುಕಟ್ಟೆ ಮೌಲ್ಯವನ್ನು ಅಪವರ್ತನ ಮಾಡಿಕೊಂಡು ಪರಿಗಣಿಸಲಾಗದ ಭೂಮಿಯನ್ನು ಬಳಸಬಹುದಾಗಿದೆ. ಪರಿಗಣಿಸಲಾಗದ ಭೂಮಿಯು ಎಫ್ಎಆರ್‌ಗೆ ಅರ್ಹವಾಗಿದ್ದು, ಅಭಿವೃದ್ಧಿ ಹಕ್ಕುಗಳು ನಿಯಮಗಳು, 2016ರಂತೆ ಸೂಚಿಸಲಾದ ನಿಯಮ ಮತ್ತು ಷರತ್ತುಗಳಂತೆ ಸ್ವೀಕರಿಸಲಾದ ಪ್ಲಾಟ್‌ಗಳಲ್ಲಿ ಹೆಚ್ಚುವರಿ ಬಿಲ್ಟಪ್ ಪ್ರದೇಶವಾಗಿ ಬಳಸಬಹುದು.

ಸಾರ್ವಜನಿಕ ಉದ್ದೇಶಕ್ಕಾಗಿ ಅಗತ್ಯವಿರುವ ಭೂಮಿ ಮತ್ತು ಭೂ ಮಾಲೀಕರು ಮತ್ತು ಆಸಕ್ತ ವ್ಯಕ್ತಿಗಳ ವಿವರಗಳ ಬಗ್ಗೆ ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗುತ್ತದೆ ಮತ್ತು ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿ) ನೀಡಲಾಗುವುದು. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ವಿಶೇಷ ಭೂ ಸ್ವಾಧೀನ ಅಧಿಕಾರಿ, ಉಪ ಆಯುಕ್ತರು (ಎಲ್ಎಕ್ಯೂ & ಟಿಡಿಆರ್) ರವರ ಕಛೇರಿ, ಬೆಂಪನಪಾ ಗೆ ಈ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ 30 ದಿನಗಳೊಳಗೆ ತಿಳಿಸಬೇಕು.

ಷೆಡ್ಯೂಲ್

ನಾಯಂಡಹಳ್ಳಿ ವೃತ್ತದಿಂದ ವಿ-ಲೆಗಸಿ ರಸ್ತೆವರೆಗೆ ಸರ್ವಿಸ್ ರಸ್ತೆಯ ರಚನೆ ಒಳಗೊಂಡಂತೆ ರಾಜಕಾಲುವೆ / ಬಫರ್ ಜೋನ್‌ನ ರಕ್ಷಣೆ ಮತ್ತು ಅಭಿವೃದ್ಧಿಗಾಗಿ ಅಗತ್ಯವಿರುವ ಭೂ ಸ್ವಾಧೀನ.

ಈ ಅಧಿಸೂಚನೆಯು ಪ್ರಸ್ತಾವಿತ ರಸ್ತೆಯ ಕಂದಾಯ ಸರ್ವೆ ಸಂಖ್ಯೆಗಳನ್ನು ಆಧರಿಸಿದೆ, ಫಾರ್ಮ್-3 ಹಂತದ ಸಮಯದಲ್ಲಿ, ಪ್ರತಿ ಅಧಿಸೂಚಿತ ಸರ್ವೆ ಸಂಖ್ಯೆಗಳಿಂದ ರಚಿಸಲಾದ ಪ್ರತಿಯೊಂದು ಉಪವಿಭಾಗದ ಪ್ಲಾಟ್‌ನ ಖಾತಾಗೆ ಸಂಬಂಧಿತ ಮಾಲೀಕತ್ವದ ದಾಖಲೆಗಳನ್ನು ಪರಿಶೀಲಿಸಲು ವೈಯಕ್ತಿಕ ಫೈಲ್‌ಗಳನ್ನು ರಚಿಸಲಾಗುತ್ತದೆ ಮತ್ತು ಟಿಡಿಆರ್ ನಿಯಮಗಳ ಪ್ರಕಾರ ಅರ್ಹ ಮಾಲೀಕರಿಗೆ ಹಕ್ಕು ನಿರಾಕರಣೆ ಪತ್ರಗಳನ್ನು ಪ್ರಕ್ರಿಯೆಗೊಳಿಸಲಾಗುತ್ತದೆ. ಆದಾಗ್ಯೂ, ಯಾವುದೇ ಭೂಮಿ ಅಥವಾ ಕಟ್ಟಡಕ್ಕೆ ಈಗಾಗಲೇ ಅಭಿವೃದ್ಧಿ ಹಕ್ಕುಗಳ ಪ್ರಮಾಣಪತ್ರ (ಡಿಆರ್‌ಸಿ) ನೀಡಿದ್ದರೆ, ಅದು ಈ ಅಧಿಸೂಚನೆಗೆ ಅರ್ಹವಾಗಿರುವುದಿಲ್ಲ.

Name of the District: **Bengaluru Urban** Name of the Taluk: **Bengaluru South** Name of the Village: **Hosakerehalli**

Sl No	Sy No/ Khatha No	Type of Land (Vacant / Built up)	Nature of Land (Agriculture / Converted Undeveloped / Approved layout / developed land Building Site)	Dimension of the land / plot and extent in sq.m (Dimension / Extent)	Boundaries of the land /plot: North	East	South	West	Building Details: Extent in Sqm	Type of Construction and No. of Floors	Floor area Ratio	Present activity on Land/ Building (Specify Specific activity such as shop, office, factory, apartment individual house etc.,	Market (guidelines) value of the land per Sqm: Agriculture/ B-Khatha	Converted Undeveloped	A Khatha, Developed Site	Name and address of the owner of the plot/land for which DRC is to be issued / already issued.
1	73	Vacant Land, Building	Private Land	166.64	Remaining Portion of Sy No.73	Road	Road	Road	109.81	Sheet, RCC						A.L.Muniyappa,Lakshmamma W/o Late Muniyappa, KIADB, Nandhi Economic Corridor Enterprises Limited
2	73	Vacant Land, Building	Private Land	294.81	Road	Road	Remaining Portion of Sy No.73	Sy No.75	189.57	Sheet, RCC, G+1						A.L.Muniyappa,Lakshmamma W/o Late Muniyappa, KIADB, Nandhi Economic Corridor Enterprises Limited
3	73	Vacant Land, Building	Private Land	161.79	Remaining Portion of Sy No.73	Road	Road	Road	150.43	Sheet, RCC						A.L.Muniyappa,Lakshmamma W/o Late Muniyappa, KIADB, Nandhi Economic Corridor Enterprises Limited
4	73	Building	Private Land	32.11	Remaining Portion of Sy No.73	Road	Road	Sy No.75	23.57	RCC						A.L.Muniyappa, Lakshmamma W/o Late Muniyappa, KIADB, Nandhi Economic Corridor Enterprises Limited
5	75/1	Vacant Land, Building	Private Land	132.25	Sy No.73	Remaining Portion of Sy No.75	Remaining Portion of Sy No.75	Road	95.52	Sheet, RCC						BDA, M.K.Tejavathi W/o H.Lankappa, H.Hanumappa S/o Late Hanumappa, Nandhi Economic Corridor Enterprises Limited,
6	75/1	Vacant Land, Building	Private Land	68.90	Sy No.73	Road	Road	Remaining Portion of Sy No.75	53.17	RCC						BDA, M.K.Tejavathi W/o H.Lankappa, H.Hanumappa S/o Late Hanumappa, Nandhi Economic Corridor Enterprises Limited,
7	75/1	Vacant Land, Building	Private Land	180.93	Remaining Portion of Sy No.75/1	Road	Road	Sy No.71/3	-	-						BDA, M.K.Tejavathi W/o H.Lankappa, H.Hanumappa S/o Late Hanumappa, Nandhi Economic Corridor Enterprises Limited,
8	71/3	Vacant Land	Private Land	1351.98	Sy No.75	Road	Remaining Portion of Sy No.71/3	Remaining Portion of Sy No.71/3	-	-						Nandhi Economic Corridor Enterprises Limited, Peoples Education Society, Dr. Suresh, Dr. Roopa Suresh
9	75/2	Vacant Land, Building	Private Land	96.63	Remaining Portion of Sy No.75	Road	Sy No.77	Remaining Portion of Sy No.75	31.38	Sheet						BDA, M.K.Tejavathi W/o H.Lankappa, H.Hanumappa S/o Late Hanumappa, Nandhi Economic Corridor Enterprises Limited, KIADB, A.C.Nanjundasawmy S/o Chikkahanumaiah
10	75/2	Vacant Land	Private Land	35.87	Remaining Portion of Sy No.75	Remaining Portion of Sy No.75	Sy No.77	Road	-	-						BDA, M.K.Tejavathi W/o H.Lankappa, H.Hanumappa S/o Late Hanumappa, Nandhi Economic Corridor Enterprises Limited, KIADB, A.C.Nanjundasawmy S/o Chikkahanumaiah
11	77	Vacant Land	Private Land	766.85	Sy No.75	Road	Sy No.78	Remaining Portion of Sy No.77	-	-						V.C.Rajeshwari W/o V.Chittibabu, D.Jawahar S/o M.R.Doraisawmy, Peoples Education Society, Vijay Dsouza S/o A.B.Dsouza, Dhilip Dsouza S/o A.B.Dsouza, Arun Dsouza S/o A.B.Dsouza, Sanjay Dsouza S/o A.B.Dsouza, KIADB, Nandhi Economic Corridor Enterprises Limited
12	78	Vacant Land	Private Land	1147.19	Sy No.77	Road	Remaining Portion of Sy No.78	Remaining Portion of Sy No.78	-	-						Peoples Education Society, Nandhi Economic Corridor Enterprises Limited, N.Channaswamy Naidu, N.Doraiswamy S/o Channaswamy Naidu, K.M.Shankar S/o Late K.Murugesh
13	33	Vacant Land, Building	Private Land	9755.62	Remaining Portion of Sy No.33	BMICAPA (Nice Road)	Remaining Portion of Sy No.33	Sy No.124	1020.46	Shed, Sheet, RCC, G+1, G+2						C.Hanumanthappa S/o Chinnappa, C.Manjunatha S/o Chinnappa, Marappa, M.Srinivas S/o Marappa, M.Siddappa S/o Marappa, M.Venkataswamy S/o Marappa, M.Srirama S/o Marappa, M.Ramakrishna S/o Marappa, N.Sunandha W/o Late Chikkathayappa, KIADB, Y.R.Jayashree W/o Late G.V.Appaji, Tejaswini Appaji D/o Late G.V.Appaji, G.V.Lasya D/o Late G.V.Appaji, G.V.Ajay S/o Late G.V.Appaji
14	33	Vacant Land, Building	Private Land	146.76	Road	BMICAPA (Nice Road)	Remaining Portion of Sy No.33	Road	-	-						C.Hanumanthappa S/o Chinnappa, C.Manjunatha S/o Chinnappa, Marappa, M.Srinivas S/o Marappa, M.Siddappa S/o Marappa, M.Venkataswamy S/o Marappa, M.Srirama S/o Marappa, M.Ramakrishna S/o Marappa, N.Sunandha W/o Late Chikkathayappa, KIADB, Y.R.Jayashree W/o Late G.V.Appaji, Tejaswini Appaji D/o Late G.V.Appaji, G.V.Lasya D/o Late G.V.Appaji, G.V.Ajay S/o Late G.V.Appaji
15	52	Vacant Land, Building	Private Land	77.19	Sy No.124	Sy No.33	Remaining Portion of Sy No.52	Sy No.142/1	-	-						C.Harish S/o M.Chalayya, Krishnappa S/o Bhairappa, G.Basappa S/o Giriyappa, Santhosh B Chattaki S/o Basappa, M.Srirama S/o Marappa, Paparaju S/o Venkatanarasaiah, Nirmala Jhon Kuruvila W/o Jhon Kuruvila, Gowtham.S S/o J.K.S.Kumar, C.Manjunatha S/o Chinnappa, Venkataraj Bhat behalf of Bhima Chartible Trust, B.Ramaiah S/o C.Balayya, Shanthamma W/o Shivanna Gowda, Shivasidhegowda.N.H S/o Honnegowda, Ramesh Thibannahalli Nijagunaiah S/o Nijagunaiah, Veerabhadraiah S/o Mallayya
16	124	Vacant Land, Building	Private Land	1910.45	Sy No.49/2	Sy No.33	Sy No.142/1, 142/2 & 142/3	Sy No.50/2	111.92	RCC, G+2						C.Manjunatha S/o Chinnappa, M.Venkataswamy S/o Marappa, M.Srirama S/o Marappa, M.Ramakrishna S/o Marappa, N.Sunandha W/o Late Chikkathayappa, K.Asha W/o S.G.Krishna, C.Baiyamma W/o M.Ramakrishna, Sadashiva Reddy S/o B.P.Narayan Reddy, Mohan R Shetty, Muthappa Shetty S/o Ramana Shetty, N.Deepa W/o Premanath Reddy, Baiyamma W/o Late C.Hanumanthappa, Gowramma-Munishyamappa, Venkatamma-Krishnappa, Lakshmidevamma- Prasad, Shanthamma-Nagaraju
17	142/1	Vacant Land, Building	Private Land	193.36	Sy No.124	Sy No.52	Remaining Portion of Sy No.142/1	Sy No.142/2	-	-						E.Chikkanna S/o Erayya
18	142/2	Vacant Land	Private Land	374.67	Sy No.124	Sy No.142/1	Remaining Portion of Sy No.142/2	Sy No.142/3	-	-						E.Chikkanna S/o Erayya
19	142/3	Vacant Land	Private Land	1254.84	Sy No.124	Sy No.142/2	Remaining Portion of Sy No.142/3	Sy No.138/1	-	-						Sidhappa S/o Late Kadhirappa, Muniyappa S/o Sidhappa
20	138/1	Vacant Land, Building	Private Land	1418.87	Sy No.50/2	Sy No.142/3	Sy No.138/1	Sy No.138/2	22.56	Sheet						Yashodhamma D/o Chikkaputte Gowda, Siddappa S/o Late Kadarappa, Akkayamma D/o Late Kadarappa, Nijagalappa S/o Late Kadarappa
21	50/2	Vacant Land, Building	Private Land	12.79	Remaining Portion of Sy No.50/2	Sy No.124	Sy No.138/1	Sy No.138/1	42.58	Sheet						M.Venkatalakshmamma W/o B.Narayanappa, C.Manjunatha S/o Chinnappa, M.Siddappa S/o Late Marappa, M.Venkataswamy S/o Late Marappa, M.Srirama S/o Late Marappa, M.Ramakrishna S/o Late Marappa, M.Sunandha D/o Late Marappa, M.Venkatalakshmamma D/o Late Marappa, M.Chinamma D/o Late Marappa, M.Srinivas S/o Late Marappa, N.Sunandha W/o Chikkathayappa
22	138/2	Vacant Land	Private Land	1424.72	Remaining Portion of Sy No.138/2	Sy No.138/1	Remaining Portion of Sy No.138/2	Sy No.52	16.43	Sheet						M/S. National Education Foundation
23	52	Vacant Land	Private Land	1214.51	Remaining Portion of Sy No.52	Sy No.138/2	Remaining Portion of Sy No.52	Sy No.129/6	-	-						C.Harish S/o M.Chalayya, Krishnappa S/o Bhairappa, G.Basappa S/o Giriyappa, Santhosh B Chattaki S/o Basappa, M.Srirama S/o Marappa, Paparaju S/o Venkatanarasaiah, Nirmala Jhon Kuruvila W/o Jhon Kuruvila, Gowtham.S S/o J.K.S.Kumar, C.Manjunatha S/o Chinnappa, Venkataraj Bhat behalf of Bhima Chartible Trust, B.Ramaiah S/o C.Balayya, Shanthamma W/o Shivanna Gowda, Shivasidhegowda.N.H S/o Honnegowda, Ramesh Thibannahalli Nijagunaiah S/o Nijagunaiah, Veerabhadraiah S/o Mallayya
24	129/6	Vacant Land	Private Land	1079.51	Remaining Portion of Sy No.129/6	Sy No.52	Remaining Portion of Sy No.129/6	Sy No.129/5	9.34	RCC						Vandhana Raghunath W/o D.Raghunath
25	129/5	Vacant Land	Private Land	1053.94	Remaining Portion of Sy No.129/5	Sy No.129/6	Remaining Portion of Sy No.129/5	Sy No.52	-	-						Rekha Rao W/o Narasimha Rao
26	174	Vacant Land	Private Land	1172.38	Remaining Portion of Sy No.74	Sy No.129/5	Remaining Portion of Sy No.174	Road	-	Sheet, G+1						B Ramachandran S/o A V Balakrishana
27	49/2	Vacant Land, Building	Private Land	523.66	Sy No.49/1	Remaining Portion of Sy No.49/2	Sy No.124	Remaining Portion of Sy No.49/2	11.94	RCC						Baiyamma W/O Hanumathappa
28	49/1	Vacant Land	Private Land	536.30	Sy No.48/7	Sy No.49/1	Sy No.49/2	Sy No.49/1	10.31	RCC						Akash Kempegowda S/O K. Shivakumar
29	48/7	Vacant Land	Private Land	704.63	Sy No.47	Remaining Portion of Sy No.48/7	Sy No.49/1	Sy No.48/6	-	-						Gowramma W/O Kempegowda
30	48/6	Vacant Land, Building	Private Land	396.70	Sy No.47	Sy No.48/7	Sy No.49/1	Remaining Portion of Sy No.48/6	-	-						Gowramma W/O D.K Kempegowda

Continued....

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆ ಆಗಲಿದೆ.

ಕಬ್ಬನ್‌ಪಾರ್ಕ್‌: ಮಾವು, ಹಲಸು ಮೇಳಕ್ಕೆ ಚಾಲನೆ

ಮೇ 17ರವರೆಗೆ ಮೇಳ; ನೈಸರ್ಗಿಕವಾಗಿ ಮಾಗಿದ ಮಾವು ಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೋಟಗಾರಿಕೆ ಇಲಾಖೆ ಸಹಯೋಗದಲ್ಲಿ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ (ಕೆಎಸ್‌ಎಂಡಿಎಂಸಿಎಲ್) ಕಬ್ಬನ್ ಉದ್ಯಾನದಲ್ಲಿ ಆಯೋಜಿಸಿರುವ ಮಾವು ಮತ್ತು ಹಲಸು ಮೇಳಕ್ಕೆ ನಿಗಮದ ಅಧ್ಯಕ್ಷ ಡಾ.ಬಿ.ಸಿ. ಮುದ್ದುಗಂಗಾಧರ್ ಅವರು ಶುಕ್ರವಾರ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, 'ರೈತರು ನೇರವಾಗಿ ಗ್ರಾಹಕರಿಗೆ ಮಾವು ಹಾಗೂ ಹಲಸಿನ ಹಣ್ಣುಗಳನ್ನು ಮಾರಾಟ ಮಾಡಲು ಮೇಳದಲ್ಲಿ ಅವಕಾಶ ಕಲ್ಪಿಸಲಾಗಿದೆ. ಮೇ 17ರವರೆಗೆ ಈ ಮೇಳ ನಡೆಯಲಿದೆ' ಎಂದರು.

'18ಕ್ಕೂ ಹೆಚ್ಚು ಮಾವಿನ ತಳಿಗಳು ಮತ್ತು ವಿವಿಧ ಹಲಸಿನ ತಳಿಗಳು ಮೇಳದಲ್ಲಿ ಲಭ್ಯ ಇವೆ. ರೈತರು ಮತ್ತು ಗ್ರಾಹಕರನ್ನು ಒಳಗೊಂಡ ಸಮಿತಿಯು ಹಣ್ಣಿನ ದರಗಳನ್ನು ನಿಗದಿಪಡಿಸಿದೆ. ಇದರಿಂದ ಗ್ರಾಹಕರಿಗೆ ಹೊರೆಯಾಗುವುದಿಲ್ಲ' ಎಂದು ತಿಳಿಸಿದರು.

'ಮಾವು ಪ್ರಿಯರಿಗೆ ಹೊರೆಯಾಗದಂತೆ ಮೇ 17ರವರೆಗೆ ಮತ್ತು ರೈತರಿಗೆ ನಷ್ಟವಾಗದಂತೆ ಬೆಲೆ ನಿಗದಿ ಮಾಡಲಾಗಿದೆ. ಆ ಬೆಲೆಗೆ ಮಾತ್ರ ಮಾರಾಟ ಮಾಡಬೇಕು. ಮಧ್ಯವರ್ತಿಗಳ ಹಾವಳಿ ಇಲ್ಲದೆ ಗ್ರಾಹಕರಿಗೆ ಉತ್ತಮ ಬೆಲೆಗೆ ಮಾವಿನ ಹಣ್ಣು ಸಿಗಬೇಕು ಎಂಬುದು ಸರ್ಕಾರದ ಉದ್ದೇಶವಾಗಿದೆ. ಆದ್ದರಿಂದ ಗ್ರಾಹಕರು ಮತ್ತು ರೈತರಿಗೆ ನೆರವಾಗುವ ಉದ್ದೇಶದಿಂದ ಮೇಳ ಆಯೋಜಿಸಲಾಗಿದೆ' ಎಂದು ಹೇಳಿದರು.

'ರಾಜ್ಯದಲ್ಲಿ 1.45 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತದೆ. ಪ್ರತಿವರ್ಷ ಸರಾಸರಿ 12ರಿಂದ 14 ಲಕ್ಷ ಟನ್‌ಗಳಷ್ಟು ಇಳುವರಿ ನಿರೀಕ್ಷಿಸಲಾಗುತ್ತಿತ್ತು. ಆದರೆ, ಈ ಸಾಲಿನಲ್ಲಿ ಹವಾಮಾನ ವೈಪರಿತ್ಯದಿಂದ ಮಾವು ಬೆಳೆಯ ಉತ್ಪಾದನೆಯಲ್ಲಿ ಶೇ 30ರಷ್ಟು ಫಸಲು ಮಾತ್ರ ಲಭ್ಯವಾಗಿದೆ. ಕೋಲಾರ, ರಾಮನಗರ, ತುಮಕೂರು, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಾವು ಬೆಳೆಯಲಾಗುತ್ತದೆ' ಎಂದರು.

'ಮಾವಿನ ಹಣ್ಣನ್ನು ನೈಸರ್ಗಿಕವಾಗಿ ಮಾಗಿಸಲಾಗುತ್ತದೆ. ರಾಸಾಯನಿಕ ಮುಕ್ತ ಮಾವಿನ ಹಣ್ಣನ್ನು ಗ್ರಾಹಕರಿಗೆ ತಲುಪಿಸುವ ಉದ್ದೇಶದಿಂದ ಮೇಳವನ್ನು ಪ್ರತಿ ವರ್ಷ ಆಯೋಜಿಸಲಾಗುತ್ತಿದೆ. ಮಾವು, ಹಲಸು ಹಣ್ಣುಗಳ ಬೆಳೆಗಾರರು ಮತ್ತು ಗ್ರಾಹಕರ ನಡುವೆ ನೇರ ಸಂಪರ್ಕ ಕಲ್ಪಿಸಿ, ಬೆಳೆಗಾರರಿಗೆ ಯೋಗ್ಯ ಬೆಲೆ ಹಾಗೂ ಗ್ರಾಹಕರಿಗೆ ರುಚಿಯಾದ ಉತ್ಕೃಷ್ಟ ಗುಣಮಟ್ಟದ ತಾಜಾ ಹಣ್ಣುಗಳು ಸಿಗುವಂತೆ ಮಾಡುವುದು ಈ ಮೇಳದ ಉದ್ದೇಶವಾಗಿದೆ' ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ವೇದಮೂರ್ತಿ ತಿಳಿಸಿದರು.

> **ಮಾವು, ನೇರಳೆ, ಅನಾನಸ್, ಪೇರಲೆ ಹಣ್ಣುಗಳನ್ನು ಮೌಲ್ಯವರ್ಧಿತ ಪಾನೀಯವನ್ನು ಪ್ರ್ಯೂರ್ಲಿಪ್ಲಪ್ ಬ್ರ್ಯಾಂಡ್‌ನಲ್ಲಿ ಮಾರಾಟ ಮಾಡುತ್ತಿದ್ದೇವೆ.**
> **ತೇಜೋಮೂರ್ತಿ,** ರೈತ

> **ರಾಮನಗರದಲ್ಲಿ ಮಾವು ಬೆಳೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ಆದರೆ ಇಲ್ಲೊಂದು ಪಲ್ಪ್ ತಯಾರಿಸುವ ಘಟಕ ಪ್ರಾರಂಭಿಸಬೇಕು**
> **ಬಾಲಕೃಷ್ಣ,** ರೈತ

ಮಾವು ಮತ್ತು ಹಲಸಿನ ಮೇಳದಲ್ಲಿ ಬಿ.ಸಿ. ಮುದ್ದುಗಂಗಾಧರ್, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ ಕಾರ್ಯದರ್ಶಿ ಗಿರೀಶ್ ಆರ್. ಪಾಲ್ಗೊಂಡಿದ್ದರು (ಎಡಚಿತ್ರ). ಮಾವಿನ ಹಣ್ಣುಗಳನ್ನು ಬಾಲಕಿಯೊಬ್ಬರು ಪ್ರದರ್ಶಿಸಿದರು ಪ್ರಜಾವಾಣಿ ಚಿತ್ರ

ಮೇಳದಲ್ಲಿರುವ ಮಾವು, ಹಲಸಿನ ತಳಿಗಳು

ಬಾದಾಮಿ, ರಸಪುರಿ, ಮಲ್ಲಿಕಾ, ಸಿಂಧೂರ, ತೋತಾಪುರಿ, ದಶೇರಿ ಸೇರಿದಂತೆ ವಿವಿಧ ಮಾವು ತಳಿಗಳ ಹಣ್ಣುಗಳು ಮೇಳದಲ್ಲಿ ಮಾರಾಟಕ್ಕೆ ಲಭ್ಯ ಇರಲಿವೆ. ಹಲಸಿನಲ್ಲಿ ರುದ್ರಾಕ್ಷಿ, ಶಿವರಾತ್ರಿ, ಏಕಾದಶಿ ಮತ್ತು ತೂಬಗೆರೆ ತಳಿಯ ಹಣ್ಣು ಇವೆ. ತಳಿಗಳ ಆಧಾರದ ಮೇಲೆ ಬೆಲೆಗಳನ್ನು ನಿಗದಿಪಡಿಸಲಾಗಿದೆ.

ಪಾಲಿಕೆ ಚುನಾವಣೆ ನಡೆಸಲು ಒತ್ತಾಯಿಸಿ ಎಎಪಿ ಪ್ರತಿಭಟನೆ

ಬೆಂಗಳೂರು: ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಐದು ನಗರ ಪಾಲಿಕೆಗಳಿಗೆ ಕೂಡಲೇ ಚುನಾವಣೆ ನಡೆಸಬೇಕು ಎಂದು ಆಗ್ರಹಿಸಿ ಆಮ್ ಆದ್ಮಿ ಪಕ್ಷ ಶುಕ್ರವಾರ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿತು.

ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿ ಡಾ. ಸತೀಶ್ ಕುಮಾರ್ ಮಾತನಾಡಿ, 'ಅಂದಿನ ಬಿಜೆಪಿ ಸರ್ಕಾರವು ಬಿಬಿಎಂಪಿ ಚುನಾವಣೆ ಮುಂದೂಡಲು ನಾನಾ ಕಸರತ್ತನ್ನು ನಡೆಸಿತ್ತು. ಕೆಎಂಸಿ ಕಾಯ್ದೆಯನ್ನೇ ರದ್ದುಪಡಿಸಿ ಬಿಬಿಎಂಪಿ 2020 ಕಾಯ್ದೆಯನ್ನು ರಚಿಸುವ ಮೂಲಕ ಆಡಳಿತಾಧಿಕಾರಿಗಳನ್ನು ನೇಮಿಸಿ ಭ್ರಷ್ಟಾಚಾರದಲ್ಲಿ ಮುಳುಗಿಸಿತ್ತು' ಎಂದು ಆರೋಪಿಸಿದರು.

ನಗರ ಪ್ರಧಾನ ಕಾರ್ಯದರ್ಶಿ ಜಗದೀಶ್ ಚಂದ್ರ, 'ನಗರದ ನಾಗರಿಕರು ಮೂಲಭೂತ ಸೌಕರ್ಯಗಳಿಲ್ಲದೆ ಪರದಾಡುತ್ತಿದ್ದಾರೆ. ಚುನಾವಣೆಯನ್ನೇ ಮುಂದೂಡಲು ಹೊರಟಿರುವುದು ನಾಗರಿಕ ಸಮಾಜ ಸಹಿಸುವುದಿಲ್ಲ. ಚುನಾವಣೆ ನಡೆಸದಿದ್ದರೆ ಹೋರಾಟ ಮಾಡಲಾಗುವುದು' ಎಂದು ಎಚ್ಚರಿಸಿದ್ದಾರೆ.

ಆಶಯ: 'ರಾಜ್ಯ ಚುನಾವಣಾ ಆಯೋಗ ಜೂನ್‌ನಲ್ಲಿ ನಗರ ಪಾಲಿಕೆಗಳ ಚುನಾವಣೆಯನ್ನು ನಡೆಸುವುದಾಗಿ ಹೇಳಿರುವುದು ಸ್ವಾಗತಾರ್ಹ. ನಿಗದಿತ ವೇಳಾಪಟ್ಟಿಯಂತೆಯೇ ಚುನಾವಣೆ ನಡೆದರೆ, ಬಹಳ ವರ್ಷಗಳಿಂದ ಬಾಕಿ ಉಳಿದಿರುವ ಸ್ಥಳೀಯ ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತೆ ಸ್ಥಾಪನೆಯಾಗಲಿದೆ. ಜನರಿಗೆ ಹೆಚ್ಚು ಅನುಕೂಲ ಆಗಲಿದೆ' ಎಂದು ಬೆಂಗಳೂರು ನವನಿರ್ಮಾಣ ಪಕ್ಷದ ಸ್ಥಾಪಕರಾದ ಶ್ರೀಕಾಂತ್ ನರಸಿಂಹನ್ ಅವರು ಹೇಳಿದ್ದಾರೆ.

ಚುನಾವಣೆಗೆ ಸಿದ್ಧತೆ: ಸ್ವಾಗತ

ಪ್ರಜಾಪ್ರಭುತ್ವ ಮತ್ತು ಸ್ಥಳೀಯ ಆಡಳಿತ ಬಲಗೊಳ್ಳಲು ಕೂಡಲೇ ಜಿಬಿಎ ಚುನಾವಣೆ ನಡೆಸಬೇಕು. ಚುನಾವಣಾ ಆಯೋಗವು ಶೀಘ್ರ ದಿನಾಂಕ ಘೋಷಿಸಬೇಕು ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಜಂಟಿ ಕಾರ್ಯದರ್ಶಿ ಎಲ್.ಜೀವನ್ ಆಗ್ರಹಿಸಿದ್ದಾರೆ.

ಸ್ಥಳೀಯವಾಗಿ ಜನರ ಸಮಸ್ಯೆಗಳನ್ನು ವೀಕ್ಷಿಸಿ ಪ್ರಶ್ನಿಸುವ ಜನಪ್ರತಿನಿಧಿಗಳು ಇಲ್ಲದ ಕಾರಣ ರಸ್ತೆ, ಚರಂಡಿ ಸೇರಿದಂತೆ ವಿವಿಧ ಮೂಲಸೌಕರ್ಯ ಕಾಮಗಾರಿಗಳು ಕಳಪೆ ಗುಣಮಟ್ಟದಲ್ಲಿ ನಡೆಯುತ್ತಿವೆ. ಸಾರ್ವಜನಿಕರ ತೆರಿಗೆ ಹಣ ಅಧಿಕಾರಿಗಳು ಮತ್ತು ಗುತ್ತಿಗೆದಾರರ ಪಾಲಾಗುತ್ತಿರುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಕೆಎಲ್‌ಇ ಶಾಲೆಯ ನಾಮಕರಣ ನಾಳೆ

ಬೆಳಗಾವಿ: ಬೆಂಗಳೂರಿನ ರಾಜಾಜಿನಗರದ ಎಸ್.ನಿಜಲಿಂಗಪ್ಪ ಕಾಲೇಜು ಆವರಣದಲ್ಲಿ ಇರುವ 'ಕೆಎಲ್‌ಇ ಸಂಸ್ಥೆಯ ಸಿಬಿಎಸ್‌ಇ ಇಂಗ್ಲಿಷ್ ಮಾಧ್ಯಮ ಶಾಲೆ'ಯ ನಾಮಕರಣ ಸಮಾರಂಭವು ಭಾನುವಾರ (ಮೇ 10) ಸಂಜೆ 4 ಗಂಟೆಗೆ ಜರುಗಲಿದೆ.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ವಿಧಾನಸಭೆ ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ, ಬೆಳಗಾವಿ ಕೆಎಲ್‌ಇ ಕಾಹೆರ್ ಕುಲಾಧಿಪತಿ ಪ್ರಭಾಕರ ಕೋರೆ, ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಅಮಿತ್ ಕೋರೆ, ಚಿತ್ರ ನಿರ್ಮಾಪಕಿ ಅರುಣಾರಾಜೆ ಪಾಟೀಲ ಮತ್ತು ಕೆ.ಎಫ್.ಪಾಟೀಲ ಚಾರಿಟೇಬಲ್ ಟ್ರಸ್ಟ್ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸುವರು. ಕೆಎಲ್‌ಇ ಸಂಸ್ಥೆಯ ಅಧ್ಯಕ್ಷ ಮಹಾಂತೇಶ ಕೌಜಲಗಿ ಅವರು ಅಧ್ಯಕ್ಷತೆ ವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಬಿಜೆಪಿ ಯುವ ಮೋರ್ಚಾಕ್ಕೆ ಭರತ್ ಸೌಂದರ್ಯ ನೇಮಕ

ಪೀಣ್ಯ ದಾಸರಹಳ್ಳಿ: ಬಿಜೆಪಿ ಯುವ ಮೋರ್ಚಾ ಅಧ್ಯಕ್ಷರಾಗಿ ಬಾಗಲಗುಂಟೆಯ ಹಾವನೂರು ಬಡಾವಣೆ ನಿವಾಸಿ ಭರತ್ ಸೌಂದರ್ಯ ಅವರನ್ನು ನೇಮಕ ಮಾಡಲಾಗಿದೆ.

ಭರತ್ ಸೌಂದರ್ಯ

ಭರತ್ ಸೌಂಧರ್ಯ ಮಾತನಾಡಿ, 'ಪಕ್ಷದ ತತ್ವ, ಸಿದ್ಧಾಂತ ಮತ್ತು ಅಭಿವೃದ್ಧಿಯ ಸಂದೇಶವನ್ನು ಮನೆಮನೆಗೂ ತಲುಪಿಸಿ ಯುವಕರ ಶಕ್ತಿ ಮತ್ತು ಸಂಘಟನೆಯ ಬಲವನ್ನು ಮತ್ತಷ್ಟು ವೃದ್ಧಿಸುವ ಕಾರ್ಯದಲ್ಲಿ ಸದಾ ತೊಡಗಿಸಿಕೊಂಡಿರುತ್ತೇನೆ. ಪಕ್ಷ ನನ್ನ ಮೇಲೆ ಇಟ್ಟಿರುವ ನಂಬಿಕೆ ಮತ್ತು ಜವಾಬ್ದಾರಿಯನ್ನು ಅತ್ಯಂತ ಪ್ರಾಮಾಣಿಕತೆ, ನಿಷ್ಠೆ ಹಾಗೂ ಸಮರ್ಪಣಾಭಾವದಿಂದ ನಿರ್ವಹಿಸುತ್ತೇನೆ' ಎಂದು ತಿಳಿಸಿದರು.

10ರಿಂದ ವಿವಿಧ ಸ್ಪರ್ಧೆಗಳು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮದಿನದ ಪ್ರಯುಕ್ತ ಮೇ 10,17,24 ಮತ್ತು 31 ರಂದು 'ಮೇಳ' (ಸಾಂಸ್ಕೃತಿಕ ಕಲೆಗಳ ಸಂಭ್ರಮ) ಆಯೋಜಿಸಲಾಗಿದೆ ಎಂದು ವೈಚಾರಿಕ ಪ್ರಗತಿಪರ ವೇದಿಕೆ (ಕರ್ನಾಟಕ) ಅಧ್ಯಕ್ಷ ಎಂ.ಆರ್. ವೆಂಕಟೇಶ್ ತಿಳಿಸಿದರು.

ಎಂ.ಆರ್. ವೆಂಕಟೇಶ್

ಮೇ 10 ರಂದು ಚಿತ್ರಕಲೆ, ಮೇ 17 ರಂದು ರಸಪ್ರಶ್ನೆ ಹಾಗೂ ಪ್ರಬಂಧ ಸ್ಪರ್ಧೆ, ಮೇ 24ರಂದು ಮ್ಯಾರಥಾನ್ ಓಟ ಆಯೋಜಿಸಲಾಗಿದ್ದು, ಮೇ 31ರಂದು ವೇದಿಕೆ ಕಾರ್ಯಕ್ರಮ ಜರುಗಲಿದೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಚಿತ್ರಕಲೆ ಹಾಗೂ ರಸಪ್ರಶ್ನೆ ಸ್ಪರ್ಧೆಯಲ್ಲಿ 5ನೇ ತರಗತಿಯಿಂದ ಪಿಯುಸಿ ವಿದ್ಯಾರ್ಥಿಗಳು, ಪ್ರಬಂಧ ಸ್ಪರ್ಧೆಯಲ್ಲಿ ಪದವಿ ವಿದ್ಯಾರ್ಥಿಗಳು ಭಾಗವಹಿಸಬಹುದು. 5 ಹಾಗೂ 10 ಕಿ.ಮೀ. ಮ್ಯಾರಥಾನ್ ಇರಲಿದೆ. ಚಿತ್ರಕಲೆ ಸ್ಪರ್ಧೆಗೆ ₹28 ಸಾವಿರ, ರಸಪ್ರಶ್ನೆಗೆ ₹30 ಸಾವಿರ, ಮ್ಯಾರಥಾನ್ ಸ್ಪರ್ಧೆ ₹25 ಸಾವಿರ ಹಾಗೂ ಪ್ರಬಂಧ ಸ್ಪರ್ಧೆ ವಿಜೇತರಿಗೆ ₹22 ಸಾವಿರ ಬಹುಮಾನ ನೀಡಲಾಗುವುದು ಎಂದರು. ವಿಜೇತರಿಗೆ ಮೇ 31ರ ಸಂಜೆ 4 ಗಂಟೆಗೆ ಕಾಟಂನಲ್ಲೂರು ಬಳಿಯಿರುವ ಜನಪದರು ರಂಗ ಮಂದಿರದಲ್ಲಿ ನಡೆಯಲಿರುವ 'ಮೇಳ' ಕಾರ್ಯಕ್ರಮದಲ್ಲಿ ಬಹುಮಾನ ನೀಡಿ ಗೌರವಿಸಲಾಗುವುದು ಎಂದರು.

ಮಾಹಿತಿಗೆ ಮೊಬೈಲ್ 9845284848 ಮತ್ತು 8123021966ಗೆ ಸಂಪರ್ಕಿಸಬಹುದು.

ಗೋಷ್ಠಿಯಲ್ಲಿ ವೇದಿಕೆ ಸದಸ್ಯರಾದ ಚಿನ್ನಸ್ವಾಮಿ, ದೇವರಾಜ್, ಆಸಿಫ್ ಅಕ್ರಮ್ ಹಾಗೂ ವಿಜಯನ್ ಉಪಸ್ಥಿತರಿದ್ದರು.

'ವಾಹನ ನೋಂದಣಿಗೆ 'ಇ–ಕೆವೈಸಿ' ಸೂಕ್ತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಸ್ತಿ ನೋಂದಣಿಗೆ ಆಧಾರ್, ಪಾನ್ ಕಾರ್ಡ್, ಪಾಸ್‌ಪೋರ್ಟ್ ಈ ಮೂರು ದಾಖಲೆಗಳಲ್ಲಿ ಒಂದನ್ನು ಕಡ್ಡಾಯ ಮಾಡಲಾಗಿದೆ. ವಾಹನ ನೋಂದಣಿಗೂ 'ಆಧಾರ್ ಇ–ಕೆವೈಸಿ' ಕಡ್ಡಾಯ ಮಾಡುವುದು ಸೂಕ್ತ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಸಲಹೆ ನೀಡಿದರು.

ಸಕಾಲ ಸೇವೆಗಳ ಅಡಿಯಲ್ಲಿ ಕೃಷಿ, ಸಾರಿಗೆ, ಶಿಕ್ಷಣ ಮತ್ತು ಆದಾಯ ತೆರಿಗೆ ಇಲಾಖೆಗಳ ಇ-ಆಡಳಿತ ಸೇವೆಯನ್ನು ತ್ವರಿತ ಗೊಳಿಸಲು ಮತ್ತು ಲಂಚ ಮುಕ್ತಗೊಳಿಸುವ ಕುರಿತು ಅಧಿಕಾರಿಗಳ ಜೊತೆ ಶುಕ್ರವಾರ ಅವರು ಚರ್ಚೆ ನಡೆಸಿದರು. 'ಚಾಲನಾ ಪರವಾನಗಿ ಪಡೆಯಲು ಆಧಾರ್ ಕಡ್ಡಾಯಗೊಳಿಸಿರುವಾಗ, ವಾಹನ ನೋಂದಣಿಗೂ ಆಧಾರ್ ಇ-ಕೆವೈಸಿ ಏಕೆ ಕಡ್ಡಾಯ ಮಾಡಬಾರದು' ಎಂದು ಪ್ರಶ್ನಿಸಿದರು.

ಕೃಷ್ಣ ಬೈರೇಗೌಡ

'ಸಕಾಲ ಗ್ಯಾರಂಟಿ ಸೇವೆಯನ್ನು ನಿಗದಿತ ಸಮಯದಲ್ಲಿ ನೀಡಬೇಕು. ನಿಗದಿತ ಸಮಯಕ್ಕೆ ಸೇವೆ ಲಭ್ಯವಾಗುವಂತೆ ಮಾಡಲು ಸಕಾಲಕ್ಕೆ ಸಂಬಂಧಿಸಿದ ಎಲ್ಲ ಇಲಾಖೆಗಳ ಸೇವೆಗಳ ಕುರಿತ ದತ್ತಾಂಶ ಬೆರಳ ತುದಿಯಲ್ಲಿ ಇರಬೇಕು. ಈ ಕಾರಣಕ್ಕೆ ಕಳೆದ ಎರಡೂವರೆ ವರ್ಷದಿಂದ ನಿರಂತರವಾಗಿ ಸಕಾಲ ಕುಟುಂಬ ದತ್ತಾಂಶವನ್ನು ಅಪ್‌ಡೇಟ್ ಮಾಡಲಾಗುತ್ತಿದೆ. ಕೆಲವು ಸೇವೆಗಳನ್ನು ಸ್ವಯಂಚಾಲಿತಗೊಳಿಸಲಾಗುತ್ತಿದೆ. ಇದರಿಂದ ಜನರಿಗೆ ಯಾವುದೇ ವಿಳಂಬ, ಭ್ರಷ್ಟಾಚಾರಕ್ಕೆ ಅವಕಾಶ ಇಲ್ಲದೆ ಸೇವೆ ಲಭ್ಯವಾಗಲಿದೆ. ಶೋಷಣೆಯಿಂದಲೂ ಜನರಿಗೆ ಮುಕ್ತಿ ಸಿಗಲಿದೆ' ಎಂದು ಅವರು ಹೇಳಿದರು.

'ಸಕಾಲದಲ್ಲಿ ಹತ್ತಾರು ಇಲಾಖೆಗಳಿದ್ದು ಹಲವು ಸೇವೆಗಳನ್ನು ಹೊರ ಗುತ್ತಿಗೆ ನೀಡಲಾಗಿದೆ. ಹೊರಗುತ್ತಿಗೆ ನೌಕರರ ಸಂಬಳವನ್ನು ಕುಟುಂಬ ಆ್ಯಪ್ ಮೂಲಕ ನೀಡುವಂತೆ ಆಗಬೇಕು. ವೈಯಕ್ತಿಕ ತೆರಿಗೆ ಕೂಡಾ ಕುಟುಂಬ ತಂತ್ರಾಂಶದ ಜೊತೆ ಸಂಯೋಜಿತವಾಗಿರಬೇಕು. ವೃತ್ತಿ ತೆರಿಗೆಯನ್ನು ಆನ್‌ಲೈನ್ ಮೂಲಕ ಸಂಗ್ರಹಿಸುವುದರಿಂದ ಸಂಯೋಜಿತ ಗೊಳಿಸುವುದು ಕಷ್ಟವೇನಲ್ಲ. ಜೊತೆಗೆ ಜಿಎಸ್‌ಟಿಯನ್ನೂ ಸಂಯೋಜಿತಗೊಳಿಸಬಹುದು' ಎಂದು ಸಚಿವರು ಅಭಿಪ್ರಾಯಪಟ್ಟರು.

ರಾಜ್ಯದಾದ್ಯಂತ 5 ಕೋಟಿ ಸಸಿ ನಾಟಿ

ಬೆಂಗಳೂರು: ಪರಿಸರ ಸಂರಕ್ಷಣೆಯ ಉದ್ದೇಶದಿಂದ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ (ಕೆಎಸ್‌ಎಲ್‌ಎಸ್‌ಎ) ಮತ್ತು 'ಧರೆ ಫೌಂಡೇಷನ್' ಒಡಂಬಡಿಕೆ ಮಾಡಿಕೊಂಡಿದ್ದು, ರಾಜ್ಯದಾದ್ಯಂತ ಮುಂದಿನ ಮೂರು ವರ್ಷಗಳಲ್ಲಿ 5 ಕೋಟಿ ಸಸಿಗಳನ್ನು ನೆಡುವ ಅಭಿಯಾನ ಕೈಗೊಂಡಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೆಎಸ್‌ಎಲ್‌ಎಸ್‌ಎ ಸದಸ್ಯ ಕಾರ್ಯದರ್ಶಿ ಎಚ್.ಶಶಿಧರ್ ಶೆಟ್ಟಿ ಅವರು ಈ ವಿಷಯ ತಿಳಿಸಿದರು.

'ಬೆಂಗಳೂರಿನಲ್ಲಿ ವಿಧಾನಸೌಧವನ್ನು ಕೇಂದ್ರ ಬಿಂದುವಾಗಿ ಇರಿಸಿಕೊಂಡು 50 ಕಿ.ಮೀ ವ್ಯಾಪ್ತಿಯಲ್ಲಿ ಬೆಂಗಳೂರು ಗ್ರೀನ್ ರಿಂಗ್ ಹೆಸರಿನಲ್ಲಿ ಮಿಯಾವಕಿ ವಿಧಾನ ಬಳಸಿ ಎರಡು ಕೋಟಿ ಸಸಿಗಳನ್ನು ನಡೆಸಲಾಗುವುದು. ಸರ್ಕಾರದ ಖಾಲಿ ಜಾಗಗಳನ್ನು ಗುರುತಿಸಿ ಸಸಿಗಳನ್ನು ನೆಡಿಸಲಾಗುವುದು. ಅದೇ ರೀತಿ ರಾಜ್ಯದ ಎಲ್ಲಾ ಜಿಲ್ಲೆ ಹಾಗೂ ತಾಲ್ಲೂಕು ಕಾನೂನು ಸೇವಾ ಪ್ರಾಧಿಕಾರಗಳ ನೆರವಿನಿಂದ ಗಿಡಗಳನ್ನು ನಡೆಸುವ ಅಭಿಯಾನ ನಡೆಸಲಾಗುವುದು' ಎಂದರು.

'ಕೆರೆಗಳ ಸಂರಕ್ಷಣೆ, ಜೀರ್ಣೋದ್ಧಾರಕ್ಕೆ ಸರ್ಕಾರ ಹಾಗೂ ಖಾಸಗಿ ಸಂಸ್ಥೆಗಳ ಸಹಯೋಗದಲ್ಲಿ ಕ್ರಮ ಕೈಗೊಳ್ಳಲಾಗುವುದು. 'ನಮ್ಮ ಊರು-ನಮ್ಮ ಕೆರೆ' ಘೋಷವಾಕ್ಯದ ಮೂಲಕ ಜಾಗೃತಿ ಆಂದೋಲನ ಹಮ್ಮಿಕೊಳ್ಳಲಾಗುವುದು' ಎಂದರು.

ನಗರದಲ್ಲಿ ಇಂದು

'ವ್ಹೀಲ್ಸ್ ಆಫ್ ಆಪರ್ಚ್ಯುನಿಟಿ': ಆಯೋಜನೆ: ಕೇರ್ ಟ್ರಸ್ಟ್, ಸ್ಥಳ: ಮುಕ್ತ ಹಾಲ್, ಚಾಮರ ವಜ್ರ, ಅರಮನೆ ಮೈದಾನ, ಬೆಳಿಗ್ಗೆ 8ರಿಂದ

ಭರತನಾಟ್ಯ ಪ್ರದರ್ಶನ, ಪುಸ್ತಕ ಬಿಡುಗಡೆ, ಪ್ರವಚನ: 'ಯಕ್ಷಪ್ರಶ್ನೆ' ಪ್ರವಚನ: ವ್ಯಾಸನಕೆರೆ ಪ್ರಭಂಜನಾಚಾರ್ಯ, 'ಇಂತಿ ನಿಮ್ಮ ಪ್ರೀತಿಯ ರಾಮಕೃಷ್ಣ' ಪುಸ್ತಕ ಬಿಡುಗಡೆ: ಮಹಾಬಲಮೂರ್ತಿ ಕೊಡ್ಲೆಕೆರೆ, ನೀರ್ನಳ್ಳಿ ರಾಮಕೃಷ್ಣ, ವಾಸುದೇವ ಶಾನಭಾಗ್, ಭರತನಾಟ್ಯ ಪ್ರದರ್ಶನ: ಸೌಮ್ಯ ಪ್ರದೀಪ್ ಹೆಗಡೆ, ಮನಸ್ವಿ ಭಂಡಾರಿ, ಆಯೋಜನೆ ಮತ್ತು ಸ್ಥಳ: ಕ.ವಿ.ಮಂ. ಲೆಕ್ಕಾಧಿಕಾರಿಗಳ ಸಂಘ, ಆನಂದರಾವ್ ವೃತ್ತ, ಬೆಳಿಗ್ಗೆ 10

ಕಥಕ್ ರಂಗಪ್ರವೇಶ: ಪ್ರಸ್ತುತಿ: ಪ್ರೀತಿ ಕೆ.ಪಿ., ಅತಿಥಿ: ಶುಭ ಧನಂಜಯ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 10

ಗ್ರೇಟರ್ ಬೆಂಗಳೂರು ಸಿಟಿಜಿನ್ ಫೋರಂನ ಉದ್ಘಾಟನೆ: ಬಿ. ವೀರಪ್ಪ, ಅಧ್ಯಕ್ಷತೆ: ಬಿ.ಎನ್. ಬಚ್ಚೇಗೌಡ, ಆಯೋಜನೆ: ಗ್ರೇಟರ್ ಬೆಂಗಳೂರು ವೆಲ್‌ಫೇರ್ ಅಸೋಸಿಯೇಷನ್, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಗೌರಿ ಕೃಷ್ಣ, ಅತಿಥಿಗಳು: ಶಾರದಾ ನಟರಾಜನ್, ರೂಪಾ ಹೇಮಂತ್, ಲಕ್ಷ್ಮಿ ರೇಖಾ ಅರುಣ್, ಶ್ರೀವಿದ್ಯಾ ಶ್ರೀನಾಥ್, ವೈ.ಕೆ. ಸಂಧ್ಯಾ ಶರ್ಮಾ, ಸ್ಥಳ: ರಮಣ್ ಮಹರ್ಷಿ ಹೆರಿಟೇಜ್ ಆಡಿಟೋರಿಯಂ, ಸಂಜಯನಗರ, ಸಂಜೆ 4

'ಕನ್ನಡ ಚಳವಳಿ ಮತ್ತು ಎಂ. ಚಿದಾನಂದಮೂರ್ತಿ' ದತ್ತಿ ಉಪನ್ಯಾಸ: ಸೂರ್ಯಕೀರ್ತಿ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

'ಆದಿಕವಿ' ಏಕವ್ಯಕ್ತಿ ತಾಳಮದ್ದಲೆ ಪ್ರದರ್ಶನ: ಪ್ರಸ್ತುತಿ: ದಿವಾಕರ ಹೆಗಡೆ, ಭಾಗವತರು: ಅನಂತ ಹೆಗಡೆ ದಂತಳಿಗೆ, ಮದ್ದಲೆ: ಅನಂತ ಪದ್ಮನಾಭ ಫಾಟಕ್, ಆಯೋಜನೆ: ರಾಗವಲ್ಲಿ ಫೈನ್ ಆರ್ಟ್ಸ್ ಫೌಂಡೇಷನ್, ಸ್ಥಳ: ಕಾನ್ಫರೆನ್ಸ್ ಹಾಲ್, ಕಾನ್‌ಫ್ಲ್ಯೂಯನ್ಸ್ ಕ್ಲಬ್, ಗುಡ್ ಅರ್ಥ್ ಮಲಹರ್, ಸಂಜೆ 5.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

31	47	Vacant Land, Building	Private Land	1306.89	Sy No.45/1	Remaining Portion of Sy No.47	Sy No.48/6 & 48/7	Remaining Portion of Sy No.47	-	-						V.Chittibabu S/O V.Vardharajulu Naidu
32	45/1	Vacant Land, Building	Private Land	2167.91	Sy No.44	Remaining Portion of Sy No.45/1	Sy No.47	Sy No.45/2 & 45/3	55.37	Sheet, G+3, G+5						Kumari A. Preethi D/O Venkatesha Reddy, V.Chittibabu S/O V.Vardharajulu Naidu, A.B.Desoja
33	44	Vacant Land, Building	Private Land	1775.96	Sy No.43	Remaining Portion of Sy No.44	Sy No.45/1	Remaining Portion of Sy No.44	294.01	Sheet, G+1, G+3						A.B Desoja, Kumari A. Preethi D/O Venkatesha Reddy, V. Chittibabu S/O V. Vardharajulu Naidu.
34	43	Vacant Land, Building	Private Land	154.14	Remaining Portion of Sy No.43	Remaining Portion of Sy No.43	Sy No.44	Remaining Portion of Sy No.43	115.85	Sheet, G+3						Preethi W/O A. Venkatesha Reddy, V. Chittibabu S/O V. Vardharajulu Naidu, Dhilip Desoja S/O A.B Desoja
35	45/3	Vacant Land	Private Land	761.20	Remaining Portion of Sy No.45/3	Sy No.45/1	Sy No.45/2	Sy No.66	-	-						P.Kumar S/O Late P. Adishaiah Shetty
36	45/2	Vacant Land	Private Land	128.98	Sy No.45/3	Sy No.45/1	Remaining Portion of Sy No.45/2	Sy No.66	-	-						K.T. Narayanaswamy S/O Late Thotta Reddy
37	66	Vacant Land	Private Land	1664.61	Sy No.65	Sy No.45/3	Remaining Portion of Sy No.66	Remaining Portion of Sy No.66	-	-						Muthamma W/O ChikkaNarasimaiah, V.K. Bharathi W/O Prasad Babu, N.Lalithakumari D/O Late C.Narayanappa, N. Malla S/O Late A.C Narayanappa, V.K.Bhaskar Babu S/O Late V.KrishnaSwamy Naidu, Gopal S/O Late Gowdayya
38	67	Vacant Land	Private Land	482.89	Sy No.65	Sy No.66	Sy No.66	Sy No.66	-	-						B. Narasimaiah S/O Late Boraiah, Bharathi W/O Prasad Babu, V. Chitti Babu S/O V. Varadarajulu Naidu, Jayalakshmi W/O Late B. Linganna, Shivakumar L. S/O Late B.Linganna, Pradeep.L S/O Late B.Linganna, Shymmala D/O Late B.Linganna
39	65	Vacant Land, Building	Private Land	586.37	Sy No.64	Remaining Portion of Sy No.65	Sy No.66 & 67	Remaining Portion of Sy No.65	-	-						Bharathi W/O Prasad Babu
40	64	Vacant Land, Building	Private Land	717.75	Remaining Portion of Sy No.64	Remaining Portion of Sy No.64	Sy No.65	Remaining Portion of Sy No.64	102.95	Sheet						Bharathi W/O Prasad Babu, Smt V.K Bharathi
Name of the District: **Bengaluru Urban**					Name of the Taluk: **Bengaluru South**							Name of the Village: **Halagevaderahalli**				
41	59	Vacant Land	Private Land	7585.08	Remaining Portion of Sy No.59	Hosakerehalli Village Boundary	Remaining Portion of Sy No.59	Sy No.58	-	-						National Education Foundation
42	60	Vacant Land	Private Land	1780.91	Remaining Portion of Sy No.60	Hosakerehalli Village Boundary	Remaining Portion of Sy No.60	Remaining Portion of Sy No.59	-	-						National Education Foundation
Name of the District: **Bengaluru Urban**					Name of the Taluk: **Bengaluru South**							Name of the Village: **Hosakerehalli**				
43	179	Vacant Land,	Private Land	1742.45	Remaining Portion of Sy No.179	Sy No.80	Remaining Portion of Sy No.179	Sy No.60	-	-						National Education Foundation
44	180	Vacant Land,	Private Land	1935.27	Remaining Portion of Sy No.180	Remaining Portion of Sy No.180	Remaining Portion of Sy No.180	Sy No.179	-	-						National Education Foundation
45	139	Vacant Land,	Private Land	1442.07	Remaining Portion of Sy No.139	Sy No.174	Sy No.140	Road	100.37	Sheet						Mariyapp, Ankappa, C Nagaraj S/o Chikkajavarahai, Bhagya laxmamma W/o Veerabhadra,hadra, Gowramma W/o late Ankappa, Kumara swamy S/o late Ankappa, Raghu S/o Late Ankappa, Sunil S/o Late Ankappa, N. Sunil Reddy S/o Narayana Reddy, P N Naveen Kumar S/o Mahalingappa P.S,
46	140	Vacant Land,	Private Land	458.38	Sy No.139	Sy No.174	Remaining Portion of Sy No.140	Road	230.99	Sheet & G+1 Building						Ningamma W/o Late Boraih
			Total	52377.71					2798.53							

ಗಮನಿಸಿ:

- ಭೂಮಿಯ ಮಾರುಕಟ್ಟೆ ಮೌಲ್ಯವು ಭೂಮಾಲೀಕರಿಂದ ದಾಖಲೆಗಳನ್ನು ಸಲ್ಲಿಸುವ ಆಧಾರದ ಮೇಲೆ ಫಾರ್ಮ್–III ಹಂತದಲ್ಲಿ ನಿರ್ಧರಿಸಲಾಗುವ ಭೂ ಪರಿವರ್ತನೆ ಮತ್ತು ಅಭಿವೃದ್ಧಿ ಸ್ಥಿತಿಗೆ ಒಳಪಟ್ಟಿರುತ್ತದೆ.
- ಕಟ್ಟಡದ ವ್ಯಾಪ್ತಿಯನ್ನು ನಮೂನೆ–III ಸಾರ್ವಜನಿಕ ಸೂಚನೆಯ ಹಂತದಲ್ಲಿ ಕಟ್ಟಡ ಮೌಲ್ಯಮಾಪನ ಮತ್ತು ಅಭಿವೃದ್ಧಿ ಹಕ್ಕುಗಳ ನಿಯಮಗಳು 2016ರ ಪ್ರಯೋಜನಗಳ ಆಧಾರದ ಮೇಲೆ ಪರಿಶೀಲಿಸಲಾಗುತ್ತದೆ.

ಸಹಿ/–,
ಆಯುಕ್ತರು,
ಬೆಂಗಳೂರು ಪಶ್ಚಿಮ ನಗರ ಪಾಲಿಕೆ

ಹಣಕ್ಕಾಗಿ ಬೈಕ್ ಡಿಕ್ಕಿ ಹೊಡೆಸಿ ಕೊಲೆ

ಸಿನಿಮೀಯ ಶೈಲಿಯಲ್ಲಿ ಸಂಚು ರೂಪಿಸಿ ಕೃತ್ಯ • ಐವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಣ ಹಾಗೂ ಚಿನ್ನಾಭರಣ ದೋಚುವ ಉದ್ದೇಶದಿಂದ ಮಹಿಳೆಗೆ ಬೈಕ್ ಡಿಕ್ಕಿ ಹೊಡೆಸಿ, ಕೊಲೆ ಮಾಡಿದ್ದ ಐವರನ್ನು ಮಹಾಲಕ್ಷ್ಮಿ ಲೇಔಟ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ರಾಕೇಶ್, ಮಂಜುನಾಥ್, ಚೇತನ್, ಪ್ರದೀಪ್ ಮತ್ತು ಯೋಹಾನ್ ಜಾನ್ ಬಂಧಿತರು. ವಿಜಯಲಕ್ಷ್ಮಿ ಎಂಬುವವರಿಗೆ ಆರೋಪಿಗಳು ಬೈಕ್ ಡಿಕ್ಕಿ ಹೊಡೆಸಿ ಕೊಲೆ ಮಾಡಿದ್ದರು ಎಂದು ಪೊಲೀಸರು ಹೇಳಿದರು.

ಏಪ್ರಿಲ್ 21ರಂದು ಕುರುಬರ ಹಳ್ಳಿಯ ಪೈಪ್‌ಲೈನ್ ರಸ್ತೆಯಲ್ಲಿ ಆರೋಪಿಗಳು ಕೃತ್ಯ ಎಸಗಿದ್ದರು. ಆರಂಭದಲ್ಲಿ ಇದೊಂದು 'ಅಪಘಾತ' ಎಂಬುದಾಗಿ ಮೇಲ್ನೋಟಕ್ಕೆ ಕಂಡುಬಂದಿತ್ತು. ಸಂಚಾರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆಯನ್ನು ಮಹಾಲಕ್ಷ್ಮಿ ಲೇಔಟ್‌ನ ಕಾನೂನು ಸುವ್ಯವಸ್ಥೆ ಠಾಣೆಯ ಪೊಲೀಸರು ಕೈಗೆತ್ತಿಕೊಂಡಾಗ ಕೊಲೆಯ ರಹಸ್ಯ ಬಯಲಾಗಿದೆ. ಸುಲಿಗೆಗಾಗಿ ನಡೆದ ವ್ಯವಸ್ಥಿತ ಕೊಲೆ ಎಂಬುದೂ ಸಾಬೀತಾಗಿದೆ.

ಪ್ರಕರಣದ ಸಂಬಂಧ ಐವರನ್ನು ಬಂಧಿಸಲಾಗಿತ್ತು. ಬಂಧಿತರ ಪೈಕಿ ಮಂಜುನಾಥ್ ದೀರ್ಘಕಾಲದ ಅನಾರೋಗ್ಯದಿಂದ ಬಳಲುತ್ತಿದ್ದರು. ವಿಚಾರಣೆ ವೇಳೆ ಅವರು ಅಸ್ವಸ್ಥಗೊಂಡಿದ್ದರು. ವಿಕ್ಟೋರಿಯಾ ಆಸ್ಪತ್ರೆಯ ಒಳರೋಗಿಗಳ ವಿಭಾಗಕ್ಕೆ ದಾಖಲು ಮಾಡಲಾಗಿತ್ತು. ಅಲ್ಲಿ ಮೃತಪಟ್ಟಿದ್ದಾರೆ. ಉಳಿದ ನಾಲ್ವರು ಆರೋಪಿಗಳನ್ನು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಮೃತ ಮಂಜುನಾಥ್ ವಿರುದ್ಧ ಶೇಷಾದ್ರಿಪುರ ಠಾಣೆಯಲ್ಲಿ ಮೂರು, ಮಹಾಲಕ್ಷ್ಮಿ ಲೇಔಟ್, ಹೈಗ್ರೌಂಡ್ಸ್, ರಾಜಗೋಪಾಲ ನಗರ ಠಾಣೆಯಲ್ಲಿ ತಲಾ ಒಂದು ಪ್ರಕರಣ ದಾಖಲಾಗಿತ್ತು. ಅಲ್ಲದೇ ಶೇಷಾದ್ರಿಪುರ ಪೊಲೀಸ್ ಠಾಣೆಯಲ್ಲಿ ರೌಡಿ ಪಟ್ಟಿಯನ್ನು ತೆರೆಯಲಾಗಿತ್ತು ಎಂದು ಪೊಲೀಸರು ಹೇಳಿದರು.

ಕೊಲೆಯಾದ ವಿಜಯಲಕ್ಷ್ಮಿ

ರಾಕೇಶ್


ಮಂಜುನಾಥ್

ಚೇತನ್

ಅಪಘಾತದ ದೃಶ್ಯ

ಪ್ರದೀಪ್

ಯೋಹಾನ್ ಜಾನ್

ಮಹಾಲಕ್ಷ್ಮಿ ಲೇಔಟ್‌ನ ಕುರುಬರಹಳ್ಳಿಯ ಪೈಪ್‌ಲೈನ್ ರಸ್ತೆಯ ಮನೆಯಲ್ಲಿ ವಿಜಯಲಕ್ಷ್ಮಿ ಒಂಟಿಯಾಗಿ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಆರೋಪಿಗಳ ಪೈಕಿ ಚೇತನ್‌ಗೆ ಮಹಿಳೆಯ ಪರಿಚಯವಿತ್ತು. ವಿಜಯಲಕ್ಷ್ಮಿ ಬಳಿ ಹೆಚ್ಚಿನ ಹಣವಿದೆ ಎಂಬ ಮಾಹಿತಿ ತಿಳಿದುಕೊಂಡಿದ್ದರು. ಸಾಲವನ್ನೂ ಪಡೆದುಕೊಂಡಿದ್ದರು. ಸಾಲವನ್ನು ವಾಪಸ್ ನೀಡುವಂತೆ ಮಹಿಳೆ ಕೇಳಿದ್ದರು. ಆಗ ಚೇತನ್ ತನ್ನ ಸಹಚರರನ್ನು ಸೇರಿಸಿಕೊಂಡು ಮಹಿಳೆಯ ಮನೆಯಲ್ಲಿ ನಗದು ಹಾಗೂ ಚಿನ್ನವನ್ನು ದೋಚಿ ಪರಾರಿಯಾಗಲು ಸಂಚು ರೂಪಿಸಿದ್ದರು ಎಂದು ಪೊಲೀಸರು ಹೇಳಿದರು.

ಏಪ್ರಿಲ್ 21ರಂದು ವಿಜಯಲಕ್ಷ್ಮಿ ರಸ್ತೆಯಲ್ಲಿ ನಡೆದು ತೆರಳುವಾಗ ರಾಕೇಶ್ ಬೈಕ್‌ನಿಂದ ಜೋರಾಗಿ ಡಿಕ್ಕಿ ಹೊಡೆಸಿದ್ದರು. ಕೂಡಲೇ ಅಲ್ಲಿಗೆ ಆಟೊದಲ್ಲಿ ಬಂದಿದ್ದ ಇತರೆ ಆರೋಪಿಗಳು ವಿಜಯಲಕ್ಷ್ಮಿ ಅವರನ್ನು ಆಸ್ಪತ್ರೆಗೆ ಸೇರಿಸುವ ನಾಟಕವಾಡಿದ್ದಾರೆ ಎಂದು ಪೊಲೀಸರು ಹೇಳಿದರು.

ಪರ್ಸ್‌ನಲ್ಲಿ ಕೀ ಕಳ್ಳತನ: ಮಹಿಳೆಯನ್ನು ಆಸ್ಪತ್ರೆಗೆ ದಾಖಲಿಸುವ ಸೋಗಿನಲ್ಲಿ ಆರೋಪಿ ಮಂಜುನಾಥ್, ಮಹಿಳೆಯ ಪರ್ಸ್‌ನಲ್ಲಿದ್ದ ಮನೆ ಕೀಲಿಯನ್ನು ಕಳವು ಮಾಡಿದ್ದರು. ನೇರವಾಗಿ ವಿಜಯಲಕ್ಷ್ಮಿ ಮನೆಗೆ ತೆರಳಿ ಕಳ್ಳತನಕ್ಕೆ ಯತ್ನಿಸಿದ್ದಾಗ, ಅಕ್ಕಪಕ್ಕದ ಮನೆಯವರು ಪ್ರಶ್ನಿಸಿದ್ದರು. ಆಗ 'ವಿಜಯಲಕ್ಷ್ಮಿ ನನಗೆ ಪರಿಯಸ್ಥರು. ಅವರ ಆಧಾರ್ ಕಾರ್ಡ್ ತೆಗೆದುಕೊಂಡು ಹೋಗಲು ಬಂದಿರುವುದಾಗಿ ತಿಳಿಸಿ ಅಲ್ಲಿಂದ ಪರಾರಿಯಾಗಿದ್ದರು' ಎಂದು ಮೂಲಗಳು ಹೇಳಿವೆ.

ಸುಳ್ಳು ದೂರು ನೀಡಿದ್ದ ರಾಕೇಶ್

ಅಪಘಾತ ಎಂದು ಬಿಂಬಿಸಲು ಮೊದಲೇ ಆರೋಪಿಗಳು ಸಂಚು ರೂಪಿಸಿದ್ದರು. ಅದರಂತೆ ರಾಕೇಶ್, ಮಹಾಲಕ್ಷ್ಮಿ ಸಂಚಾರ ಠಾಣೆಗೆ ತೆರಳಿ, ಪರಿಯಸ್ಥರಾದ ವಿಜಯಲಕ್ಷ್ಮಿಗೆ ಅಪಘಾತವಾಗಿದೆಯೆಂದು ದೂರು ನೀಡಿದ್ದರು. 'ಅಪರಿಚಿತ ವಾಹನ ಡಿಕ್ಕಿ ಹೊಡೆದಿದ್ದು, ನಾನೇ ಅವರನ್ನು ಕಾಪಾಡಿ ಆಸ್ಪತ್ರೆಗೆ ಸೇರಿಸಿದ್ದೇನೆ' ಎಂದೂ ದೂರಿನಲ್ಲಿ ಉಲ್ಲೇಖಿಸಿದ್ದರು. ಆರಂಭದಲ್ಲಿ ಅಪಘಾತ ಇರಬಹುದೆಂದು ಪೊಲೀಸರೂ ಭಾವಿಸಿದ್ದರು.

ತನಿಖೆಯಲ್ಲಿ ಅಸಲಿ ಸತ್ಯ ಬಯಲು

ಮಹಿಳೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಮನೆಯಲ್ಲಿ ಕಳ್ಳತನಕ್ಕೆ ಯತ್ನ ನಡೆದಿರುವ ಬಗ್ಗೆ ಮನೆ ಮಾಲೀಕರು ದೂರು ನೀಡಿದ್ದರು. ದೂರು ಆಧರಿಸಿ ಅತ್ತ ಮಹಾಲಕ್ಷ್ಮಿ ಲೇಔಟ್ ಪೊಲೀಸರು ತನಿಖೆ ಆರಂಭಿಸಿದ್ದರು. ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿದಾಗ ಕೊಲೆಗೆ ಸಂಚು ರೂಪಿಸಿರುವುದಕ್ಕೆ ಕೆಲವು ಸಾಕ್ಷ್ಯಾಧಾರಗಳು ಲಭಿಸಿದ್ದವು. ಪೊಲೀಸರು ತನಿಖೆ ನಡೆಸುತ್ತಿರುವಾಗಲೇ ಮಹಿಳೆ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದರು. ತನಿಖೆಗೆ ಮುಂದುವರೆಸಿದಾಗ ಹಣ ಹಾಗೂ ಚಿನ್ನಾಭರಣ ದೋಚುವ ಉದ್ದೇಶದಿಂದ ಸಂಚು ರೂಪಿಸಿ ಅಪಘಾತ ನಡೆಸಿ ಕೊಲೆ ಮಾಡಿರುವುದು ಪತ್ತೆಯಾಗಿದೆ ಎಂದು ಪೊಲೀಸರು ಹೇಳಿದರು.

ಲೈಂಗಿಕ ಕ್ರಿಯೆಗೆ ನಿರಾಕರಣೆ; ಹಲ್ಲೆಯಿಂದ ಕೇರಳಂ ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಸೂಲಿಬೆಲೆ (ಹೊಸಕೋಟೆ): ಕೆಲಸಕ್ಕಿದ್ದ ಮಾಲೀಕನ ಜೊತೆ ಲೈಂಗಿಕ ಕ್ರಿಯೆಗೆ ಒಪ್ಪದ ಕಾರಣ ಮಾರಾಣಾಂತಿಕ ಹಲ್ಲೆಗೆ ಒಳಗಾಗಿ ತ್ರಿಶೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಕೇರಳಂ ಮಹಿಳೆ ಮಂಗಳವಾರ ಮೃತ ಪಟ್ಟಿದ್ದಾರೆ.

ಸುನೀತಾ ಸ್ಮಿತಾ

ಕೇರಳಂ ಸುನೀತಾ ಸ್ಮಿತಾ(47) ಮೃತ ಮಹಿಳೆ. ಮೃತಳ ಪತಿ ಸಿಂಟೋ ಆ್ಯಂಟನಿ ತ್ರಿಶೂರ್ ಪೊಲೀಸ್ ಠಾಣೆಯಲ್ಲಿ ಸೂಲಿಬೆಲೆಯ ದೀಪಕ್ ಕೃಷ್ಣ ಎಂಬಾತನ ವಿರುದ್ಧ ದೂರು ದಾಖಲಿಸಿದ್ದರು. ತ್ರಿಶೂರ್ ಪೊಲೀಸರು ಪ್ರಕರಣವನ್ನು ಸೂಲಿಬೆಲೆ ಪೊಲೀಸ್ ಠಾಣೆಗೆ ವರ್ಗಾಯಿಸಿದ್ದರು.

ಮೇ 5ರಂದು ಸೂಲಿಬೆಲೆ ಪೊಲೀಸರು ಆರೋಪಿ ದೀಪಕ್ ಕೃಷ್ಣನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಅಪರಾಧ ಸುದ್ದಿ

ದೀಪಕ್ ಕೃಷ್ಣ ಸೂಲಿಬೆಲೆಯ ತಮ್ಮ ಮನೆಯಲ್ಲಿ ನಾಯಿಗಳನ್ನು ಸಾಕಿದ್ದರು. ಅವುಗಳ ಆರೈಕೆಗೆ ಕೇರಳಂನ ತ್ರಿಶೂರ್ ಜಿಲ್ಲೆಯ ಪಥಮ್‌ಕಲ್ಲು ನಿವಾಸಿ ಸುನೀತಾ ಸ್ಮಿತಾ ಅವರನ್ನು ಕರೆ ತಂದಿದ್ದರು. ಸ್ಮಿತಾ ಜೊತೆ ಅಲೀನಾ, ಚಿನ್ನು ಎಂಬುವರೂ ಬಂದಿದ್ದರು.

ಮೇ 3ರಂದು ಆರೋಪಿ ದೀಪಕ್, ಸ್ಮಿತಾ ಅವರನ್ನು ಲೈಂಗಿಕ ಕ್ರಿಯೆಗೆ ಸಹಕರಿಸುವಂತೆ ಒತ್ತಾಯಿಸಿದ್ದ. ಅದಕ್ಕೆ ನಿರಾಕರಿಸಿದ ಸ್ಮಿತಾ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದ. ತಲೆಗೆ ಗಂಭೀರ ಪೆಟ್ಟಾಗಿತ್ತು. ಬಿಡಿಸಲು ಬಂದ ಅಲೀನಾ, ಚಿನ್ನು ಅವರಿಗೂ ಚಾಕು ತೋರಿಸಿ ಬೆದರಿಸಿದ್ದ ಎಂದು ಪೊಲೋಸರು ತಿಳಿಸಿದ್ದಾರೆ.

ಗಂಭೀರವಾಗಿ ಗಾಯಗೊಂಡಿದ್ದ ಸ್ಮಿತಾ ಅವರನ್ನು ತಕ್ಷಣ ಸೂಲಿಬೆಲೆಯ ಖಾಸಗಿ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಕೊಡಿಸಿದ ನಂತರ ಎಂವಿಜೆ ಆಸ್ಪತ್ರೆಗೆ ದಾಖಲಾಗಿಸಲಾಗಿತ್ತು. ಆರೋಗ್ಯ ಸ್ಥಿತಿ ಗಂಭೀರವಾಗಿದ್ದ ಕಾರಣ ಕೃತಕ ಉಸಿರಾಟ ಕಲ್ಪಿಸಲಾಗಿತ್ತು. ಪರಿಸ್ಥಿತಿ ಬಿಗಡಾಯಿಸಿದ್ದರಿಂದ ತ್ರಿಶೂರ್ ಜುಬಿಲಿ ಮಿಷನ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ಕೃತಕ ಉಸಿರಾಟ ವ್ಯವಸ್ಥೆಯಲ್ಲಿದ್ದ ಸ್ಮಿತಾ ಮಂಗಳವಾರ ಆಸ್ಪತ್ರೆಯಲ್ಲೇ ಕೊನೆಯುಸಿರೆಳೆದರು.

ಜೈಲಿನಿಂದ ಬಂದು ಕೃತ್ಯ

ಸೂಲಿಬೆಲೆಯ ನಿರ್ಜನ ಪ್ರದೇಶದಲ್ಲಿ ಮನೆ ಕಟ್ಟಿಕೊಂಡಿರುವ ದೀಪಕ್ ಕೃಷ್ಣ ಅದರಲ್ಲಿ ನಾಯಿಗಳನ್ನು ಸಾಕಿಕೊಂಡಿದ್ದಾರೆ. ಮನೆ ಒಳಗೆ ಏನೇ ನಡೆದರೂ ಹೊರಗೆ ಗೊತ್ತಾಗದಂತೆ ಮನೆಯ ಸುತ್ತಲೂ ಎತ್ತರದ ಕಾಂಪೌಂಡ್ ಕಟ್ಟಿಸಿದ್ದಾರೆ. ಆಗಾಗ ಗಲಾಟೆ ಮಾಡುವುದು ಈತನ ಚಾಳಿಯಾಗಿತ್ತು ಎಂದು ಸ್ಥಳೀಯರು ದೂರಿದ್ದಾರೆ.

ಕೆಲ ತಿಂಗಳ ಹಿಂದೆ ಸೂಲಿಬೆಲೆ ಬಾರ್‌ವೊಂದರ ಮುಂದೆ ಗಲಾಟೆ ಮಾಡಿ ಗನ್‌ನಿಂದ ಗಾಳಿಯಲ್ಲಿ ಗುಂಡು ಹಾರಿಸಿದ್ದ. ಇದರಿಂದ ಜೈಲು ಸೇರಿದ್ದ ದೀಪಕ್ ಕೃಷ್ಣ, ಜೈಲಿನಿಂದ ಹೊರ ಬಂದು ಈ ಕೃತ್ಯ ಎಸಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೇರಳಂನಲ್ಲಿ ಆಕ್ರೋಶ

ಸುನೀತಾ ಸ್ಮಿತಾ ಸಾವು ಕೇರಳಂದಲ್ಲಿ ದೊಡ್ಡ ಸದ್ದು ಮಾಡುತ್ತಲಿದೆ. ಸಾಮಾಜಿಕ ಮಾಧ್ಯಮಗಳಲ್ಲಿ ಸಾವಿನ ಚರ್ಚೆ ನಡೆಯುತ್ತಿದೆ. ಆರೋಪಿ ವಿರುದ್ಧ ಸಾರ್ವಜನಿಕರು ಹಾಗೂ ಸೆಲೆಬ್ರೆಟಿಗಳು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ನಟಿ ಪಾರ್ವತಿ ತಿರುವೋತ್ತರ್ ಸಾಮಾಜಿಕ ಜಾಲತಾಣದಲ್ಲಿ ಆಕ್ರೋಶ ಹೊರಹಾಕಿ ಆರೋಪಿ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯಿಸಿದ್ದಾರೆ.

ಟ್ರಕ್ ಚಾಲಕರ ಬಂಧನ • ಗಾಂಜ ಮೌಲ್ಯ ₹1.25 ಕೋಟಿ

ಪಶುಆಹಾರ ಮೂಟೆಗಳಲ್ಲಿತ್ತು 250 ಕೆ.ಜಿ ಗಾಂಜಾ

ಜಿಗಣಿಯಲ್ಲಿ ವಶಪಡಿಸಿಕೊಂಡ ಗಾಂಜಾದೊಂದಿಗೆ ಪೊಲೀಸರ ತಂಡ

ಪ್ರಜಾವಾಣಿ ವಾರ್ತೆ

ಜಿಗಣಿ (ಆನೇಕಲ್): ಪಶು ಆಹಾರದ ಮೂಟೆಗಳಲ್ಲಿ ಅಡಗಿಸಿ ಸಾಗಿಸುತ್ತಿದ್ದ ₹1.25 ಕೋಟಿ ಮೌಲ್ಯದ 250 ಕೆ.ಜಿ ಗಾಂಜಾವನ್ನು ಜಿಗಣಿ ಪೊಲೀಸರು ಶುಕ್ರವಾರ ವಶಪಡಿಸಿಕೊಂಡಿದ್ದಾರೆ.

ಜಿಗಣಿ ಪೊಲೀಸ್ ಠಾಣೆ ವ್ಯಾಪ್ತಿಯ ಕೊಪ್ಪ ಗೇಟ್ ಬಳಿ ಪ್ರಾರ್ಥನಾ ಬೇಕರಿಯ ಮುಂಭಾಗ ಟ್ರಕ್ ತಡೆದು ಪರಿಶೀಲಿಸಿದಾಗ ಪಶು ಆಹಾರದ ಮೂಟೆಗಳಲ್ಲಿ ಗಾಂಜಾ ಪತ್ತೆಯಾಗಿದೆ.

ಟ್ರಕ್ ಚಾಲಕ ಬಿಹಾರದ ರಾಮಾಯಣ್ ಯಾದವ್ (56) ಮತ್ತು ಸಹಾಯಕ ಚಾಲಕ ಮೊಹಮ್ಮದ್ ಸಬೀರ್ ಖಾನ್(51) ಎಂಬುವರನ್ನು ಬಂಧಿಸಿದ್ದಾರೆ.

ತನಿಖೆ ವೇಳೆ ಆರೋಪಿಗಳು ನೀಡಿದ ಮಾಹಿತಿ ಮೇರೆಗೆ ಕಿಂಗ್‌ಪಿನ್‌ಗಳಾದ ಬಿಹಾರದ ವಿನೋದ್ ಮತ್ತು ಒಡಿಶಾದ ಬಾಬು ಬಂಧನಕ್ಕೆ ಪೊಲೀಸರು ಬಿಹಾರಕ್ಕೆ ತೆರಳಿದ್ದಾರೆ.

ರಾಮಾಯಣ್ ಯಾದವ್

ಮೊಹಮ್ಮದ್ ಸಬೀರ್ ಖಾನ್

ಛತ್ತೀಸಗಡದಿಂದ ಟ್ರಕ್‌ನಲ್ಲಿ ತಮಿಳುನಾಡಿನ ನಾಮಕಲ್‌ಗೆ ಗಾಂಜಾ ಸಾಗಿಸಲಾಗುತ್ತಿತ್ತು. ಟ್ರಕ್ ಬಿಹಾರದ ಮುಹಾಮ್ ಇಂಟರ್‌ನ್ಯಾಷನಲ್ ಇಂಡೋ ಟ್ರಾನ್ಸ್‌ಪೋರ್ಟ್ ಕಂಪನಿಗೆ ಸೇರಿದೆ. ಒಡಿಶಾದ ಜಯಪುರ ಎಂಬಲ್ಲಿ ಮೇವಿನ ನಡುವೆ ಗಾಂಜಾ ಇಡಲಾಗಿತ್ತು ಎಂದು ಆರೋಪಿಗಳು ವಿಚಾರಣೆ ವೇಳೆ ಬಾಯ್ಬಿಟ್ಟಿದ್ದಾರೆ ಎಂದು ಜಿಗಣಿ ಪೊಲೀಸ್ ಇನ್‌ಸ್ಪೆಕ್ಟರ್ ಮಂಜುನಾಥ್ ತಿಳಿಸಿದ್ದಾರೆ.

ಬೆಂಗಳೂರು ಗ್ರಾಮಾಂತರ ಪೊಲೀಸ್ ವರಿಷ್ಠಾಧಿಕಾರಿ ಚಂದ್ರಕಾಂತ್ ಮತ್ತು ಎಎಸ್‌ಪಿ ಲಕ್ಷ್ಮೀನಾರಾಯಣ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆದರು.

> **ಮಾದಕ ವಸ್ತುಗಳ ಮಾರಾಟ, ಸಾಗಾಣಿಕೆ ತಡೆಗೆ ಬೆಂಗಳೂರು ಗ್ರಾಮಾಂತರ ಪೊಲೀಸ್ ವಿಭಾಗದಲ್ಲಿ ಬಿಗಿ ಕ್ರಮ ವಹಿಸಲಾಗಿದೆ. ಜಿಗಣಿ ಪೊಲೀಸರು ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ**
> **ಎಂ.ವಿ.ಚಂದ್ರಕಾಂತ್,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

'ಬಿಸಿಸಿಐ, ಕೆಎಸ್‌ಸಿಎ, ಆರ್‌ಸಿಬಿ ಒಪ್ಪಂದದ ಮಾಹಿತಿ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಸಕರು ಟಿಕೆಟ್ ಕೇಳಿದ್ದ ಕಾರಣಕ್ಕೆ ಐಪಿಎಲ್ ಕ್ರಿಕೆಟ್ ಪಂದ್ಯಾವಳಿಯ ಅಂತಿಮ ಪಂದ್ಯವನ್ನು ಅಹಮದಾಬಾದಿಗೆ ಸ್ಥಳಾಂತರಿಸಲಾಗಿದೆ ಎಂದು ಮಾಡುತ್ತಿರುವ ಆರೋಪ ಆಧಾರರಹಿತ. ಈ ಬಗ್ಗೆ ಐಪಿಎಲ್ ಅಥವಾ ಕೆಎಸ್‌ಸಿಎಯವರು ನೇರವಾಗಿ ಹೇಳಿಕೆ ನೀಡಲಿ' ಎಂದು ಗೃಹ ಸಚಿವ ಜಿ. ಪರಮೇಶ್ವರ ಸವಾಲು ಹಾಕಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಸವಾಲಿನ ಸಂದರ್ಭದಲ್ಲೂ ಬೆಂಗಳೂರಿನಲ್ಲಿ ಐಪಿಎಲ್ ಕ್ರಿಕೆಟ್ ಪಂದ್ಯಗಳಿಗೆ ಅವಕಾಶ ನೀಡಿ, ಕಾಳಜಿ ವಹಿಸಿ ಭದ್ರತೆ ಒದಗಿಸಲಾಗಿತ್ತು. ಅಂತಿಮ ಪಂದ್ಯವನ್ನು ಸ್ಥಳಾಂತರಿಸುವುದು ಸರಿಯಲ್ಲ' ಎಂದು ಆಕ್ಷೇಪ ವ್ಯಕ್ತಪಡಿಸಿದರು.

'ಬಿಸಿಸಿಐ, ಕೆಎಸ್‌ಸಿಎ ಮತ್ತು ಆರ್‌ಸಿಬಿ ನಡುವೆ ಆಗಿರುವ ಒಪ್ಪಂದಗಳ ಬಗ್ಗೆ ನಮಗೆ ಮಾಹಿತಿ ಇಲ್ಲ. ಆದರೆ, ಐಪಿಎಲ್ ಪಂದ್ಯಾವಳಿಯನ್ನು ಲಾಭದ ಆಸೆಯಿಂದ ನೋಡಲಾಗುತ್ತಿದೆ. ಬೆಂಗಳೂರಿನ ಕ್ರೀಡಾಂಗಣದಲ್ಲಿ 33 ಸಾವಿರ ಆಸನಗಳಲ್ಲಿ ಒಂದಿಷ್ಟು ಉಚಿತ ಟಿಕೆಟ್‌ಗಳು ಹೋಗುತ್ತಿವೆ ಎಂಬುದನ್ನು ಬಿಟ್ಟರೆ, ಭದ್ರತೆ ಅಥವಾ ವ್ಯವಸ್ಥೆಯಲ್ಲಿ ಯಾವುದೇ ಲೋಪವಿಲ್ಲ. ನಮ್ಮ ಪೊಲೀಸ್ ಇಲಾಖೆ ಎಲ್ಲ ರೀತಿಯ ಸಹಕಾರ ನೀಡಿದೆ. ಈ ಹಿಂದಿನ ವರ್ಷದಂತೆ ದುರಂತಗಳು ನಡೆಯಬಾರದು ಎಂದು ಹೆಚ್ಚಿನ ಕಾಳಜಿ ವಹಿಸಲಾಗಿತ್ತು' ಎಂದರು.

'ಶಾಸಕರಿಗೆ ಟಿಕೆಟ್ ನೀಡುವ ಕಾರಣಕ್ಕಾಗಿ ಪಂದ್ಯಗಳು ಸ್ಥಳಾಂತರಗೊಳ್ಳುತ್ತಿಲ್ಲ. ಅಹಮದಾಬಾದಿನ ಕ್ರೀಡಾಂಗಣದಲ್ಲಿ 1 ಲಕ್ಷ ಆಸನಗಳಿವೆ. ಹೆಚ್ಚಿನ ಲಾಭವಾಗುತ್ತದೆ ಎಂಬ ಕಾರಣಕ್ಕೆ ಅಂತಿಮ ಪಂದ್ಯವನ್ನು ಸ್ಥಳಾಂತರ ಮಾಡಲಾಗುತ್ತಿದೆ. ಇದಕ್ಕೂ, ಸರ್ಕಾರಕ್ಕೂ ಸಂಬಂಧವಿಲ್ಲ' ಎಂದರು.

'ಬಿಜೆಪಿ, ಜೆಡಿಎಸ್‌ನವರು ಏನಾದರೂ ಟೀಕೆ ಮಾಡಲಿ. ಅವರ ಅವಧಿಯಲ್ಲಿ ಕ್ರೀಡೆಗೆ ಎಷ್ಟು ಪ್ರೋತ್ಸಾಹ ನೀಡುತ್ತಿದ್ದರು ಎನ್ನುವುದು ಎಲ್ಲರಿಗೂ ಗೊತ್ತಿದೆ' ಎಂದು ಟೀಕಿಸಿದರು.

'ಶಾಸಕರ ಟಿಕೆಟ್‌ಗಾಗಿ ಸ್ಥಳಾಂತರ ಆಗಿಲ್ಲ: 'ಶಾಸಕರು ಟಿಕೆಟ್ ಕೇಳಿದ ಕಾರಣಕ್ಕೆ ಐಪಿಎಲ್ ಕ್ರಿಕೆಟ್ ಪಂದ್ಯಾವಳಿಯ ಅಂತಿಮ ಪಂದ್ಯ ಸ್ಥಳಾಂತರ ಆಗಿಲ್ಲ. ಅಮಿತ್ ಶಾ ಪಂದ್ಯ ನೋಡುತ್ತಾರಲ್ಲವೇ. ಅವರೇನು ದುಡ್ಡುಕೊಟ್ಟು ನೋಡುತ್ತಾರೆಯೇ' ಎಂದು ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

'ಶಾಸಕರು, ಸಂಸದರು ಟಿಕೆಟ್ ಕೇಳಿದ್ದಾರೆ. ಮೊದಲು ವಿರೋಧ ಪಕ್ಷದ ನಾಯಕರು ಒತ್ತಡ ಹಾಕಿದ್ದು, ಬಳಿಕ ಎಲ್ಲರೂ ಧ್ವನಿಗೂಡಿಸಿದರು. ಕೆಲವರು ತಪ್ಪು ಅಂದರು, ಇನ್ನೂ ಕೆಲವರು ಸರಿ ಅಂದರು. ಈಗಾಗಲೇ ಐದಾರು ಪಂದ್ಯ ನಡೆದಿದೆ. ಭದ್ರತೆ ಇಲ್ಲದಿದ್ದರೆ ಹೇಗೆ ನಡೆಯುತ್ತಿತ್ತು? ಅಂತಿಮ ಪಂದ್ಯವನ್ನು ಗುಜರಾತ್‌ಗೆ ಕೊಂಡೊಯ್ದಿದ್ದು ಲಾಭಕ್ಕಾಗಿ. ಎಲ್ಲ ವಿಷಯಗಳಲ್ಲೂ ರಾಜ್ಯಕ್ಕೆ ಅನ್ಯಾಯ ಮಾಡಲಾಗುತ್ತಿದೆ' ಎಂದು ಅವರು ದೂರಿದರು.

ವಾಹನ ಡಿಕ್ಕಿ: ಪಾದಚಾರಿ ಸಾವು

ಬೆಂಗಳೂರು: ಮಹಾತ್ಮ ಗಾಂಧಿ ರಸ್ತೆಯ ಅನಿಲ್ ಕುಂಬ್ಳೆ ವೃತ್ತದಲ್ಲಿ ಶುಕ್ರವಾರ ಮುಂಜಾನೆ ವೇಗವಾಗಿ ಬಂದ ವಾಹನವೊಂದು ರಸ್ತೆ ದಾಟುತ್ತಿದ್ದ ವ್ಯಕ್ತಿಗೆ ಡಿಕ್ಕಿಯಾಗಿ ಪಾದಚಾರಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮೃತ ವ್ಯಕ್ತಿಯ ಗುರುತು ಪತ್ತೆಯಾಗಿಲ್ಲ. 50 ವರ್ಷ ಇರಬಹುದು ಎಂದು ಅಂದಾಜಿಸಲಾಗಿದೆ. ಮೃತದೇಹವನ್ನು ಬೌರಿಂಗ್ ಆಸ್ಪತ್ರೆಯ ಶವಾಗಾರದಲ್ಲಿ ಇಡಲಾಗಿದೆ. ಮೃತ ವ್ಯಕ್ತಿಯ ಸಂಬಂಧಿಕರನ್ನು ಪತ್ತೆಹಚ್ಚುವ ಕೆಲಸ ನಡೆಯುತ್ತಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಅನಿಲ್ ಕುಂಬ್ಳೆ ವೃತ್ತದಲ್ಲಿ ವ್ಯಕ್ತಿಯೊಬ್ಬರು ಶುಕ್ರವಾರ ಮುಂಜಾನೆ 4.30ರ ಸುಮಾರಿಗೆ ರಸ್ತೆ ದಾಟುತ್ತಿದ್ದರು. ಕಬ್ಬನ್ ರಸ್ತೆ ಕಡೆಯಿಂದ ವೇಗವಾಗಿ ಬಂದ ವಾಹನವೊಂದು ಡಿಕ್ಕಿ ಹೊಡೆದಿದೆ. ಗಂಭೀರವಾಗಿ ಗಾಯಗೊಂಡಿದ್ದ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಚಾಲಕ ವಾಹನವನ್ನು ನಿಲುಗಡೆ ಮಾಡದೇ ತೆರಳಿದ್ದಾನೆ. ಜಂಕ್ಷನ್‌ನಲ್ಲಿ ಅಳವಡಿಸಿರುವ ಹಾಗೂ ವಾಣಿಜ್ಯ ಕಟ್ಟಡಗಳಲ್ಲಿ ಇರುವ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲನೆ ನಡೆಸಲಾಗುತ್ತಿದೆ. ವಾಹನದ ನೋಂದಣಿ ಸಂಖ್ಯೆ ಪತ್ತೆ ಆಗಿದೆ. ಅದನ್ನು ಆಧರಿಸಿ ಚಾಲಕನನ್ನು ಪತ್ತೆ ಹಚ್ಚಲಾಗುವುದು ಎಂದು ಸಂಚಾರ ಪೊಲೀಸರು ಹೇಳಿದರು.

ಅಪಘಾತ ಸಂಭವಿಸಿದ ಅನಿಲ್ ಕುಂಬ್ಳೆ ವೃತ್ತಕ್ಕೆ ಸಂಚಾರ ವಿಭಾಗದ ಡಿಸಿಪಿ ಅನೂಪ್ ಶೆಟ್ಟಿ ಅವರು ಶುಕ್ರವಾರ ಭೇಟಿ ನೀಡಿ ಪರಿಶೀಲಿಸಿದರು

ಕಬ್ಬನ್‌ಪಾರ್ಕ್ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸ್ಥಳಕ್ಕೆ ಪಶ್ಚಿಮ ವಿಭಾಗದ (ಸಂಚಾರ) ಡಿಸಿಪಿ ಅನೂಪ್ ಶೆಟ್ಟಿ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ರೈಲು ಗಾಲಿ ಕಾರ್ಖಾನೆ
ವೆಬ್‌ಸೈಟ್: www.rwf.indianrailways.gov.in
ಟೆಂಡರ್ ಪ್ರಕಟಣೆ ಸಂ.
ಆರ್‌ಡಬ್ಲ್ಯುಎಫ್/ಎಸ್/ಪಿ2/04/2026-27 ದಿನಾಂಕ : 08-05-2026
ಭಾರತದ ರಾಷ್ಟ್ರಪತಿಗಳ ಪರವಾಗಿ, ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು ಕೆಳಕಂಡ ಐಟಂನ ಸರಬರಾಜಿಗಾಗಿ ಓಇಎಂ ಅಥವಾ ಅವರ ಅಧಿಕೃತ ಏಜೆಂಟ್‌ಗಳಿಂದ ಭಾರತೀಯ ರೈಲ್ವೆ ಇ-ಪೋರ್ಟಲ್ **www.ireps.gov.in.** ನಲ್ಲಿ ಎಲೆಕ್ಟ್ರಾನಿಕ್ ಜಾಗತಿಕ ಮುಕ್ತ ಟೆಂಡರ್ ಆಹ್ವಾನಿಸಿದ್ದಾರೆ.
ಟೆಂಡರ್ ಸಂ. ಪಿ2265414 **ಐಟಂನ ಸಂಕ್ಷಿಪ್ತ ವಿವರಣೆ :** OSIMERTINIB 80 MG ಮಾತ್ರೆ (ದರ ಗುತ್ತಿಗೆ ಖರೀದಿ ಆದೇಶಕ್ಕೆ ಅನುಸಾರವಾಗಿ ಅಗತ್ಯದ ಸೂಚನೆಯ ಆಧಾರದ ಮೇಲೆ ಮತ್ತು ನೈಜ ಅವಶ್ಯಕತೆಗೆ ಅನುಸಾರವಾಗಿ ಐಟಂನ್ನು ಸರಬರಾಜು ಮಾಡಬೇಕು). **ಪ್ರಮಾಣ :** 720 ಸಂಖ್ಯೆಗಳು.
ಟೆಂಡರ್ ಮುಕ್ತಾಯದ ದಿನಾಂಕ ಮತ್ತು ಸಮಯ : 02-06-2026 ರಂದು 14:00 ಗಂಟೆಗಳು.
ಟೆಂಡರ್ ವಿವರಗಳನ್ನು ನಮ್ಮ ವೆಬ್‌ಸೈಟ್ **www.rwf.indianrailways.gov.in** ಅಥವಾ **www.ireps.gov.in.** ನಲ್ಲಿ ವೀಕ್ಷಿಸಬಹುದು. ಟೆಂಡರ್ ದಾಖಲೆಗಳು ಮತ್ತು ಟೆಂಡರ್‌ಗೆ ತಿದ್ದುಪಡಿಗಳು ಇದ್ದಲ್ಲಿ, ಪೋರ್ಟಲ್‌ನಲ್ಲಿ ಮಾತ್ರವೇ ಲಭ್ಯವಿರುತ್ತದೆ.
ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು

ರಸ್ತೆ ಅಪಘಾತ: ತಂದೆ-ಮಗ ಸಾವು

ಪ್ರಜಾವಾಣಿ ವಾರ್ತೆ

ಮಂಡ್ಯ: ತಾಲ್ಲೂಕಿನ ಪಣಕನಹಳ್ಳಿ ಬಳಿ ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಶುಕ್ರವಾರ ಕಾರು ಪಲ್ಟಿಯಾಗಿ ಕಚ್ಚೀಗೆರೆ ಗ್ರಾಮದ ನಿವಾಸಿ ಕಿರಣ್ (35) ಹಾಗೂ ಅವರ ಪುತ್ರ ಕಿಶೋರ್ (13) ಮೃತಪಟ್ಟರು. ಪುತ್ರಿ ಕೀರ್ತನಾ(10) ಗಾಯಗೊಂಡಿದ್ದು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ಪಾಂಡವಪುರಕ್ಕೆ ತೆರಳಿದ್ದ ಮೂವರು ಗ್ರಾಮಕ್ಕೆ ವಾಪಸ್ ಹೋಗುವಾಗ ಕಾರು ಚಾಲಕನ ನಿಯಂತ್ರಣ ತಪ್ಪಿತು. ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಮೈಸೂರು ಮಾರ್ಗದ ರಸ್ತೆಯಲ್ಲಿ ಮಗುಚಿ ಬಿದ್ದಿತು. ಪಿಎಸ್‌ಐ ಸುನಿಲ್‌ಕುಮಾರ್ ಸ್ಥಳಕ್ಕೆ ಭೇಟಿ ನೀಡಿದ್ದರು. ಸೆಂಟ್ರಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

100ನೇ ವೆಲ್ನೆಸ್ ಆನ್ ವೀಲ್ಸ್ ವೈದ್ಯಕೀಯ ಶಿಬಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾರಾಯಣ ಹೆಲ್ತ್ ಮತ್ತು ವೋಲ್ವೋ ಗ್ರೂಪ್ ಜಂಟಿಯಾಗಿ ಹಮ್ಮಿಕೊಂಡಿರುವ ವೆಲ್ನೆಸ್ ಆನ್ ವೀಲ್ಸ್ ಅಭಿಯಾನದಡಿ 100ನೇ ವೈದ್ಯಕೀಯ ಶಿಬಿರವನ್ನು ಆಯೋಜಿಸಲಾಯಿತು.

ಈ ಯೋಜನೆ ಮೂಲಕ ಇದುವರೆಗೆ 10,000ಕ್ಕೂ ಹೆಚ್ಚು ಉಚಿತ ಮುನ್ನೆಚ್ಚರಿಕೆ ಆರೋಗ್ಯ ತಪಾಸಣೆಗಳನ್ನು ನಡೆಸಲಾಗಿದೆ. ರೋಗಗಳ ಆರಂಭಿಕ ಪತ್ತೆ ಹಚ್ಚುವಿಕೆ ಮತ್ತು ಆರೋಗ್ಯ ಸೇವೆಯಿಂದ ವಂಚಿತರಾದ ಸಮುದಾಯಗಳಿಗೆ ಗುಣಮಟ್ಟದ ವೈದ್ಯಕೀಯ ನೆರವು ನೀಡಲು ಈ ಯೋಜನೆ ಹಮ್ಮಿಕೊಳ್ಳಲಾಗಿದೆ ಎಂದು ಸಂಘಟಕರು ತಿಳಿಸಿದರು.

ನಾರಾಯಣ ಹೆಲ್ತ್‌ನ ಸಂಸ್ಥಾಪಕ ಮತ್ತು ಅಧ್ಯಕ್ಷ ಡಾ. ದೇವಿ ಪ್ರಸಾದ್ ಶೆಟ್ಟಿ ಮಾತನಾಡಿ, 'ರೋಗಿಗಳು ತಪಾಸಣೆಗಾಗಿ ಆಸ್ಪತ್ರೆಗೆ ಬರುವಾಗ ತಡವಾಗುವುದು ಆರೋಗ್ಯ ಕ್ಷೇತ್ರದಲ್ಲಿ ನಮಗೆ ಎದುರಾಗುವ ಅತಿದೊಡ್ಡ ಸವಾಲು. ಕಾಯಿಲೆಯನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚುವುದರಿಂದ ಚಿಕಿತ್ಸೆಯ ಫಲಿತಾಂಶವನ್ನು ಉತ್ತಮಪಡಿಸಬಹುದು. ಕುಟುಂಬಗಳ ಮೇಲಿನ ಆರ್ಥಿಕ ಹೊರೆ ಹಾಗೂ ಆರೋಗ್ಯ ವ್ಯವಸ್ಥೆಯ ಮೇಲಿನ ಒತ್ತಡವನ್ನು ಕಡಿಮೆ ಮಾಡಬಹುದು. ಅದಕ್ಕಾಗಿ ಇಂಥ ಶಿಬಿರಗಳನ್ನು ಹಮ್ಮಿಕೊಳ್ಳಲಾಗಿದೆ' ಎಂದರು.

ವೆಲ್ನೆಸ್ ಆನ್ ವೀಲ್ಸ್ ಅಭಿಯಾನದಡಿ ಆಯೋಜಿಸಿದ್ದ 100ನೇ ವೈದ್ಯಕೀಯ ಶಿಬಿರದಲ್ಲಿ ಡಾ. ದೇವಿ ಪ್ರಸಾದ್ ಶೆಟ್ಟಿ, ಶ್ರೀ ಶ್ರೀ ರವಿಶಂಕರ್ ಗುರೂಜಿ, ವೋಲ್ವೋ ಗ್ರೂಪ್ ಇಂಡಿಯಾದ ಅಧ್ಯಕ್ಷ ಕಮಲ್ ಬಾಲಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಡಾ. ರಘುನಂದನ್ ಉಪಸ್ಥಿತರಿದ್ದರು.

ಆರ್ಟ್ ಆಫ್ ಲಿವಿಂಗ್ ಸಂಸ್ಥಾಪಕ ಶ್ರೀ ಶ್ರೀ ರವಿಶಂಕರ್ ಗುರೂಜಿ ಮಾತನಾಡಿ, 'ದೇವರು ಕೇವಲ ದೇವಾಲಯಗಳಿಗೆ ಸೀಮಿತವಾಗಿಲ್ಲ. ದೈವತ್ವವು ಪ್ರತಿ ಮನೆಯಲ್ಲೂ ಮತ್ತು ಪ್ರತಿ ಜೀವದಲ್ಲೂ ನೆಲೆಸಿದೆ. ಪ್ರತಿಯೊಬ್ಬರಿಗೂ ಉತ್ತಮ ಆರೋಗ್ಯ ಹೊಂದುವ ಹಕ್ಕಿದೆ' ಎಂದು ಹೇಳಿದರು.

ವೋಲ್ವೋ ಗ್ರೂಪ್ ಇಂಡಿಯಾದ ಅಧ್ಯಕ್ಷ ಕಮಲ್ ಬಾಲಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಡಾ. ರಘುನಂದನ್ ಉಪಸ್ಥಿತರಿದ್ದರು.

ವ್ಯಾಲಿಯಲ್ಲಿ ಸರಾಗವಾಗಿ ನೀರು ಹರಿದುಹೋಗಲು ಕ್ರಿಯಾಯೋಜನೆ ರೂಪಿಸಿ: ಡಾ. ಕೆ.ವಿ. ರಾಜೇಂದ್ರ

ವೃಷಭಾವತಿ: ವೈಜ್ಞಾನಿಕ ಯೋಜನೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೃಷಭಾವತಿ ವ್ಯಾಲಿಯಲ್ಲಿ ಸರಾಗವಾಗಿ ನೀರು ಹರಿದುಹೋಗಲು ವೈಜ್ಞಾನಿಕ ಯೋಜನೆ ರೂಪಿಸುವಂತೆ ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ.ಕೆ.ವಿ. ರಾಜೇಂದ್ರ ಅವರು ಅಧಿಕಾರಿಗಳಿಗೆ ಸೂಚಿಸಿದರು.

ವಿಜಯನಗರ ವ್ಯಾಪ್ತಿಯಲ್ಲಿ ಕಾಮಗಾರಿಗಳು ಪರಿಶೀಲನೆ ನಡೆಸಿ ಮಾತನಾಡಿದ ಅವರು, ಗಾಳಿ ಆಂಜನೇಯ ದೇವಸ್ಥಾನದ ಬಳಿ ವೃಷಭಾವತಿ ವ್ಯಾಲಿಯನ್ನು ಪರಿಶೀಲಿಸಿ ಹೂಳು, ತ್ಯಾಜ್ಯವನ್ನು ತೆರವುಗೊಳಿಸಬೇಕು. ಮಳೆ ನೀರು ಸರಾಗವಾಗಿ ಹರಿದುಹೋಗಲು ಅನುಕೂಲವಾಗುವಂತೆ ಸೂಕ್ತ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು.

ಮಳೆಗಾಲದ ವೇಳೆ ಗಾಳಿ ಆಂಜನೇಯ ದೇವಸ್ಥಾನದ ಬಳಿ ವೃಷಭಾವತಿ ವ್ಯಾಲಿಯಲ್ಲಿ ನೀರಿನ ಹರಿವಿನ ಮಟ್ಟ ಹೆಚ್ಚಾಗಿ ಜಲಾವೃತ ಆಗುವುದನ್ನು ತಪ್ಪಿಸಬೇಕು. ವ್ಯಾಲಿಯನ್ನು ನಿರಂತರವಾಗಿ ಸ್ವಚ್ಛವಾಗಿರುವಂತೆ ನೋಡಿಕೊಳ್ಳಬೇಕು. ಜೊತೆಗೆ ವ್ಯಾಲಿಗೆ ತ್ಯಾಜ್ಯ ಹಾಕದಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ನಿರ್ದೇಶಿಸಿದರು.

ಕವಿಕಾ ಫ್ಯಾಕ್ಟರಿ ಹಿಂಭಾಗ ವೃಷಭಾವತಿ ವ್ಯಾಲಿಯಲ್ಲಿ ಹೂಳೆತ್ತುವ ಕಾರ್ಯವನ್ನು ಪರಿವೀಕ್ಷಿಸಿ, ಮುಂಗಾರು ಸನ್ನಿಹಿತವಾಗುತ್ತಿರುವ ಹಿನ್ನೆಲೆಯಲ್ಲಿ ತ್ವರಿತವಾಗಿ ಕೆಲಸ ಪೂರ್ಣಗೊಳಿಸಲು ಹೇಳಿದರು.

ಮಳೆಗಾಲದ ವೇಳೆ ಗಾಳಿ ಆಂಜನೇಯ ದೇವಸ್ಥಾನ, ಕವಿಕಾ ಹಾಗೂ ನಾಯಂಡಹಳ್ಳಿ ಜಂಕ್ಷನ್ ಭಾಗದಲ್ಲಿ ಜಲಾವೃತ ಆಗುವುದನ್ನು ತಪ್ಪಿಸುವ ಸಲುವಾಗಿ ಹೆಚ್ಚುವರಿ ಯಂತ್ರೋಪಕರಣಗಳನ್ನು ಬಳಸಿಕೊಂಡು ನಿರಂತರವಾಗಿ ಸ್ವಚ್ಛತಾ ಕಾರ್ಯ ನಡೆಸಬೇಕು. ಅಗತ್ಯವಿದ್ದಲ್ಲಿ ಸ್ವಚ್ಛತೆಗಾಗಿ ಹೆಚ್ಚುವರಿ ತಂಡಗಳನ್ನು ನಿಯೋಜಿಸಿಕೊಳ್ಳಲು ಸೂಚನೆ ನೀಡಿದರು.

ನಾಯಂಡಹಳ್ಳಿ ಮೇಲ್ಸೇತುವೆಯ ಡಾಂಬರೀಕರಣ ಹಾಗೂ ಮಳೆ ನೀರು ಹರಿಯುವ ವ್ಯವಸ್ಥೆಯನ್ನು ಡಾ. ಕೆ.ವಿ. ರಾಜೇಂದ್ರ, ಬಸವರಾಜ್ ಕಬಾಡೆ ಪರಿಶೀಲಿಸಿದರು

ಗಾಳಿ ಆಂಜನೇಯ ದೇವಸ್ಥಾನದ ಬಳಿ ರಸ್ತೆಯ ಭಾಗ ಜಲಾವೃತ ಆಗುವುದನ್ನು ತಪ್ಪಿಸುವ ಸಲುವಾಗಿ ತಾತ್ಕಾಲಿಕವಾಗಿ 'ಕ್ಯಾಚ್ಮೆಂಟ್ ಪಿಟ್' ಸ್ಥಾಪಿಸಿಕೊಂಡು, ಅಗತ್ಯ ಸಾಮರ್ಥ್ಯದ ಸಬ್‌ಮರ್ಸಿಬಲ್ ಪಂಪ್ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಹೇಳಿದರು.

ರಾಷ್ಟ್ರೀಯ ವಿಪತ್ತು ನಿರ್ವಹಣೆ ನಿಧಿ (ಎನ್‌ಡಿಆರ್‌ಎಂಎಫ್) ಯೋಜನೆಯಡಿ, ಕೈಗೆತ್ತಿಕೊಂಡಿರುವಂತಹ ಮಳೆ ನೀರುಗಾಲುವೆ ಕಾಮಗಾರಿಗಳನ್ನು ಮಳೆಗಾಲ ಪ್ರಾರಂಭ ಆಗುವುದಕ್ಕೂ ಮುಂಚಿತವಾಗಿ ಪೂರ್ಣಗೊಳಿಸಲು ನಿರ್ದೇಶನ ನೀಡಿದರು.

ಗುಣಮಟ್ಟ ಕಾಪಾಡಿ: ಮೈಸೂರು ರಸ್ತೆ ನಾಯಂಡಹಳ್ಳಿ ಮೇಲ್ಸೇತುವೆ ಭಾಗದಲ್ಲಿ ಮಿಲ್ಲಿಂಗ್ ಮಾಡಿಕೊಂಡು ಡಾಂಬರೀಕರಣ ಹಾಕುವ ಕಾರ್ಯ ಪ್ರಗತಿ ಪರಿಶೀಲನೆ ನಡೆಸಿದರು. ಮೇಲ್ಸೇತುವೆ ಭಾಗದಲ್ಲಿ ಮಳೆ ನೀರು ಸರಾಗವಾಗಿ ಹರಿದು ಹೋಗುವ ವ್ಯವಸ್ಥೆ ಮಾಡಬೇಕು. ರಸ್ತೆ ಮಧ್ಯೆ ಭಾಗದಲ್ಲಿರುವ ಚರಂಡಿಯಲ್ಲಿ ಹೂಳೆತ್ತಿ ಸ್ವಚ್ಛತೆ ಕಾಪಾಡಲು ಸೂಚನೆ ನೀಡಿದರು.

ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯ ಪ್ರಮುಖ ರಸ್ತೆಗಳಲ್ಲಿ ಕೈಗೆತ್ತಿಕೊಂಡಿರುವ ಡಾಂಬರೀಕರಣ ಕಾರ್ಯಗಳಿಗೆ ವೇಗ ನೀಡಿ, ಕಾಲಮಿತಿಯೊಳಗಾಗಿ ಪೂರ್ಣಗೊಳಿಸಲು ಕ್ರಮವಹಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮುಖ್ಯ ಎಂಜಿನಿಯರ್‌ಗಳಾದ ಬಸವರಾಜ್ ಕಬಾಡೆ, ರಾಜೇಶ್ ಹಾಜರಿದ್ದರು.

ರೈಲ್ವೆ ಸಚಿವಾಲಯ
(ನೈಋತ್ಯ ರೈಲ್ವೆ, ಮೈಸೂರು ವಿಭಾಗ, ಮೈಸೂರು)
ಅಧಿಸೂಚನೆ

ರೈಲ್ವೆ ಕಾಯ್ದೆ-1989 (1989ರ 24)ರ ಕಲಂ 20ಎ ರಡಿ, ಕೇಂದ್ರ ಸರ್ಕಾರವು ಸಾರ್ವಜನಿಕ ಉದ್ದೇಶಕ್ಕಾಗಿ "ವಿಶೇಷ ರೈಲ್ವೆ ಯೋಜನೆಯ ಅಡಿಯಲ್ಲಿ ಕರಡಿ-ತಿಪಟೂರು ರೈಲ್ವೆ ನಿಲ್ದಾಣಗಳ ನಡುವೆ, ತಿಪಟೂರು ನಗರದಲ್ಲಿರುವ (ಬಂಡಿಹಳ್ಳಿ ಗೇಟ್) ಲೆವೆಲ್ ಕ್ರಾಸಿಂಗ್ ನಂಬರ್. 82 ರ ಬದಲಿಗೆ ಆರ್.ಯು.ಬಿ ನಿರ್ಮಾಣ" ಕಾರ್ಯಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿ ಸದರಿ ಅಧಿಸೂಚನೆ ಘೋಷಿಸಿರುತ್ತದೆ.

ಸದರಿ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಆಸ್ತಕಿಯುಳ್ಳವರು ತಮ್ಮ ಆಕ್ಷೇಪವಿದ್ದಲ್ಲಿ, ಆಕ್ಷೇಪಣೆಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 30 ದಿನಗಳೊಳಗಾಗಿ ಈ ಕಾರ್ಯಾಲಯಕ್ಕೆ ರೈಲ್ವೆ ಕಾಯ್ದೆ-1989ರ ಕಲಂ 20ಡಿ(1) ರಂತೆ ಸಲ್ಲಿಸಬೇಕು. ತದನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಯಾವುದೇ ಮುನ್ಸೂಚನೆ ನೀಡದೇ ವಿಲೇ ಮಾಡಲಾಗುವುದು.

ಅಂತಹ ಆಕ್ಷೇಪಣೆಗಳನ್ನು ತಿಪಟೂರು ನಗರ (ಬಂಡಿಹಳ್ಳಿ ಗೇಟ್) ರಲ್ಲಿರುವ ಲೆವೆಲ್ ಕ್ರಾಸಿಂಗ್ ಸಂಖ್ಯೆ: 82 ಕರಡಿ-ತಿಪಟೂರು ನಡುವೆ ಆರ್.ಯು.ಬಿ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರ ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿ, ತುಮಕೂರು-ರಾಯದುರ್ಗ ಹಾಗೂ ತುಮಕೂರು-ದಾವಣಗೆರೆ ರೈಲ್ವೆ ಯೋಜನೆ, ತುಮಕೂರು ರವರಿಗೆ ಖುದ್ದಾಗಿ ಅಥವಾ ವಕೀಲರ ಮುಖಾಂತರವಾಗಿ ಸಲ್ಲಿಸಿದ್ದ ಆಕ್ಷೇಪಣೆಗಳನ್ನು ವಿಚಾರಣೆ ನಡೆಸಿ, ಮುಂದಿನ ಕ್ರಮ ವಹಿಸಲಾಗುವುದು.

ಸಕ್ಷಮ ಪ್ರಾಧಿಕಾರವು ರೈಲ್ವೆ ಕಾಯ್ದೆ-1989 ರ ಕಲಂ 20ಡಿ(2) ರಂತೆ ನೀಡಿರುವ ಆದೇಶವು ಅಂತಿಮವಾಗಿರುತ್ತದೆ.

ಈ ಅಧಿಸೂಚನೆಗೆ ಸಂಬಂಧಿಸಿದ ನಕ್ಷೆ ಹಾಗೂ ಜಮೀನಿನ ವಿವರಗಳನ್ನು ಸಕ್ಷಮ ಪ್ರಾಧಿಕಾರ ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿ, ತುಮಕೂರು-ರಾಯದುರ್ಗ ಹಾಗೂ ತುಮಕೂರು-ದಾವಣಗೆರೆ ರೈಲ್ವೆ ಯೋಜನೆ, ತುಮಕೂರು ರವರ ಕಾರ್ಯಾಲಯದಲ್ಲಿ ಪರಿಶೀಲಿಸಬಹುದು.

ಅನುಸೂಚಿ

ಕರಡಿ-ತಿಪಟೂರು ರೈಲ್ವೆ ನಿಲ್ದಾಣಗಳ ನಡುವೆ ತಿಪಟೂರು ನಗರದಲ್ಲಿರುವ (ಬಂಡಿಹಳ್ಳಿ ಗೇಟ್) ಲೆವೆಲ್ ಕ್ರಾಸಿಂಗ್ ನಂಬರ್. 82 ರ ಬದಲಿಗೆ ಆರ್.ಯು.ಬಿ ನಿರ್ಮಾಣಕ್ಕೆ ಸಂಬಂಧಿಸಿದ ಜಮೀನಿನ ವಿವರ ಈ ಕೆಳಕಂಡಂತಿದೆ.

ಜಿಲ್ಲೆ: ತುಮಕೂರು — **ಹೋಬಳಿ:** ಕಸಬಾ
ತಾಲ್ಲೂಕು: ತಿಪಟೂರು, — **ಗ್ರಾಮ / ನಗರ:** ತಿಪಟೂರು

ಕ್ರ. ಸಂ.	ಸರ್ವೆ ನಂಬರ್	ಭೂಮಾಲೀಕರ ಹೆಸರು	ಭೂಸ್ವಾಧೀನ ವಿಸ್ತೀರ್ಣ (ಎ-ಗು)				ತರಹೆ
			ಒಟ್ಟು (ಎ-ಜಿ)	ಎ ಖರಾಬು (ಎ-ಜಿ)	ಬಿ ಖರಾಬು (ಎ-ಜಿ)	ಬಾಕಿ (ಎ-ಜಿ)	
1	109	ಎಸ್.ಎಸ್. ರುದ್ರಯ್ಯ ಬಿನ್ ಶಂಕರಪ್ಪ, ಆರ್. ವಿವೇಕಾನಂದ ಬಿನ್ ಎಸ್.ಎಸ್. ರುದ್ರಯ್ಯ (ಜಂಟಿ)	0-00 1/2	-	-	0-00 1/2	ಭೂ.ಪ.
2	110/1	ಮಂಗಳ ಟಿ.ಎಮ್ ಕೋಂ ಮೃತ್ಯುಂಜಯ ಸಿ.ಬಿ., ಟಿ.ಎಂ. ಅನುಪಮ ಬಿನ್ ಟಿ.ಎಂ. ಮಂಜುನಾಥ (ಜಂಟಿ)	0-05 1/2	-	-	0-05 1/2	ಖುಷ್ಕಿ
3	111/1ಎ	ಮಂಜುಳಾ ಕೋಂ ಜಯಣ್ಣ	0-01	-	-	0-01	ಖುಷ್ಕಿ
4	111/1ಸಿ1	ಎನ್.ಕುಮಾರ್ ಬಿನ್ ನಂಜಪ್ಪ, ಟಿ.ಜಿ. ನಾಗರಾಜು ಬಿನ್ ಗುರಪ್ಪ, ಬಿ.ಎಸ್. ಬಸವರಾಜು ಬಿನ್ ಶಿವಣ್ಣ, ಕುಮಾರಸ್ವಾಮಿ ಬಿನ್ ಬಸವರಾಜು	0-00 1/4	-	-	0-00 1/4	ಖುಷ್ಕಿ
5	111/1ಸಿ2	ಬಿ.ಎಸ್. ಚನ್ನೇಗೌಡ ಬಿನ್ ಲೇಟ್ ನಂಜಪ್ಪ	0-02 1/2	-	-	0-02 1/2	ಭೂ.ಪ.
6	111/1ಬಿ	ಚಂದ್ರಮ್ಮ ತಂದೆ ನಿಂಗಪ್ಪ	0-01 1/2	-	-	0-01 1/2	ಖುಷ್ಕಿ
7	112/1	ಕಮಲ ಕೋಂ ಬಿ.ಎನ್. ಶಂಕರಪ್ಪ	0-01 1/2	-	-	0-01 1/2	ಖುಷ್ಕಿ
8	112/2ಬಿ	ನಂಜಮ್ಮ ಕೋಂ ಮರಿಯಪ್ಪ, ಶಿವಣ್ಣ, ಟಿ. ಸಿದ್ದಲಿಂಗಯ್ಯ ಮತ್ತು ಟಿ. ನಂಜಯ್ಯ (ಜಂಟಿ), ಲೀಲಮ್ಮ ಉರುಫ್ ನೀಲಮ್ಮ ಕೋಂ ಶಿವಾನಂದ ಕೆ	0-01 1/4	-	-	0-01 1/4	ಖುಷ್ಕಿ
9	129/1ಎ1	ಎಂ.ಆರ್. ದಿನೇಶ್ ಬಾಬು ಬಿನ್ ಎಂ.ಎಸ್. ರಾಮಲಿಂಗಪ್ಪ	0-03	-	-	0-03	ಖುಷ್ಕಿ
10	129/2ಎ	ಬಿ.ಎನ್. ಪದ್ಮಾಕ್ಷಮ್ಮ ಬಿನ್ ಬಿ. ನಾರಾಯಣರಾವ್, ಬಿ.ಎಸ್. ಗುರುರಾಜ್ ಬಿನ್ ಶ್ರೀನಿವಾಸಮೂರ್ತಿ (ಜಂಟಿ)	0-03 3/4	-	-	0-03 3/4	ಭೂ.ಪ.
11	129/6	ವಿಜಯ ಕುಮಾರಿ ಕೋಂ ಪವತಿ ಬಸವರಾಜು	0-01 1/2	-	-	0-01 1/2	ಭೂ.ಪ.
12	129/5	ಟಿ.ಸಿ. ಆನಂದ ಬಿನ್ ಲೇಟ್ ಚಂದ್ರಪ್ಪ	0-01 1/2	-	-	0-01 1/2	ಭೂ.ಪ.
13	129/4	ಯಶೋದಮ್ಮ ಕೋಂ ಪವತಿ ಮಹದೇವಪ್ಪ	0-01 1/2	-	-	0-01 1/2	ಖುಷ್ಕಿ
14	129/8	ಯಶೋದಮ್ಮ ಕೋಂ ಪವತಿ ಮಹದೇವಪ್ಪ	0-02	-	-	0-02	ಖುಷ್ಕಿ
		ಒಟ್ಟು	**0-27 1/4**	-	-	**0-27 1/4**	-

ಘೋಷ್ವಾರೆ

ಭೂಪರಿವರ್ತನೆ	ಖುಷ್ಕಿ	ಖರಾಬು	ಒಟ್ಟು
0-09 3/4	0-17 1/2	-	0-27 1/4

ಸಹಿ/-
ವಿಶೇಷ ಭೂಸ್ವಾಧೀನ ಅಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರ
ವಿಶೇಷ ರೈಲ್ವೆ ಯೋಜನೆ, ತುಮಕೂರು

PUB/107/AAMO/PRB/SWR/2026-27

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRAILWAYHQ | sw_railways

ಚಿಟಿಕೆ ಸುದ್ದಿ

ಮಲಯಾಳಕ್ಕೆ 'ಮಹಾ ಮಾನವತಾವಾದಿ ಬಸವಣ್ಣ' ಕೃತಿ

ಮೈಸೂರು: ನಗರದ ಕಲಾವಿದ ಎಲ್.ಶಿವಲಿಂಗಪ್ಪ ಅವರ 'ಮಹಾಮಾನವತಾವಾದಿ ಬಸವಣ್ಣ' ಕೃತಿಯ ಮಲಯಾಳಂ ಅನುವಾದಿತ ಕೃತಿಯು ಮೇ 10ರಂದು ಕೇರಳದ ಆಲಪ್ಪುಳ ಜಿಲ್ಲೆಯ ಒಚಿರಾ ಪಟ್ಟಣದಲ್ಲಿ ನಡೆಯುವ ಬಸವ ಜಯಂತಿ ಕಾರ್ಯಕ್ರಮದಲ್ಲಿ ಬಿಡುಗಡೆಯಾಗಲಿದೆ.

ಚಿತ್ರ–ಕಥೆ ಮಾದರಿಯ ಕೃತಿಯನ್ನು ಮೈಸೂರು ವಿಶ್ವವಿದ್ಯಾಲಯದ ಪ್ರಾದೇಶಿಕ ಭಾಷಾ ಕೇಂದ್ರದಲ್ಲಿರುವ ಮಲಯಾಳಂ ಉಪನ್ಯಾಸಕಿ ಎಂ.ಪಿ.ನಿರ್ಮಲಾ ಅನುವಾದಿಸಿದ್ದಾರೆ.

ಮಲಯಾಳಂ ಲೇಖಕ ಕೆ.ಪ್ರಸನ್ನಕುಮಾರ್ ಮುನ್ನುಡಿ ಬರೆದಿದ್ದಾರೆ. ಅರಣ್ಯ ಸಚಿವ ಈಶ್ವರ ಖಂಡ್ರೆ, ಸಿಪಿಎಂ ಮುಖಂಡ ಸಾಜಿ ಚೆರಿಯನ್ ಬಿಡುಗಡೆ ಮಾಡುವರು ಎಂದು ಪ್ರಕಟಣೆ ತಿಳಿಸಿದೆ.

ಅನಿಲ ಸಿಲಿಂಡರ್ ಸ್ಫೋಟ: ಹೊತ್ತಿ ಉರಿದ ಮನೆ

ಅಡುಗೆ ಅನಿಲ ಸಿಲಿಂಡರ್ ಸ್ಫೋಟದಿಂದ ಹೆಂಚಿನ ಮನೆ ಹೊತ್ತಿ ಉರಿಯಿತು

ಶ್ರೀರಂಗಪಟ್ಟಣ: ತಾಲ್ಲೂಕಿನ ಅರಕೆರೆಯಲ್ಲಿ ಶುಕ್ರವಾರ ರಾತ್ರಿ ಅಡುಗೆ ಅನಿಲ ಸಿಲಿಂಡರ್ ಸಿಡಿದು, ಪುಟ್ಟೇಗೌಡ ಅವರ ಹೆಂಚಿನ ಮನೆ ಸಂಪೂರ್ಣ ಸುಟ್ಟು ಭಸ್ಮವಾಯಿತು. ಬಟ್ಟೆ, ಪಾತ್ರೆ, ದವಸ, ಧಾನ್ಯಗಳೊಂದಿಗೆ, ಪೆಟ್ಟಿಗೆಯಲ್ಲಿದ್ದ ₹50 ಸಾವಿರ ನಗದು, 15 ಗ್ರಾಂನಷ್ಟು ಚಿನ್ನದ ಒಡವೆಗಳು ನಾಶವಾಗಿವೆ ಎಂದು ಅವರ ಮಗಳು ಅರ್ಪಿತಾ ತಿಳಿಸಿದ್ದಾರೆ.

ಅರ್ಧ ತಾಸಿಗೂ ಹೆಚ್ಚು ಕಾಲ ಬೆಂಕಿ ಉರಿದಿದ್ದು ಆತಂಕ ಸೃಷ್ಟಿಸಿತ್ತು. ಅಗ್ನಿಶಾಮಕ ದಳ ಸಿಬ್ಬಂದಿ ಬೆಂಕಿ ನಂದಿಸಿದರು. ದುರ್ಘಟನೆ ನಡೆದಾಗ ಮನೆಯ ಸದಸ್ಯರು ಹೊರಗೆ ಇದ್ದರು. ಬೆಂಕಿಯಿಂದ ಅಕ್ಕಪಕ್ಕದ ಮನೆಗಳಿಗೆ ಹಾನಿಯಾಗಿದೆ.

ಬಸ್ ಚಾಲಕ ಸಾವು

ಮಡಿಕೇರಿ: ಬೆಂಗಳೂರಿನಿಂದ ಕುಕ್ಕೆಸುಬ್ರಹ್ಮಣ್ಯಕ್ಕೆ ಹೊರಟಿದ್ದ ಖಾಸಗಿ ಬಸ್ ಚಾಲಕ ಶಿವಕುಮಾರಸ್ವಾಮಿ (52) ಅವರು ಬಸ್ ಚಾಲನೆ ಮಾಡುತ್ತಿದ್ದಾಗಲೇ ಹೃದಯಸ್ತಂಭನಕ್ಕೆ ಒಳಗಾಗಿ ಇಲ್ಲಿಗೆ ಸಮೀಪದ ತಾಳತ್ತಮನೆ ಎಂಬಲ್ಲಿ ಮೃತಪಟ್ಟರು. ಬಸ್ ಪಕ್ಕದ ಮಣ್ಣಿನ ದಿಬ್ಬಕ್ಕೆ ಒರಗಿ ನಿಂತಿದೆ. ಅವರು ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನವರು.

'ಮುಂಜಾನೆ 4.45ಕ್ಕೆ ತಾಳತ್ತಮನೆ ಸಮೀಪ ಅವರಿಗೆ ಹೃದಯಸ್ತಂಭನವಾಯಿತು. ಬಸ್‌ನಲ್ಲಿದ್ದ ಇಬ್ಬರು ವೈದ್ಯರು ಪ್ರಾಥಮಿಕ ಚಿಕಿತ್ಸೆ ನೀಡಿದರೂ ಬದುಕುಳಿಯಲಿಲ್ಲ. ಹೃದಯಸ್ತಂಭನಕ್ಕೆ ಒಳಗಾಗುತ್ತಿದ್ದಂತೆ ಅವರು ಬಸ್‌ನ ವೇಗವನ್ನು ಕಡಿಮೆ ಮಾಡಿದ್ದರಿಂದ ಹೆಚ್ಚಿನ ಅನಾಹುತ ಸಂಭವಿಸಲಿಲ್ಲ' ಎಂದು ಪೊಲೀಸರು ತಿಳಿಸಿದ್ದಾರೆ.

ಕಾನೂನು ವಿ.ವಿಗೆ ನೇಮಕ

ಬೆಂಗಳೂರು: ಹುಬ್ಬಳ್ಳಿಯಲ್ಲಿರುವ ಕರ್ನಾಟಕ ಕಾನೂನು ವಿಶ್ವವಿದ್ಯಾಲಯಕ್ಕೆ ಐವರು ಸಿಂಡಿಕೇಟ್ ಸದಸ್ಯರನ್ನು ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ನೇಮಕ ಮಾಡಿದ್ದಾರೆ. ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು ಸುಗ್ಗನಹಳ್ಳಿಯ ಎಸ್.ಬಿ.ರಾಜಣ್ಣ, ಬಾಗಲಕೋಟೆಯ ರಮೇಶ್ ಬದ್ನೂರ್, ಗದಗ ಜಿಲ್ಲೆ ಶಿರಹಟ್ಟಿ ತಾಲ್ಲೂಕಿನ ಧ್ರುವರಾಜ ಹೊನ್ನಪ್ಪನವರ್, ಮೈಸೂರು ಜಿಲ್ಲೆ ತಿ.ನರಸೀಪುರದ ಎಸ್. ಗಿರಿಯಪ್ಪ, ಪದ್ಮಾವತಿ.ಎಚ್. ಮಾನೆ ಅವರನ್ನು ಮೂರು ವರ್ಷದ ಅವಧಿಗೆ ಇಲ್ಲವೇ ಸಿಂಡಿಕೇಟ್ ಅನ್ನು ಮರು ರೂಪಿಸುವ ಅವಧಿಯವರೆಗೂ ನೇಮಕ ಮಾಡಲಾಗಿದೆ.

ಅಳಿವಿನಂಚಿನ 23 ರಣಹದ್ದು ಪತ್ತೆ

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಗಣತಿ ಕಾರ್ಯ

• ಎಚ್.ಎಸ್.ಸಚ್ಚಿತ್

ಹುಣಸೂರು (ಮೈಸೂರು ಜಿಲ್ಲೆ): ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಅಳಿವಿನಂಚಿನ ವಿವಿಧ ಪ್ರಭೇದದ 23 ರಣಹದ್ದುಗಳು ಪತ್ತೆಯಾಗಿವೆ.

'ಐಯುಸಿಎನ್' ಕೆಂಪುಪಟ್ಟಿಯಲ್ಲಿರುವ ಬಿಳಿ ಗರಿಯ ರಣಹದ್ದು (ವೈಟ್ ರಂಪ್‌ಡ್ ವಲ್ಚರ್), ಕೆಂಪು ತಲೆಯ ರಣಹದ್ದು, ನೀಳಕೊಕ್ಕಿನ ರಣಹದ್ದು (ಇಂಡಿಯನ್ ವಲ್ಚರ್) ಮತ್ತು ಈಜಿಪ್ಟ್ ತಳಿಯ ರಣಹದ್ದುಗಳು ಫೆಬ್ರುವರಿಯಲ್ಲಿ ನಡೆದ ಗಣತಿಯಲ್ಲಿ ಕಾಣಿಸಿಕೊಂಡಿವೆ.

8 ವೀಕ್ಷಣಾ ಗೋಪುರಗಳಲ್ಲಿ ಕಂಡ ಬಿಳಿ ಗರಿಯ 11, ನೀಳಕೊಕ್ಕಿನ 2 ಮತ್ತು ಕೆಂಪು ತಲೆಯ 7, ಭಾರತದ 2 ಮತ್ತು ಈಜಿಪ್ಟ್‌ನ 1 ಹದ್ದು ಕಾಣಿಸಿದೆ.

> ರಣಹದ್ದು ಸಂತತಿ ಹೆಚ್ಚಾಗಲು ಪೂರಕ ವಾತಾವರಣ ನಾಗರಹೊಳೆಯಲ್ಲಿದೆ. ಗಣತಿಯಲ್ಲಿ ಎರಡು ಗೂಡುಗಳಲ್ಲಿ ಮರಿ ಹಾಗೂ ಮೊಟ್ಟೆಗಳು ಕಂಡುಬಂದಿವೆ
>
> **ಸೀಮಾ,** ಡಿಸಿಎಫ್, ನಾಗರಹೊಳೆ

'ದೇಶದಲ್ಲಿ 9 ಜಾತಿ ರಣಹದ್ದುಗಳಿವೆ. ರಾಮನಗರದ ರಾಮದೇವರ ಬೆಟ್ಟದ ರಣಹದ್ದು ಪಕ್ಷಿಧಾಮದಲ್ಲಿ ಅತಿ ಹೆಚ್ಚು, ಅಂದರೆ 65 ಇವೆ. ಹುಲಿ ಸಂರಕ್ಷಣೆ ಯೋಜನೆಗಳ ಪ್ರಭಾವದಿಂದ ನಾಗರಹೊಳೆಯಲ್ಲೂ ಅವುಗಳ ಸಂತತಿ ಹೆಚ್ಚಿದೆ' ಎನ್ನುತ್ತಾರೆ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಎಸಿಎಫ್ ಲಕ್ಷ್ಮಿಕಾಂತ್.

ನಾಗರಹೊಳೆ ಅರಣ್ಯದಲ್ಲಿ ನೀಳಕೊಕ್ಕಿನ ರಣಹದ್ದುಗಳ ಗುಂಪು

ತಮಿಳುನಾಡಿನ ಮುದುಮಲೈ, ಸತ್ಯಮಂಗಲ ಅರಣ್ಯ ಪ್ರದೇಶ, ರಾಜ್ಯದ ಬಿಳಿಗಿರಿ ರಂಗಯ್ಯನಬೆಟ್ಟ, ಬಂಡಿಪುರ, ನಾಗರಹೊಳೆ, ರಾಮನಗರ ಸೇರಿ ವಿವಿಧೆಡೆ 213 ರಣಹದ್ದುಗಳಿದ್ದು, ಆ ಪೈಕಿ ರಾಜ್ಯದಲ್ಲಿ 117 ಇವೆ.

'ಅಧ್ಯಯನಕ್ಕಾಗಿ ಮಧ್ಯ ಭಾರತದ ಅರಣ್ಯ ಪ್ರದೇಶದಲ್ಲಿ ರಣಹದ್ದಿಗೆ ರೇಡಿಯೊ ಕಾಲರ್ ಅಳವಡಿಸಲಾಗುತ್ತದೆ. ರಣಹದ್ದುಗಳು ದಿನಕ್ಕೆ ಸುಮಾರು 300 ಕಿ.ಮೀವರೆಗೆ ಚಲಿಸುತ್ತವೆ. 6 ಗಂಟೆಯಿಂದ 8 ಗಂಟೆ ಹಾರಾಟ ನಡೆಸುತ್ತವೆ' ಎಂದು ವನ್ಯಜೀವಿ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

'ಹುಲಿ, ಆನೆ ಗಣತಿಯಂತೆ ಹದ್ದುಗಳ ಗಣತಿ ಸುಲಭವಲ್ಲ. ಅಟ್ಟಣಿಗೆ ಮೇಲೆ ಕುಳಿತು ಎತ್ತರ ಪ್ರದೇಶದಲ್ಲಿ ಹದ್ದುಗಳನ್ನು ಗುರುತಿಸಿ ದಾಖಲಿಸುತ್ತೇವೆ' ಎನ್ನುತ್ತಾರೆ ಅಧಿಕಾರಿಗಳು.

'ಔಷಧ ನಿಷೇಧ: ಸಂತತಿ ಹೆಚ್ಚಳ'

'ಅರಣ್ಯದಂಚಿನಲ್ಲಿ ರೋಗಗ್ರಸ್ತ ಜಾನುವಾರುಗಳ ಚಿಕಿತ್ಸೆಗೆ ಡೈಕ್ಲೋಫಿನಾಕ್ ಸೋಡಿಯಂ ಔಷಧ ಬಳಸಲಾಗುತ್ತಿತ್ತು. ಅದರ ಅಂಶ ಪ್ರಾಣಿ ಸತ್ತ ನಂತರವೂ ಕಳೇಬರದಲ್ಲಿ ಉಳಿಯುತ್ತಿತ್ತು. ದೇಹ ತಿನ್ನುತ್ತಿದ್ದ ರಣಹದ್ದುಗಳು ಸಾಯುತ್ತಿದ್ದವು. ಈಗ ಔಷಧವನ್ನು ದೇಶದಲ್ಲಿ ನಿಷೇಧಿಸಿದ್ದು, ಅವುಗಳ ಸಂತತಿ ಉಳಿಯಲು ಸಹಕಾರಿಯಾಗಿದೆ' ಎಂದು ಎಸಿಎಫ್ ಲಕ್ಷ್ಮಿಕಾಂತ್ 'ಪ್ರಜಾವಾಣಿ'ಗೆ ತಿಳಿಸಿದರು.

'ಕೇರಳಂ ಸರ್ಕಾರ ರಚನೆ ನಂತರ ಸಂಪುಟ ವಿಸ್ತರಣೆ ಸಾಧ್ಯತೆ'

ದಿನೇಶ್ ಗುಂಡೂರಾವ್

ಮಂಗಳೂರು: 'ಕೇರಳಂನಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸರ್ಕಾರ ರಚನೆಯ ನಂತರ ಕರ್ನಾಟಕದಲ್ಲಿ ಸಚಿವ ಸಂಪುಟ ವಿಸ್ತರಣೆಯ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ನಿರ್ಧರಿಸಲಿದೆ' ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಶುಕ್ರವಾರ ಇಲ್ಲಿ ಈ ಕುರಿತು ಪ್ರತಿಕ್ರಿಯಿಸಿದ ಅವರು, ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದ ಮೂರು ವರ್ಷಗಳ ನಂತರ ಸಚಿವ ಸಂಪುಟ ವಿಸ್ತರಣೆ ಪ್ರಕ್ರಿಯೆ ಸಹಜ ಎಂದರು.

ಮೇ 15ರಂದು ಶುಭ ಸುದ್ದಿ ಬರಲಿದೆ ಎಂಬ ಕೆಲವರ ಹೇಳಿಕೆಗೆ ಅವರು, 'ಯಾರೂ ಹಾಗೆ ದಿನಾಂಕ ನಿಗದಿಪಡಿಸಲಿಕ್ಕೆ ಸಾಧ್ಯವಿಲ್ಲ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಈ ಬಗ್ಗೆ ನಿರ್ಧರಿಸುವರು. ಮುಖ್ಯಮಂತ್ರಿ ಸೇರಿದಂತೆ ಎಲ್ಲರೂ ಹೈಕಮಾಂಡ್‌ಗೆ ಬದ್ಧರಾಗಿದ್ದಾರೆ' ಎಂದು ಹೇಳಿದರು.

ಗಿರೀಶ್ ಮಟ್ಟಣ್ಣವರ ಮೊಬೈಲ್ ವಶಕ್ಕೆ ಪಡೆದ ಎಸ್‌ಐಟಿ

ಪ್ರಜಾವಾಣಿ ವಾರ್ತೆ

ಬೆಳ್ತಂಗಡಿ (ದಕ್ಷಿಣ ಕನ್ನಡ): ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳು, ಗಿರೀಶ್ ಮಟ್ಟಣ್ಣವರ ಅವರ ಹಳೆಯ ಮೊಬೈಲ್ ಫೋನ್ ವಶಕ್ಕೆ ಪಡೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಬೆಳ್ತಂಗಡಿ ಎಸ್‌ಐಟಿ ಕಚೇರಿಗೆ ಗಿರೀಶ್ ಮೇ 7ರಂದು ಬೆಳಿಗ್ಗೆ 11 ಗಂಟೆಗೆ ಹಾಜರಾಗಿದ್ದರು. ಈ ಹಿಂದೆ ಬಳಸುತ್ತಿದ್ದ ಅಂಡ್ರಾಯ್ಡ್ ಮೊಬೈಲ್ ಫೋನ್ ತನಿಖೆ ಉದ್ದೇಶಕ್ಕಾಗಿ ನೀಡುವಂತೆ ಎಸ್‌ಐಟಿ ಅಧಿಕಾರಿಗಳು ನೋಟಿಸ್ ಜಾರಿ ಮಾಡಿದ್ದರು. ಎಸ್‌ಐಟಿ ಕಚೇರಿಗೆ ಹಾಜರಾಗಿದ್ದಾಗ ಮೊಬೈಲ್ ಫೋನ್ ಜಪ್ತಿ ಮಾಡಿಕೊಳ್ಳಲಾಯಿತು' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ನೋಟಿಸ್ ಜಾರಿ: ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಅವರ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಮಾನಹಾನಿಕರ ಪೋಸ್ಟ್ ಹಾಕಿದ ಆರೋಪದ ಮೇಲೆ ಗಿರೀಶ್ ಮಟ್ಟಣ್ಣವರ ವಿರುದ್ಧ ಧರ್ಮಸ್ಥಳ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣಕ್ಕೆ ಸಂಬಂಧಿಸಿ, ತನಿಖೆಗೆ ಹಾಜರಾಗುವಂತೆ ನೋಟಿಸ್ ಜಾರಿಗೊಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

'ಸಾಮಾಜಿಕ ಜಾಲತಾಣದಲ್ಲಿ ಸತ್ಯಕ್ಕೆ ದೂರವಾದ ಪೋಸ್ಟ್ ಹಾಕುವ ಮೂಲಕ ಹೆಗ್ಗಡೆ ಅವರ ವ್ಯಕ್ತಿತ್ವಕ್ಕೆ ಕುಂದು ತರುವ ಪ್ರಯತ್ನ ನಡೆಸಿದ್ದಲ್ಲದೆ, ಸಮಾಜದಲ್ಲಿ ದ್ವೇಷ ಸೃಷ್ಟಿಸಲು ಮಟ್ಟಣ್ಣವರ ಪ್ರಯತ್ನಿಸಿದ್ದಾರೆ' ಎಂದು ಧರ್ಮಸ್ಥಳ ನಿವಾಸಿ ಸುಬ್ರಹ್ಮಣ್ಯ ಪ್ರಸಾದ್ ನೀಡಿ ದೂರಿನನ್ವಯ ಏಪ್ರಿಲ್ 18ರಂದು ಪ್ರಕರಣ ದಾಖಲಾಗಿತ್ತು. ಧರ್ಮಸ್ಥಳ ನಿವಾಸಿ ಸುಬ್ರಹ್ಮಣ್ಯ ಪ್ರಸಾದ್ ದೂರು ನೀಡಿದ್ದರು.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹೇಳಿಕೆ

ಬದಲಾವಣೆಯ ಕಾಲ ಕೂಡಿಬಂದಿದೆ

ಪ್ರಜಾವಾಣಿ ವಾರ್ತೆ

ಬಿ.ಎಸ್. ಯಡಿಯೂರಪ್ಪ

ದಾವಣಗೆರೆ: ರಾಜ್ಯದಲ್ಲಿ ಬದಲಾವಣೆಗೆ ಕಾಲ ಕೂಡಿಬಂದಿದೆ. ಅಂತೆಯೇ ಪಕ್ಷವನ್ನು ಇನ್ನಷ್ಟು ಬಲಪಡಿಸುವ ಪ್ರಯತ್ನ ಶುರುವಾಗಿದೆ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ಚಿತ್ರದುರ್ಗದಲ್ಲಿ ನಡೆಯುವ 'ಅಭಿಮಾನೋತ್ಸವ' ಕಾರ್ಯಕ್ರಮದಲ್ಲಿ ಭಾಗವಹಿಸಲು ತೆರಳುವ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದರು.

'ಜನರೇ ಮುಂದೆ ನಿಂತು ಪ್ರೀತಿ–ವಿಶ್ವಾಸದಿಂದ ಅಭಿಮಾನೋತ್ಸವ ಸಂಘಟಿಸಿದ್ದಾರೆ. ಇದಕ್ಕಾಗಿ ನಾನು ಎಲ್ಲರಿಗೂ ಋಣಿಯಾಗಿದ್ದೇನೆ' ಎಂದು ಹೇಳಿದರು.

'ಕೇಂದ್ರದ ಮಾಜಿ ಸಚಿವರಾಗಿದ್ದ ಅನಂತಕುಮಾರ್ ಅವರೊಂದಿಗೆ ಸೈಕಲ್ ಮೇಲೆ ಓಡಾಡಿ ರಾಜ್ಯದಲ್ಲಿ ಪಕ್ಷ ಕಟ್ಟಿದೆವು. ಇದರ ಪರಿಣಾಮವಾಗಿ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲು ಸಾಧ್ಯವಾಯಿತು' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆ ನೀಡಿದರು.

'ದಕ್ಷಿಣ ಭಾರತದಲ್ಲಿ ಪಕ್ಷವನ್ನು ಬೆಳೆಸಿದ ಕೀರ್ತಿ ಯಡಿಯೂರಪ್ಪ ಅವರಿಗೆ ಸಲ್ಲುತ್ತದೆ. ಬಗರ್‌ಹುಕುಂ ಸಾಗುವಳಿ ಚೀಟಿ ಸೇರಿ ಹಲವು ವಿಚಾರಗಳಿಗೆ ಹೋರಾಟ ನಡೆಸಿದ್ದರು. ನಿರಂತರ ಭಿನ್ನಮತ, ಜಗಳಗಳ ನಡುವೆ ರಾಜಕೀಯ ಜೀವನ ನಡೆಸಿದರು. ಅವರೊಬ್ಬ ಅಜಾತಶತ್ರು ಎಂದು ಹೇಳಲು ಆಗದು' ಎಂದು ಸಂಸದ ಬಿ.ವೈ. ರಾಘವೇಂದ್ರ ತಿಳಿಸಿದರು.

ಅಭಿಮಾನೋತ್ಸವದಲ್ಲಿ ಭಾಗವಹಿಸುತ್ತಿಲ್ಲ: ಕುಮಾರಸ್ವಾಮಿ

ಎಚ್.ಡಿ. ಕುಮಾರಸ್ವಾಮಿ

ಹಾಸನ: 'ಬಿ.ಎಸ್.ಯಡಿಯೂರಪ್ಪ ಅವರ 50 ವರ್ಷದ ರಾಜಕೀಯ ಸಾಧನೆ ಮತ್ತು ರಾಜ್ಯಕ್ಕೆ ನೀಡಿರುವ ಕೊಡುಗೆ ಸ್ಮರಿಸಿ ಬಿಜೆಪಿಯು ಹಮ್ಮಿಕೊಂಡಿರುವ ಅಭಿಮಾನೋತ್ಸವದಲ್ಲಿ ನಾನು ಪಾಲ್ಗೊಳ್ಳುತ್ತಿಲ್ಲ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಹೊಳೆನರಸೀಪುರ ತಾಲ್ಲೂಕಿನ ಮಾವಿನಕೆರೆ ಬೆಟ್ಟದ ರಂಗನಾಥಸ್ವಾಮಿ ದೇವಾಲಯದಲ್ಲಿ ಶುಕ್ರವಾರ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಮಾತನಾಡಿ, 'ಅಂದು ನನಗೆ ಬೇರೆ ಕಾರ್ಯಕ್ರಮಗಳಿವೆ' ಎಂದರು.

'ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ರಾಜ್ಯ ರಾಜಕೀಯದಲ್ಲಿ ಬದಲಾವಣೆ ಆಗಬಹುದೆಂಬ ಚರ್ಚೆ ಜನಸಾಮಾನ್ಯರಲ್ಲಿದೆ. ಆದರೆ, ಇಲ್ಲಿ ಪ್ರಾದೇಶಿಕ ಪಕ್ಷಗಳು ಸ್ವತಂತ್ರವಾಗಿ ಅಧಿಕಾರಕ್ಕೆ ಬರುವ ವಾತಾವರಣವಿಲ್ಲ. ಇಲ್ಲಿನ ಪರಿಸ್ಥಿತಿಯು ಬೇರೆ ರಾಜ್ಯಗಳಿಗಿಂತ ಭಿನ್ನವಾಗಿದೆ' ಎಂದರು.

'ಶೃಂಗೇರಿ ಕ್ಷೇತ್ರದ ಮರು ಮತಎಣಿಕೆಗೆ ಸಂಬಂಧಿಸಿ ಎಫ್‌ಐಆರ್ ದಾಖಲಾಗಿದೆ. ರಾಜೇಗೌಡರು ಚುನಾವಣಾ ಆಯೋಗಕ್ಕೂ ದೂರು ನೀಡಿದ್ದಾರೆ. ಈಗ 'ವೋಟ್ ಚೋರಿ' ಕುರಿತು ಚರ್ಚಿಸುವುದರಲ್ಲಿ ಅರ್ಥವಿಲ್ಲ. ಚರ್ಚಿಸುವ ನೈತಿಕತೆಯೂ ಕೆಲವರಿಗೆ ಇಲ್ಲ' ಎಂದು ಹೇಳಿದರು.

ಜಾರಿ ನಿರ್ದೇಶನಾಲಯ ಮತ್ತು ಆದಾಯ ತೆರಿಗೆ ಇಲಾಖೆಗಳ ದುರ್ಬಳಕೆ ಕುರಿತು ಕಾಂಗ್ರೆಸ್ ಆರೋಪಗಳ ಬಗ್ಗೆ ಪ್ರತಿಕ್ರಿಯಿಸಿ, 'ಅನುಕೂಲಕ್ಕೆ ತಕ್ಕಂತೆ ಆ ನಾಯಕರು ವ್ಯಾಖ್ಯಾನಿಸುತ್ತಾರೆ. ಗೆದ್ದಾಗ ಎಲ್ಲವೂ ಸರಿಯಾಗಿದೆ ಎನ್ನುತ್ತಾ, ಸೋತಾಗ ಸರಿ ಇಲ್ಲವೆನ್ನುತ್ತಾರೆ' ಎಂದು ಟೀಕಿಸಿದರು.

ಎಡಿಟಿಂಗ್ ಕಾರ್ಯಾಗಾರ ಜೂನ್ 5ರಿಂದ

ಬೆಂಗಳೂರು: ಸಾಗರ ಫೋಟೊಗ್ರಫಿ ಸೊಸೈಟಿ (ಎಸ್‌ಪಿಎಸ್) ಮತ್ತು ನೀನಾಸಂ ಸಹಯೋಗದಲ್ಲಿ ಜೂನ್ 5ರಿಂದ 7ರವರೆಗೆ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಹೆಗ್ಗೋಡಿನಲ್ಲಿ 'ಫೋಟೊ ಎಡಿಟಿಂಗ್' (ಪೋಸ್ಟ್ ಪ್ರೊಸೆಸ್ಸಿಂಗ್) ಕಾರ್ಯಾಗಾರ' ಆಯೋಜಿಸಲಾಗಿದೆ.

ಕಾರ್ಯಾಗಾರದಲ್ಲಿ ಫೋಟೊಶಾಪ್ ಮತ್ತು ಲೈಟ್‌ರೂಮ್‌ನಂತಹ ತಂತ್ರಾಂಶಗಳೊಂದಿಗೆ ಡಿಜಿಟಲ್ ಛಾಯಾಚಿತ್ರಗಳ ಸಂಪಾದನೆ, ಬಣ್ಣ ಸಂಸ್ಕರಣೆಯಂತಹ (ಕಲರ್ ಪ್ರೊಸಸಿಂಗ್) ವಿವಿಧ ವಿಧಾನಗಳನ್ನು ತಿಳಿಸಿಕೊಡಲಾಗುತ್ತದೆ.

ಸಾಗರ ಫೋಟೋಗ್ರಫಿ ಸೊಸೈಟಿಯ ಪರಿಣತರು ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸುತ್ತಾರೆ. ಆಸಕ್ತರು ಕಾರ್ಯಾಗಾರದ ವಿವರಗಳಿಗಾಗಿ ಎಸ್‌ಪಿಎಸ್ ಸಂಸ್ಥೆಯ ಜಿ. ಆರ್. ಪಂಡಿತ್ ಅವರನ್ನು ಮೊಬೈಲ್ ಸಂಖ್ಯೆ 9448627878 ಮೂಲಕ ಸಂಪರ್ಕಿಸಬಹುದು ಎಂದು ಎಸ್‌ಪಿಎಸ್‌ನ ಕೆ.ಎಸ್.ರಾಜಾರಾಂ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆರ್‌ಎಸ್‌ಎಸ್ ಶಿಬಿರ ಅರ್ಧಕ್ಕೆ ಸ್ಥಗಿತ

ಕೊಳ್ಳೇಗಾಲ (ಚಾಮರಾಜನಗರ ಜಿಲ್ಲೆ): ಇಲ್ಲಿನ ವಿಸ್ಡಮ್ ವಿದ್ಯಾಸಂಸ್ಥೆ ಆವರಣದಲ್ಲಿ ವಿದ್ಯಾರ್ಥಿಗಳಿಗೆ ಶುಕ್ರವಾರ ಹಮ್ಮಿಕೊಂಡಿದ್ದ ಆರ್‌ಎಸ್‌ಎಸ್ ಶಿಬಿರಕ್ಕೆ ಕರ್ನಾಟಕ ರಕ್ಷಣಾ ವೇದಿಕೆ ಮುಖಂಡರು, ಸ್ಥಳೀಯರು ಆಕ್ಷೇಪಿಸಿದ್ದು, ಶಿಬಿರವನ್ನು ಸ್ಥಗಿತಗೊಳಿಸಲಾಯಿತು.

ಇದೇ ವೇಳೆ, 'ಶಾಲಾ ಆವರಣದಲ್ಲಿ ಶೈಕ್ಷಣಿಕ ಚಟುವಟಿಕೆಗಳಿಗೆ ಮಾತ್ರ ಅವಕಾಶವಿದೆ. ಅನ್ಯ ಚಟುವಟಿಕೆಗಳ ಆಯೋಜನೆಗೆ ಅನುಮತಿ ನೀಡಿಲ್ಲ. ಶಾಲೆ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಬಿಇಒ ಮಂಜುಳಾ ತಿಳಿಸಿದ್ದಾರೆ.

ಶಿಬಿರದಲ್ಲಿ ಯಳಂದೂರು, ಕೊಳ್ಳೇಗಾಲ, ಗ್ರಾಮಾಂತರ ಮತ್ತು ಹನೂರು ತಾಲ್ಲೂಕಿನ 8ನೇ ತರಗತಿಯ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಶಿಬಿರವನ್ನು ಮುಂದುವರಿಸದಂತೆ ಪೊಲೀಸರು ಸೂಚನೆ ನೀಡಿದ ಬಳಿಕ ವಿದ್ಯಾರ್ಥಿಗಳು ಸಹಿತ ಎಲ್ಲರೂ ಶಾಲಾ ಆವರಣ ತೊರೆದರು.

ಜೀವರಾಜ್ ಅವರಿಗೆ ಮೋಸ ಮಾಡಿಲ್ಲ: ಬಿಜೆಪಿ ಏಜೆಂಟರಿಂದ ಪ್ರಮಾಣ

ಶೃಂಗೇರಿ: ಆಣೆ ಪ್ರಮಾಣ ರಾಜಕೀಯ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಶೃಂಗೇರಿ ಕ್ಷೇತ್ರದಲ್ಲಿ ಈಗ ಆಣೆ-ಪ್ರಮಾಣದ ರಾಜಕೀಯ ಶುರುವಾಗಿದೆ. ಶಾಸಕ ಡಿ.ಎನ್. ಜೀವರಾಜ್ ಪರ ಏಜೆಂಟ್‌ರಾಗಿದ್ದವರೇ ಜೀವರಾಜ್ ವಿರುದ್ಧ ದೇವಸ್ಥಾನದಲ್ಲಿ ಆಣೆ ಮಾಡಿದ್ದಾರೆ.

2023ರ ಮೇ 13ರಂದು ನಡೆದಿದ್ದ ಮತ ಎಣಿಕೆ ವೇಳೆ ಬಿಜೆಪಿ ಏಜೆಂಟರಾಗಿದ್ದ ಬಿಜೆಪಿಯ ಇಬ್ಬರು ಕಾರ್ಯಕರ್ತರು ದೇವಸ್ಥಾನದಲ್ಲಿ ಶುಕ್ರವಾರ ಆಣೆ ಮಾಡಿದ್ದಾರೆ.

'ಬಿಜೆಪಿ ಏಜೆಂಟರೇ ಕಾಂಗ್ರೆಸ್ ಜೊತೆ ಸೇರಿ ಅಸಿಂಧು ಅಂಚೆ ಮತಗಳನ್ನು ಕಾಂಗ್ರೆಸ್‌ನ ಟಿ.ಡಿ. ರಾಜೇಗೌಡರ ಬುಟ್ಟಿಗೆ ಹಾಕಿಸಿದ್ದಾರೆ' ಎಂಬ ಆರೋಪಗಳ ಹಿನ್ನೆಲೆಯಲ್ಲಿ 2023ರಲ್ಲಿ ಅಂಚೆ ಮತಗಳ ಎಣಿಕೆಯ ಟೇಬಲ್ ಏಜೆಂಟ್ ಆಗಿದ್ದ ಸತೀಶ್ ಅದ್ದಡ ಹಾಗೂ ಎಣಿಕೆ ಏಜೆಂಟ್ ಆಗಿದ್ದ ರಾಮಸ್ವಾಮಿ ಶೆಟ್ಟಿಗದ್ದೆ ಅವರು ಶುಕ್ರವಾರ ಕೊಪ್ಪ ತಾಲ್ಲೂಕಿನ ಗಬ್ಬಾನೆಯ ಭೂತರಾಯಸ್ವಾಮಿ ಗುಡಿ, ಕೊಪ್ಪದ ವೀರಭದ್ರಸ್ವಾಮಿ ದೇವಸ್ಥಾನಕ್ಕೆ ಹೋಗಿ ಪೂಜೆ ಸಲ್ಲಿಸಿ ಪ್ರಮಾಣ ಮಾಡಿದ್ದಾರೆ.

'2023ರಲ್ಲಿ ಮತ ಎಣಿಕೆಯಲ್ಲಿ ಲೋಪವಾಗಿಲ್ಲ. ಪಾರದರ್ಶಕವಾಗಿ ಎಣಿಕೆ ನಡೆದಿದೆ. ನಾವು ಯಾರ ಜತೆ ಶಾಮೀಲಾಗಿಲ್ಲ. ತಪ್ಪು ಮಾಡಿದ್ದರೆ ಶಿಕ್ಷೆಯಾಗಲಿ. ಇಲ್ಲ ಸುಖಾಸುಮ್ಮನೆ ಆರೋಪ ಮಾಡುತ್ತಿರುವವರಿಗೆ ಶಿಕ್ಷೆಯಾಗಲಿ ಎಂದು ಕೇಳಿಕೊಂಡಿದ್ದೇವೆ' ಎಂದು ಅವರು ಹೇಳಿದ್ದಾರೆ.

ಧಾರ್ಮಿಕ ಕ್ಷೇತ್ರಗಳ ಸುತ್ತಾಟ ಇಂದಿನಿಂದ

ಶಾಸಕ ಸ್ಥಾನ ಕಳೆದುಕೊಂಡಿರುವ ಟಿ.ಡಿ.ರಾಜೇಗೌಡ ಅವರು ಶನಿವಾರದಿಂದ ಶೃಂಗೇರಿ ಕ್ಷೇತ್ರದ ಎಲ್ಲಾ ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡಿ ನ್ಯಾಯ ಕೇಳಲು ನಿರ್ಧರಿಸಿದ್ದಾರೆ.

ಸಾಮಾಜಿಕ ಜಾಲತಾಣಗಳ ಮೂಲಕ ತಮ್ಮ ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಿದ್ದು, ಶನಿವಾರ ಖಾಂಡ್ಯದ ಮಾರ್ಕಂಡೇಶ್ವರ ದೇವಾಲಯದಿಂದ ಸುತ್ತಾಟ ಆರಂಭಿಸುವುದಾಗಿ ತಿಳಿಸಿದ್ದಾರೆ.

ಕಾಂಗ್ರೆಸ್ ಕಾರ್ಯಕರ್ತರು ಫೇಸ್‌ಬುಕ್ ಖಾತೆಗಳಲ್ಲಿ ಇದನ್ನು ಹಂಚಿಕೊಂಡಿದ್ದು, 'ಜೀವರಾಜ್ ಅವರೇ, ತಾಕತ್ತಿದ್ದರೆ ದೇವಾಲಯಕ್ಕೆ ಬಂದು ಸತ್ಯ ಒಪ್ಪಿಕೊಳ್ಳಿ' ಎಂದು ಬರೆದುಕೊಂಡಿದ್ದಾರೆ.

ಈ ಕುರಿತು ಪ್ರಜಾವಾಣಿಗೆ ಪ್ರತಿಕ್ರಿಯಿಸಿದ ರಾಜೇಗೌಡ ಅವರು, 'ಕೋರ್ಟ್, ಚುನಾವಣಾ ಆಯೋಗದ ಮುಂದೆ ಅರ್ಜಿ ಸಲ್ಲಿಸಿ ನ್ಯಾಯ ಕೇಳುತ್ತಿದ್ದೇವೆ. ಕ್ಷೇತ್ರದಲ್ಲಿನ ಹಿಂದೂ, ಮುಸ್ಲಿಂ, ಕ್ರೈಸ್ತ ಸೇರಿ ಎಲ್ಲಾ ಧರ್ಮದ ಕ್ಷೇತ್ರಗಳಿಗೆ ತೆರಳಿ ದೇವರ ಮುಂದೆ ನನ್ನ ತಪ್ಪೇನಿದೆ ಎಂದು ಕೇಳುತ್ತೇನೆ. ಅನ್ಯಾಯಕ್ಕೆ ನ್ಯಾಯ ದೊರಕಿಸಿಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇವೆ' ಎಂದರು.

ಮೀನಿಗಾಗಿ ಬಲೆ

ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್

ಮಂಗಳೂರಿನ ಗುರುಪುರ ನದಿಯಲ್ಲಿ ಮೀನುಗಾರರು ಮೀನಿಗಾಗಿ ಬಲೆ ಹಾಕುತ್ತಿರುವ ದೃಶ್ಯ ಶುಕ್ರವಾರ ಕಂಡುಬಂತು

11 ಜಿಲ್ಲೆಗಳಲ್ಲಿ ಇಂದು ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಸೇರಿದಂತೆ 11 ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಮೇ 9ರಂದು ಗುಡುಗಿನಿಂದ ಕೂಡಿದ ಹಗುರ ಮಳೆ ಆಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬೆಂಗಳೂರಿನಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ. ಸಂಜೆ ಹಾಗೂ ರಾತ್ರಿಯ ವೇಳೆ ಕೆಲವು ಪ್ರದೇಶಗಳಲ್ಲಿ ಬಿರುಗಾಳಿಯೊಂದಿಗೆ ತುಸು ಮಳೆ ಬೀಳಬಹುದು. ತಾಪಮಾನ ಗರಿಷ್ಠ 33 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ 23 ಡಿಗ್ರಿ ಸೆಲ್ಸಿಯಸ್ ನಷ್ಟು ಇರಬಹುದು ಎಂದು ಇಲಾಖೆ ಹೇಳಿದೆ.

ಕರಾವಳಿ ಭಾಗದ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ ಒಂದು ಅಥವಾ ಎರಡು ಕಡೆಗಳಲ್ಲಿ ಸ್ವಲ್ಪ ಪ್ರಮಾಣದ ಮಳೆಯಾಗಬಹುದು. ಉತ್ತರ ಒಳನಾಡಿನ ಧಾರವಾಡ, ಹಾವೇರಿ, ಗದಗ, ಧಾರವಾಡ ಜಿಲ್ಲೆ ಹಾಗೂ ದಕ್ಷಿಣ ಒಳನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು ಜಿಲ್ಲೆಗಳ ಒಂದೆರಡು ಕಡೆ ಬಿರುಗಾಳಿ ಯೊಂದಿಗೆ ಗುಡುಗು ಸಹಿತ ಮಳೆ ಇರಲಿದೆ ಎಂದು ಮುನ್ಸೂಚನೆ ನೀಡಿದ್ದಾರೆ. ಶುಕ್ರವಾರ ಕಲಬುರಗಿಯಲ್ಲಿ ಅತ್ಯಧಿಕ 41 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ. ವಿಜಯಪುರ, ಬೀದರ್, ಕೊಪ್ಪಳದಲ್ಲಿ 39 ಡಿಗ್ರಿ ಸೆಲ್ಸಿಯಸ್, ಹಾವೇರಿ, ರಾಯಚೂರಿನಲ್ಲಿ 38.4 ಡಿಗ್ರಿ ಸೆಲ್ಸಿಯಸ್, ಗದಗದಲ್ಲಿ 38 ಡಿಗ್ರಿ, ದಾವಣಗೆರೆಯಲ್ಲಿ 37.5 ಡಿಗ್ರಿ ಉಷ್ಣಾಂಶ ದಾಖಲಾಗಿದೆ.

ಪತಿ ಕೊಲೆ; ಪತ್ನಿ, ಪ್ರಿಯಕರನಿಗೆ ಗಲ್ಲು ಶಿಕ್ಷೆ

ಪ್ರಜಾವಾಣಿ ವಾರ್ತೆ

ಭದ್ರಾವತಿ (ಶಿವಮೊಗ್ಗ): ಅಕ್ರಮ ಸಂಬಂಧಕ್ಕೆ ಅಡ್ಡಿಯಾಗಿದ್ದ ಎಂದು ಪತಿಯನ್ನು ಪ್ರಿಯಕರನೊಂದಿಗೆ ಸೇರಿ ಪತ್ನಿಯೇ ಕೊಲೆ ಮಾಡಿರುವ ಅಪರಾಧ ಸಾಬೀತಾಗಿದ್ದು, ಇಲ್ಲಿನ 4ನೇ ಜಿಲ್ಲಾ ಮತ್ತು ಸೆಷನ್ಸ್ ಕೋರ್ಟ್ ಶುಕ್ರವಾರ ಇಬ್ಬರಿಗೂ ಮರಣ ದಂಡನೆ ವಿಧಿಸಿ ಆದೇಶ ನೀಡಿದೆ.

ಇಲ್ಲಿನ ಖಾಸಗಿ ನರ್ಸಿಂಗ್ ಹೋಂನಲ್ಲಿ ನರ್ಸ್ ಆಗಿದ್ದ ಫ್ಲೋರಾ ನ್ಯಾನ್ಸಿ (36) ಹಾಗೂ ಆಕೆಯ ಪ್ರಿಯಕರ ರಾಜಶೇಖರಯ್ಯ (31) ಶಿಕ್ಷೆಗೊಳಗಾದವರು. ಬಿ.ಎಸ್.ಪ್ರಕಾಶ್ ಬಾಬು (38) ಕೊಲೆಯಾದ ವ್ಯಕ್ತಿ.

ರಾಜಶೇಖರಯ್ಯ

ಫ್ಲೋರಾ ನ್ಯಾನ್ಸಿ

ಫ್ಲೋರಾ ನಾನ್ಸಿಯ ವಿವಾಹವು ಹತ್ತಿರ ಸಂಬಂಧಿ, ಟ್ಯಾಕ್ಸಿ ಚಾಲಕ ಪ್ರಕಾಶ್ ಬಾಬು ಜೊತೆ 2014ರಲ್ಲಿ ನಡೆದಿತ್ತು. ದಂಪತಿಗೆ ಮಕ್ಕಳಿರಲಿಲ್ಲ. ಮದುವೆಬ ಕೆಲ ವರ್ಷಗಳ ನಂತರ ಫ್ಲೋರಾ ನಾನ್ಸಿಗೆ ರಾಜಶೇಖರಯ್ಯ ಜೊತೆ ಸಂಬಂಧ ಬೆಳೆದಿತ್ತು. ಇದಕ್ಕೆ ಪತಿ ಆಕ್ಷೇಪ ವ್ಯಕ್ತಪಡಿಸಿದ್ದರು.

ಇದರಿಂದ ಇರುಸುಮುರಿಸಿಗೆ ಒಳಗಾಗಿದ್ದ ಪತ್ನಿ 2020ರ ಜ. 15ರಂದು ರಾತ್ರಿ ಇಲ್ಲಿನ ಸುರಗಿ ತೋಪಿನಲ್ಲಿರುವ ಮನೆಯಲ್ಲಿ ಪತಿಗೆ ತಂಪು ಪಾನೀಯದಲ್ಲಿ ಮತ್ತು ಬರಿಸುವ ಮಾತ್ರೆ ಬೆರೆಸಿ ಕುಡಿಸಿದ್ದಳು. ಪತಿ ನಿದ್ರೆಗೆ ಜಾರಿದ ಬಳಿಕ ಪ್ರಿಯಕರನನ್ನು ಮನೆಗೆ ಕರೆಸಿಕೊಂಡು ಪತಿಯ ಕತ್ತು ಹಿಸುಕಿ ಉಸಿರುಗಟ್ಟಿಸಿ ಕೊಲೆ ಮಾಡಿದ್ದರು. ಬಳಿಕ ಇಬ್ಬರೂ ಶವವನ್ನು ಕಾರಲ್ಲಿ ತೆಗೆದುಕೊಂಡು ಹೋಗಿ, ತರೀಕೆರೆ ತಾಲ್ಲೂಕಿನ ಲಿಂಗದಹಳ್ಳಿ ಸಮೀಪದ ಭದ್ರಾ ನಾಲೆಗೆ ಎಸೆದು ಬಂದಿದ್ದರು.

3 ದಿನಗಳ ಬಳಿಕ ಶವ ದೊರೆತಿತ್ತು. ಪ್ರಕಾಶ್ ಬಾಬು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದೇ ಭಾವಿಸಲಾಗಿತ್ತು. ಮೃತನ ಸಹೋದರ ಫ್ರಾನ್ಸಿಸ್ ನೀಡಿದ ದೂರು ಆಧರಿಸಿ ತನಿಖೆ ಆರಂಭಿಸಿದ ಪೇಪರ್ ಟೌನ್ ಠಾಣೆ ಪೊಲೀಸರು, ಪ್ರಕರಣ ಭೇದಿಸಿದ್ದರು.

ವಿಚಾರಣೆಯಲ್ಲಿ ಆರೋಪ ಸಾಬೀತಾಗಿದ್ದರಿಂದ, ನ್ಯಾಯಾಧೀಶರಾದ ಇಂದಿರಾ ಮೈಲಸ್ವಾಮಿ ಚೆಟ್ಟಿಯಾರ್ ಅವರು ಇಬ್ಬರಿಗೂ ಗಲ್ಲು ಶಿಕ್ಷೆ ಹಾಗೂ ₹14 ಲಕ್ಷ ದಂಡ ವಿಧಿಸಿದ್ದಾರೆ. ಮೃತನ ಸಹೋದರ ಫ್ರಾನ್ಸಿಸ್‌ಗೆ ₹5 ಲಕ್ಷ ಪರಿಹಾರ ನೀಡುವಂತೆ ಕೋರ್ಟ್ ಆದೇಶಿಸಿದೆ. ವಕೀಲರಾದ ರತ್ನಮ್ಮ ಅವರು ಪಿ. ಪ್ರಾಸಿಕ್ಯೂಷನ್ ಪರ ವಾದ ಮಂಡಿಸಿದ್ದರು.

'ಕೇಂದ್ರದ ನಡೆ ಒಕ್ಕೂಟಕ್ಕೆ ವಿರುದ್ಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಸರ್ಕಾರ ನರೇಗಾ ಕಾಯ್ದೆ ರದ್ದುಪಡಿಸಿ ವಿಬಿ ಜಿ ರಾಮ್ ಜಿ ಕಾಯ್ದೆಯನ್ನು ತರುವ ಮೊದಲು ರಾಜ್ಯ ಸರ್ಕಾರದ ಜೊತೆ ಚರ್ಚೆ ನಡೆಸಿಲ್ಲ. ಇದು ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾದ ನಡೆ. ಸಂವಿಧಾನ ವಿರೋಧಿ ನಿರ್ಧಾರ' ಎಂದು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ವಾಗ್ದಾಳಿ ನಡೆಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಆರ್ಥಿಕ ವರ್ಷ ಆರಂಭವಾಗಿ ಎರಡು ತಿಂಗಳಾದರೂ ಹೊಸ ಕಾಯ್ದೆ ಕುರಿತ ಸ್ಪಷ್ಟ ಚಿತ್ರಣ ಸಿಕ್ಕಿಲ್ಲ. ನರೇಗಾ ರದ್ದತಿ ಮೂಲಕ ಕೇಂದ್ರ ಗ್ರಾಮೀಣ ಜನರ ಬದುಕನ್ನು ಕಸಿದಿದೆ' ಎಂದರು.

ಅಂಜನಾದ್ರಿ ಬೆಟ್ಟದ ಆಂಜನೇಯನಿಗೆ ಚಿನ್ನದ ಪ್ರಭಾವಳಿ, ಛತ್ರಿ, ಕಿರೀಟ, ಗದೆ

₹2.5 ಕೋಟಿ ಮೌಲ್ಯದ ಆಭರಣ ಸಮರ್ಪಣೆ

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಧಾರ್ಮಿಕ ಪುಣ್ಯಕ್ಷೇತ್ರ ಅಂಜನಾದ್ರಿ ಬೆಟ್ಟದ ಆಂಜನೇಯನಿಗೆ ಹೈದರಾಬಾದ್ ಮೂಲದ ಎ.ಎಂ.ಆರ್. ಸಂಸ್ಥೆಯ ಅಧ್ಯಕ್ಷ ಡಾ.ಎ.ಮಹೇಶರೆಡ್ಡಿ ದಂಪತಿ ಶಾಸಕ ಜಿ.ಜನಾರ್ದನ ರೆಡ್ಡಿ ದಂಪತಿ ನೇತೃತ್ವದಲ್ಲಿ ₹2.5 ಕೋಟಿ ಮೌಲ್ಯದ ಬಂಗಾರದ ಆಭರಣಗಳನ್ನು ಶುಕ್ರವಾರ ಸಮರ್ಪಿಸಲಾಗಿದೆ.

ಬೆಳಿಗ್ಗೆ 5 ಗಂಟೆಗೆ ಆಂಜನೇಯನ ಪಾದಗಟ್ಟೆ ಬಳಿ ಚಿನ್ನದ ಪ್ರಭಾವಳಿ, ಛತ್ರಿ, ಕಿರೀಟ, ಗದೆ ಇರಿಸಿ, ವಿವಿಧ ಧಾರ್ಮಿಕ ವಿಧಿ–ವಿಧಾನಗಳೊಂದಿಗೆ ಪೂಜಾ ಮಾಡಲಾಯಿತು.

ನಂತರ ಎಲ್ಲರೂ 575 ಮೆಟ್ಟಿಲು ಏರಿಕೊಂಡು ಬಂದು, ಅಂಜನೇಯನ ದೇವರಿಗೆ ಸುಪ್ರಭಾತ ಸೇವೆ, ಅಲಂಕಾರ, ಮಂಗಳಾರತಿ ಸೇರಿ ವಿವಿಧ ಧಾರ್ಮಿಕ ಪೂಜಾ ಕಾರ್ಯಗಳನ್ನು ಕೈಗೊಂಡರು. ಬಳಿಕ ದೇವರಿಗೆ ಪ್ರಭಾವಳಿ, ಕಿರೀಟ, ಛತ್ರಿ, ಗದೆ ಇರಿಸಲಾಯಿತು.

ಗಂಗಾವತಿ ತಾಲ್ಲೂಕಿನ ಧಾರ್ಮಿಕ ಪುಣ್ಯಕ್ಷೇತ್ರ ಅಂಜನಾದ್ರಿ ಬೆಟ್ಟದ ಆಂಜನೇಯನಿಗೆ ಎ.ಎಂ.ಆರ್. ಸಂಸ್ಥೆಯ ಅಧ್ಯಕ್ಷ ಡಾ.ಎ. ಮಹೇಶರೆಡ್ಡಿ ದಂಪತಿ ಶಾಸಕ ಜಿ.ಜನಾರ್ದನ ರೆಡ್ಡಿ ದಂಪತಿ ನೇತೃತ್ವದಲ್ಲಿ ಬಂಗಾರದ ಆಭರಣಗಳನ್ನು ಶುಕ್ರವಾರ ಸಮರ್ಪಿಸಿದರು

ಈ ಸಂದರ್ಭದಲ್ಲಿ ಶಾಸಕ ಜಿ.ಜನಾರ್ದನ ರೆಡ್ಡಿ ಅವರು, 'ಎ.ಎಂ.ಆರ್. ಸಂಸ್ಥೆ ಭಾರತದಲ್ಲಿನ ಅಗ್ರಗಣ್ಯ ಸಂಸ್ಥೆಗಳಲ್ಲಿ 3ನೇ ಸ್ಥಾನದಲ್ಲಿದೆ. ಈ ಹಿಂದೆ ಚುನಾವಣೆ ವೇಳೆ ಹನುಮಂತನಿಗೆ ಬಂಗಾರದ ಆಭರಣಗಳನ್ನು ನೀಡುವ ಭಕ್ತಿ ಹೊಂದಿದ್ದೆ. ಇಂದು ಈಡೇರಿದೆ' ಎಂದರು.

'ಅಂಜನಾದ್ರಿಯಲ್ಲಿ ₹240 ಕೋಟಿ ವೆಚ್ಚದಲ್ಲಿ ಮೆಟ್ಟಿಲು, ಗೋಪುರ, ರಾಮ, ಲಕ್ಷ್ಮಣ, ಸೀತೆ ದೇವಸ್ಥಾನ ಸೇರಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಲಾಗುವುದು' ಎಂದರು.

ಗಂಗಾವತಿ ತಹಶೀಲ್ದಾರ್ ವಸಂತ ಕುಮಾರಿ, ಕನಕಗಿರಿ ತಹಶೀಲ್ದಾರ್ ವಿಶ್ವನಾಥ, ಗ್ರೇಡ್-2 ತಹಶೀಲ್ದಾರ್ ಮಹಾಂತಗೌಡ ಪಾಟೀಲ, ಮಾಜಿ ಸಂಸದ ಶಿವರಾಮೇಗೌಡ ಹಾಜರಿದ್ದರು.

ನದಿಯಲ್ಲಿ ಮುಳುಗಿ ಇಬ್ಬರು ಯುವತಿಯರ ಸಾವು

ಪ್ರಜಾವಾಣಿ ವಾರ್ತೆ

ಉಪ್ಪಿನಂಗಡಿ (ದಕ್ಷಿಣ ಕನ್ನಡ): ಕಡಬ ತಾಲ್ಲೂಕಿನ ಕುಟ್ರುಪ್ಪಾಡಿ ಗ್ರಾಮದ ಕೊಲ್ಯದಕಟ್ಟ ಎಂಬಲ್ಲಿ ಹರಿಯುವ ಗುಂಡ್ಯ ಹೊಳೆಯ ಕೊಲ್ಯದಕಟ್ಟ ಅಣೆಕಟ್ಟೆ ಬಳಿ ಸ್ನಾನಕ್ಕೆ ಇಳಿದ ಇಬ್ಬರು ಯುವತಿಯರು ನೀರಿನಲ್ಲಿ ಮುಳುಗಿ ಶುಕ್ರವಾರ ಮೃತಪಟ್ಟಿದ್ದಾರೆ.

ಕುಟ್ರುಪ್ಪಾಡಿ ಗ್ರಾಮದ ಪೂರ್ವತಿಂಗಲ್ ನಿವಾಸಿ ಹರೀಶ್ ಪಿ.ಕೆ. ಎಂಬವರ ಪುತ್ರಿ ಅರ್ಪಿತಾ (15), ಶಕುಂತಲಾ ಎಂಬವರ ಪುತ್ರಿ ಸುನೀತ (21) ಮೃತಪಟ್ಟವರು.

ಸಹೋದರ ಸಂಬಂಧಿಗಳಾದ ಐವರು ಹೊಳೆ ಬದಿಗೆ ಬಂದು ಸ್ನಾನಕ್ಕಾಗಿ ನೀರಿಗೆ ಇಳಿದಿದ್ದರು. ಈ ವೇಳೆ ಇಬ್ಬರು ನೀರಿನ ಆಳ ತಿಳಿಯದೆ ಮುಳಗ ತೊಡಗಿದ್ದರು. ಜೊತೆಯಲ್ಲಿದ್ದವರು ರಕ್ಷಿಸಲು ಯತ್ನಿಸಿದರೂ ಸಾಧ್ಯವಾಗಲಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

₹25 ಕೋಟಿ ವೆಚ್ಚದಲ್ಲಿ ನಿರ್ಮಾಣ • ಡಿಪಿಆರ್ ಸಿದ್ಧ: ಸಚಿವ

'ಸಾಲುಮರದ ತಿಮ್ಮಕ್ಕ ಹೆಸರಲ್ಲಿ ಸ್ಮಾರಕ'

ಪ್ರಜಾವಾಣಿ ವಾರ್ತೆ

ಬೇಲೂರು (ಹಾಸನ ಜಿಲ್ಲೆ): 'ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರ ಹೆಸರಲ್ಲಿ ₹25 ಕೋಟಿ ವೆಚ್ಚದಲ್ಲಿ ಸ್ಮಾರಕ ನಿರ್ಮಿಸಲು ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧವಾಗಿದೆ' ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಇಲ್ಲಿ ತಿಳಿಸಿದರು.

ಪಟ್ಟಣದಲ್ಲಿ ಶುಕ್ರವಾರ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಹಳೇಬೀಡಿನ ಯುನೆಸ್ಕೊ ತಾಣದಲ್ಲಿರುವ 10 ಎಕರೆಯಲ್ಲಿ ಪ್ರವಾಸೋದ್ಯಮ ಇಲಾಖೆ ವತಿಯಿಂದ ಸ್ಮಾರಕವನ್ನು ನಿರ್ಮಿಸಲಾಗುತ್ತದೆ' ಎಂದು ತಿಳಿಸಿದರು.

'ಬೇಲೂರು, ಕೊಡಗು, ಚಿಕ್ಕಮಗಳೂರಿನಲ್ಲಿ ಕಾಡಾನೆ ಸಮಸ್ಯೆ ಇದೆ. ಆನೆಗಳಿಂದ ಆಗುವ ಬೆಳೆಹಾನಿ, ಜೀವ ಹಾನಿ ತಪ್ಪಿಸಲು ಆನೆಧಾಮ ಸ್ಥಾಪನೆಗೆ 2ಸಾವಿರ ಎಕರೆ ಭೂಮಿ ಗುರುತಿಸಲಾಗಿದ್ದು, ಸಚಿವ ಸಂಪುಟದ ಅನುಮೋದನೆ ಪಡೆಯಲಾಗಿದೆ' ಎಂದರು.

'ಆನೆಗಳ ಸಂಚಾರದ ಬಗ್ಗೆ ನಿಗಾ ಇಟ್ಟು ಸ್ಥಳೀಯರಿಗೆ ಮಾಹಿತಿ ನೀಡಲು ಕಮಾಂಡ್ ಸೆಂಟರ್ ಸ್ಥಾಪಿಸಲಾಗಿದೆ. ಆನೆ ಸಂಚಾರದ ಬಗ್ಗೆ ಇಲಾಖೆ ಸಿಬ್ಬಂದಿಯು ನೀಡುವ ಎಚ್ಚರಿಕೆಯನ್ನು ಪಾಲಿಸಿದರೆ ಜೀವ ಹಾನಿ ತಪ್ಪಿಸಬಹುದು' ಎಂದು ಅಭಿಪ್ರಾಯಪಟ್ಟರು.

'ಮಹಾಸಭಾದಿಂದ ₹1 ಕೋಟಿ ಮೀಸಲು'



ಈಶ್ವರ ಬಿ. ಖಂಡ್ರೆ

'ವೀರಶೈವ ಲಿಂಗಾಯತ ಸಮಾಜದ ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕಾಗಿ ತಾಲ್ಲೂಕಿಗೊಂದು ವಿದ್ಯಾರ್ಥಿನಿಲಯ ನಿರ್ಮಿಸುವುದು ಮಹಾಸಭಾದ ಗುರಿಯಾಗಿದೆ' ಎಂದು ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರೂ ಆದ ಸಚಿವ ಈಶ್ವರ ಖಂಡ್ರೆ ಇಲ್ಲಿ ತಿಳಿಸಿದರು.

ಬಸವ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಸಮುದಾಯದ ಮಕ್ಕಳನ್ನು ಸ್ಪರ್ಧಾತ್ಮಕ ಪರೀಕ್ಷೆಗೆ ಸಜ್ಜುಗೊಳಿಸಲು ತರಬೇತಿ ಕೇಂದ್ರವನ್ನು ಸ್ಥಾಪಿಸಲಾಗುವುದು' ಎಂದು ಹೇಳಿದರು.

'ಈಗಾಗಲೇ ಹಲವು ಜಿಲ್ಲಾ ಕೇಂದ್ರಗಳಲ್ಲಿ ವಿದ್ಯಾರ್ಥಿನಿಯರ ವಸತಿನಿಲಯ ನಿರ್ಮಿಸಲಾಗಿದೆ. ಈ ವರ್ಷ ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದವರನ್ನು ಪುರಸ್ಕರಿಸಲು ₹1 ಕೋಟಿ ಮೀಸಲಿಡಲಾಗಿದೆ' ಎಂದು ತಿಳಿಸಿದರು.

‘ಯು–ಟರ್ನ್’ ಹೊಡೆದ ಡಿಎಂಕೆ

‘ತಮಿಳುನಾಡು: ಸರ್ಕಾರ ರಚನೆಗೆ ಎಐಎಡಿಎಂಕೆಗೆ ಬೆಂಬಲ ಇಲ್ಲ’

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನಲ್ಲಿ ಸರ್ಕಾರ ರಚಿಸಲು ತನ್ನ ‘ಪ್ರತಿಸ್ಪರ್ಧಿ’ ಎಐಎಡಿಎಂಕೆಯನ್ನು ಎಂದಿಗೂ ಬೆಂಬಲಿಸುವುದಿಲ್ಲ ಎಂದು ದ್ರಾವಿಡ ಮುನ್ನೇತ್ರ ಕಳಗಂ (ಡಿಎಂಕೆ) ಶುಕ್ರವಾರ ಘೋಷಿಸಿದೆ.

ಕನಿಮೊಳಿ

ವಿಜಯ್ ನೇತೃತ್ವದ ಟಿವಿಕೆಯನ್ನು ಅಧಿಕಾರದಿಂದ ದೂರವಿಡಲು ‘ಬದ್ಧ ರಾಜಕೀಯ ಪ್ರತಿಸ್ಪರ್ಧಿ’ ಎನಿಸಿಕೊಂಡಿರುವ ಎಐಎಡಿಎಂಕೆ ಮತ್ತು ಡಿಎಂಕೆ ಪರಸ್ಪರ ಒಂದಾಗಲಿವೆ ಎಂಬ ಊಹಾಪೋಹ ಎದ್ದಿದ್ದವು. ಈ ಬೆಳವಣಿಗೆ ತಮಿಳುನಾಡಿನ ರಾಜಕೀಯದಲ್ಲಿ ಭಾರಿ ಚರ್ಚೆಗೆ ಕಾರಣವಾಗಿತ್ತು.

ಪಕ್ಷದ ಭವಿಷ್ಯದ ದೃಷ್ಟಿಯಿಂದ ಎಐಎಡಿಎಂಕೆಗೆ ಬೆಂಬಲ ನೀಡುವ ಆಲೋಚನೆಯನ್ನು ಆರಂಭದಲ್ಲಿ ಡಿಎಂಕೆ ಮಾಡಿತ್ತು. ‘ರಾಜ್ಯದಲ್ಲಿ ಸ್ಥಿರ ಸರ್ಕಾರ ರಚಿಸುವ ನಿಟ್ಟಿನಲ್ಲಿ ಪಕ್ಷ ತೆಗೆದುಕೊಳ್ಳುವ ಯಾವುದೇ ನಿರ್ಧಾರವನ್ನು ಒಪ್ಪಿಕೊಳ್ಳಲು ಸಿದ್ಧರಾಗಿರಿ’ ಎಂದು ಪಕ್ಷದ ಮುಖ್ಯಸ್ಥ ಎಂ.ಕೆ. ಸ್ಟಾಲಿನ್ ಅವರು ಶಾಸಕರಿಗೆ ಸೂಚಿಸಿದ್ದರು.

ಆದರೆ, ಶುಕ್ರವಾರ ‘ಯು–ಟರ್ನ್’ ಹೊಡೆದಿರುವ ಡಿಎಂಕೆ, ಯಾವುದೇ ಸಮಯದಲ್ಲೂ ಎಐಎಡಿಎಂಕೆಗೆ ಬೆಂಬಲ ನೀಡಲ್ಲ ಎಂದಿದೆ. ಎಐಎಡಿಎಂಕೆ ಜತೆ ಕೈಜೋಡಿಸಲಿದೆ ಎಂದು ವರದಿಗಳನ್ನು ಡಿಎಂಕೆ ಸಹ ಪ್ರಧಾನ ಕಾರ್ಯದರ್ಶಿ ಕನಿಮೊಳಿ ಅಲ್ಲಗಳೆದಿದ್ದಾರೆ.

‘ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ತೀರ್ಪು ಮಹತ್ವದ್ದಾಗಿದೆ. ದುರದೃಷ್ಟವಶಾತ್, ತಮಿಳುನಾಡಿನ ಜನರು ಸ್ಪಷ್ಟ ಜನಾದೇಶ ನೀಡದಿದ್ದರೂ, ನಾವು ಅದನ್ನು ಗೌರವಿಸಬೇಕು’ ಎಂದು ಕನಿಮೊಳಿ ಹೇಳಿದ್ದಾರೆ.

‘ಎಐಎಡಿಎಂಕೆಗೆ ಬೆಂಬಲ ನೀಡುವ ಸುದ್ದಿ ಊಹಾಪೋಹ. ನಾನು ಡಿಎಂಕೆಗೆ ಸೇರಿದವಳಾಗಿದ್ದು, ಎಐಎಡಿಎಂಕೆ ಬಗ್ಗೆ ಮಾತನಾಡಲಾರೆ’ ಎಂದಿದ್ದಾರೆ.

ಆರು ಸ್ಥಾನಗಳನ್ನು ಹೊಂದಿರುವ ಎಡಪಕ್ಷಗಳು ಮತ್ತು ವಿಸಿಕೆಯು, ಎಐಎಡಿಎಂಕೆ ನೇತೃತ್ವದ ಸರ್ಕಾರಕ್ಕೆ ಬೆಂಬಲ ನೀಡುವ ಸಾಧ್ಯತೆ ಕಡಿಮೆ ಎಂಬುದು ಮನವರಿಕೆಯಾದ ಬಳಿಕ ಡಿಎಂಕೆ ತನ್ನ ನಿರ್ಧಾರದಿಂದ ಹಿಂದೆ ಸರಿದಿದೆ ಎನ್ನಲಾಗಿದೆ. ಈಗಿನ ಪರಿಸ್ಥಿತಿಯಲ್ಲಿ ಈ ಮೂರು ಪಕ್ಷಗಳ ಬೆಂಬಲವಿಲ್ಲದೆ ಯಾರಿಗೂ ಸರ್ಕಾರ ರಚಿಸಲು ಸಾಧ್ಯವಿಲ್ಲ.

ಬಿಜೆಪಿ ಸೇರಿದಂತೆ ಎಲ್ಲಾ ರಾಜಕೀಯ ಪಕ್ಷಗಳೊಂದಿಗೆ ಸಂಬಂಧ ಹೊಂದಿರುವ ಉದ್ಯಮಿಯೊಬ್ಬರು ಎಐಎಡಿಎಂಕೆ ನೇತೃತ್ವದ ಸರ್ಕಾರವನ್ನು ಬೆಂಬಲಿಸುವ ಕಲ್ಪನೆಯನ್ನು ಡಿಎಂಕೆ ಮುಂದಿಟ್ಟಿದ್ದರು ಎಂದು ಮೂಲಗಳು ತಿಳಿಸಿವೆ.

ಆರಂಭದಲ್ಲಿ ಈ ಕಲ್ಪನೆಗೆ ವಿರೋಧ ವ್ಯಕ್ತಪಡಿಸಿದ್ದ ಸ್ಟಾಲಿನ್, ಪಕ್ಷದ ಒಂದು ಬಣದ ಒತ್ತಾಯಕ್ಕೆ ಮಣಿದು ಎಐಎಡಿಎಂಕೆಗೆ ಬೆಂಬಲ ನೀಡಲು ಮನಸ್ಸು ಮಾಡಿದ್ದರು ಎನ್ನಲಾಗಿದೆ.

ಕಾಂಗ್ರೆಸ್ ಜೊತೆ ಕೂರಲ್ಲ; ಪ್ರತ್ಯೇಕ ಆಸನಕ್ಕೆ ಸ್ಪೀಕರ್‌ಗೆ ಪತ್ರ

ನವದೆಹಲಿ (ಪಿಟಿಐ): ನಟ ವಿಜಯ್ ಜೊತೆ ಸರ್ಕಾರ ರಚನೆಗೆ ಕಾಂಗ್ರೆಸ್ ಕೈಜೋಡಿಸುತ್ತಿದ್ದಂತೆ ಅದರ ಜೊತೆಗಿನ ತನ್ನ ಮೈತ್ರಿ ಅಂತ್ಯಗೊಂಡಿದೆ ಎಂದು ಶುಕ್ರವಾರ ಡಿಎಂಕೆ ಘೋಷಿಸಿದೆ. ಲೋಕಸಭೆಯಲ್ಲಿ ಡಿಎಂಕೆ ಸಂಸದರಿಗೆ ಆಸನಗಳ ಮರು ವ್ಯವಸ್ಥೆ ಮಾಡಲು ಸ್ಪೀಕರ್ ಅವರಿಗೆ ಮನವಿ ಸಲ್ಲಿಸಿದೆ.

‘ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಸಂಸದರ ಸಾಲಿನಲ್ಲಿ ನಾವು ಕುಳಿತುಕೊಳ್ಳುವುದು ಸರಿ ಅಲ್ಲ’ ಎಂದು ತೂತುಕುಡಿ ಕ್ಷೇತ್ರದ ಡಿಎಂಕೆ ಸಂಸದೆ ಕನಿಮೋಳಿ ಅವರು ಲೋಕಸಭೆ ಅಧ್ಯಕ್ಷ ಓಂ ಬಿರ್ಲಾ ಅವರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

‘ಕಾಂಗ್ರೆಸ್ ಸಂಸದರ ಜೊತೆ ನಮ್ಮ ಸದಸ್ಯರಿಗೆ ಕಲ್ಪಿಸಿರುವ ಆಸನಗಳನ್ನು ಬದಲಿಸಿ, ತಮ್ಮ ಹೊಣೆಗಾರಿಕೆ ನಿಭಾಯಿಸಲು ಬೇರೆಡೆ ವ್ಯವಸ್ಥೆ ಮಾಡಿ’ ಎಂದು ಕನಿಮೋಳಿ ಮನವಿ ಮಾಡಿದ್ದಾರೆ.

ತಮಿಳುನಾಡಿನಲ್ಲಿ ಡಿಎಂಕೆ ಜೊತೆ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಂಡಿದ್ದ ಕಾಂಗ್ರೆಸ್ ಐದು ಸ್ಥಾನಗಳನ್ನು ಗೆದ್ದಿತ್ತು. ಅತಂತ್ರ ವಿಧಾನಸಭೆ ಸೃಷ್ಟಿಯಾದ ನಂತರ ಕಾಂಗ್ರೆಸ್ ನಟ ವಿಜಯ್ ಅವರ ಟಿವಿಕೆಗೆ ಬೆಂಬಲ ಘೋಷಿಸಿದೆ.

ಕಾಂಗ್ರೆಸ್‌ನ ಈ ನಡೆ ಡಿಎಂಕೆ–ಕಾಂಗ್ರೆಸ್ ನಡುವೆ ಬಿರುಕು ಸೃಷ್ಟಿಸಿದೆ. ಕಾಂಗ್ರೆಸ್ ನಿರ್ಧಾರ ‘ಬೆನ್ನಿಗೆ ಚೂರಿಹಾಕುವ’ ನಡೆ ಎಂದು ಡಿಎಂಕೆ ಮುಖಂಡರು ಕಿಡಿಕಾರಿದ್ದಾರೆ.

ಆದರೆ, ಕಾಂಗ್ರೆಸ್ ತನ್ನ ನಿಲುವನ್ನು ಸಮರ್ಥಿಸಿಕೊಂಡಿದ್ದು, ‘2014ರ ಚುನಾವಣೆಯಲ್ಲಿ ಡಿಎಂಕೆ ಏಕಾಂಗಿಯಾಗಿ ಸ್ಪರ್ಧೆ ಮಾಡಿರಲಿಲ್ಲವೇ?’ ಎಂದು ಪ್ರಶ್ನಿಸಿದೆ.

ಕ್ಷೇತ್ರ ಕಳೆದುಕೊಳ್ಳುವ ಆತಂಕ

ವೇಣುಗೋಪಾಲ್ ಪ್ರಯತ್ನಕ್ಕೆ ಅಡಚಣೆಯಾಗಬಹುದೇ?

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಕೇರಳಂನ ಮುಖ್ಯಮಂತ್ರಿ ಹುದ್ದೆಯ ಪ್ರಮುಖ ಆಕಾಂಕ್ಷಿಗಳಲ್ಲಿ ಒಬ್ಬರು. ಒಂದು ವೇಳೆ ಮುಖ್ಯಮಂತ್ರಿಯಾಗಿ ಆಯ್ಕೆಯಾದರೆ ಅವರು ಪ್ರತಿನಿಧಿಸಿರುವ ಆಲಪ್ಪುಳ ಲೋಕಸಭಾ ಕ್ಷೇತ್ರದಲ್ಲಿ ಉಪ ಚುನಾವಣೆ ನಡೆಯುವ ಸಾಧ್ಯತೆ ಇದೆ.



ಕೆ.ಸಿ. ವೇಣುಗೋಪಾಲ್

ವೇಣುಗೋಪಾಲ್ ಅವರು ಮುಖ್ಯಮಂತ್ರಿಯಾದರೆ ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಗುತ್ತದೆ.

ಈ ಕ್ಷೇತ್ರವು ಸಿಪಿಎಂ ಮತ್ತು ಕಾಂಗ್ರೆಸ್ ನಡುವಿನ ಪೈಪೋಟಿಯ ಕಣ. ಆದರೂ, ಕಾಂಗ್ರೆಸ್‌ನ ಹಿರಿಯ ನಾಯಕ ಈ ಹಿಂದೆ ಆಲಪ್ಪುಳದಲ್ಲಿ ಸೋಲು ಕಂಡಿದ್ದರು. ಆದ್ದರಿಂದ, ಈ ಕ್ಷೇತ್ರ ಈಗ ಕಾಂಗ್ರೆಸ್‌ನ ಭದ್ರಕೋಟೆಯಾಗಿ ಉಳಿದಿಲ್ಲ.

ಈ ಅಪಾಯದ ಬಗ್ಗೆ ಕಾಂಗ್ರೆಸ್ ಮತ್ತು ಮೈತ್ರಿಕೂಟದ ನಾಯಕರು ಎಐಸಿಸಿ ವೀಕ್ಷಕರಾದ ಮುಕುಲ್ ವಾಸ್ನಿಕ್ ಮತ್ತು ಅಜಯ್ ಮಾಕನ್ ಅವರಿಗೆ ಮಾಹಿತಿ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮುಖ್ಯಾಂಶಗಳು

- ಆಲಪ್ಪುಳ ಕ್ಷೇತ್ರದಲ್ಲಿ ಮತಬ್ಯಾಂಕ್ ಹೆಚ್ಚಿಸಿಕೊಂಡ ಬಿಜೆಪಿ
- ಟಿಕೆಟ್ ವಂಚಿತರ ಅಸಮಾಧಾನ ಭುಗಿಲೇಳುವ ಸಾಧ್ಯತೆ

‘2024ರ ಚುನಾವಣೆಯಲ್ಲಿ ಬಿಜೆಪಿ ನಾಯಕಿ ಶೋಭಾ ಸುರೇಂದ್ರನ್ ಸ್ಪರ್ಧಿಸಿದ್ದಾಗ ಪಕ್ಷವು ಶೇ 11ರಷ್ಟು ಮತಗಳನ್ನು ಪಡೆದಿತ್ತು. ಇದನ್ನು ಗಮನಿಸಿದರೆ, ಆ ಕ್ಷೇತ್ರಕ್ಕೆ ಉಪಚುನಾವಣೆ ನಡೆದರೆ ಬಿಜೆಪಿ ಗೆಲ್ಲುವ ಸಾಧ್ಯತೆ ಹೆಚ್ಚು’ ಎಂದು ಪತ್ರಕರ್ತ ಜಯಪ್ರಕಾಶ್ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಕೇರಳಂನ ಮೂರು ವಿಧಾನಸಭಾ ಕ್ಷೇತ್ರ ಮತ್ತು ತಿರುವನಂತಪುರ ಪಾಲಿಕೆ ಚುನಾವಣೆಯಲ್ಲಿನ ಗೆಲುವು ಬಿಜೆಪಿಯ ವಿಶ್ವಾಸವನ್ನು ಮತ್ತಷ್ಟು ಹೆಚ್ಚಿಸಿದೆ.

2024ರಲ್ಲಿ ಲೋಕಸಭಾ ಚುನಾವಣೆಯಲ್ಲಿ ಗೆದ್ದ ನಂತರ ವೇಣುಗೋಪಾಲ್ ಅವರಿಂದ ತೆರವಾಗಿದ್ದ ರಾಜ್ಯಸಭಾ ಸ್ಥಾನ ಬಿಜೆಪಿ ಪಾಲಾಗಿದ್ದರಿಂದ ಕಾಂಗ್ರೆಸ್ ಸಾಕಷ್ಟು ಟೀಕೆಯನ್ನು ಎದುರಿಸಿತ್ತು.

ಇದಲ್ಲದೆ, ವಿಧಾನಸಭಾ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಸಂದರ್ಭ, ಹಾಲಿ ಸಂಸದರು ಸ್ಪರ್ಧಿಸಬಾರದು ಎಂಬ ಪಕ್ಷದ ನಿಯಮ ಉಲ್ಲೇಖಿಸಿ ಅವರಿಗೆ ಟಿಕೆಟ್ ನೀಡಲು ಕಾಂಗ್ರೆಸ್ ನಿರಾಕರಿಸಿತ್ತು. ವೇಣುಗೋಪಾಲ್‌ಗೆ ವಿನಾಯಿತಿ ನೀಡಿದರೆ, ವಿಧಾನಸಭೆಗೆ ಸ್ಪರ್ಧಿಸಲು ಉತ್ಸುಕರಾಗಿದ್ದ ಸಂಸದರ ಅಸಮಾಧಾನ ಭುಗಿಲೇಳುವ ಸಾಧ್ಯತೆ ಇದೆ.

ಒಂದು ವೇಳೆ, ವಿಧಾನಸಭಾ ಉಪ ಚುನಾವಣೆ ನಡೆದರೆ, ಕಾಂಗ್ರೆಸ್‌ನ ಯಾವುದೇ ಭದ್ರಕೋಟೆಯಿಂದ ಸ್ಪರ್ಧಿಸಿ ಗೆಲ್ಲುವುದು ವೇಣುಗೋಪಾಲ್ ಅವರಿಗೆ ಕಷ್ಟವಲ್ಲದಿದ್ದರೂ, ಪಕ್ಷದೊಳಗಿನ ಒಳಜಗಳವು ಅವರ ಗೆಲುವಿನ ಅಂತರದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ.

ರಾಜ್ಯಪಾಲರ ಕ್ರಮವನ್ನು ಖಂಡಿಸಿ ಚೆನ್ನೈನಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟಿಸಿದರು ಪಿಟಿಐ ಚಿತ್ರ

ತಮಿಳುನಾಡು: ಪ್ರತಿಭಟನೆ

ಚೆನ್ನೈ (ಪಿಟಿಐ): ವಿಧಾನಸಭಾ ಚುನಾವಣೆಯಲ್ಲಿ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿದರೂ ಸರ್ಕಾರ ರಚಿಸಲು ತಮಿಳಿಗ ವೆಟ್ರಿ ಕಳಗಂ (ಟಿವಿಕೆ) ಪಕ್ಷಕ್ಕೆ ಆಹ್ವಾನ ನೀಡಲು ವಿಳಂಬ ಮಾಡಿದ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರ ಕ್ರಮವನ್ನು ಖಂಡಿಸಿ ತಮಿಳುನಾಡು ಕಾಂಗ್ರೆಸ್ ಸಮಿತಿ (ಟಿಎನ್‌ಸಿಸಿ) ಶುಕ್ರವಾರ ರಾಜ್ಯದಾದ್ಯಂತ ಪ್ರತಿಭಟನೆ ನಡೆಸಿತು.

ರಾಜಧಾನಿ ಚೆನ್ನೈನಲ್ಲಿ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡ ಎಐಸಿಸಿ ತಮಿಳುನಾಡು ಉಸ್ತುವಾರಿ ಗಿರೀಶ್ ಚೋಡಂಕರ್ ಮತ್ತು ಟಿಎನ್‌ಸಿಸಿ ಅಧ್ಯಕ್ಷ ಕೆ.ಸೆಲ್ವಪೆರುಂದಗೈ ಅವರು, ಲೋಕ ಭವನವು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಕೈಗೊಂಬೆಯಂತೆ ವರ್ತಿಸಿ ಪ್ರಜಾಪ್ರಭುತ್ವದ ನಿಯಮಗಳನ್ನು ಬುಡಮೇಲು ಮಾಡುತ್ತಿದೆ ಎಂದು ಆರೋಪಿಸಿದರು.

ಪ್ರತಿಭಟನಾ ಸ್ಥಳದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಚೋಡಂಕರ್, ಸರ್ಕಾರ ರಚನೆಯಲ್ಲಿ ರಾಜ್ಯಪಾಲರು ವಿಳಂಬ ಧೋರಣೆ ಅನುಸರಿಸುತ್ತಿರುವುದಕ್ಕೆ ತೀವ್ರ ವಾಗ್ದಾಳಿ ನಡೆಸಿದರು. ‘ರಾಜ್ಯಪಾಲರಿಗೆ ಒಂದು ನಿರ್ದಿಷ್ಟ ಕೆಲಸ ವಹಿಸಿಕೊಡಲಾಗಿದೆ. ಆದರೆ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಸೂಚನೆಯನ್ನು ಅನುಸರಿಸುತ್ತಿದ್ದಾರೆ’ ಎಂದು ಟೀಕಿಸಿದರು.

ಡಿಎಂಕೆ ಮತ್ತು ಎಐಎಡಿಎಂಕೆ ಜತೆಯಾಗಿ ಸರ್ಕಾರ ರಚಿಸಲು ಸಿದ್ಧತೆ ನಡೆಸಿರುವ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಅವರು ಜತೆಯಾಗುವುದನ್ನು ನೋಡೋಣ. ತಮಿಳುನಾಡಿನ ಜನರ ಮುಂದೆ ಅವರ ನಿಜ ಬಣ್ಣ ಬಯಲಾಗಲಿ’ ಎಂದರು.

ಟಿವಿಕೆ ಬೆಂಬಲಿಗರ ಪ್ರತಿಭಟನೆ: ತಮಿಳುನಾಡಿನಲ್ಲಿ ಸರ್ಕಾರ ರಚನೆಗೆ ಸಂಬಂಧಿಸಿದಂತೆ ಅನಿಶ್ಚಿತತೆ ಮುಂದುವರಿದಿರುವ ನಡುವೆಯೇ ಟಿವಿಕೆ ಪಕ್ಷದ ಕಾರ್ಯಕರ್ತರು ಶುಕ್ರವಾರ ಲೋಕ ಭವನದ ಮುಂಭಾಗ ಪ್ರತಿಭಟನೆ ನಡೆಸಿದರು. ಅದೇ ರೀತಿ, ವಿಜಯ್ ಅವರಿಗೆ ಬೆಂಬಲ ಸೂಚಿಸಿ ಅವರ ಮನೆಯ ಮುಂದೆ ನೂರಾರು ಕಾರ್ಯಕರ್ತರು ಸೇರಿದರು. ಜನರನ್ನು ನಿಯಂತ್ರಿಸಲು ಪೊಲೀಸರು ಮತ್ತು ಖಾಸಗಿ ಭದ್ರತಾ ಸಿಬ್ಬಂದಿ ಹರಸಾಹಸಪಟ್ಟರು.

ಪಶ್ಚಿಮ ಬಂಗಾಳದ 9ನೇ, ಬಿಜೆಪಿಯ ಮೊದಲ ಮುಖ್ಯಮಂತ್ರಿಯಾಗಿ ಇಂದು ಪ್ರಮಾಣ

ಮಮತಾಗೆ ರಾಜಕೀಯ ಆಘಾತ ನೀಡಿದ್ದ ಸುವೇಂದು

ಕೋಲ್ಕತ್ತ (ಪಿಟಿಐ): ಸುವೇಂದು ಅಧಿಕಾರಿ ಅವರು ಬಂಗಾಳ ರಾಜಕೀಯ ಮುನ್ನೆಲೆಗೆ ಬಂದಿದ್ದು ಕಳೆದ ಐದು ವರ್ಷಗಳಲ್ಲಿ. ಈ ಅಲ್ಪಾವಧಿಯಲ್ಲೇ ಅವರು ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಅವರಿಗೆ ಎರಡು ದೊಡ್ಡ ರಾಜಕೀಯ ಆಘಾತಗಳನ್ನು ನೀಡಿದ್ದಾರೆ.

ಮೊದಲನೆಯದು 2021ರ ವಿಧಾನಸಭಾ ಚುನಾವಣೆಯಲ್ಲಿ ನಂದಿಗ್ರಾಮ ಕ್ಷೇತ್ರದಲ್ಲಿ ಅವರ ವಿರುದ್ಧದ ಗೆಲುವು. ಎರಡನೆಯದು ಬ್ಯಾನರ್ಜಿಯವರ ‘ಅಜೇಯ ಕೋಟೆ’ ಎಂದೇ ಹೆಸರಾದ ಭವಾನಿಪುರದಲ್ಲಿ 2026ರ ವಿಧಾನಸಭಾ ಚುನಾವಣೆಯಲ್ಲಿನ ಗೆಲುವು. ಈ ಎರಡು ಗೆಲುವುಗಳು ಅಧಿಕಾರಿ ಅವರ ರಾಜಕೀಯ ಪಯಣದ ಪಥವನ್ನೇ ಬದಲಿಸಿದೆ.

ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯ ನೂತನ ಸರ್ಕಾರದ ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕಾಗಿ ಬಂಕುರದಲ್ಲಿ ಲಡ್ಡುಗಳನ್ನು ಶುಕ್ರವಾರ ತಯಾರಿಸಲಾಯಿತು ಪಿಟಿಐ ಚಿತ್ರ

ಸುವೇಂದು ಅವರ ಗೆಲುವನ್ನು ಬಂಗಾಳದಲ್ಲಿ ಮಮತಾ (ಟಿಎಂಸಿ) ವಿರುದ್ಧದ ಬಿಜೆಪಿಯ ಗೆಲುವು ಎಂದೇ ವಿಶ್ಲೇಷಿಸಲಾಗುತ್ತಿದೆ. ಮುಖ್ಯಮಂತ್ರಿ ಹುದ್ದೆಗೇರುವ ಮೂಲಕ ಬಂಗಾಳದಲ್ಲಿ ಬಿಜೆಪಿ ಯುಗಾರಂಭದ ಪ್ರಾಥಮಿಕ ಶಿಲ್ಪಿಗಳಲ್ಲಿ ಒಬ್ಬರಾಗಿಯೂ ಸುವೇಂದು ಗುರುತಿಸಿಕೊಳ್ಳಲಿದ್ದಾರೆ.

ಕಳೆದ ಐದು ವರ್ಷಗಳಲ್ಲಿ ವಿರೋಧ ಪಕ್ಷದ ಮುಖಂಡರಾಗಿದ್ದುಕೊಂಡು ಅಧಿಕಾರಿ ಅವರು, ಮಮತಾ ಬ್ಯಾನರ್ಜಿ ಆಡಳಿತಕ್ಕೆ ಬಹುದೊಡ್ಡ ರಾಜಕೀಯ ಸವಾಲಾಗಿ ಹೊರಹೊಮ್ಮಿದ್ದರು. ತೀವ್ರವಾದ ಶಾಸಕಾಂಗ ಹೋರಾಟಗಳಿಂದ ಹಿಡಿದು ವಿಧಾನಸಭೆ ಆವರಣದಲ್ಲಿ ನಡೆದ ಪ್ರತಿಭಟನೆವರೆಗೆ ಮುಂಚೂಣಿಯಲ್ಲಿ ನಿಂತ ಅವರು, ಅಂತಿಮವಾಗಿ ದೀದಿಯ ಕೈಯಿಂದ ಅಧಿಕಾರ ಕೈಜಾರಿ ಹೋಗುವಂತೆ ನೋಡಿಕೊಂಡರು.

2021ರ ವಿಧಾನಸಭಾ ಚುನಾವಣೆಯ ನಂತರದ ಸರ್ಕಾರ ವಿರುದ್ಧ ನಡೆದ ರ್‍ಯಾಲಿ, ಪ್ರತಿಭಟನೆ, ಚಳವಳಿ ಮೂಲಕ ಅಧಿಕಾರಿಯು, ಟಿಎಂಸಿ ವಿರುದ್ಧದ ಬಿಜೆಪಿಯ ರಾಜಕೀಯ ದಾಳಿಯ ಕೇಂದ್ರಸ್ಥಾನದಲ್ಲಿ ನಿಂತರು. ಶಾಲಾ ಸೇವಾ ಆಯೋಗ (ಎಸ್‌ಎಸ್‌ಸಿ) ನೇಮಕಾತಿ ಹಗರಣದ ವಿರುದ್ಧದ ಪ್ರತಿಭಟನೆಯ ನಾಯಕತ್ವವನ್ನು ವಹಿಸಿಕೊಂಡರು. ಬಂಗಾಳ ರಾಜಕೀಯದ ಉದ್ವಿಗ್ನ ಪರಿಸ್ಥಿತಿಗಳಲ್ಲಿ ಅಧಿಕಾರಿಯು ಬಿಜೆಪಿಯ ಪ್ರಮುಖ ಶಕ್ತಿಯಾಗಿ ಹೊರಹೊಮ್ಮಿದರು. ಚುನಾವಣಾ ಪೂರ್ವದಲ್ಲಿ, ಆರ್.ಜಿ.ಕರ್ ಅತ್ಯಾಚಾರ ಪ್ರಕರಣದಲ್ಲಿ ಕಠಿಣ ಕ್ರಮ ಕೈಗೊಳ್ಳುವಲ್ಲಿ ಟಿಎಂಸಿ ವಿಫಲವಾಗಿದ್ದನ್ನು ಅಧಿಕಾರಿಯು, ಜನಾಕ್ರೋಶದ ಚಳವಳಿಯನ್ನಾಗಿ ರೂಪಿಸಿದರು. ಟಿಎಂಸಿ ಸೋಲಿನಲ್ಲಿ ಈ ಅಂಶವೂ ಪ್ರಮುಖ ಕಾರಣವಾಗಿದೆ.

‘ಬಂಗಾಳದಲ್ಲಿ ಬಿಜೆಪಿಯ ಮುಂದಿನ ಮುಖ್ಯಮಂತ್ರಿ ಈ ಮಣ್ಣಿನ ಮಗನಾಗಿರುತ್ತಾನೆ, ಇದೇ ರಾಜ್ಯದಲ್ಲಿ ಹುಟ್ಟಿ, ಇಲ್ಲಿನ ಸಂಸ್ಕೃತಿಯಿಂದ ರೂಪುಗೊಂಡ ಬಂಗಾಳಿ ಭಾಷಿಕನಾಗಿರುತ್ತಾನೆ’ ಎಂದು ಚುನಾವಣಾ ಪ್ರಚಾರ ಸಂದರ್ಭದಲ್ಲಿ ಅಮಿತ್ ಶಾ ಹೇಳಿದ್ದರು. ಸುವೇಂದು ಅಧಿಕಾರಿ ಇದನ್ನು ಸಾಕಾರಗೊಳಿಸಿದ್ದಾರೆ.

ಶಿಕ್ಷಣ, ರಾಜಕೀಯ ಹಾದಿ

ಪೂರ್ವ ಮೇದಿನಿಪುರ ಜಿಲ್ಲೆಯ ಕಾರ್ಕುಲಿ ಗ್ರಾಮದಲ್ಲಿ ರಾಜಕಾರಣಿ ಸಿಸಿರ್ ಅಧಿಕಾರಿ ಮತ್ತು ಗಾಯತ್ರಿ ಅಧಿಕಾರಿಯ ಪುತ್ರನಾಗಿ ಸುವೇಂದು ಜನಿಸಿದರು. ಕಾಂಟೈನಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಮೇದಿನಿಪುರದ ಪ್ರಭಾತ್ ಕುಮಾರ್ ಮಹಾವಿದ್ಯಾಲಯದಿಂದ ಪದವಿ ಹಾಗೂ ಕೋಲ್ಕತ್ತದ ರವೀಂದ್ರನಾಥ ಭಾರತಿ ವಿಶ್ವವಿದ್ಯಾಲಯದಿಂದ ಇತಿಹಾಸದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ.

1998ರಿಂದ 2020ರವರೆಗೆ ಟಿಎಂಸಿ ಸದಸ್ಯರಾಗಿದ್ದ ಸುವೇಂದು ಮಮತಾ ಬ್ಯಾನರ್ಜಿ ಸಂಪುಟದಲ್ಲಿ 2016ರಿಂದ 2020ರ ಅವಧಿಯಲ್ಲಿ ಸಾರಿಗೆ ಮತ್ತು ಪರಿಸರ ಖಾತೆ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ. ಇದಕ್ಕೂ ಮುನ್ನ 2009ರಿಂದ 2016ರವರೆಗೆ ಅವರು (ತಮ್ಲುಕ್ ಕ್ಷೇತ್ರ) ಸಂಸದರಾಗಿದ್ದರು. ಭಾರತೀಯ ಸೆಣಬು ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಟಿಎಂಸಿ ಸೇರುವ ಮುನ್ನ 1995ರಿಂದ 1998ರವರೆಗೆ ಕಾಂಗ್ರೆಸ್ ಸದಸ್ಯರಾಗಿದ್ದರು. ಸುವೇಂದು ಅವಿವಾಹಿತರು.

ರಾಜ್ಯಪಾಲರನ್ನು ಭೇಟಿಯಾದ ಅಧಿಕಾರಿ

ಪಶ್ಚಿಮ ಬಂಗಾಳದ ಬಿಜೆಪಿ ಶಾಸಕಾಂಗ ಪಕ್ಷದ ಮುಖಂಡನಾಗಿ ಆಯ್ಕೆಯಾದ ಸುವೇಂದು ಅಧಿಕಾರಿ ಅವರು ಶುಕ್ರವಾರ ಸಂಜೆ ಲೋಕಭವನದಲ್ಲಿ ರಾಜ್ಯಪಾಲ ಆರ್.ಎನ್. ರವಿ ಅವರನ್ನು ಭೇಟಿಯಾಗಿ ಬಂಗಾಳದಲ್ಲಿ ಮೊದಲ ಬಿಜೆಪಿ ಸರ್ಕಾರ ರಚನೆಗೆ ಅವಕಾಶ ಕೋರಿದರು.

ಬಿಜೆಪಿ ಬಂಗಾಳ ರಾಜ್ಯ ಘಟಕದ ದಿಲೀಪ್ ಘೋಷ್, ಲಾಕೆಟ್ ಚಟರ್ಜಿ, ತಪಸ್ ರಾಯ್ ಮತ್ತಿತರರು ಜತೆಗಿದ್ದರು. ರಾಜ್ಯಪಾಲರ ಭೇಟಿಗೆ ಮುನ್ನ ಸುವೇಂದು ಮತ್ತು ಪಕ್ಷದ ಮುಖಂಡರ ಜತೆಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಎರಡು ಗಂಟೆ ಸುದೀರ್ಘ ಸಭೆ ನಡೆಸಿದರು.

ವಿಧಾನಸಭೆಯ 294 ಸ್ಥಾನಗಳಲ್ಲಿ ಬಿಜೆಪಿ 207 ಸ್ಥಾನಗಳಲ್ಲಿ, ಟಿಎಂಸಿ 80 ಸ್ಥಾನಗಳಲ್ಲಿ ಗೆಲುವು ಗಳಿಸಿದೆ.

ಬ್ರಿಗೇಡ್ ಪರೇಡ್ ಮೈದಾನದಲ್ಲಿ ಶನಿವಾರ ನಡೆಯುವ ಕಾರ್ಯಕ್ರಮದಲ್ಲಿ ಸುವೇಂದು ಅಧಿಕಾರಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ, ಬಿಜೆಪಿಯ 20 ಮುಖ್ಯಮಂತ್ರಿಗಳು ಪ್ರಮಾಣ ವಚನ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಜಾನುವಾರು ಕಳ್ಳಸಾಗಣೆ ಅಸಾಧ್ಯ: ಶಾ

‘ಬಂಗಾಳದಲ್ಲಿ ಇನ್ನು ಮುಂದೆ ಒಳನುಸುಳುವಿಕೆ, ಜಾನುವಾರು ಕಳ್ಳಸಾಗಣೆ ಅಸಾಧ್ಯ’ ಎಂದು ಕೇಂದ್ರ ಗೃಹಸಚಿವ ಅಮಿತ್ ಶಾ ಶುಕ್ರವಾರ ಇಲ್ಲಿ ಹೇಳಿದರು.

‘ಬಂಗಾಳದಲ್ಲಿ ಬಿಜೆಪಿಗೆ ದೊರೆತಿರುವ ಜನಾದೇಶವು ಗೆಲುವಷ್ಟೇ ಅಲ್ಲ. ರಾಷ್ಟ್ರೀಯ ಭದ್ರತೆ ಮತ್ತು ಪ್ರಜಾಪ್ರಭುತ್ವದ ಮರುಸ್ಥಾಪನೆ’ ಎಂದು ಬಣ್ಣಿಸಿದರು.

ವಿಜಯ್‌ಗಿಲ್ಲ ರಾಜ್ಯಪಾಲರ ಆಹ್ವಾನ

ಒಂದನೇ ಪುಟದಿಂದ...

ಇದೀಗ ತಲಾ ಎರಡು ಸ್ಥಾನಗಳನ್ನು ಗೆದ್ದಿರುವ ಸಿಪಿಎಂ ಮತ್ತು ಸಿಪಿಐನ ಬೆಂಬಲದೊಂದಿಗೆ ಟಿವಿಕೆಯ ಬಲ 116ಕ್ಕೆ ಏರಿಕೆಯಾಗಿದೆ. ಬಹುಮತಕ್ಕೆ ಇನ್ನೆರಡು ಸ್ಥಾನಗಳು ಬೇಕಿದ್ದು, ವಿಸಿಕೆಯ ಬೆಂಬಲ ದೊರೆತರೆ ವಿಜಯ್ ಅವರಿಗೆ ಸರ್ಕಾರ ರಚಿಸಲು ಸಾಧ್ಯವಾಗಲಿದೆ.

ಎರಡು ಸ್ಥಾನ ಜಯಿಸಿರುವ ವಿಸಿಕೆ, ಟಿವಿಕೆಗೆ ಬೆಂಬಲ ನೀಡುವ ಕುರಿತು ಯಾವುದೇ ಅಧಿಕೃತ ಘೋಷಣೆ ಮಾಡಿಲ್ಲ. ಆದರೆ ಪಕ್ಷದ ಮುಖ್ಯಸ್ಥ ತೊಲ್ ತಿರುಮಾವಳವನ್ ಅವರು, ‘ಎಡಪಕ್ಷಗಳು ಅನುಸರಿಸುವ ಮಾರ್ಗವನ್ನು ವಿಸಿಕೆ ಅನುಸರಿಸಲಿದೆ’ ಎಂದು ಹಲವು ಬಾರಿ ಹೇಳಿದ್ದಾರೆ. ವಿಸಿಕೆ ತನ್ನ ನಿಲುವನ್ನು ಶನಿವಾರ ಅಧಿಕೃತವಾಗಿ ಪ್ರಕಟಿಸಲಿದೆ.

‘ತನ್ನ ಇಬ್ಬರು ಶಾಸಕರು ಸರ್ಕಾರ ರಚನೆಗಾಗಿ ನಡೆಯುವ ಉಪಕ್ರಮಗಳನ್ನು ಬೆಂಬಲಿಸಲಿದ್ದಾರೆ’ ಎಂದು ಐಯುಎಂಎಲ್ ಮುಖಂಡ ಖಾದರ್ ಮೊಹಿದ್ದೀನ್ ಹೇಳಿದ್ದಾರೆ.

ಸರ್ಕಾರ ರಚನೆಗೆ ಈ ಹಿಂದೆಯೇ ಹಕ್ಕು ಮಂಡಿಸಿದ್ದ ವಿಜಯ್ ಅವರು ಶುಕ್ರವಾರ ಲೋಕ ಭವನಕ್ಕೆ ಭೇಟಿ ನೀಡಿ ರಾಜ್ಯಪಾಲರ ಜತೆ ಕೆಲಹೊತ್ತು ಮಾತನಾಡಿದರು ಎಂದು ಮೂಲಗಳು ತಿಳಿಸಿವೆ. ಶನಿವಾರ ಪ್ರಮಾಣ ವಚನ ಸ್ವೀಕರಿಸುವ ಬಗ್ಗೆ ಲೋಕ ಭವನ ಅಥವಾ ಟಿವಿಕೆ ಅಧಿಕೃತ ಹೇಳಿಕೆ ನೀಡಿಲ್ಲ.

ಬಿಜೆಪಿ ದೂರವಿಡುವ ಗುರಿ: ಜಂಟಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಸಿಪಿಎಂ ರಾಜ್ಯ ಕಾರ್ಯದರ್ಶಿ ಪಿ. ಷಣ್ಮುಗಂ ಮತ್ತು ಸಿಪಿಐ ರಾಜ್ಯ ಕಾರ್ಯದರ್ಶಿ ಎಂ. ವೀರಪಾಂಡ್ಯನ್ ಅವರು ಟಿವಿಕೆಗೆ ಬೆಂಬಲ ಘೋಷಿಸಿದರು.

ತಮಿಳುನಾಡಿಗೆ ಬಿಜೆಪಿಯ ‘ಹಿಂಬಾಗಿಲ ಪ್ರವೇಶ’ವನ್ನು ತಡೆಯಲು ಟಿವಿಕೆಯನ್ನು ಬೆಂಬಲಿಸುವ ನಿರ್ಧಾರ ತೆಗೆದುಕೊಳ್ಳಲಾಯಿತು. ಚುನಾವಣೆಯಲ್ಲಿ ಸೋತರೂ ರಾಜ್ಯಪಾಲರ ಮೂಲಕ ರಾಜ್ಯವನ್ನು ಆಳುವ ಪ್ರಯತ್ನಕ್ಕೆ ಬಿಜೆಪಿ ಯತ್ನಿಸಿದ್ದು, ಅದನ್ನು ತಡೆಯುವುದು ನಮ್ಮ ಉದ್ದೇಶವಾಗಿತ್ತು ಎಂದು ಷಣ್ಮುಗಂ ಹೇಳಿದ್ದಾರೆ.

‘10 ದಿನಗಳಲ್ಲಿ ಯಾವುದೇ ಸರ್ಕಾರ ರಚನೆಯಾಗದಿದ್ದರೆ, ರಾಜ್ಯಪಾಲರ ಆಡಳಿತವನ್ನು ಹೇರುವುದಕ್ಕೆ ಹಾದಿಯೊದಗಿಸಬಹುದು. ಟಿವಿಕೆಗೆ ಬೆಂಬಲ ನೀಡಿದರೂ ಎಡಪಕ್ಷಗಳು ಡಿಎಂಕೆಯೊಂದಿಗಿನ ಮೈತ್ರಿಯನ್ನು ಮುಂದುವರಿಸುತ್ತವೆ’ ಎಂದು ಸ್ಪಷ್ಟಪಡಿಸಿದರು.

ಕಾಂಗ್ರೆಸ್‌ಗೆ ಎರಡು ಸಚಿವ ಸ್ಥಾನ: ಕಾಂಗ್ರೆಸ್ ಪಕ್ಷವು ಟಿವಿಕೆ ಸರ್ಕಾರದ ಭಾಗವಾಗಲಿದೆ ಎಂದು ತಮಿಳುನಾಡು ಕಾಂಗ್ರೆಸ್ ಸಮಿತಿ (ಟಿಎನ್‌ಸಿಸಿ) ಅಧ್ಯಕ್ಷ ಕೆ.ಸೆಲ್ವಪೆರುಂದಗೈ ಹೇಳಿದ್ದಾರೆ. ಎರಡು ಸಚಿವ ಸ್ಥಾನಗಳು ಮತ್ತು ಒಂದು ರಾಜ್ಯಸಭಾ ಸ್ಥಾನ ಕಾಂಗ್ರೆಸ್‌ಗೆ ಸಿಗಲಿದೆ ಎಂದಿದ್ದಾರೆ.



ತಿರುವನಂತಪುರದ ಕಾಂಗ್ರೆಸ್ ಕಚೇರಿ ಸಮೀಪ ಕೆ.ಸಿ. ವೇಣುಗೋಪಾಲ್ ಹಾಗೂ ವಿ.ಡಿ. ಸತೀಶನ್ ಅವರ ಭಾವಚಿತ್ರವಿರುವ ಫ್ಲೆಕ್ಸ್‌ಗಳನ್ನು ಹಾಕಲಾಗಿದೆ ಪಿಟಿಐ ಚಿತ್ರ

ಕೇರಳಂ ಸಿ.ಎಂ ಆಯ್ಕೆ: ಖರ್ಗೆಗೆ ವರದಿ ಸಲ್ಲಿಕೆ

ಒಂದನೇ ಪುಟದಿಂದ...

ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡುವುದಕ್ಕೆ ಪಕ್ಷದ ಬಹುಪಾಲು ಶಾಸಕರು ಬೆಂಬಲ ಸೂಚಿಸಿದ್ದಾರೆ. ಆದರೆ, ಈ ಹಿಂದೆ ಕೇರಳಂ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದ ವಿ.ಡಿ. ಸತೀಶನ್ ಅವರನ್ನು ಜನರು ಬೆಂಬಲಿಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕೆ.ಸಿ. ವೇಣುಗೋಪಾಲ್, ಸತೀಶನ್ ಹಾಗೂ ರಮೇಶ್ ಚೆನ್ನಿತ್ತಲ ಅವರು ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಗಳು. ಅಂತಿಮ ನಿರ್ಧಾರ ತೆಗೆದುಕೊಳ್ಳುವ ಮೊದಲು ಖರ್ಗೆ ಅವರು ಈ ಮೂವರು ಆಕಾಂಕ್ಷಿಗಳನ್ನು ಮಾತುಕತೆಗಾಗಿ ಕರೆದಿದ್ದಾರೆ.

ವೇಣುಗೋಪಾಲ್ ಅವರು ಮುಖ್ಯಮಂತ್ರಿ ಹುದ್ದೆ ವಹಿಸಿಕೊಳ್ಳಲು ಉತ್ಸುಕರಾಗಿದ್ದಾರೆ. ಇದಕ್ಕಾಗಿ ಪಕ್ಷದ ಹೈಕಮಾಂಡ್ ಮೇಲೆ ತಮ್ಮ ಪ್ರಭಾವ ಬಳಸುತ್ತಿದ್ದಾರೆ. ರಾಹುಲ್ ಗಾಂಧಿ ಅವರಿಗೆ ಹತ್ತಿರವಾಗಿರುವುದು ಸಹ ಅವರಿಗೆ ಅನುಕೂಲವಾಗಬಹುದು ಎಂದು ಮೂಲಗಳು ತಿಳಿಸಿವೆ.

ಸುವೇಂದು ಆಪ್ತ ಚಂದ್ರನಾಥ್ ರಥ್ ಹತ್ಯೆ ಪ್ರಕರಣ

ಗಡಿ ಜಿಲ್ಲೆಗಳಲ್ಲಿ ಕಣ್ಗಾವಲು

ಕೋಲ್ಕತ್ತ (ಪಿಟಿಐ): ಬಿಜೆಪಿ ನಾಯಕ ಸುವೇಂದು ಅಧಿಕಾರಿ ಅವರ ಆಪ್ತ ಸಹಾಯಕ ಚಂದ್ರನಾಥ್ ರಥ್ ಹತ್ಯೆ ಪ್ರಕರಣದಲ್ಲಿ ವೃತ್ತಿಪರ ಶೂಟರ್‌ಗಳು ಭಾಗಿಯಾಗಿರುವ ಬಗ್ಗೆ ತನಿಖಾಧಿಕಾರಿಗಳು ಶಂಕೆ ವ್ಯಕ್ತಪಡಿಸಿರುವುದರಿಂದ ಪಶ್ಚಿಮ ಬಂಗಾಳದ ಗಡಿ ಜಿಲ್ಲೆಗಳಲ್ಲಿ ಪೊಲೀಸರ ಕಣ್ಗಾವಲು ಹಾಗೂ ಶೋಧ ಕಾರ್ಯವನ್ನು ಹೆಚ್ಚಿಸಲಾಗಿದೆ.

ಚಂದ್ರನಾಥ್ ರಥ್

ದುಷ್ಕರ್ಮಿಗಳಿಗೆ ನೆರವು ನೀಡಿದ್ದಾರೆ ಎನ್ನಲಾದ ಸ್ಥಳೀಯ ಕಿಡಿಗೇಡಿಗಳ ಪಾತ್ರದ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಘಟನಾ ಸ್ಥಳದ ಸುತ್ತಲಿನ ಪ್ರದೇಶಗಳಲ್ಲಿ ವ್ಯಾಪಕ ಶೋಧ ಕೈಗೊಳ್ಳಲಾಗಿದ್ದು, ಜೆಸ್ಸೋರ್ ರಸ್ತೆಯಲ್ಲಿರುವ ಎಲ್ಲ ಸಿ.ಸಿ.ಟಿ.ವಿ ಕ್ಯಾಮೆರಾಗಳ ದೃಶ್ಯಾವಳಿಗಳನ್ನು ಪರಿಶೀಲಿಸುವ ಕಾರ್ಯ ನಡೆದಿದೆ.

‘ಪ್ರಕರಣದ ಬಗ್ಗೆ ಎಲ್ಲ ಆಯಾಮಗಳಲ್ಲೂ ತನಿಖೆ ನಡೆಸಲಾಗುತ್ತಿದೆ. ಈ ದಾಳಿಯ ವಿಧಾನವನ್ನು ಗಮನಿಸಿದರೆ ದೀರ್ಘಕಾಲದವರೆಗೆ ಸಂಚು ನಡೆಸಿರುವುದು ಹಾಗೂ ರಾಜ್ಯದ ಹೊರಗಿನ ಸುಪಾರಿ ಹಂತಕರ ಕೈವಾಡವಿರುವ ಸಾಧ್ಯತೆಯನ್ನು ಸೂಚಿಸುತ್ತದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಬಂದೂಕುಧಾರಿಗಳು ದಾಳಿ ನಡೆಸುವ ಮುನ್ನ ರಥ್ ಅವರ ವಾಹನವನ್ನು ಹಿಂಬಾಲಿಸಿದ್ದಾರೆ. ದುಷ್ಕರ್ಮಿಗಳು ಪರಾರಿಯಾದ ಮಾರ್ಗವನ್ನು ಗಮನಿಸಿದರೆ, ಅವರಿಗೆ ಆ ಪ್ರದೇಶದ ಪರಿಚಯವಿತ್ತು ಅಥವಾ ಸ್ಥಳೀಯರು ಅವರಿಗೆ ಸಹಾಯ ಮಾಡಿರುವ ಸಾಧ್ಯತೆ ಇದೆ. ಸ್ಥಳೀಯರ ಬೆಂಬಲವಿಲ್ಲದೆ, ಅಷ್ಟು ವೇಗವಾಗಿ ಗಲ್ಲಿಗಳ ಮೂಲಕ ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ’ ಎಂದು ಹೇಳಿದ್ದಾರೆ.

‘ಕೃತ್ಯಕ್ಕೆ ಬಳಸಿದ ಮೋಟಾರ್ ಸೈಕಲ್ ಅನ್ನು 2012ರಲ್ಲಿ ಅಸನ್ಸೋಲ್‌ನ ಬರ್ನ್‌ಪುರ ನಿವಾಸಿಯೊಬ್ಬರ ಹೆಸರಿನಲ್ಲಿ ನೋಂದಾಯಿಸಲಾಗಿದೆ. ಆದರೆ, ವಾಹನ ನೋಂದಣಿ ವೇಳೆ ನೀಡಿರುವ ವಿಳಾಸದಲ್ಲಿ ಪ್ರಸ್ತುತ ಆ ಹೆಸರಿನ ಯಾವುದೇ ವ್ಯಕ್ತಿ ವಾಸಿಸುತ್ತಿಲ್ಲ’ ಎಂದು ಮಾಹಿತಿ ನೀಡಿದ್ದಾರೆ.

ಬುಧವಾರ ರಾತ್ರಿ ಕೊಲೆ ನಡೆದಾಗಿನಿಂದ ಆ ಪ್ರದೇಶದಲ್ಲಿ ಭಾರಿ ಪ್ರಮಾಣದಲ್ಲಿ ಪೊಲೀಸ್ ಮತ್ತು ಕೇಂದ್ರ ಪಡೆಗಳನ್ನು ನಿಯೋಜಿಸಲಾಗಿದೆ.

ಭಾರತದ ಪ್ರತಿ ಭಾಗವೂ ಪವಿತ್ರ: ಮೋದಿ

ನವದೆಹಲಿ (ಪಿಟಿಐ): ‘ಭಾರತದ ಪ್ರತಿಯೊಂದು ಭಾಗವು ಪವಿತ್ರವಾದುದು’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಉಲ್ಲೇಖಿಸಿದ್ದಾರೆ.

ಸೋಮನಾಥ ದೇಗುಲವು ಜೀರ್ಣೋದ್ಧಾರಗೊಂಡು ಭಕ್ತರಿಗೆ ದರ್ಶನ ನೀಡಲಿಕ್ಕಾಗಿ ಪುನರಾರಂಭಗೊಂಡ 75ನೇ ವಾರ್ಷಿಕೋತ್ಸವದ (ಮೇ 11) ಅಂಗವಾಗಿ ಬರೆದಿರುವ ಲೇಖನದಲ್ಲಿ ಪ್ರಧಾನಿಯು ತಮ್ಮ ಅಭಿಪ್ರಾಯವನ್ನು ದಾಖಲಿಸಿದ್ದಾರೆ.

‘ಭೌಗೋಳಿಕತೆಯನ್ನು ಮೀರಿದ ಏಕತೆಯ ಪ್ರಜ್ಞೆಯಿಂದ ಭಾರತ ಒಂದಾಗಿದೆ’ ಎಂದಿರುವ ಮೋದಿ, ‘ವಿಭಜನೆಗಳಿಂದ ಗುರುತಿಸಲ್ಪಟ್ಟಿರುವ ಜಗತ್ತಿನಲ್ಲಿ, ಭಾರತದ ಏಕತೆಯ ಮನೋಭಾವವು ಎಂದಿಗಿಂತಲೂ ಇದೀಗ ಹೆಚ್ಚು ಪ್ರಸ್ತುತವಾಗಿದೆ’ ಎಂದಿದ್ದಾರೆ.



ಮೋದಿ

‘ಸೋಮನಾಥನು ತನ್ನ ಸಕಲ ವೈಭವದಲ್ಲಿ ಎತ್ತರಕ್ಕೆ ನಿಂತಿದ್ದಾನೆ. ಏಕೆಂದರೆ, ಏಕತೆ ಹಾಗೂ ನಾಗರಿಕತೆಯ ಪ್ರಜ್ಞೆಯು ಪ್ರತಿಯೊಬ್ಬ ಭಾರತೀಯನ ಹೃದಯದಲ್ಲಿ ನೆಲಸಿದೆ’ ಎಂದು ತಮ್ಮ ಲೇಖನದಲ್ಲಿ ಉಲ್ಲೇಖಿಸಿದ್ದಾರೆ.

ದೇಗುಲದ ರಕ್ಷಣೆಗಾಗಿ ಗುಜರಾತ್‌ನಲ್ಲಿ ತಮ್ಮ ಪ್ರಾಣವನ್ನೇ ಅರ್ಪಿಸಿದವರ ಹೋರಾಟ, ತ್ಯಾಗವನ್ನು ಮರೆಯಲಾಗಲ್ಲ ಎಂದಿದ್ದಾರೆ.

‘ಭಾರತೀಯರು ಸೋಮನಾಥನ ದರ್ಶನ ಪಡೆಯಬೇಕು’ ಎಂದೂ ಮನವಿ ಮಾಡಿದ್ದಾರೆ.

ಪಶ್ಚಿಮ ಬಂಗಾಳದ ಬಿಜೆಪಿಯ ಚೊಚ್ಚಲ ಸರ್ಕಾರದ ಪ್ರಮಾಣ ವಚನ ಸಮಾರಂಭವು ಕೋಲ್ಕತ್ತದ ಬ್ರಿಗೇಡ್ ಪರೇಡ್ ಮೈದಾನದಲ್ಲಿ ಶನಿವಾರ ನಡೆಯಲಿದ್ದು, ನೂರಾರು ಕಾರ್ಮಿಕರು ಅಂತಿಮ ಹಂತದ ಸಿದ್ಧತೆ ನಡೆಸಿದರು ಪಿಟಿಐ ಚಿತ್ರ

ಪಶ್ಚಿಮ ಬಂಗಾಳದ ರಾಜಕೀಯ ಹೊಸ ಮನ್ವಂತರಕ್ಕೆ ಸಾಕ್ಷಿಯಾದ ಬ್ರಿಗೇಡ್ ಪರೇಡ್ ಮೈದಾನ

ಕೆಂಬಾವುಟದಿಂದ ಕೇಸರಿ ಪಟ್ಟಾಭಿಷೇಕದವರೆಗೆ...!

ಕೋಲ್ಕತ್ತ, ಪಶ್ಚಿಮ ಬಂಗಾಳ (ಪಿಟಿಐ): ಟಿವಿ ವಾಹಿನಿಗಳ ಸ್ಟುಡಿಯೊಗಳಲ್ಲಿ ಕೂತು ಚುನಾವಣಾ ಲೆಕ್ಕಾಚಾರಗಳನ್ನು ಲೆಕ್ಕಹಾಕುವ ಪರಿಪಾಠಕ್ಕೂ ಮುನ್ನ, ಸಾಮಾಜಿಕ ಜಾಲತಾಣಗಳು ರಾಜಕೀಯ ಶಕ್ತಿ ಪ್ರದರ್ಶನಕ್ಕೂ ವೇದಿಕೆಯಾಗುವ ಮುನ್ನ, ಇಲ್ಲಿನ ಬ್ರಿಗೇಡ್ ಪರೇಡ್ ಮೈದಾನದಲ್ಲಿ ಸೇರುವ ಜನಸ್ತೋಮದ ಅಂದಾಜಿನಲ್ಲಿ ಬಂಗಾಳದ ರಾಜಕೀಯದ ಸೋಲು– ಗೆಲುವು ಅಂದಾಜಿಸಲಾಗುತ್ತಿತ್ತು.

1950ರಿಂದಲೂ ಕೋಲ್ಕತ್ತದ ಹೃದಯಭಾಗದಲ್ಲಿರುವ ವಿಶಾಲ ಮೈದಾನವು ಸೋವಿಯತ್ ಯೂನಿಯನ್ ನಾಯಕ ನಿಕಿತಾ ಕ್ರುಶ್ಚೆವ್, ಬಂಗಬಂಧು ಶೇಕ್ ಮುಜಿಬುರ್ ರೆಹಮಾನ್, ವೆನೆಜುವೆಲಾ ಅಧ್ಯಕ್ಷ ಹುಗೊ ಚೆವೆಜ್ ಅವರಂತಹ ಅಂತರರಾಷ್ಟ್ರೀಯ ನಾಯಕರು ಭಾಗವಹಿಸಿದ್ದನ್ನು ಕಂಡಿದೆ.

ಕಾರ್ಯಕ್ರಮಕ್ಕೆ ಭರ್ಜರಿ ಸಿದ್ಧತೆ

- ಮಳೆ ನಿರೋಧಕ ಟೆಂಟ್‌ಗಳ ಅಳವಡಿಕೆ
- 50 ಸಾವಿರ ಮಂದಿ ಕೂರಲು ಸೀಟು ವ್ಯವಸ್ಥೆ
- ವಿಐಪಿಗಳಿಗೆ ಪ್ರತ್ಯೇಕ ಆವರಣದ ವ್ಯವಸ್ಥೆ
- ಪ್ರಧಾನಿ ಸೇರಿದಂತೆ ಎನ್‌ಡಿಎ ರಾಜ್ಯಗಳ ಮುಖ್ಯಮಂತ್ರಿಗಳು ಭಾಗಿ
- ದಕ್ಷಿಣೇಶ್ವರ ದೇವಾಲಯ ಶೈಲಿಯ ಪ್ರವೇಶ ದ್ವಾರ
- ಸುಂದರ್‌ಬನ್ ವಿಷಯ ಆಧರಿಸಿ ಕಲಾಕೃತಿಗಳ ಅಳವಡಿಕೆ
- ಜಾಲ್‌ಮುರಿ, ರಸಗುಲ್ಲಾ ತಿಂಡಿಗಳ ಮಳಿಗೆ ಸ್ಥಾಪನೆ
- ರವೀಂದ್ರನಾಥ ಟ್ಯಾಗೋರ್, ಬಕಿಂಚಂದ್ರ ಛಟ್ಟೋಪಾಧ್ಯಾಯ, ಮಹಾತ್ಮರ ಭಾವಚಿತ್ರಗಳ ಅಳವಡಿಕೆ
- 4 ಸಾವಿರ ಪೊಲೀಸರಿಂದ ಬಂದೋಬಸ್ತ್

ಸುದೀರ್ಘ ಕಾಲ ಕೆಂಬಾವುಟದ ಹೆದ್ದೆರೆ ಕಂಡಿದ್ದ ಮೈದಾನ, ಕಳೆದೆರಡು ದಶಕದಿಂದ ಬಿಳಿ ಬಾವುಟದ ಮೇಲಿನ ತ್ರಿವರ್ಣದ ಜೋಡಿ ಹೂವಿನ ಆರ್ಭಟಕ್ಕೂ ಸಾಕ್ಷಿಯಾಗಿತ್ತು. ಬದಲಾದ ರಾಜಕೀಯದಲ್ಲಿ ಕೇಸರಿಯ ಪಟ್ಟಾಭಿಷೇಕಕ್ಕೆ ವೇದಿಕೆ ಸಿದ್ಧಗೊಂಡಿದೆ.

ಶುಕ್ರವಾರ ಬೆಳಿಗ್ಗೆಯಿಂದಲೇ ಮೈದಾನದಲ್ಲಿ ನೂರಾರು ಕಾರ್ಮಿಕರು ಮಳೆ ನಿರೋಧಕ ಹ್ಯಾಂಗರ್‌ಗಳನ್ನು ಅಳವಡಿಸುತ್ತಿದ್ದರೆ, ಪೊಲೀಸರು ಭದ್ರತಾ ಚೌಕಿಗಳನ್ನು ನಿರ್ಮಿಸಲು ಅಣಿಯಾಗುತ್ತಿದ್ದರು. ಬ್ರಿಟಿಷ್ ಆಡಳಿತದಲ್ಲಿದ್ದ ಸೇನಾ ಪರೇಡ್ ಮೈದಾನವಾಗಿ ಗುರುತಿಸಿಕೊಂಡಿದ್ದ ಜಾಗವು ಬಂಗಾಳದಲ್ಲಿ ಬದಲಾದ ಸೈದ್ಧಾಂತಿಕ ರಾಜಕೀಯ ಐತಿಹಾಸಿಕ ಕ್ಷಣಕ್ಕೆ ಅಣಿಯಾಗಿದೆ.

ಎಡರಂಗದ ಶಕ್ತಿಯನ್ನು ಪ್ರತಿನಿಧಿಸುತ್ತಿದ್ದ ಬ್ರಿಗೇಡ್ ಮೈದಾನದಲ್ಲಿ ಕಾಂಗ್ರೆಸ್ ವಿರೋಧಿ ಹಲವು ಹೋರಾಟಗಳಿಗೂ ಪ್ರಮುಖ ಜಾಗವಾಗಿ ಗುರುತಿಸಿಕೊಂಡಿದೆ. ನಂತರ ಮಮತಾ ಬ್ಯಾನರ್ಜಿ ಅವರ ಶಕ್ತಿ ಪ್ರದರ್ಶನ, ಬಿಜೆಪಿ ವಿರೋಧಿ ರಾಜಕೀಯ ವೇದಿಕೆಯಾಗಿ ರಾಷ್ಟ್ರ ಮಟ್ಟದಲ್ಲಿ ಗಮನಸೆಳೆದಿತ್ತು. ಇದೀಗ, ಇದೇ ಜಾಗದಲ್ಲಿ ಬಂಗಾಳದ ಬಿಜೆಪಿಯ ಚೊಚ್ಚಲ ಸರ್ಕಾರದ ಪ್ರಮಾಣವಚನ ಕಾರ್ಯಕ್ರಮದ ವೇದಿಕೆ ಸಿದ್ಧಗೊಂಡಿದೆ.

ಬಂಗಾಳದಲ್ಲಿ ನಡೆಯುವ ಚುನಾವಣೆಯು ಅಧಿಕಾರವನ್ನು ನಿರ್ಧರಿಸಿದರೆ, ಬ್ರಿಗೇಡ್ ಮೈದಾನದಲ್ಲಿ ಸೇರುತ್ತಿದ್ದ ಜನಸ್ತೋಮವೇ ಫಲಿತಾಂಶದ ದಿಕ್ಸೂಚಿಯಾಗಿತ್ತು. ತಲೆಮಾರುಗಳಿಂದ ಐತಿಹಾಸಿಕ ವಿಕ್ಟೋರಿಯಾ ಸ್ಮಾರಕದ ಪಕ್ಕದಲ್ಲಿರುವ ಐತಿಹಾಸಿಕ ಮೈದಾನವು ರಾಜ್ಯ ರಾಜಕೀಯ ರಂಗವೇದಿಕೆಯಾಗಿ ಮಾರ್ಪಟ್ಟಿದೆ. ರಾಜಕೀಯ ಪಕ್ಷಗಳ ಸಂಘಟನಾ ಶಕ್ತಿ, ನಾಯಕರು ಸಾರ್ವಜನಿಕರ ಮನಸ್ಥಿತಿಯನ್ನು ಅರಿಯಲು ಬಳಸಿಕೊಳ್ಳುತ್ತಿದ್ದರು.

ಶನಿವಾರ ಸಂಜೆ ಬಂಗಾಳದ ಬಿಜೆಪಿಯ ನಾಯಕರು ಇದೇ ಮೈದಾನದಲ್ಲಿ ಪ್ರಮಾಣ ವಚನ ಸ್ವೀಕರಿಸಲು ಸಿದ್ಧರಾಗಿದ್ದು, ಅವರ ಬೆಂಬಲಿಗರು ಮೈದಾನದತ್ತ ಬರಲಿದ್ದಾರೆ. ಒಂದು ಕಾಲದಲ್ಲಿ ರಾಜ್ಯದಲ್ಲಿ ಅಸ್ತಿತ್ವ ಪಡೆಯಲು ಹೆಣಗಾಡುತ್ತಿದ್ದ ಬಿಜೆಪಿ, ಇದೀಗ ತನ್ನ ಚೊಚ್ಚಲ ಸರ್ಕಾರ ಪಟ್ಟಾಭಿಷೇಕ ಸಮಾರಂಭವನ್ನು ಇಲ್ಲಿಯೇ ಆಯೋಜಿಸಿದೆ. ಆ ಮೂಲಕ ಬ್ರಿಗೇಡ್ ಮೈದಾನಕ್ಕೆ ಕಿರೀಟಕ್ಕೆ ಮತ್ತೊಂದು ಅಧ್ಯಾಯ ಸೇರ್ಪಡೆಯಾಗಲಿದೆ.

ಎಸ್‌ಐಆರ್ ಪರಿಶೀಲನೆ: ಕ್ರಮಕ್ಕೆ ಆಗ್ರಹ

ಜಾತ್ಯತೀತ ಪಕ್ಷಗಳು- ಜನಪರ ಸಂಘಟನೆಗಳ ಒಕ್ಕೂಟದಿಂದ ಸಿ.ಎಂ. ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯು (ಎಸ್‌ಐಆರ್) ಮತದಾರರನ್ನು ಹೊರನೂಕುವ, ಅಪ್ರಜಾಸತ್ತಾತ್ಮಕ, ಅವೈಜ್ಞಾನಿಕ ಪ್ರಕ್ರಿಯೆ. ಈ ಪ್ರಕ್ರಿಯೆಯಿಂದ ರಾಜ್ಯದ ಮತದಾರರ ಹಕ್ಕನ್ನು ರಕ್ಷಿಸಿಕೊಳ್ಳಲು ತುರ್ತಾಗಿ ಕೆಲವು ತೀರ್ಮಾನಗಳನ್ನು ತೆಗೆದುಕೊಳ್ಳಬೇಕು ಎಂದು ಎಸ್‌ಐಆರ್ ವಿರೋಧಿ ಜಾತ್ಯತೀತ ಪಕ್ಷಗಳು-ಜನಪರ ಸಂಘಟನೆಗಳ ಒಕ್ಕೂಟದ ಮುಖಂಡರು ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಪ್ರಿಯಾಂಕ್ ಖರ್ಗೆ, ಸಂತೋಷ್ ಲಾಡ್, ಶಾಸಕ ಬಿ.ಆರ್.ಪಾಟೀಲ ಅವರೊಂದಿಗೆ ಒಕ್ಕೂಟದ ಮುಖಂಡರು ಶುಕ್ರವಾರ ಚರ್ಚೆ ನಡೆಸಿದರು.

ಕೇಂದ್ರ ಚುನಾವಣಾ ಆಯೋಗವು 2025ರ ಜೂನ್‌ನಿಂದ ಎಸ್‌ಐಆರ್ ಪರಿಚಯಿಸಿದೆ. ಸಂವಿಧಾನದ ವಿಧಿ 324ರ ಪ್ರಕಾರ ತನ್ನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಸಂಪೂರ್ಣ ವಿಫಲಗೊಂಡಿದೆ. ಎಸ್‌ಐಆರ್ ಪ್ರಕ್ರಿಯೆಯನ್ನು ಇದೇ ಸ್ವರೂಪದಲ್ಲಿ ಮುಂದುವರಿಸಲು ಸಾಧ್ಯವಿಲ್ಲ ಮತ್ತು ಕೂಡಲೇ ನಿಲ್ಲಿಸಬೇಕು. ಈವರೆಗೆ ಕೈಗೊಂಡಿರುವ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಪರಿಶೀಲಿಸಬೇಕು. ಪ್ರತಿ ಹಂತವೂ ಪಾರದರ್ಶಕವಾಗಿರುವ ರೀತಿಯಲ್ಲಿ ನಿಯಮಗಳನ್ನು ಪುನರ್ ರೂಪಿಸಿಯೇ ಜಾರಿಗೆ ತರಬೇಕು ಎಂದು ಹೋರಾಟಗಾರರು ಆಗ್ರಹಿಸಿದರು.

ಎಸ್‌ಐಆರ್ ಜಾರಿಗೆ ಬರುವುದಾದರೂ, ಪ್ರಕ್ರಿಯೆಯ ಕಾಲಾವಧಿಯನ್ನು 3 ತಿಂಗಳ ಬದಲು 6 ತಿಂಗಳಿಗೆ ವಿಸ್ತರಿಸಬೇಕು. ಮತದಾರರ ನೆರವಿಗೆ ಎಲ್ಲ ಗ್ರಾಮ ಪಂಚಾಯಿತಿ, ವಾರ್ಡ್‌ಗಳಲ್ಲಿ ಮತದಾರರ ನೆರವು ಕೇಂದ್ರ ಸ್ಥಾಪಿಸಬೇಕು. ಸೂಕ್ತ ದಾಖಲೆ ಇಲ್ಲದವರಿಗೆ ದಾಖಲೆ ಒದಗಿಸಲು ಸರ್ಕಾರ ನೆರವಾಗಬೇಕು. ಮತದಾರರ ಕರಡು ಪಟ್ಟಿ ತಯಾರಾದ ನಂತರ ಗ್ರಾಮ/ವಾರ್ಡ್ ಸಭೆಗಳನ್ನು ನಡೆಸಿ, ಕರಡು ಪಟ್ಟಿ ಮತ್ತು ತಿದ್ದುಪಡಿಗಳನ್ನು ಜನರ ಮುಂದಿಟ್ಟು, ಮುಕ್ತ ಪರಿಶೀಲನೆಗೆ ಒಳಪಡಿಸಿದ ನಂತರವೇ ಅಂತಿಮಗೊಳಿಸಬೇಕು ಎಂದು ನಿಯೋಗ ಒತ್ತಾಯಿಸಿದೆ.

ನಿಯೋಗದಲ್ಲಿ ಒಕ್ಕೂಟದ ಮುಖಂಡರಾದ ನಿವೃತ್ತ ಐಎಎಸ್ ಅಧಿಕಾರಿ ಎಸ್.ಜಿ.ದೇವಸಹಾಯಂ, ರಾಜಕೀಯ ವಿಶ್ಲೇಷಕರಾದ ಪರಕಾಲ ಪ್ರಭಾಕರ್, ನಿಖಿಲ್ ಡೆ, ಮಾಜಿ ಸಚಿವ ಮನೋ ತಂಗರಾಜ್, ಮತದಾನ ಹಕ್ಕು ಚಳವಳಿಯ ಥಾಮಸ್ ಫ್ರಾಂಕೋ, ಎದ್ದೇಳು ಕರ್ನಾಟಕದ ತಾರಾರಾವ್, ನೂರ್ ಶ್ರೀಧರ್, ಮಾಜಿ ಸಚಿವೆ ಬಿ.ಟಿ. ಲಲಿತ ನಾಯಕ್, ಹೋರಾಟಗಾರರಾದ ಎನ್.ವೆಂಕಟೇಶ್, ಯೂಸುಫ್ ಕನ್ನಿ, ಅರುಣ್ ಲೂಯಿಸ್, ಬಡಗಲಪುರ ನಾಗೇಂದ್ರ, ವಿನಯ್ ಶ್ರೀನಿವಾಸ್, ಕೆ.ವಿ. ಭಟ್, ಕೆ.ಎಲ್.ಅಶೋಕ್, ಬಿ.ಅಮ್ಜದ್, ಮಹಂತೇಶ್, ತಾಹೀರ್ ಹುಸೇನ್, ಶ್ರೀರಾಂ, ಅಬ್ದುಲ್ ಮಜೀದ್, ಅಮ್ಜದ್ ಪಾಷಾ, ಅಂಬಣ್ಣ ಆರೋಲಿಕರ್, ಮಂಜುನಾಥ್ ಇದ್ದರು.

ಎಸ್‌ಐಆರ್ ವಿರೋಧಿ ಜಾತ್ಯತೀತ ಪಕ್ಷಗಳು–ಜನಪರ ಸಂಘಟನೆಗಳ ಒಕ್ಕೂಟದ ಮುಖಂಡರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು

ಕೆಪಿಸಿಸಿ ಒಬಿಸಿ ಘಟಕದ ಅಧ್ಯಕ್ಷರಾಗಿ ಡಿ.ಟಿ. ಶ್ರೀನಿವಾಸ್ ನೇಮಕ

ಪ್ರಜಾವಾಣಿ ವಾರ್ತೆ

ಡಿ.ಟಿ. ಶ್ರೀನಿವಾಸ್

ಬೆಂಗಳೂರು: ಕೆಪಿಸಿಸಿ ಇತರ ಹಿಂದುಳಿದ ವರ್ಗಗಳ (ಒಬಿಸಿ) ವಿಭಾಗದ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ವಿಧಾನ ಪರಿಷತ್ ಸದಸ್ಯ ಡಿ.ಟಿ. ಶ್ರೀನಿವಾಸ್ ಅವರನ್ನು ನೇಮಿಸಲಾಗಿದೆ.

ಶ್ರೀನಿವಾಸ್ ಅವರನ್ನು ನೇಮಿಸುವ ಪ್ರಸ್ತಾವಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಒಪ್ಪಿಗೆ ನೀಡಿದ್ದಾರೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ತಿಳಿಸಿದ್ದಾರೆ.

ಶ್ರೀನಿವಾಸ್ ಅವರು ಬಿಜೆಪಿಯ ಮಾಜಿ ಶಾಸಕಿ ಪೂರ್ಣಿಮಾ ಅವರ ಪತಿ. ಕಳೆದ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಪೂರ್ಣಿಮಾ ಅವರು ಕಾಂಗ್ರೆಸ್ ಸೇರಿದ್ದರು. ಶ್ರೀನಿವಾಸ್ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದಾರೆ.

ಜಿಲ್ಲಾ ಶಸ್ತ್ರ ಚಿಕಿತ್ಸಕರ ಕಾರ್ಯಾಲಯ, ಸಾರ್ವಜನಿಕ ಆಸ್ಪತ್ರೆ, ಕೆ.ಜಿ.ಎಫ್, ಕೋಲಾರ ಜಿಲ್ಲೆ

ದೂರವಾಣಿ ಸಂಖ್ಯೆ: 08153–200898, e-mail:dsghkgf@gmail.com

ಸಂಖ್ಯೆ: ಸಾಆಕೆ/ಇ-ಟೆಂಡರ್/ಪಥ್ಯಾಹಾರ/02/2026-27 ದಿನಾಂಕ: 06.05.2026

ಇ-ಟೆಂಡರ್ ಪ್ರಕಟಣೆ

ಸಾರ್ವಜನಿಕ ಆಸ್ಪತ್ರೆ, ಮಹಿಳೆಯರು ಮತ್ತು ಮಕ್ಕಳ ಆಸ್ಪತ್ರೆ ಹಾಗೂ ಸಾಂಕ್ರಾಮಿಕ ರೋಗಗಳ ಆಸ್ಪತ್ರೆ, ಕೆ.ಜಿ.ಎಫ್ ಕೋಲಾರ ಜಿಲ್ಲೆ ಇಲ್ಲಿನ ಮೂರು ಆಸ್ಪತ್ರೆಗಳ ಒಳರೋಗಿಗಳಿಗೆ ಪಥ್ಯಾಹಾರ ಸಾಮಗ್ರಿ/ಸಿದ್ಧಪಡಿಸಿದ ಪಥ್ಯಾಹಾರ ಹಾಗೂ ಬ್ರೆಡ್ ಪೂರೈಕೆ ಸರಬರಾಜಿಗಾಗಿ ಕೆ.ಪಿ.ಪಿ.ಪಿ ಪೋರ್ಟಲ್ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅಧಿಸೂಚನೆಯಂತೆ ಇ-ಟೆಂಡರ್ ಕರೆಯಲು ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್ ಭಾಗವಹಿಸಲು ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/– ಜಿಲ್ಲಾ ಶಸ್ತ್ರಚಿಕಿತ್ಸಕರು, ಸಾರ್ವಜನಿಕ ಆಸ್ಪತ್ರೆ, ಕೆ.ಜಿ.ಎಫ್

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:65/ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ

ಪೊಲೀಸ್ ಅಧೀಕ್ಷಕರು, ಕರಾವಳಿ ಕಾವಲು ಪೊಲೀಸ್, ಉಡುಪಿ ಮತ್ತು ಸದಸ್ಯರು ತಾಂತ್ರಿಕ ಸಿಬ್ಬಂದಿಗಳ ನೇಮಕಾತಿ ಸಮಿತಿ.

ತಾಂತ್ರಿಕ ಸಿಬ್ಬಂದಿಗಳ ನೇಮಕಾತಿ

ಕರಾವಳಿ ಕಾವಲು ಪೊಲೀಸ್, ಉಡುಪಿ ಘಟಕದಲ್ಲಿ 5 ವರ್ಷಗಳ ಅಥವಾ 60 ವರ್ಷ ವಯಸ್ಸು ಎರಡರಲ್ಲಿ ಯಾವುದು ಮೊದಲೋ ಆ ಅವಧಿಗೆ ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡುವ ಕುರಿತು.

1. **ಬೋಟ್ ಕ್ಯಾಪ್ಟನ್**– 02 ಹುದ್ದೆ (ಪೊಲೀಸ್ ಉಪನಿರೀಕ್ಷಕರು ಹುದ್ದೆಗೆ ಸಮಾನ)
2. **ಸಹಾಯಕ ಬೋಟ್ ಕ್ಯಾಪ್ಟನ್** –10 ಹುದ್ದೆ (ಸಹಾಯಕ ಪೊಲೀಸ್ ಉಪನಿರೀಕ್ಷಕರು ಹುದ್ದೆಗೆ ಸಮಾನ)
3. **ಮೋಟಾರ್‌ಲಾಂಚ್ ಮೆಕ್ಯಾನಿಕ್**–02 ಹುದ್ದೆ (ಸಹಾಯಕ ಪೊಲೀಸ್ ಉಪನಿರೀಕ್ಷಕರು ಹುದ್ದೆಗೆ ಸಮಾನ)
4. **ಇಂಜಿನ್ ಡ್ರೈವರ್** –12 ಹುದ್ದೆ (ಪೊಲೀಸ್ ಹೆಡ್ ಕಾನ್ಸ್‌ಟೇಬಲ್ ಹುದ್ದೆಗೆ ಸಮಾನ)
5. **ಖಲಾಸಿ** – 04 ಹುದ್ದೆ (ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗೆ ಸಮಾನ)

ಒಟ್ಟು –30 ಹುದ್ದೆಗಳು

ಅರ್ಹತೆಗಳು:– ನೇವಿ/ ಕೋಸ್ಟ್ ಗಾರ್ಡ್/ ಬಿಎಸ್‌ಎಫ್ (ವಾಟರ್ ವಿಂಗ್) ನಿಂದ ನಿವೃತ್ತಿಗೊಂಡ ಅಧಿಕಾರಿಗಳು ಈ ಮೇಲಿನ ಹುದ್ದೆಗಳಿಗೆ ದಿನಾಂಕ: 06–06–2026 ಸಂಜೆ 04:30 ಗಂಟೆಯೊಳಗೆ ಅರ್ಜಿ ಸಲ್ಲಿಸಬಹುದು.

ಅರ್ಜಿ ಸಲ್ಲಿಸಲು ಸಂಬಂಧಿಸಿದ ವಯೋಮಿತಿ, ವಿದ್ಯಾರ್ಹತೆ, ಅನುಭವ ಮತ್ತು ಷರತ್ತು ಹಾಗೂ ನಿಬಂಧನೆಗಳನ್ನು ಪೊಲೀಸ್ ಅಧೀಕ್ಷಕರು, ಕರಾವಳಿ ಕಾವಲು ಪೊಲೀಸ್, ಉಡುಪಿ ಇವರಿಂದ ಕಛೇರಿ ವೇಳೆಯಲ್ಲಿ ಅಥವಾ ksp.karnataka.gov.in ವೆಬ್ ಸೈಟ್‌ನ ಮುಖಾಂತರ ಪಡೆದುಕೊಳ್ಳಬಹುದು.

ದೂರವಾಣಿ: 0820–2538120, 2538150, ಫ್ಯಾಕ್ಸ್: 2535100

ಸಹಿ/– ಪೊಲೀಸ್ ಅಧೀಕ್ಷಕರು,
ಕರಾವಳಿ ಕಾವಲು ಪೊಲೀಸ್,
ಉಡುಪಿ ಮತ್ತು ಸದಸ್ಯರು ತಾಂತ್ರಿಕ ಸಿಬ್ಬಂದಿಗಳ ನೇಮಕಾತಿ ಸಮಿತಿ

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು
ಜೆ.ಎಲ್.ಬಿ. ರಸ್ತೆ, ಮೈಸೂರು

ಸಂಖ್ಯೆ : ಮೈಅಪ್ರಾ/ವಿ.ತ–06/2026–27 ದಿನಾಂಕ : 07–05–2026

ಪ್ರಕಟಣೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯ ವತಿಯಿಂದ ಶ್ರೀ ವೆಂಕಟಪ್ಪ ರವರಿಗೆ ದಿನಾಂಕ : 19–11–1973 ರಂದು ಟಿ.ಎನ್. ಪುರ ರಸ್ತೆ, 2ನೇ ಹಂತ ಬಡಾವಣೆಯ ನಿವೇಶನ ಸಂಖ್ಯೆ : 193, ಅಳತೆ : 45*60 ಅಡಿ ಅಳತೆಯ ನಿವೇಶನವು ಮಂಜೂರಾಗಿರುತ್ತದೆ. ನಂತರ ಅಂದಿನ ಅಧ್ಯಕ್ಷರ ಆದೇಶದ ಮೇರೆಗೆ ಸದರಿ ನಿವೇಶನವನ್ನು ಶ್ರೀ ದೊಡ್ಡೇಗೌಡ ಬಿನ್ ಲೇ॥ ಚೆನ್ನೇಗೌಡ ರವರ ಹೆಸರಿಗೆ ದಿ: 28–03–1984 ರಂದು ಉತ್ತರ ಪತ್ರದ ಮೂಲಕ ವರ್ಗಾಯಿಸಿ, ದಿ: 08–06–1984 ರಂದು ಗುತ್ತಿಗೆ ಸಹಿತ ಕ್ರಯದ ಒಪ್ಪಂದ ಪತ್ರ ನೋಂದಾಯಿಸಿದ್ದು, ದಿ: 28–06–1984 ರಂದು ಸ್ವಾಧೀನ ಪತ್ರ ನೀಡಲಾಗಿರುತ್ತದೆ. ಶ್ರೀ ದೊಡ್ಡೇಗೌಡ ರವರು ಸದರಿ ನಿವೇಶನವನ್ನು ದಿ: 31–03–1995 ರಂದು ಅವರ ಮಗನಾದ ಶ್ರೀ ಡಿ. ಹೇಮಂತ್‌ಕುಮಾರ್ ರವರಿಗೆ ನೊಂದಾಯಿತವಲ್ಲದ ಹಿಂದೂ ಏಕೀ ಅವಿಭಕ್ತ ಕುಟುಂಬ ವರ್ಗ ಪಂಚಾಯಿತಿ ವಿಭಾಗ ಪತ್ರದ ಮೂಲಕ ನೀಡಿರುತ್ತಾರೆ. ಶ್ರೀ ದೊಡ್ಡೇಗೌಡರವರು ದಿ: 09–01–2003 ರಂದು ಹಾಗೂ ಇವರ ಮಗ ಶ್ರೀ ಡಿ. ಹೇಮಂತ್ ಕುಮಾರ್ ರವರು ದಿ: 16–01–2019 ರಂದು ಮರಣ ಹೊಂದಿರುವುದಾಗಿ ಮರಣ ಪ್ರಮಾಣ ಸಲ್ಲಿಸಿರುತ್ತಾರೆ. ಪೌತಿದಾರರ ಕುಟುಂಬ ಜೀವಂತ ಸದಸ್ಯರ ಪತ್ರ ಸಂಖ್ಯೆ : RD5018882594453 ರಂತೆ ಲೇ॥ ದೊಡ್ಡೇಗೌಡ ರವರ ಪತ್ನಿ ಶ್ರೀಮತಿ ಚಿಕ್ಕ ತಾಯಮ್ಮ, ರವರ ಮಕ್ಕಳಾದ ಶ್ರೀಮತಿ ಪುಷ್ಪಲತ ಡಿ., ಶ್ರೀ ಪ್ರಕಾಶ್ ಡಿ. ಮತ್ತು ಶ್ರೀಮತಿ ಚಂದ್ರಕಲಾ ಡಿ. ರವರುಗಳು ಲೇ॥ ಡಿ. ಹೇಮಂತ್ ಕುಮಾರ್ ರವರ ಪತ್ನಿ ಶ್ರೀಮತಿ ಎಂ.ಎ. ರೇಣುಕಾ ರವರಿಗೆ 1ನೇ ಪುಸ್ತಕದ ದಸ್ತಾವೇಜು ನಂಬರ್ ಎಂವೈಇ–1–11908–2021–22 ಆಗಿ ದಿ: 18–02–2022 ರಂದು ನೊಂದಾಯಿತ ಹಕ್ಕು ಖುಲಾಸೆ ಪತ್ರ ನೀಡಿರುತ್ತಾರೆ. ಲೇ॥ ಡಿ. ಹೇಮಂತ್ ಕುಮಾರ್ ರವರ ಕುಟುಂಬ ಜೀವಂತ ಸದಸ್ಯರ ಪತ್ರ ಸಂಖ್ಯೆ : RD003882978861 ರಂತೆ ಪೌತಿದಾರರ ಪತ್ನಿ ಶ್ರೀಮತಿ ಎಂ.ಎ. ರೇಣುಕಾ ಹಾಗೂ ಇವರ ಮಕ್ಕಳಾದ ಶ್ರೀಮತಿ ವಂದನ ಡಿ.ಹೆಚ್. ಹಾಗೂ ಶ್ರೀ ಅರ್ಜುನ್ ಡಿ.ಹೆಚ್. ನಮೂದಿದ್ದು, ಶ್ರೀಮತಿ ಎಂ.ಎ. ರೇಣುಕಾ ಹಾಗೂ ಶ್ರೀಮತಿ ವಂದನ ಡಿ.ಹೆಚ್.ರವರುಗಳು ಶ್ರೀ ಅರ್ಜುನ್ ಡಿ.ಹೆಚ್. ರವರಿಗೆ 1ನೇ ಪುಸ್ತಕದ ದಸ್ತಾವೇಜು ನಂಬರ್ ಎಂ.ವೈಎನ್–1–06458–2025–26 ಆಗಿ ದಿ: 26–09–2025 ರಂದು ನೊಂದಾಯಿತ ಹಕ್ಕು ಖುಲಾಸೆ ಪತ್ರ ನೀಡಿರುತ್ತಾರೆ. ಅದರಂತೆ ಶ್ರೀ ಅರ್ಜುನ್ ಡಿ.ಹೆಚ್. ರವರು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ ಸದರಿ ನಿವೇಶನಕ್ಕೆ ವರ್ಗಾವಣೆ ಹಾಗೂ ಕ್ರಯಪತ್ರ ನೀಡಬೇಕೆಂದು ಕೋರಿರುತ್ತಾರೆ. ಮೇಲ್ಕಂಡ ನಿವೇಶನಕ್ಕೆ ಕ್ರಯಪತ್ರ ನೀಡುವ ಕುರಿತು ಯಾರಿಂದಾದರೂ ತಂಟೆ ತಕರಾರು ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 15 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ಆಕ್ಷೇಪಣೆ ಸಲ್ಲಿಸಬಹುದು. ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುವುದು.

ಸಹಿ/– ವಿಶೇಷ ತಹಶೀಲ್ದಾರ್
ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜನೀಯರವರ ಕಚೇರಿ, ಕನೀನಿನಿ, ಶಿಗ್ಗಾಂವ ಏತ ನೀರಾವರಿ ವಿಭಾಗ,
ಕೆ.ಸಿ.ಡಿ. ವೃತ್ತ, ಗಣಪತಿ ದೇವಸ್ಥಾನದ ಹಿಂದುಗಡೆ, ದಾಸನಕೊಪ್ಪ ಮುಖ್ಯ ರಸ್ತೆ, ಧಾರವಾಡ–580 001.
ಫೋನ: 0836–2955347 ಇ–ಮೇಲ್: eesliddwd@gmail.com

No.KNN/SLID/DWD/PB-2/Mouneshwar & Belavalkoppa/Tender/2026-27/97 Dt:08-05-2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಎರಡನೇ ಕರೆ)

ಕೆ.ಪಿ.ಪಿ.ಪೋರ್ಟಲ್ ಮುಖಾಂತರ ಮಾತ್ರ
ಉಲ್ಲೇಖ: ಈ ಕಚೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: 900
ದಿನಾಂಕ: 28.01.2026 (First call)

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ, ಶಿಗ್ಗಾಂವ ಏತ ನೀರಾವರಿ ವಿಭಾಗ ಧಾರವಾಡ ರವರು, ಅರ್ಹ ಸಿವಿಲ್ ನೋಂದಾಯಿತ ಗುತ್ತಿಗೆದಾರರಿಂದ **1)**"Improvement and Development of Belavalkoppa Tank in Belavalkoppa village of Shiggaon Taluk of Haveri district". **(Amount put to tender Rs.252.00 Lakhs)** and **2)**"Improvement and Development of Nala from Mouneshwara Temple in Hulagur village to Madapura Tank in Shiggaon Taluk Haveri District.". **(Amount put to tender Rs.417.68 Lakhs)** ದ್ವಿ–ಲಕೋಟೆ ಪದ್ಧತಿಯ ಮುಖಾಂತರ ಟೆಂಡರ್‌ನ್ನು ನಿರ್ವಹಿಸಲು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಆಹ್ವಾನಿಸಲಾಗಿದೆ. ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ **(http://kppp.karnataka.gov.in)** ಮುಖಾಂತರವೇ **ದಿನಾಂಕ: 13.05.2026 ಬೆಳಿಗ್ಗೆ 11.00** ರಿಂದ ಡೌನಲೋಡ್ ಮಾಡಿಕೊಂಡು **ದಿನಾಂಕ: 22.05.2026ರ ಸಂಜೆ 4.00 ಗಂಟೆವರೆಗೆ** ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ಪೂರ್ವಭಾವಿ ಸಭೆಯನ್ನು **ದಿನಾಂಕ 18.05.2026 ರಂದು ಬೆಳಿಗ್ಗೆ 11.00 ರಿಂದ 1.00 ಗಂಟೆಯವರೆಗೆ** ಕಾರ್ಯನಿರ್ವಾಹಕ ಇಂಜನೀಯರರು, ಕನೀನಿನಿ, ಶಿಗ್ಗಾಂವ ಏತ ನೀರಾವರಿ ವಿಭಾಗ ಧಾರವಾಡ ಇವರ ಕಚೇರಿಯಲ್ಲಿ ಜರುಗಿಸಲಾಗುವುದು. ತಾಂತ್ರಿಕ ಟೆಂಡರ್‌ಗಳನ್ನು **ದಿನಾಂಕ: 25.05.2026 ರಂದು ಬೆಳಿಗ್ಗೆ 11.00 ಗಂಟೆಗೆ** ಹಾಗೂ ಆರ್ಥಿಕ ಟೆಂಡರ್‌ಗಳನ್ನು **ದಿನಾಂಕ: 27.05.2026 ರಂದು ಬೆಳಿಗ್ಗೆ 11.00 ಗಂಟೆಗೆ** ಅಥವಾ ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು.

ಟೆಂಡರ್‌ನಲ್ಲಿ ಯಾವುದೇ ಬದಲಾವಣೆ/ತಿದ್ದುಪಡಿಗಳು ಇದ್ದಲ್ಲಿ ವಿದ್ಯುನ್ಮಾನ ಸಂಗ್ರಹಣೆ (KPP portal) ವೇದಿಕೆಯಲ್ಲಿ ಮಾತ್ರ ಪ್ರಕಟಿಸಲಾಗುವುದು. ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

ಸಹಿ/–
(ಮಂಜುನಾಥ.ಬಿ.)
ಕಾರ್ಯಪಾಲಕ ಇಂಜನಿಯರ್,
ಕನೀನಿನಿ ಶಿಗ್ಗಾಂವ ಏತ ನೀರಾವರಿ ವಿಭಾಗ,
ಧಾರವಾಡ

ವಾ.ಸಾ.ಸಂ.ಇ/ಧಾರವಾಡ/148/
ದೇಶಪಾಂಡೆಪಬ್ಲಿಸಿಟಿ/2026–27

ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
59, ರಿಚ್‌ಮಂಡ್ ರಸ್ತೆ, (ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆ) ಬೆಂಗಳೂರು–560025
ದೂರವಾಣಿ ಸಂಖ್ಯೆ: 080–25584102/25594893
ಇ–ಮೇಲ್: eecontractksphc@gmail.com | ವೆಬ್‌ಸೈಟ್: www.ksphc.org

ಸಂಖ್ಯೆ:ಇಇ/ಕೆಎಸ್‌ಪಿಹೆಚ್&ಐಡಿಸಿಎಲ್/ಸಿಎನ್‌ಟಿ/ಟಿಎನ್‌ಡಿ/05/2026–27/172 ದಿನಾಂಕ:07.05.2026

ಟೆಂಡರ್ ಆಹ್ವಾನ ಪ್ರಕಟಣೆ

ಕರಾಪೊವ & ಮೂಸೌಅನಿನಿ ಇವರು ಕೆಟಿಪಿಪಿ 2000 ಕಾಯ್ದೆ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ದಾಖಲೆಗಳಂತೆ ಕೆಪಿಪಿಪಿ https://kppp.karnataka.gov.in ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಪಿಎಂಸಿ ಸೇವೆಗಳನ್ನು ಆಹ್ವಾನಿಸಿದೆ.

ಕಾಮಗಾರಿಗಳ ಹೆಸರು: (1) ಸಭೆ ಕೊಠಡಿ ಮುಂಭಾಗ ಮತ್ತು ಸಿಎಂಡಿ ಕಚೇರಿ ಮುಂಭಾಗದ ಮೇಲಾವರಣಕ್ಕೆ ಟ್ರಸ್ ಕೆಲಸ ಒದಗಿಸುವುದು ಮತ್ತು ಸರಿಪಡಿಸುವುದು, ಪಿಎಂಎಸ್ ವಿಭಾಗಕ್ಕೆ ಪಫ್ ಶೀಟ್ ರೂಫಿಂಗ್ ಒದಗಿಸುವುದು, ಕೇಂದ್ರ ವಿಭಾಗದ ಶೌಚಾಲಯಕ್ಕೆ ನವೀಕರಣ ಕಾರ್ಯಗಳು, ಗುತ್ತಿಗೆ ವಿಭಾಗದ ಶೌಚಾಲಯ, ಪ್ರಧಾನ ಕಚೇರಿಯಲ್ಲಿ ಧ್ವಜ ಸ್ತಂಭ ಮತ್ತು ಪಿಎಂಎಸ್ ವಿಭಾಗ, ಕೆಎಸ್‌ಪಿಹೆಚ್ ಮತ್ತು ಐಡಿಸಿಎಲ್ ಬೆಂಗಳೂರಿನ ಕಾವಲು ಕೊಠಡಿ ನಿರ್ಮಾಣ ಮತ್ತು ಪ್ರವೇಶ ದ್ವಾರ. (2) ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಸಂವಹನ, ಲಾಜಿಸ್ಟಿಕ್ಸ್ ಮತ್ತು ಆಧುನೀಕರಣ, ನಂ.1 ಕಾರ್ನರ್ ಹೌಸ್, ಎಂ.ಜಿ. ರಸ್ತೆ, ಬೆಂಗಳೂರು ರವರಿಗೆ ಮಳೆ ನೀರು ಇಂಗು ಗುಂಡಿ ನಿರ್ಮಿಸುವುದು. (3) ಬೆಳಗಾವಿಯಲ್ಲಿ ಸಿಎಆರ್ ಶಸ್ತ್ರಾಗಾರದ ದುರಸ್ಥಿಗೆ ವಿದ್ಯುದೀಕರಣ ಕಾಮಗಾರಿ. (4) ಪೊಲೀಸ್ ಆಯುಕ್ತರು, ಹುಬ್ಬಳ್ಳಿ ಧಾರವಾಡ ನಗರ ಕಟ್ಟಡ ನಿರ್ಮಾಣ ಕಾಮಗಾರಿ ಮತ್ತು PMC Services. (5) ಬೆಳಗಾವಿಯಲ್ಲಿ ಸಿಎಆರ್ ಕಟ್ಟಡ ನಿರ್ಮಾಣ ಕಾಮಗಾರಿ ಮತ್ತು PMC Services. (6) ವಿಜಯಪುರ ಜಿಲ್ಲೆಯ ಇಂಡಿಯಲ್ಲಿ Lumsum ಟರ್ನ್‌ಕೀ ಆಧಾರದ ಮೇಲೆ 24PC ಕ್ವಾರ್ಟರ್‌ಗಳ ನಿರ್ಮಾಣ ಸಾಂಪ್ರದಾಯಿಕ ವಿಧಾನದ ನಿರ್ಮಾಣ (ಫ್ರೇಮ್ಡ್ ಸ್ಟ್ರಕ್ಚರ್) (G+2) ಮಹಡಿಗಳ ನಿರ್ಮಾಣ ಕಾಮಗಾರಿ) ಕಾಮಗಾರಿ ಮತ್ತು PMC Services. (7) ಅಧೀಕ್ಷಕರು, ದಾವಣಗೆರೆ ಜಿಲ್ಲೆ, ದಾವಣಗೆರೆ ರವರ ವಸತಿಗೃಹ ನಿರ್ಮಾಣ ಕಾಮಗಾರಿ ಮತ್ತು PMC Services. (8) ಐಜಿಪಿ ಪೂರ್ವ ವಲಯ, ದಾವಣಗೆರೆ ರವರ ವಸತಿಗೃಹ ನಿರ್ಮಾಣ ಕಾಮಗಾರಿ ಮತ್ತು PMC Services. (9) ಕೊಪ್ಪಳ ಜಿಲ್ಲೆಯ ಕನಕಗಿರಿಯಲ್ಲಿ 3 ಬೇ ಅಗ್ನಿಶಾಮಕ ಠಾಣೆ ನಿರ್ಮಾಣ ಕಾಮಗಾರಿ ಮತ್ತು PMC Services. (10) ಕಲಬುರಗಿ ಜಿಲ್ಲೆಯ ಕಮಲಾ–ಪುರದಲ್ಲಿ 3 ಬೇ ಅಗ್ನಿಶಾಮಕ ಠಾಣೆ ನಿರ್ಮಾಣ ಕಾಮಗಾರಿ ಮತ್ತು PMC Services. (11) ಕಲಬುರಗಿ ಜಿಲ್ಲೆಯ ಯಡ್ರಾಮಿಯಲ್ಲಿ 3 ಬೇ ಅಗ್ನಿಶಾಮಕ ಠಾಣೆ ನಿರ್ಮಾಣ ಕಾಮಗಾರಿ ಮತ್ತು PMC Services. (12) ಬೀದರ್ ಜಿಲ್ಲೆಯ ಹುಲಸೂರಿನಲ್ಲಿ 3 ಬೇ ಅಗ್ನಿಶಾಮಕ ಠಾಣೆ ನಿರ್ಮಾಣ ಕಾಮಗಾರಿ ಮತ್ತು PMC Services.

ಆಸಕ್ತ ಅರ್ಹ ಗುತ್ತಿಗೆದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ಟೆಂಡರ್ ಶುಲ್ಕ, ಇಎಂಡಿ, ಟೆಂಡರ್ ದಸ್ತಾವೇಜುಗಳು ಇತ್ಯಾದಿಗಳು ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ: 11.05.2026ರಿಂದ ಲಭ್ಯವಿರುತ್ತದೆ.

ಕೆಎಸ್‌ಪಿಹೆಚ್ ಮತ್ತು ಐಡಿಸಿಎಲ್ ಯಾವುದೇ ಕಾರಣಗಳನ್ನು ನೀಡದೇ ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ.

ಸೂಚನೆ: ಯಾವುದೇ ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.

ಸಹಿ/–
ಕಾರ್ಯಪಾಲಕ ಇಂಜಿನಿಯರ್–ಗುತ್ತಿಗೆಗಳು

ಡಿಐಪಿಆರ್/ಸಿಪಿ/572/ಸಿಸಿಎಲ್/2026–27

ಕರ್ನಾಟಕ ಗೃಹ ಮಂಡಳಿ
1,3, 4ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560 009.
Karnataka Housing Board — Building communities

ಸಂಖ್ಯೆ: ಕಗೃಮಂ/ಕಾ/ಹಂಚಿಕೆ–06/ಚಿಮ–ಮೂಡಿಗೆರೆ/2026–27 ದಿನಾಂಕ: 08–05–2026

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ ಚಿಕ್ಕಮಗಳೂರು ಜಿಲ್ಲೆ, ಮೂಡಿಗೆರೆ ತಾಲ್ಲೂಕು, ಕಸಬಾ ಹೋಬಳಿ, ಮೂಡಿಗೆರೆ ಗ್ರಾಮದಲ್ಲಿ **ಸರ್ವೆ ನಂ.147/3, 164/1, 148/1, 165/1, 182/3, 177/4, 148/3, 166/3, 167/1, 122/3, 166/2, 148/2, 150 ಒಟ್ಟು 10 ಎಕರೆ 35 ಗುಂಟೆ** ಜಮೀನನ್ನು ಮಂಡಳಿ ವತಿಯಿಂದ ವಸತಿ ಯೋಜನೆಗಾಗಿ 65:35 (ಕರ್ನಾಟಕ ಗೃಹ ಮಂಡಳಿ: ಭೂ ಮಾಲೀಕರು) ಪಾಲುದಾರಿಕೆಯಡಿ Conveyance Deed ಮೂಲಕ ಪಡೆಯಲಾಗಿದೆ. ಮಂಡಳಿಯು ಮೂಡಿಗೆರೆ ವಸತಿ ಬಡಾವಣೆಯನ್ನು ಅಭಿವೃದ್ಧಿಪಡಿಸಿದ್ದು, ಸದರಿ ಬಡಾವಣೆಗೆ 65:35 (ಕರ್ನಾಟಕ ಗೃಹ ಮಂಡಳಿ: ಭೂ ಮಾಲೀಕರು) ಅನುಪಾತದ ಪಾಲುದಾರಿಕೆಗೆ ಒಪ್ಪಿಗೆ ನೀಡಿರುವ ಭೂಮಾಲೀಕರು ಪಾಲುದಾರಿಕೆಯಡಿ ಅವರ ಪಾಲಿನ ನಿವೇಶನಗಳನ್ನು ಆಯ್ಕೆ ಮಾಡಿಕೊಳ್ಳಲು ಈ ಕೆಳಕಂಡಂತೆ ದಿನಾಂಕ ಮತ್ತು ಸ್ಥಳವನ್ನು ನಿಗಧಿಪಡಿಸಲಾಗಿದೆ.

ದಿನಾಂಕ	ಚಿಕ್ಕಮಗಳೂರು ಜಿಲ್ಲೆ, ಮೂಡಿಗೆರೆ ತಾಲ್ಲೂಕು ಮೂಡಿಗೆರೆ ಗ್ರಾಮದ ಸರ್ವೆ ನಂಬರ್‌ಗಳ ವಿವರ
14-05-2026	147/3, 164/1, 148/1, 165/1, 182/3, 177/4, 148/3, 166/3, 167/1, 122/3, 166/2, 148/2, 150

ಷರಾ: ಮೇಲ್ಕಂಡ ದಿನಾಂಕದಂದು ಹಾಜರಾಗದ ಭೂಮಾಲೀಕರಿಗೆ ನಿಯಮಾನುಸಾರ ಬರುವ ನಿವೇಶನಗಳನ್ನು **ದಿನಾಂಕ: 19–05–2026** ರಂದು ಕಾಯ್ದಿರಿಸಲು ಕ್ರಮ ಕೈಗೊಳ್ಳಲಾಗುವುದು.

ಸ್ಥಳ: ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಕರ್ನಾಟಕ ಗೃಹ ಮಂಡಳಿ, ಚಿಕ್ಕಮಗಳೂರು. **ದೂರವಾಣಿ ಸಂಖ್ಯೆ: 08262–2295045 ಮೋ: 99454 96117 ಸಮಯ: ಬೆಳಿಗ್ಗೆ: 11.00 ಗಂಟೆಗೆ** ಸಂಬಂಧಿಸಿದ ಭೂಮಾಲೀಕರು ಜಮೀನುಗಳ ಮೂಲ ದಾಖಲಾತಿಗಳೊಂದಿಗೆ ಮೇಲ್ಕಾಣಿಸಿದ ಸ್ಥಳ ಹಾಗೂ ದಿನಾಂಕಗಳಂದು ತಪ್ಪದೇ ಹಾಜರಾಗಿ ನಿಯಮಾನುಸಾರ ನಿವೇಶನಗಳನ್ನು ಆಯ್ಕೆ ಮಾಡಿಕೊಳ್ಳಬೇಕೆಂದು ತಿಳಿಸಲಾಗಿದೆ. ತಪ್ಪಿದ್ದಲ್ಲಿ ಭೂಮಾಲೀಕರಿಗೆ ನಿಯಮಾನುಸಾರ ನೀಡಬೇಕಾದ ನಿವೇಶನಗಳನ್ನು ಕಾಯ್ದಿರಿಸಿ ಉಳಿಕೆ ನಿವೇಶನಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ನಿವೇಶನಗಳನ್ನು ಆಯ್ಕೆಮಾಡಿಕೊಳ್ಳುವಾಗ ಭೂಮಾಲೀಕರು ಅನುಸರಿಸಬೇಕಾದ ಅಂಶಗಳ ಬಗ್ಗೆ ಮಂಡಳಿಯ ವೆಬ್‌ಸೈಟ್ https://www.khb.karnataka.gov.in ಭೇಟಿ ನೀಡಿ ಮಾಹಿತಿ ಪಡೆಯಬಹುದು ಅಥವಾ ಸ.ಕಾ.ಅ, ಚಿಕ್ಕಮಗಳೂರು ರವರನ್ನು **ಮೊ. 99454 96117** ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಸಹಿ/–
ಕಾರ್ಯದರ್ಶಿಗಳು
ಕರ್ನಾಟಕ ಗೃಹ ಮಂಡಳಿ
ಬೆಂಗಳೂರು

ವಾಸಾಸಂಇ/ವಾಪ್ರ/575/ಎಂಎಎ/2026–27

ಕರ್ನಾಟಕ ಸರ್ಕಾರ
ಬೀದರ ಮಾಹಾನಗರ ಪಾಲಿಕೆ
ದೂರವಾಣಿ: 08482-240432 ಫ್ಯಾಕ್ಸ ನಂ: 08482–240432 Web Site:www.bidarcity.mrc.gov.in
E-mail ID:itstaff_ulb-bidar@yahoo.com, ka.bidar.cmc@gmail.com

ಸಂಖ್ಯೆ:ಬಿಎಂಸಿ/ಇಎನ್‌ಜಿ/ಸಿಆರ್–261/2025–26 ದಿನಾಂಕ:–08–05–2026.

ಟೆಂಡರ ಪ್ರಕಟಣೆ

1) ಕಾಮಗಾರಿ / ಸರಕು / ಸೇವೆಯ ವಿವರ DMA/2025-26/OW/WORK_INDENT51815/Call-2, DMA/2025-26/OW/WORK_INDENT51791/Call-2, DMA/2025-26/OW/WORK_INDENT46194/Call-3, 2) ಕಾಮಗಾರಿಯ ಅಂದಾಜು ಮೊತ್ತ e-portal ನಲ್ಲಿ ನಮೂದಿಸಿದಂತೆ, 3) ಗುತ್ತಿಗೆದಾರರ ಅರ್ಹತೆ ವಿವರ e-portal ನಲ್ಲಿ ನಮೂದಿಸಿದಂತೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ e-portal ನಲ್ಲಿ ನಮೂದಿಸಿದಂತೆ 5) ಟೆಂಡರ ಫಾರಂ ಪಡೆಯಲು ಅಂತಿಮ ದಿನಾಂಕ & ಭರ್ತಿ ಮಾಡಿ ಸಲ್ಲಿಸಲು 16–05–2026 upto 04.00 PM 6) ಟೆಂಡರ ತೆರೆಯುವ ದಿನಾಂಕ 18–05–2026 at 04.30 PM, 7) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ ಆಯುಕ್ತರು ಮಹಾನಗರ ಪಾಲಿಕೆ ಬೀದರ ಇ–ಮೇಲ್: itstaff_ulb_bidar@yahoo.com 08482–240432, 8) ಅಂತರಜಾಲ ತಾಣದ ವಿಳಾಸ https://kppp . karnataka.gov.in/

ಸಹಿ/–ಆಯುಕ್ತರು,
ಮಾಹಾನಗರ ಪಾಲಿಕೆ ಬೀದರ

ವಾ.ಸಾ.ಸಂ.ಇ/ಬೀದರ/29/ಕೆ.ಎಸ್.ಎಂ.ಸಿ.&ಎ/2026–27

ತುಮಕೂರು ಮಹಾನಗರ ಪಾಲಿಕೆ, ತುಮಕೂರು
ದೂ–2278480 ಫ್ಯಾಕ್ಸ್:2275106, ಸಾರ್ವಜನಿಕ 0816–2271200, 2272200
ಇ–ಮೇಲ್: itstaff_ulb_tumkur@yahoo.com
ವೆಬ್‌ಸೈಟ್: www.tumkurcity.mrc.gov.in
ನಂ:ತುಮಪಾ:ತಾಂಶಾ/ವಿ&ನೀ/ಕೊಟೇಷನ್/ಸಿಆರ್/05/2026–27
ದಿನಾಂಕ: 04.05.2026

ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿನ ಪಾರದರ್ಶಕತೆಯ ಆಧ್ಯಾದೇಶ 1999–2000 ಪ್ರಕಾರ ಆಕ್ಟ್ 2000ರ ನಿಯಮದಂತೆ, ತುಮಕೂರು ಮಹಾನಗರ ಪಾಲಿಕೆ 2026–27ನೇ ಸಾಲಿನ ಮಹಾನಗರಪಾಲಿಕೆ ನಿಧಿಯಡಿ ಕಾಮಗಾರಿಗಳನ್ನು ಕೈಗೊಳ್ಳಲು ಡಿಜಿಟಲ್ ಟ್ವಿನ್ ಹಾಗೂ ಎಐ ಬೇಸಡ್ ಸ್ಮಾರ್ಟ್ ಸಿವಿಕ್ ಮಾನಿಟರಿಂಗ್ ಸಿಸ್ಟಮ್ (ನಗರ ನೇತ್ರಾ) ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಮಾರುಕಟ್ಟೆಯ ಸ್ಪೇಸಿಫಿಕೇಶನ್ & ದರಗಳನ್ನು ಪಡೆಯಲು ಇ–ಪೋರ್ಟಲ್‌ನಲ್ಲಿ ಕೊಟೇಷನ್‌ಗಳನ್ನು ಆಹ್ವಾನಿಸಿದ್ದು, ಆಸಕ್ತ ಗುತ್ತಿಗೆದಾರರು ಈ ಕಛೇರಿಯಿಂದ ಕಾಮಗಾರಿಗೆ ಸಂಬಂಧಿಸಿದ Technical Specification ನಲಿ ಪಡೆದು ತಮ್ಮ ದರಗಳನ್ನು ಸಲ್ಲಿಸುವುದು, ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಅಭಿಯಂತರರ ಶಾಖೆಯಿಂದ ಪಡೆಯಬಹುದಾಗಿದೆ

1. ಕೊಟೇಷನ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ: 05–05–2026 ರಿಂದ 2. ಕೊಟೇಷನ್ ಸಲ್ಲಿಸುವ ಅಂತಿಮ ದಿನಾಂಕ & ವೇಳೆ ದಿನಾಂಕ: 13–05–2026ರಂದು ಸಂಜೆ 5.00 ಗಂಟೆರವರೆಗೆ. 3. ಕೊಟೇಷನ್ ತೆರೆಯುವ ದಿನಾಂಕ:15–05–2026ರ ಬೆಳಗ್ಗೆ 11.00 ನಂತರ.

ಸಹಿ/–ಕಾರ್ಯಪಾಲಕ ಅಭಿಯಂತರರು.
ತುಮಕೂರು ಮಹಾನಗರ ಪಾಲಿಕೆ, ತುಮಕೂರು.

DIPR/TUM/58/KSMCA/2026-27

ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರ, ರಾಯಚೂರು
ಮಂತ್ರಾಲಯ ರಸ್ತೆ, ಐ.ಡಿ.ಎಸ್.ಎಂ.ಟಿ. ಲೇಔಟ್, ರಾಯಚೂರು, ಕರ್ನಾಟಕ – 584103, ಭಾರತ
ಇ–ಮೇಲ್: rudaraichur@gmail.com, ವೆಬ್‌ಸೈಟ್: https://ruda.karnataka.gov.in
ದೂರವಾಣಿ ಸಂಖ್ಯೆ: 08532–220435 ಫ್ಯಾಕ್ಸ್ ಸಂಖ್ಯೆ: 08532–220689

No.:RCRUDA/ENG/TS/CR/LAKE/02/2026-27/66 Date: 06-05-2026

ಟೆಂಡರ್ ಅಧಿಸೂಚನೆ (KPPP 2.0 ವಿಧಾನದಲ್ಲಿ)

ಕೆಳಕಂಡ ಅನುದಾನದಡಿ ಸೂಚಿಸಲಾದ ಕಾಮಗಾರಿಗಳಿಗೆ KPPP 2.0 ವಿಧಾನದಲ್ಲಿ ಟೆಂಡರ್ ಅಧಿಸೂಚನೆಗಳನ್ನು ಆಹ್ವಾನಿಸಲಾಗುತ್ತಿದೆ ಎಂದು ತಿಳಿಸಲಾಗುತ್ತದೆ. ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ತಮ್ಮ ಟೆಂಡರ್ ದರಪತ್ರಗಳನ್ನು ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್ (www.kppp.karnataka.gov.in) ಮೂಲಕ ಸಲ್ಲಿಸಬಹುದು. ಹೆಚ್ಚಿನ ವಿವರಗಳನ್ನು ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧಿಕೃತ ಜಾಲತಾಣ (https://ruda.karnataka.gov.in) ದಲ್ಲಿಯೂ ಪಡೆಯಬಹುದು.

ಅನುದಾನದ ವಿವರ:RUDA ಅನುದಾನ. ಕಾಮಗಾರಿಯ ಹೆಸರು: Improvements to Gollan Kunta Kere Sy No. 910/P2/* Area 17 Acre 39Gunta Bijingera road in Raichur City. Estimate Cost Rs. 500.00 Lakhs. ಇಂಡೆಂಟ್ ಸಂಖ್ಯೆ:RCRUDA/2026-27/OW/ WORK_INDENT2

ಸಹಿ/– ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ, ರಾಯಚೂರು.

DIP/RCR/58/KSMCA/60/2026-27

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಬಾಗಲಕೋಟ ಇವರ ಕಛೇರಿ.

ಸಂಖ್ಯೆ.ಲೋಇ:ಬಾವಿ:ಪಿಬಿ:ಕೆಡಬ್ಲು:2026–27/00456 ದಿನಾಂಕ: 07–05–2026.

–: ಟೆಂಡರ ಪ್ರಕಟಣೆ:–

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆ್ಯಕ್ಟ 2000ರ ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ ಕೆ/ಡಬ್ಲ್ಯೂ–1,2,3,4 ನಿಯುಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ KPPP ಪೋರ್ಟಲ್ ಮುಖಾಂತರ ಬಾಗಲಕೋಟ ವಿಭಾಗದ ಕಾಮಗಾರಿಗಳ ಟೆಂಡರ ಅಹ್ವಾನಿಸಲಾಗಿದೆ.

ವರ್ಕ ಇಂಡೆಂಟ್ ನಂ:ಸಾಮಾನ್ಯ:33734/Call-2, 35335, 31115, 31110, 34514, 31106, 31111, 31113, 31116, 31119, 31117, 30576/Call-2, 33689, 33291, 35881, 36011. CAT-IIA: 35597, SC: 35476, 35371, ST: 35592

ಈ ಎಲ್ಲ ಕಾಮಗಾರಿಯ ಗರಿಷ್ಠ ಟೆಂಡರಗಿಟ್ಟ ಮೊತ್ತ ರೂ.997.00 ಲಕ್ಷ ಹಾಗೂ ಕನಿಷ್ಠ ಮೊತ್ತ ರೂ.18.00 ಲಕ್ಷಗಳ ವರೆಗಿನ ಕಾಮಗಾರಿಗಳಿಗೆ ಈ ಕೆಳಕಾಣಿಸಿದ ದಿನಾಂಕಗಳಂತೆ ಟೆಂಡರ ಅಹ್ವಾನಿಸಲಾಗಿದೆ.

ಅ)ಪ್ರೀ ಬಿಡ್ ಮೀಟಿಂಗ್:20–05–2026 ರಂದು ಬೆಳಿಗ್ಗೆ 11–30 ಘಂಟೆಯವರೆಗೆ ಬ) ಟೆಂಡರ ಆಕ್ಷೇಪಣೆಗಾಗಿ ನಿಗಧಿ ಪಡಿಸಿದ ದಿನಾಂಕ: 22–05–2026 ರಂದು ಸಂಜೆ 5–30 ಘಂಟೆಯವರೆಗೆ, ಕ)ಟೆಂಡರ ಸ್ವೀಕರಿಸುವ ದಿನಾಂಕ: 25–05–2026 ರಂದು ಸಂಜೆ 4–00 ಘಂಟೆಯವರೆಗೆ, ಡ) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:26–05–2026 ರಂದು ಸಂಜೆ 4.30 ಘಂಟೆಯವರೆಗೆ, ಚ) ಆರ್ಥಿಕ ಬಿಡ್ ತೆರೆಯುವ ದಿನಾಂಕ:27–05–2026 ರಂದು ಸಂಜೆ 4.30 ಘಂಟೆಯವರೆಗೆ

ವರ್ಕ ಇಂಡೆಂಟ್ ನಂ: ಸಾಮಾನ್ಯ: 34511, 34512, 34513, Se1188

ಈ ಎಲ್ಲ ಕಾಮಗಾರಿಗಳ ಗರಿಷ್ಠ ಟೆಂಡರಗಿಟ್ಟ ಮೊತ್ತ ರೂ.200.00 ಲಕ್ಷಗಳ ವರೆಗಿನ ಕಾಮಗಾರಿಗಳಿಗೆ ಈ ಕೆಳಕಾಣಿಸಿದ ದಿನಾಂಕಗಳಂತೆ ಟೆಂಡರ ಅಹ್ವಾನಿಸಲಾಗಿದೆ.

ಅ)ಪ್ರೀಬಿಡ್ ಮೀಟಿಂಗ್ ದಿನಾಂಕ:14–05–2026 ರಂದು ಬೆಳಿಗ್ಗೆ 11.00 ಘಂಟೆಯವರೆಗೆ, ಅ)ಟೆಂಡರ ಆಕ್ಷೇಪಣೆಗಾಗಿ ನಿಗಧಿ ಪಡಿಸಿದ ದಿನಾಂಕ: 15–05–2026 ರಂದು ಸಂಜೆ 5–30 ಘಂಟೆಯವರೆಗೆ, ಬ) ಟೆಂಡರ ಸ್ವೀಕರಿಸುವ ದಿನಾಂಕ:16–05–2026 ರಂದು ಸಂಜೆ 4–00 ಘಂಟೆಯವರೆಗೆ, ಕ) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:18–05–2026 ರಂದು ಸಂಜೆ 4.30 ಘಂಟೆಯವರೆಗೆ ಕ) ಆರ್ಥಿಕ ಬಿಡ್ ತೆರೆಯುವ ದಿನಾಂಕ:19–05–2026 ರಂದು ಸಂಜೆ 4.30 ಘಂಟೆಯವರೆಗೆ

ಈ ಎಲ್ಲಾ ಕಾಮಗಾರಿಗಳಿಗೆ ಸಂಬಂಧಿಸಿದ ವಿವರವಾದ ಮಾಹಿತಿಯನ್ನು ವೈಬ್‌ಸೈಟ್ ವಿಳಾಸ http://kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಬಾಗಲಕೋಟೆ.

DIPR/BGK/RO-NO-22/KSMCA/2026-27

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್ ರವರ ಕಾರ್ಯಾಲಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ
ಕಛೇರಿ ದೂರವಾಣಿ: 08176–252749

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 02/2026,27
ದಿನಾಂಕ: 04–05–2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ, ವ್ಯಾಪ್ತಿಯ ಹೊಳೆನರಸೀಪುರ ತಾಲ್ಲೋಕಿಗೆ 2025–26ನೇ ಸಾಲಿನ ಮಾನ್ಯ ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ ವಿಶೇಷ ಅನುದಾನದಡಿ ಹೊಳೆನರಸೀಪುರ ತಾಲ್ಲೂಕು ಅರಕಲಗೂಡು ವಿಧಾನಸಭಾ ಕ್ಷೇತ್ರ ಹಳ್ಳಿಮೈಸೂರು ಹೋಬಳಿ, ಕಡವಿನಬಾಚನಹಳ್ಳಿ–ದೇವರಮುದ್ದನಹಳ್ಳಿ, ಮೂಡಲಕೊಪ್ಪಲು, ಕೆರೆಮೇಗಲಕೊಪ್ಪಲು, ಕಬ್ಬೂರು, ಮಲುಗನಹಳ್ಳಿ, ಬಂಟರತಳಾಲು, ಸಿ.ಹಿಂದಲಹಳ್ಳಿ,ಮೇಣಗನಹಳ್ಳಿ, ಚಿಕ್ಕಕಾಡನೂರು, ದೊಡ್ಡಹಳ್ಳಿ, ಸಂತೆಮೈದಾನ, ದೋಣನಘಟ್ಟ, ಮುಕ್ಕನಹಳ್ಳಿ, ಆನೆಕನ್ನಂಬಾಡಿ, ದೇವರಗುಡ್ಡೇನಹಳ್ಳಿ, ಕಲ್ಲಹಳ್ಳಿ, ಮಂಗಳವಾಡಿ, ಹಳ್ಳಿಮೈಸೂರು, ಗೋಹಳ್ಳಿ,ತೇಜೂರು, ಟಿ.ಮಾಯಿಗೌಡನಹಳ್ಳಿ, ತಾತನಹಳ್ಳಿ, ದೇವಿಪುರ, ಕ್ಯಾತನಹಳ್ಳಿ, ಹೆಚ್.ಹಿಂದಲಹಳ್ಳಿ, ಗುಡ್ಡೇನಹಳ್ಳಿ,ಹಾಡ್ಯ, ಬಿದರಕ್ಕ, ಕೋಗಿಲಹಳ್ಳಿ, ಮಾಳನಾಯಕನಹಳ್ಳಿ, ಬೇಡಿಗನಹಳ್ಳಿಕೊಪ್ಪಲು, ಬಂಡಿಗನಹಳ್ಳಿ, ಜೋಡಿಗುಬ್ಬಿ, ಕುಪ್ಪೆ, ಕೆರಗೋಡು, ಉದ್ದೂರು, ಉದ್ದೂರಹೊಸಹಳ್ಳಿ, ಕೆ.ಮುದ್ದನಹಳ್ಳಿ, ಹಾರಗೌಡನಹಳ್ಳಿ, ಚೋಳೇನಹಳ್ಳಿ, ದಾಸನಕೊಪ್ಪಲು, ಜಕ್ಕನಹಳ್ಳಿ, ಅಣ್ಣೇಚಾಕನಹಳ್ಳಿ ಗ್ರಾಮಗಳ ಪರಿಮಿತಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ RDPR/2025,26/RD/WORK_ INDENT25831 ಟೆಂಡರ್ ಮೊತ್ತ ರೂ 296.02 ಲಕ್ಷಗಳಿಗೆ (ಜಿ.ಎಸ್.ಟಿ ಹೊರತುಪಡಿಸಿ) ಲೋಕೋಪಯೋಗಿ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ಎನ್ರೋಲ್ ಮಾಡಿಸಿರುವ ಅರ್ಹ ಗುತ್ತಿಗೆದಾರರಿಂದ ಸ್ಪರ್ಧಾತ್ಮಕ ಟೆಂಡರನ್ನು KPPP ಅಂತರ್ಜಾಲದಲ್ಲಿ ದಿನಾಂಕ: 16–05–2026ರ ಸಂಜೆ 5.00ಘಂಟೆಯುವರೆಗೆ ಟೆಂಡರ್ನ್ನು ನಿಗಧಿತ ನಮೂನೆಗಳನ್ನು https://kppp.karnataka.gov.in/kpppನಲ್ಲಿ ಡೌನ್ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ: 16–05–2026ರ ಸಂಜೆ 5.00 ಗಂಟೆಯೊಳಗೆ ಅಪ್ಲೋಡ್ ಮಾಡತಕ್ಕದ್ದು. ದಿನಾಂಕ 15–05–2026ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿನಾಂಕ: 18–05–2026ರಂದು ಬೆಳಿಗ್ಗೆ 11.00ಗಂಟೆಗೆ ಗುತ್ತಿಗೆದಾರರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು. ತಾಂತ್ರಿಕ ಬಿಡ್ಡ್ ಅನುಮೋದನೆಯಾದ ನಂತರ ಗುತ್ತಿಗೆದಾರರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು. ಕಾಮಗಾರಿಗಳ ವಿವರಗಳು KPPP ಅಂತರ್ಜಾಲದಲ್ಲಿ ಲಭ್ಯವಿರುತ್ತವೆ. ಸದರಿ ಕಾಮಗಾರಿಗೆ ಸಂಬಂಧಪಟ್ಟಂತೆ ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್ಸೈಟ್ನಲ್ಲಿ ಅಪ್ಲೋಡ್ ಮಾಡಲಾಗುವುದು ಟೆಂಡರ್ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಪ.ರಾಜ್. ಇಂ.ವಿಭಾಗ, ಚನ್ನರಾಯಪಟ್ಟಣ.

ವಾಸಾಸಂಇ/ಹಿಸನಿ/ಹಾಸನ/109/ಕೆಎಸ್ಎಂಸಿಎ/2026–27

ಲೋಕೋಪಯೋಗಿ ಇಲಾಖೆ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.
ದೂ.: 08539 – 222318, ಇ–ಮೇಲ್: eepwdkpl2@gmail.com

ಸಂಖ್ಯೆ : ಕಾ.ನಿ.ಇಂ./ಲೋ.ಇ./ವಿ.ಕೊ./ಟೆಂ./ಕೆಡಬ್ಲ್ಯೂ–4/2026–27/430 ದಿನಾಂಕ : 07–05–2026

ಅಲ್ಪಾವಧಿ ಟೆಂಡರ್ ಪ್ರಕಟಣೆ

2025–26ನೇ ಸಾಲಿನ ಲೆಕ್ಕ ಶೀರ್ಷಿಕೆ : ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಮೈಕ್ರೋ ಮೂಲಭೂತ ಸೌಕರ್ಯ – ಟಿ.ಎಸ್.ಪಿ. ಹಾಗೂ ಸಾಮಾನ್ಯ ಅಡಿಯಲ್ಲಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999 – 2000 ರ ಪ್ರಕಾರ ಪಾರದರ್ಶಕತೆ ಆ್ಯಕ್ಟ 2000 ರ ನಿಯಮದಂತೆ, ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆಡಬ್ಲ್ಯೂ – 4ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಅರ್ಹ ಗುತ್ತಿಗೆದಾರರು, ಕೆ.ಪಿ.ಪಿ.ಪಿ. ಪೋರ್ಟಲ್ http://kppp.karnataka.gov.in ಮುಖಾಂತರ ಭಾಗವಹಿಸಬಹುದು. 02 ಕಾಮಗಾರಿಗಳಿಗೆ (ವರ್ಕ ಇಂಡೆಂಟ್ ಸಂಖ್ಯೆ : 34265 & 34049) ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ : 22–05–2026 ಸಮಯ 12.00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 25–05–2026 ಸಮಯ 12.00 ಗಂಟೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ : 26–05–2026 ಸಮಯ 12.30 ಗಂಟೆ, ಕನಿಷ್ಟ ಅಂದಾಜು ಮೊತ್ತ ರೂ. 300.00 ಲಕ್ಷಗಳು ಹಾಗೂ ಗರಿಷ್ಟ ಅಂದಾಜು ಮೊತ್ತ ರೂ. 363.80 ಲಕ್ಷಗಳು ಇರುತ್ತದೆ.

ಟೆಂಡರ್ ದಾಖಲೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿಯ ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ.ಎಂ.ಡಿ., ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರೀಬಿಡ್ ಮೀಟಿಂಗ್ ದಿನಾಂಕ, ಟೆಂಡರ್ ಆಕ್ಷೇಪಣೆ / ಸ್ಪಷ್ಟೀಕರಣ, ಹಾಗೂ ಇತ್ಯಾದಿಗಳಿಗಾಗಿ ಹೆಚ್ಚಿನ ಮಾಹಿತಿಗಳನ್ನು ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು. ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ.ಪಿ. ಪೋರ್ಟಲ್‌ನಲ್ಲಿ ನೋಡಿಕೊಳ್ಳಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜನೀಯರು,
ಲೋ.ಇ. ವಿಭಾಗ, ಕೊಪ್ಪಳ.

ಡಿಐಪಿಆರ್/ಕೊಪ್ಪಳ/75/ಮಣಿಪಾಲ್/2026–27

ಸುದ್ದಿವೈವಿಧ್ಯಕ್ಕೆ
prajavani.netಗೆ ಭೇಟಿ ಮಾಡಿ

ಕೈದಿಗಳಿಗೂ ಬಂತು 'ಬಯೊಮೆಟ್ರಿಕ್'

ಪರಪ್ಪನ ಅಗ್ರಹಾರ: ಕೈದಿಗಳ 'ಅಕ್ರಮ ಚಟುವಟಿಕೆ' ತಡೆಯಲು ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಕೈದಿಗಳ ಅನುಚಿತ ವರ್ತನೆ, ಅಕ್ರಮ ಚಟುವಟಿಕೆ ಹತ್ತಿಕ್ಕಲು 'ಪ್ರಿಸನರ್ಸ್ ಟ್ರ್ಯಾಕಿಂಗ್ ಮೂವ್‌ಮೆಂಟ್ ಸಿಸ್ಟಂ' ಪರಿಚಯ ಮಾಡಲಾಗಿದೆ.

ಜೈಲಿನ ಪ್ರತಿ ಬ್ಯಾರಕ್‌ನ ಪ್ರವೇಶ ದ್ವಾರದಲ್ಲೂ ಬಯೊಮೆಟ್ರಿಕ್ ವ್ಯವಸ್ಥೆ ಜಾರಿಗೆ ತರಲಾಗಿದೆ. ಜತೆಗೆ ಸಿಬ್ಬಂದಿಯನ್ನೂ ನಿಯೋಜಿಸಲಾಗಿದೆ. ಈಗಾಗಲೇ ಹೊಸ ವ್ಯವಸ್ಥೆ ಜಾರಿಗೆ ಬಂದಿದ್ದು, ಸಜಾಬಂದಿಗಳು ಹಾಗೂ ವಿಚಾರಣಾಧೀನ ಕೈದಿಗಳ ಮೇಲೆ ನಿಗಾ ಇಡಲಾಗುತ್ತಿದೆ ಎಂದು ಜೈಲಿನ ಮೂಲಗಳು ಹೇಳಿವೆ.

ಜೈಲಿನಲ್ಲಿ ಕೃತಕ ಬುದ್ಧಿಮತ್ತೆ (ಎ.ಐ) ಕ್ಯಾಮೆರಾಗಳ ಮೂಲಕ ಕೈದಿಗಳು ಮತ್ತು ಅಧಿಕಾರಿ–ಸಿಬ್ಬಂದಿ ಮೇಲೆ ನಿಗಾ ವಹಿಸಲಾಗುತ್ತಿದೆ. ಕೈದಿಗಳನ್ನು ಭೇಟಿಯಾಗಲು ಬರುವ ಸಂದರ್ಶಕರಿಗೆ ಡಿಜಿಟಲ್ ಟೋಕನ್ ಪದ್ಧತಿಯನ್ನೂ ಜಾರಿಗೆ ತರಲಾಗಿದೆ. ಒಟ್ಟು ₹2.25 ಕೋಟಿ ವೆಚ್ಚದಲ್ಲಿ ಹೊಸ ವ್ಯವಸ್ಥೆ ಜಾರಿಗೆ ತರಲಾಗಿದೆ.

ಪ್ರತಿ ಬ್ಯಾರಕ್, ಜೈಲಿನ ಆಸ್ಪತ್ರೆ, ಸಂದರ್ಶಕರ ಕೊಠಡಿ, ಅಡುಗೆ ಕೋಣೆ, ಕ್ಯಾಂಟೀನ್, ಗ್ರಂಥಾಲಯ, ಮೈದಾನ, ಕರಕುಶಲ ಕಾರ್ಖಾನೆಗಳು, ಬೇಕರಿ ಸೇರಿದಂತೆ ಎಲ್ಲೆಡೆ ಬಯೊಮೆಟ್ರಿಕ್ ವ್ಯವಸ್ಥೆ ಜಾರಿಗೆ ತರಲಾಗಿದೆ. ಸಂದರ್ಶಕರ ಕೊಠಡಿಗೆ ಹೋಗುವಾಗ ಬಯೊಮೆಟ್ರಿಕ್ ಜೊತೆಗೆ ಟೋಕನ್ ಪಡೆಯಬೇಕು. ಈ ಟೋಕನ್‌ನಲ್ಲಿ ಕೈದಿಯ ಹೆಸರು, ಸಂಖ್ಯೆ, ಸಮಯ ಸೇರಿ ಇತರೆ ಅಂಶಗಳನ್ನು ಜೈಲು ಸಿಬ್ಬಂದಿ, ತಂತ್ರಾಂಶದಲ್ಲಿ ನಮೂದಿಸುತ್ತಾರೆ. ಪ್ರತಿ ಬಾರಿ ಸಂದರ್ಶಕರನ್ನು ಭೇಟಿಯಾಗಲು ಬಂದು ಹೋಗುವ ಕೈದಿಗಳ ಚಲನವಲನಗಳು ದತ್ತಾಂಶ ಸಂಗ್ರಹ ಆಗಲಿದೆ ಎಂದು ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯ ಮೂಲಗಳು ತಿಳಿಸಿವೆ.



ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ

ಬಯೊಮೆಟ್ರಿಕ್ ವ್ಯವಸ್ಥೆ ಜಾರಿ ಮಾಡಿರುವುದರಿಂದ ಯಾವ ಕೈದಿ, ಯಾವ ಬ್ಯಾರಕ್‌ಗೆ ಹೋಗಿದ್ದಾನೆ. ಎಷ್ಟು ಸಮಯ ಕಳೆದಿದ್ದಾನೆ ಎಂಬ ಮಾಹಿತಿ ದೊರೆಯಲಿದೆ ಎಂದು ಅಧಿಕಾರಿಗಳು ಹೇಳುತ್ತಾರೆ.

ಸಂದರ್ಶಕರ ಭೇಟಿಗೆಂದು ಕೈದಿಗಳು ತೆರಳುತ್ತಿದ್ದರು. ಕುಟುಂಬಸ್ಥರನ್ನು ಭೇಟಿಯಾದ ಮೇಲೆ ನೇರವಾಗಿ ಬ್ಯಾರಕ್‌ಗೆ ಹೋಗದೆ, ಆಸ್ಪತ್ರೆ ಹಾಗೂ ಸಜಾಬಂದಿಗಳ ಬ್ಯಾರಕ್‌ಗಳಿಗೆ ಹೋಗುತ್ತಿದ್ದರು. ಹೀಗಾಗಿ, ಅವರ ಮೇಲೆ ನಿಗಾ ಇಡುವ ವ್ಯವಸ್ಥೆ ಜಾರಿಗೆ ತರಲಾಗಿದೆ ಎಂದು ಮೂಲಗಳು ಹೇಳಿವೆ.

'ಓಪನ್ ಡೇ' ಕಾರ್ಯಕ್ರಮಕ್ಕೆ ಚಾಲನೆ

ಕಾರ್ಯಕ್ರಮದಲ್ಲಿ ಆಲೋಕನಾಥ ಡೇ ಹಾಗೂ ಶಿವಾನಂದ ಆರ್. ಕೋಟೇಶ್ವರ್ ಅವರನ್ನು ಸನ್ಮಾನಿಸಲಾಯಿತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಯಾನಂದ ಸಾಗರ್ ಎಂಜಿನಿಯರಿಂಗ್ ಕಾಲೇಜಿನ (ಡಿಎಸ್‌ಸಿಇ) ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳು ಪ್ರಾಜೆಕ್ಟ್‌ಗಳನ್ನು 'ಓಪನ್ ಡೇ–2026' ವಾರ್ಷಿಕ ಕಾರ್ಯಕ್ರಮದಲ್ಲಿ ಪ್ರದರ್ಶಿಸಿದರು.

ಟೆಕ್ ಕ್ರಾಫ್ಟರ್ ಸಿಪಿಎಸ್‌ನ ಸಂಸ್ಥಾಪಕ ಅಲೋಕನಾಥ್ ಡೇ ಮಾತನಾಡಿ, 'ಇಂದಿನ ಕೈಗಾರಿಕಾ ಮತ್ತು ಸಾಮಾಜಿಕ ಸವಾಲುಗಳನ್ನು ಎದುರಿಸಲು ಎಂಜಿನಿಯರಿಂಗ್ ಕ್ಷೇತ್ರದ ಪಾತ್ರ ಮಹತ್ವದಾಗಿದೆ. ವಿದ್ಯಾರ್ಥಿಗಳು ಸಂಶೋಧನೆ, ನವೀನತೆ ಮತ್ತು ಉದ್ಯಮಶೀಲತೆಯತ್ತ ಹೆಜ್ಜೆ ಹಾಕಬೇಕು' ಎಂದು ಕರೆ ನೀಡಿದರು.

ವಿದ್ಯಾರ್ಥಿಗಳು ತಮ್ಮ ತಾಂತ್ರಿಕ ಕೌಶಲಗಳನ್ನು ಪ್ರದರ್ಶಿಸಲು, ಕೈಗಾರಿಕಾ ತಜ್ಞರೊಂದಿಗೆ ಸಂವಾದ ನಡೆಸಲು ಹಾಗೂ ನವೀನ ಆಲೋಚನೆಗಳನ್ನು ವಿನಿಮಯ ಮಾಡಿಕೊಳ್ಳಲು ಈ ಕಾರ್ಯಕ್ರಮವು ಒಂದು ಉತ್ತಮ ವೇದಿಕೆಯಾಗಿತ್ತು. ಕೈಗಾರಿಕಾ ತಜ್ಞರ ಸಮಿತಿಯು ವಿದ್ಯಾರ್ಥಿಗಳ ಪ್ರಾಜೆಕ್ಟ್‌ಗಳನ್ನು ಮೌಲ್ಯಮಾಪನ ಮಾಡಿ, 'ಸಾಮಾಜಿಕ ಪ್ರಸ್ತುತತೆಯ ಅತ್ಯುತ್ತಮ ಪ್ರಾಜೆಕ್ಟ್', 'ಅತ್ಯುತ್ತಮ ನವೀನ ಪ್ರಾಜೆಕ್ಟ್', 'ಅತ್ಯುತ್ತಮ ಪ್ರಾಜೆಕ್ಟ್ ಪ್ರಸ್ತುತಿ' ಹಾಗೂ 'ಒಟ್ಟಾರೆ ಅತ್ಯುತ್ತಮ ಪ್ರಾಜೆಕ್ಟ್' ವಿಭಾಗಗಳಲ್ಲಿ ಬಹುಮಾನಗಳನ್ನು ನೀಡಲಾಯಿತು.

ಆಸ್ಟರ್ ಲ್ಯಾಬ್ಸ್‌ನ ಶಿವಾನಂದ ಆರ್. ಕೋಟೇಶ್ವರ್, ದಯಾನಂದ ಸಾಗರ ಸಂಸ್ಥೆಗಳ (ಡಿಎಸ್‌ಐ) ಟಿಂಟಿಷಾ ಎಚ್. ಸಾಗರ್, ನಿಶಾನ್ ಎಚ್. ಸಾಗರ್, ರೋಹನ್ ಪ್ರೇಮ್ ಸಾಗರ್ ಹಾಗೂ ಗಾಳಿ ಸ್ವಾಮಿ, ಬಿ.ಜಿ. ಪ್ರಸಾದ್, ಗುರುವೆಂಕಟೇಶ್ ಎಂ. ಎನ್., ಉಪ ಪ್ರಾಂಶುಪಾಲರಾದ ರಾಮರಾಜು ಎಚ್. ಕೆ., ರಮೇಶ್ ಬಾಬು ಡಿ. ಆರ್., ಸುಮಾ ವಿ. ಉಪಸ್ಥಿತರಿದ್ದರು.

₹1 ಲಕ್ಷ ಲಂಚ: ಲೋಕಾಯುಕ್ತ ಬಲೆಗೆ ಪೊಲೀಸ್ ಇನ್‌ಸ್ಪೆಕ್ಟರ್

ಪ್ರಜಾವಾಣಿ ವಾರ್ತೆ

ಯಾದಗಿರಿ: ದೌರ್ಜನ್ಯ ಮತ್ತು ಹಲ್ಲೆ ಪ್ರಕರಣಗಳಲ್ಲಿ ಆರೋಪಿಯನ್ನು ಬಂಧಿಸದಿರುವುದಕ್ಕೆ ಹಾಗೂ 'ಬಿ' ರಿಪೋರ್ಟ್ ಹಾಕಲು ಆರೋಪಿಯಿಂದ ₹1 ಲಕ್ಷ ಲಂಚ ಪಡೆದ ಆರೋಪದಡಿ ಗುರುಮಠಕಲ್ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ಒಬ್ಬರನ್ನು ಲೋಕಾಯುಕ್ತ ಪೊಲೀಸರು ಶುಕ್ರವಾರ ರಾತ್ರಿ ವಶಕ್ಕೆ ಪಡೆದಿದ್ದಾರೆ.

ಪೊಲೀಸ್ ಇನ್‌ಸ್ಪೆಕ್ಟರ್ ವೀರಣ್ಣ ದೊಡ್ಡಮನಿ ಲಂಚ ಪಡೆದ ಆರೋಪಿ. ಗ್ರಾಮ ಪಂಚಾಯಿತಿಯೊಂದರ ಮಾಜಿ ಸದಸ್ಯ ಆನಂದ್ ಅವರು ನೀಡಿದ ದೂರಿನ ಅನ್ವಯ ಲೋಕಾಯುಕ್ತ ಪೊಲೀಸರು ದಾಳಿ ಮಾಡಿದ್ದಾರೆ.

ವೀರಣ್ಣ ಅವರು ₹2 ಲಕ್ಷ ಲಂಚಕ್ಕಾಗಿ ಬೇಡಿಕೆ ಇರಿಸಿದ್ದರು. ಶುಕ್ರವಾರ ಠಾಣೆಯಲ್ಲಿ ಲಂಚವಾಗಿ ₹1 ಲಕ್ಷ ಪಡೆಯುವಾಗ ಸಿಕ್ಕಿ ಬಿದ್ದಿದ್ದಾರೆ ಎಂದು ಮೂಲಗಳು ತಿಳಿಸಿವೆ. ಲೋಕಾಯುಕ್ತ ಡಿವೈಎಸ್‌ಪಿ ಜೆ.ಎಚ್. ಇನಾಮದಾರ್, ಇನ್‌ಸ್ಪೆಕ್ಟರ್ ಸಿದ್ದರಾಯ ಬಳ್ಳೂರಗಿ ಅವರಿದ್ದ ತಂಡವು ದಾಳಿ ಮಾಡಿತ್ತು.

ದೇವಸ್ಥಾನ, ಸೇನಾ ಶಿಬಿರದ ಮೇಲೆ ದಾಳಿಗೆ ಸಂಚು

ನವದೆಹಲಿ (ಪಿಟಿಐ): ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಜತೆ ನಂಟು ಹೊಂದಿರುವ ಶಹಜಾದ್ ಭಟ್ಟಿ ಗುಂಪಿಗೆ ಸೇರಿದ ವ್ಯಕ್ತಿಗಳ ಮೂಲಕ ದೆಹಲಿಯ ಐತಿಹಾಸಿಕ ದೇವಸ್ಥಾನ, ದೆಹಲಿ–ಸೋನಿಪತ್ ಹೆದ್ದಾರಿಯ ಜನಪ್ರಿಯ 'ಡಾಬಾ' ಮತ್ತು ಹರಿಯಾಣದ ಸೇನಾ ಶಿಬಿರದ ಮೇಲೆ ದಾಳಿ ನಡೆಸಲು ಸಂಚು ರೂಪಿಸಿರುವುದು ತನಿಖೆ ವೇಳೆ ಗೊತ್ತಾಗಿದೆ.

ದೆಹಲಿ ಪೊಲೀಸರ ವಿಶೇಷ ತಂಡವು 'ಗ್ಯಾಂಗ್ ಬಸ್ಟ್ ಆಪರೇಷನ್ 2.0' ಅಡಿಯಲ್ಲಿ ವಿವಿಧ ರಾಜ್ಯಗಳಿಂದ ಬಂಧಿಸಿದ್ದ ಒಂಬತ್ತು ಆರೋಪಿಗಳ ವಿಚಾರಣೆ ವೇಳೆ ಈ ಸಂಗತಿ ಬಹಿರಂಗಗೊಂಡಿದೆ.

'ಆರೋಪಿಗಳ ಪೈಕಿ ಒಬ್ಬ ದೆಹಲಿಯ ಐತಿಹಾಸಿಕ ದೇವಾಲಯಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದ. ಆವರಣದ ಛಾಯಾಚಿತ್ರಗಳನ್ನು ಸಾಮಾಜಿಕ ಮಾಧ್ಯಮಗಳ ಮೂಲಕ ಪಾಕಿಸ್ತಾನದ ವ್ಯಕ್ತಿಗಳಿಗೆ ಕಳುಹಿಸಿದ್ದ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದಾರೆ.

'ದೇವಸ್ಥಾನದಲ್ಲಿ ನಿಯೋಜಿಸಿದ್ದ ಪೊಲೀಸ್ ಸಿಬ್ಬಂದಿ, ಅರೆಸೇನಾ ಪಡೆಗಳನ್ನು ಗುರಿಯಾಗಿಸಿ ದಾಳಿ ಮಾಡಿ ಜನರಲ್ಲಿ ಆತಂಕ ಸೃಷ್ಟಿಸುವುದು ಈ ಗುಂಪಿನ ಉದ್ದೇಶವಾಗಿತ್ತು ಎಂದರು.

ಸುದ್ದಿ 2 ನಿಮಿಷ

ಸಿಯುಇಟಿ–ಯುಜಿ ಮಾರ್ಗಸೂಚಿ ಬಿಡುಗಡೆಗೊಳಿಸಿದ ಎನ್‌ಟಿಎ

ನವದೆಹಲಿ (ಪಿಟಿಐ): ವಿಶ್ವವಿದ್ಯಾಲಯ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಯುಇಟಿ–ಯುಜಿ) 2026 ಬರೆಯುವ ಅಭ್ಯರ್ಥಿಗಳ ವಸ್ತ್ರಸಂಹಿತೆ ಮತ್ತು ತರಬಹುದಾದ ವಸ್ತುಗಳ ಬಗ್ಗೆ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಮಾರ್ಗಸೂಚಿ ಹೊರಡಿಸಿದೆ.

ದೇಶದಾದ್ಯಂತ ಮತ್ತು ವಿದೇಶದಲ್ಲಿನ 15 ನಗರಗಳಲ್ಲಿ ಮೇ 11ರಿಂದ ಮೇ 31ರವರೆಗೆ ಸಿಯುಇಟಿ–ಯುಜಿ ಪರೀಕ್ಷೆ ನಡೆಯಲಿದೆ.

ಕಂಪ್ಯೂಟರ್ ಆಧಾರಿತ ಪರೀಕ್ಷೆ (ಸಿಬಿಟಿ) ನಡೆಸಲಾಗುವುದು. ಅಭ್ಯರ್ಥಿಗಳು ಪಾರದರ್ಶಕವಾದ ನೀರಿನ ಬಾಟಲ್‌ಗಳನ್ನು ಪರೀಕ್ಷಾ ಕೇಂದ್ರದೊಳಗೆ ತರಬಹುದು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

'ಕಲವ'ದಂತಹ ಧಾರ್ಮಿಕ ನಂಬಿಕೆಗಳಿಗೆ ಸಂಬಂಧಿಸಿದ ವಸ್ತುಗಳನ್ನು ಧರಿಸಲು ಅನುಮತಿಯಿದೆ. ಬಿಳಿ ಬಣ್ಣದ ಬಟ್ಟೆಗಳಿಗೆ ಆದ್ಯತೆ ನೀಡಿ, ಸಾಧ್ಯವಾದರೆ ಉಲ್ಲನ್ ಬಟ್ಟೆಗಳನ್ನು ಧರಿಸಿ. ತಪಾಸಣೆಗಾಗಿ ಆದಷ್ಟು ಬೇಗ ಪರೀಕ್ಷಾ ಕೇಂದ್ರಗಳಿಗೆ ತಲುಪಿ ಎಂದು ಸೂಚನೆ ನೀಡಲಾಗಿದೆ.

ಸಾಮಾನ್ಯ ಬೂಟುಗಳು, ಪಾದರಕ್ಷೆಗಳು ಮತ್ತು ಹಿಮ್ಮಡಿಗಳನ್ನು ಪೂರ್ಣವಾಗಿ ಮುಚ್ಚಿರದ 'ಹೀಲ್ಸ್'ಗಳಿಗೆ ಆದ್ಯತೆ ನೀಡಬೇಕು ಎಂದು ಸೂಚಿಸಲಾಗಿದೆ.

ಚನ್ನಪಟ್ಟಣ: 'ವಜ್ರ' ಸಂಚಾರಕ್ಕೆ ಹಸಿರು ನಿಶಾನೆ

ಚನ್ನಪಟ್ಟಣ: ಚನ್ನಪಟ್ಟಣ–ಬೆಂಗಳೂರು ನಡುವೆ ಸಂಚರಿಸುವ ಹವಾನಿಯಂತ್ರಿತ ವಜ್ರ ಬಿಎಂಟಿಸಿ ಬಸ್ ಸಂಚಾರಕ್ಕೆ ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಹಾಗೂ ಶಾಸಕ ಸಿ.ಪಿ. ಯೋಗೇಶ್ವರ್ ಶುಕ್ರವಾರ ಹಸಿರು ನಿಶಾನೆ ತೋರಿಸಿದರು.

ನಗರದ ಸರ್ಕಾರಿ ಬಸ್ ನಿಲ್ದಾಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾರಿಗೆ ಇಲಾಖೆ ಹಾಗೂ ಬಿಎಂಟಿಸಿ ಅಧಿಕಾರಿಗಳ ಸಮ್ಮುಖದಲ್ಲಿ ಚಾಲನೆ ನೀಡಿದ ನಂತರ ಎಲ್ಲರೂ ಬಸ್‌ನಲ್ಲಿ ತಾಲ್ಲೂಕಿನ ಬೈರಾಪಟ್ಟಣ ಬಮುಲ್ ಶಿಬಿರ ಕಚೇರಿವರೆಗೆ ಒಟ್ಟಿಗೆ ಪ್ರಯಾಣಿಸಿದರು.

ಪ್ರತಿ ದಿನ ಬೆಳಗ್ಗೆಯಿಂದ ರಾತ್ರಿವರೆಗೆ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಹವಾನಿಯಂತ್ರಿತ ಬಸ್‌ಗಳು ಚನ್ನಪಟ್ಟಣ–ಬೆಂಗಳೂರು ಮಧ್ಯೆ ಸಂಚರಿಸಲಿವೆ. ಬಿಎಂಟಿಸಿ ಬಸ್ ಸಂಚಾರದಿಂದ ಕೆಎಸ್‌ಆರ್‌ಟಿಸಿ ಬಸ್ ದಟ್ಟಣೆ ಮತ್ತು ಸಂಚಾರ ಒತ್ತಡ ಕಡಿಮೆಯಾಗಲಿದೆ ಎಂದು ಶಾಸಕ ಸಿ.ಪಿ. ಯೋಗೇಶ್ವರ್ ಹೇಳಿದರು.

ನಗರಸಭೆ ಅಧ್ಯಕ್ಷ ನಾಗೇಶ್, ಸದಸ್ಯ ಸತೀಶ್ ಬಾಬು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುನೀಲ್ ಕುಮಾರ್, ಚನ್ನಪಟ್ಟಣ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಪ್ರಮೋದ್, ಶಿವಮಾದು, ಡಿ.ಕೆ.ಕಾಂತರಾಜು, ರಂಗನಾಥ್, ವಾಸಿಲ್ ಆಲಿಖಾನ್, ಅಕ್ಕೂರು ಶೇಖರ್, ಮಲುವೇಗೌಡ, ಎ.ಸಿ.ವೀರೇಗೌಡ, ಚಂದ್ರಸಾಗರ್, ಕರಣ್ ಆನಂದ್, ಪಿ.ಡಿ.ರಾಜು ಇದ್ದರು.

ಸಂಗೀತನಾದ ಟ್ರಸ್ಟ್ ವಾರ್ಷಿಕೋತ್ಸವದ ಸಮಾರಂಭದಲ್ಲಿ ರಂಗಕರ್ಮಿ ಆರ್. ವೆಂಕಟರಾಜು ಅವರನ್ನು ಸನ್ಮಾನಿಸಲಾಯಿತು. ಪಲ್ಲಕ್ಕಿ ನಾರೇಯಣ ಸ್ವಾಮೀಜಿ, ಮಾಜಿ ಶಾಸಕ ರಾಜಣ್ಣ, ಸಂಸ್ಥೆಯ ಅಧ್ಯಕ್ಷ ಕೃಷ್ಣ ಮೂರ್ತಿ, ಡಾ.ದೇವರಾಜ್ ಆಂಜನಪ್ಪ, ಗೀತಾ ಕೈವಾರ, ಮುನಿರಾಜು, ಭಾಗವಹಿಸಿದ್ದರು

ವಿಶಾಖಪಟ್ಟಣ- ಬೆಂಗಳೂರು ಕಾಯಂ ರೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶಾಖಪಟ್ಟಣ ಮತ್ತು ಎಸ್‌ಎಂವಿಟಿ ಬೆಂಗಳೂರು ನಡುವೆ ಸಂಚರಿಸುತ್ತಿದ್ದ ವಿಶೇಷ ರೈಲನ್ನು ಪೂರ್ವ ಕರಾವಳಿ ರೈಲ್ವೆಯು ಕಾಯಂಗೊಳಿಸಿದೆ. ಈ ಸಂಚಾರವು ಮೇ 10ರಂದು ವಿಶಾಖಪಟ್ಟಣದಿಂದ, ಮೇ 11ರಂದು ಬೆಂಗಳೂರಿನಿಂದ ಜಾರಿಗೆ ಬರಲಿದೆ.

ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲಾಗಿ ಇದು ಕಾರ್ಯನಿರ್ವಹಿಸಲಿದ್ದು, ಪ್ರತಿ ಭಾನುವಾರ ಮಧ್ಯಾಹ್ನ 3.20ಕ್ಕೆ ವಿಶಾಖಪಟ್ಟಣದಿಂದ ಹೊರಟು ಮರುದಿನ ಮಧ್ಯಾಹ್ನ 1.50ಕ್ಕೆ ಎಸ್‌ಎಂವಿಟಿಗೆ ತಲುಪಲಿದೆ. ಬೆಂಗಳೂರಿನಿಂದ ಪ್ರತಿ ಸೋಮವಾರ ಮಧ್ಯಾಹ್ನ 3.50ಕ್ಕೆ ಹೊರಟು ಮರುದಿನ ಮಧ್ಯಾಹ್ನ 1.30ಕ್ಕೆ ವಿಶಾಖಪಟ್ಟಣ ತಲುಪಲಿದೆ.

18 ಬೋಗಿಗಳ ಈ ರೈಲು ಈ ಹಿಂದೆ ವಿಶೇಷ ರೈಲಿಗೆ ಸೂಚಿಸಲಾಗಿದ್ದ ನಿಲುಗಡೆಗಳು ಮತ್ತು ವೇಳಾಪಟ್ಟಿಯಂತೆಯೇ ಸಂಚರಿಸಲಿದೆ ಎಂದು ರೈಲ್ವೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮಾರ್ಗ ಬದಲಾವಣೆ: ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗದ ಹಿರೇಹಳ್ಳಿ ಯಾರ್ಡ್‌ನಲ್ಲಿ ಸುರಕ್ಷತಾ ಮತ್ತು ಸಿಗ್ನಲಿಂಗ್ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುತ್ತಿರುವುದರಿಂದ, ಮೇ 19 ಮತ್ತು 20ರಂದು ವಿವಿಧ ರೈಲುಗಳ ಮಾರ್ಗ ಬದಲಾವಣೆ ಮಾಡಲಾಗಿದೆ.

ಮೇ 20ರಂದು ಯಶವಂತಪುರ–ಶಿವಮೊಗ್ಗ ಟೌನ್ ದೈನಂದಿನ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್ ರೈಲು ಯಶವಂತಪುರ, ಚಿಕ್ಕಬಾಣಾವರ, ನೆಲಮಂಗಲ, ಹಾಸನ ಮತ್ತು ಅರಸೀಕೆರೆ ಮಾರ್ಗವಾಗಿ ಸಂಚರಿಸಲಿದೆ. ಈ ರೈಲು ತುಮಕೂರು ಮತ್ತು ತಿಪಟೂರು ನಿಲ್ದಾಣಗಳಲ್ಲಿ ನಿಲುಗಡೆ ಹೊಂದಿರುವುದಿಲ್ಲ.

ಮೇ 20ರಂದು ಮೈಸೂರು–ಬೆಳಗಾವಿ ವಿಶ್ವಮಾನವ ದೈನಂದಿನ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್ ರೈಲು ಮೈಸೂರು, ಹೊಳೆನರಸೀಪುರ, ಹಾಸನ ಮತ್ತು ಅರಸೀಕೆರೆ ಮಾರ್ಗವಾಗಿ ಸಂಚರಿಸಲಿದೆ. ಮೇ 20 ರಂದು ಕೆಎಸ್‌ಆರ್ ಬೆಂಗಳೂರು–ತುಮಕೂರು ಮೆಮು ರೈಲು ದೊಡ್ಡಬೆಲೆ ಮತ್ತು ತುಮಕೂರು ನಿಲ್ದಾಣಗಳ ನಡುವೆ ಭಾಗಶಃ ರದ್ದಾಗಲಿದೆ. ರೈಲು ದೊಡ್ಡಬೆಲೆಯಲ್ಲಿ ಕೊನೆಗೊಳ್ಳಲಿದೆ.

ಮೇ 20ರಂದು ತುಮಕೂರು–ಕೆಎಸ್‌ಆರ್ ಬೆಂಗಳೂರು ಮೆಮು ರೈಲು ತುಮಕೂರು ಮತ್ತು ದೊಡ್ಡಬೆಲೆ ನಡುವೆ ಭಾಗಶಃ ರದ್ದಾಗಲಿದೆ. ಈ ರೈಲು ತುಮಕೂರಿನ ಬದಲಾಗಿ ದೊಡ್ಡಬೆಲೆ ನಿಲ್ದಾಣದಿಂದ ನಿಗದಿತ ಸಮಯಕ್ಕೆ ತನ್ನ ಪ್ರಯಾಣ ಆರಂಭಿಸಲಿದೆ.

ಮೇ 19ರಂದು ವೇಲಂಕಣಿ–ವಾಸ್ಕೊ ಡ ಗಾಮ ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು ಮಾರ್ಗ ಮಧ್ಯೆ 60 ನಿಮಿಷ ನಿಲುಗಡೆ ಮಾಡುವುದರಿಂದ ವಿಳಂಬವಾಗಿ ಸಂಚರಿಸಲಿದೆ. ಮೇ 20ರಂದು ಕೆಎಸ್‌ಆರ್ ಬೆಂಗಳೂರು–ಧಾರವಾಡ ಸಿದ್ದಗಂಗಾ ದೈನಂದಿನ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್, ಯಶವಂತಪುರ –ಹಜರತ್ ನಿಜಾಮುದ್ದೀನ್ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್ ರೈಲುಗಳು ಮಾರ್ಗಮಧ್ಯೆ ತಲಾ 30 ನಿಮಿಷ ನಿಲುಗಡೆಗೊಳ್ಳಲಿದೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ವಿಮಾನ ನಿಲ್ದಾಣದಿಂದ ಆಂಧ್ರಕ್ಕೆ ದಶಪಥ

ಪ್ರಜಾವಾಣಿ ವಾರ್ತೆ

ವಿಜಯಪುರ (ದೇವನಹಳ್ಳಿ): ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಆಂಧ್ರ ಪ್ರದೇಶದ ಪೆನುಗೊಂಡವರೆಗೆ ₹2,400 ಕೋಟಿ ವೆಚ್ಚದಲ್ಲಿ ದಶಪಥ ನಿರ್ಮಾಣ ಕಾಮಗಾರಿ ಮುಂಬರುವ ಮಾರ್ಚ್‌ನಿಂದ ಆರಂಭಗೊಳ್ಳಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್.ಮುನಿಯಪ್ಪ ಹೇಳಿದ್ದಾರೆ.

ಮುದಗುರ್ಕಿಯಲ್ಲಿ ಶುಕ್ರವಾರ ಗ್ರಾಮಸ್ಥರ ಅಹವಾಲು ಆಲಿಸಿ ಮಾತನಾಡಿದ ಅವರು, ಬೆಂಗಳೂರು–ಮೈಸೂರು ಹೆದ್ದಾರಿ ಮಾದರಿಯಲ್ಲಿ ಕೆಂಪೇಗೌಡ ವಿಮಾನ ನಿಲ್ದಾಣ–ಪೆನುಗೊಂಡ ಹೆದ್ದಾರಿಯಲ್ಲಿ ಬರುವ ಎಲ್ಲಾ ಪ್ರಮುಖ ಗ್ರಾಮಗಳಲ್ಲಿ ಅಂಡರ್ ಪಾಸ್ ನಿರ್ಮಾಣವಾಗಲಿವೆ ಎಂದರು.

ಅಪಘಾತ ತಾಣವಾಗಿರುವ ಮುದುಗುರ್ಕಿ ಗ್ರಾಮದ ಬಳಿ ಕೆಳ ಸೇತುವೆ ನಿರ್ಮಿಸುವಂತೆ ಗ್ರಾಮಸ್ಥರು ಮನವಿ ಸಲ್ಲಿಸಿದರು. ಮುದುಗುರ್ಕಿಯಿಂದ ಆವತಿವರಗೆ ರಸ್ತೆ ಬದಿ ಲಾರಿ ಸೇರಿದಂತೆ ಇತರ ವಾಹನಗಳ ನಿಲುಗಡೆಯಾಗದಂತೆ ನೋಡಿಕೊಳ್ಳಲು ಸೂಚಿಸಲಾಗುವುದು ಎಂದು ಭರವಸೆ ನೀಡಿದರು.

ತಾತ್ಕಾಲಿಕವಾಗಿ ವಾಹನ ದಟ್ಟಣೆ ಸಮಸ್ಯೆಗೆ ಪರಿಹಾರ ಒದಗಿಸಲಾಗುವುದು. ಹೈಮಾಸ್ಟ್ ದೀಪಕ್ಕೂ ವ್ಯವಸ್ಥೆ ಮಾಡಲು ಸೂಚಿಸಲಾಗುವುದು ಎಂದರು.

ವಿಜಯಪುರ ಸಮೀಪದ ಮುದುಗುರ್ಕಿ ಗ್ರಾಮಕ್ಕೆ ಸಚಿವ ಕೆ.ಎಚ್.ಮುನಿಯಪ್ಪ ಅವರು ಭೇಟಿ ನೀಡಿದರು

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಹಿರಿಯ ಅಧಿಕಾರಿ ಜಯಕುಮಾರ್, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ರಾಜಣ್ಣ, ಉಪಾಧ್ಯಕ್ಷ ನಾರಾಯಣಸ್ವಾಮಿ, ಗ್ರಾಮಸ್ಥರು ಉಪಸ್ಥಿತರಿದ್ದರು.

ನಗರಸಭಾ ಕಾರ್ಯಾಲಯ, ಹೊಸಕೋಟೆ
ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ–562114,
ದೂರವಾಣಿ:–27931221, ಸಹಾಯವಾಣಿ: 27931759
Email:-itstaff_ulb_hosakote@yahoo.com Website: www.hosakotecity.mrc.gov.in
ನಂ.ನಸಹೊ/ತಾಂತ್ರಿಕ ಶಾಖೆ/ಟೆಂಡರ್/ಸಿಆರ್/05/2026–27 ದಿನಾಂಕ: 08.05.2026

"ಟೆಂಡರ್ ಪ್ರಕಟಣೆ"(ಇ–ಪ್ರೊಕ್ಯೂರ್‌ಮೆಂಟ್ ಕೆ.ಟಿ.ಪಿ.ಪಿ ಪೋರ್ಟಲ್ ಮೂಲಕ)

ಪೌರಾಯುಕ್ತರು ನಗರಸಭೆ ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ **2025–26ನೇ ಸಾಲಿನ ಸನ್ಮಾನ್ಯ** ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ (CMIDP) ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ 02 ರ ಪ್ರಕಾರ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಡಿ ಅರ್ಹ ದರ್ಜೆಯ ನೋಂದಾಯಿತ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮರು ಟೆಂಡರ್‌ನ್ನು ಕರೆಯಲಾಗಿರುತ್ತದೆ.

ಕ್ರ. ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಮೀಸಲಿರಿಸಿರುವ ವರ್ಗ
1	DMA/2025-26/RD/WORK-INDENT53597/CALL-4	34.00	GENERAL
2	DMA/2025-26/OW/WORK-INDENT53602/CALL-4	40.00	GENERAL

1) ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **23.05.2026 ರ ಸಂಜೆ 5:30 ಗಂಟೆಯವರೆಗೆ** ಹಾಗೂ ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ **25.05.2026 ರ ಬೆಳಗ್ಗೆ 11:00** ಗಂಟೆಗೆ ನಿಗಧಿಪಡಿಸಲಾಗಿರುತ್ತದೆ.
2) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in/#/portal/portal-home** ನಿಂದ ಡೌನ್ ಲೋಡ್ ಮಾಡಿಕೊಳ್ಳುವುದು.

ಸಹಿ/– ಪೌರಾಯುಕ್ತರು
ನಗರಸಭೆ, ಹೊಸಕೋಟೆ.
ವಾಸಾಸಂಇ/ವಾ.ಪ್ರ/ಶಿರಡಿಸಾಯಿ/583/2026–27

ನೈಋತ್ಯ ರೈಲ್ವೆ
ರೈಲ್ವೆ ಸಚಿವಾಲಯ
(ನೈಋತ್ಯ ರೈಲ್ವೆ (ಓಪನ್ ಲೈನ್))
ಅಧಿಸೂಚನೆ
ನವದೆಹಲಿ, 30 ಏಪ್ರಿಲ್ 2026

ಎಸ್.ಓ 2161(ಇ) –– ರೈಲ್ವೆ ಕಾಯ್ದೆ, 1989 (1989ರ 24) ರ 20F ನ ಷರತ್ತು (6) ಮತ್ತು ಸೆಕ್ಷನ್ 2ರ ಷರತ್ತು 7ಎ ನಿಂದ ನೀಡಲಾದ ಅಧಿಕಾರಗಳನ್ನು ಚಲಾಯಿಸುವಾಗ, ರೈಲ್ವೆ ಸಚಿವಾಲಯ [ನೈಋತ್ಯ ರೈಲ್ವೆ, ಓಪನ್ ಲೈನ್ ಮೈಸೂರು] ಈ ಕೆಳಗಿನ ಕೋಷ್ಟಕದ (4)ನೇ ಕಾಲಂನಲ್ಲಿ ಉಲ್ಲೇಖಿಸಲಾದ ಅಧಿಕಾರಿಗಳಿಗೆ "ಸಕ್ಷಮ ಪ್ರಾಧಿಕಾರ" ಎಂದು ಮತ್ತು ಕೆಳಗಿನ ಕೋಷ್ಟಕದ (5)ನೇ ಕಾಲಂನಲ್ಲಿ ಉಲ್ಲೇಖಿಸಲಾದ ಅಧಿಕಾರಿಗಳಿಗೆ "ಮಧ್ಯಸ್ಥರು" ಎಂದು ಅಧಿಕಾರ ನೀಡುತ್ತದೆ. ಈ ಅಧಿಸೂಚನೆಯನ್ನು ಅಧಿಕೃತ ರಾಜ್ಯಪತ್ರ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುವಂತೆ, ಕೆಳಗಿನ ಕೋಷ್ಟಕದ (3)ನೇ ಕಾಲಂನಲ್ಲಿ ಉಲ್ಲೇಖಿಸಲಾದ ಜಿಲ್ಲೆಗೆ ಸಂಬಂಧಿಸಿದ ವಿಶೇಷ ರೈಲ್ವೆ ಯೋಜನೆಗಳಿಗೆ ಸಂಬಂಧಿಸಿದಂತೆ, ಯೋಜನೆಯ ಅನುಷ್ಠಾನ, ನಿರ್ವಹಣೆ, ಮತ್ತು ಕಾರ್ಯಾಚರಣೆಯು ಸಾರ್ವಜನಿಕ ಉದ್ದೇಶಕ್ಕಾಗಿ.

ಕ್ರ. ಸಂ.	ಯೋಜನೆಯ ಹೆಸರು	ಜಿಲ್ಲೆ	ಸಕ್ಷಮ ಪ್ರಾಧಿಕಾರ	ಮಧ್ಯಸ್ಥಗಾರ
1	2	3	4	5
1	**ಸಂಪಿಗೆ ರಸ್ತೆ – ಅರಸೀಕೆರೆ ವಿಭಾಗ:** ಎಲ್‌ಸಿ ನಂ 67 ಬದಲಿಗೆ ಕಿಮೀ. 114/300–400, ಅಮ್ಮಸಂದ್ರ – ಬಾಣಸಂದ್ರ ರೈಲ್ವೆ ನಿಲ್ದಾಣಗಳ ನಡುವೆ ಆರ್‌ಯುಬಿ ನಿರ್ಮಾಣ.	ಡಿ. ಹೊಸಹಳ್ಳಿ ಹೆಗ್ಗೆರೆ, ಲಿಂಗಾಪುರ (ಗ್ರಾಮಗಳು) ತುರುವೇಕೆರೆ (ತಾಲ್ಲೂಕು) ತುಮಕೂರು (ಜಿಲ್ಲೆ)	ವಿಶೇಷ ಭೂಸ್ವಾಧೀನ ಅಧಿಕಾರಿ, ತುಮಕೂರು – ರಾಯದುರ್ಗ ರೈಲ್ವೆ ಯೋಜನೆ, ತುಮಕೂರು	ಪ್ರಾದೇಶಿಕ, ಆಯುಕ್ತರು, ಬೆಂಗಳೂರು.
2	**ಸಂಪಿಗೆ ರಸ್ತೆ – ಅರಸೀಕೆರೆ ವಿಭಾಗ:** ಎಲ್‌ಸಿ ನಂ. 72 ಬದಲಿಗೆ ಕಿಮೀ. 122/500–600, ಬಾಣಸಂದ್ರ – ಕರಡಿ ರೈಲ್ವೆ ನಿಲ್ದಾಣಗಳ ನಡುವೆ ಆರ್‌ಯುಬಿ ನಿರ್ಮಾಣ.	ಎ. ಹೊಸಹಳ್ಳಿ (ಗ್ರಾಮ) ತುರುವೇಕೆರೆ (ತಾಲ್ಲೂಕು) ತುಮಕೂರು (ಜಿಲ್ಲೆ)		

No. Y/W. 277/Land/RUB(67&72)/TTR
ಸಹಿ/–
ಚನ್ನೋ ಮಲ್ ಗುಪ್ತಾ,
ಪ್ರಧಾನ ಮುಖ್ಯ ಇಂಜಿನಿಯರ್
PUB/106/AAMO/PRB/SWR/2026-27
ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.
South Western Railway - SWR | SWRRLY | SWRAILWAYHQ | sw_railways

GSTN GOODS AND SERVICES TAX NETWORK (A Government Enterprise)
ಸರಕು ಮತ್ತು ಸೇವೆಗಳ ತೆರಿಗೆ ಜಾಲ
ಸಾಂಸ್ಥಿಕ ಕಚೇರಿ: ಈಸ್ಟ್ ವಿಂಗ್ – 4ನೇ ಮಹಡಿ, ವರ್ಲ್ಡ್‌ಮಾರ್ಕ್–1, ಏರೋಸಿಟಿ, ನವದೆಹಲಿ–110037
ಫೋನ್: 011–49111200, www.gstn.org.in

ಭಾರತದಲ್ಲಿ ಸರಕು ಮತ್ತು ಸೇವೆಗಳ ತೆರಿಗೆ (ಜಿಎಸ್‌ಟಿ) ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ, ತೆರಿಗೆದಾತರಿಗೆ ಮತ್ತು ಇನ್ನಿತರ ಪಾಲುದಾರರಿಗೆ, ಮಾಹಿತಿ ತಂತ್ರಜ್ಞಾನ ಮೂಲಸೌಕರ್ಯ ಹಾಗೂ ಸೇವೆಗಳನ್ನು ಒದಗಿಸುವುದಕ್ಕಾಗಿ, ಸೆಕ್ಷನ್ 8 ಅಡಿಯಲ್ಲಿ, ಲಾಭಕ್ಕಾಗಿ ಅಲ್ಲದ, 100% ಸರ್ಕಾರಿ ಮಾಲೀಕತ್ವದಲ್ಲಿರುವ, ಸರಕು ಮತ್ತು ಸೇವೆಗಳ ತೆರಿಗೆ ಜಾಲ (ಜಿಎಸ್‌ಟಿಎನ್) ಎಂಬ ಸಂಸ್ಥೆಯು, ಮಾರ್ಚ್ 2013ರಲ್ಲಿ ಸ್ಥಾಪನೆಗೊಂಡಿತು. ಜಿಎಸ್‌ಟಿ ಅನುಸರಣೆಗಾಗಿ ಕಾಮನ್ ಪೋರ್ಟಲ್‌ನ ಅಭಿವೃದ್ಧಿ ಮತ್ತು ನಿಭಾವಣೆಯೇ, ಜಿಎಸ್‌ಟಿಎನ್ ಸಂಸ್ಥೆಯ ಮುಖ್ಯ ಜವಾಬ್ದಾರಿಯಾಗಿದೆ.

ಇದೀಗ, ಸದರಿ ಸಂಸ್ಥೆಯು, **ನವದೆಹಲಿಯಲ್ಲಿ** ಇರುವ ಒಂದು ಹಿರಿಯ ಆಡಳಿತಾತ್ಮಕ ಹುದ್ದೆಯನ್ನು ಭರ್ತಿ ಮಾಡಿಕೊಳ್ಳಲು ಯೋಜಿಸಿರುತ್ತದೆ. ವಿಸ್ತ್ರತವಾದ ಉದ್ಯೋಗ ವಿವರ ಮತ್ತು ಇನ್ನಿತರೆ ಸಂಬಂಧಿತ ಮಾಹಿತಿಗಾಗಿ, ದಯವಿಟ್ಟು ಭೇಟಿ ಕೊಡಿ https://gstn.org.in/gstn-openings.

ಸೀನಿಯರ್ ವೈಸ್ ಪ್ರೆಸಿಡೆಂಟ್ (ಫೈನಾನ್ಸ್)

ಸೀನಿಯರ್ ವೈಸ್ ಪ್ರೆಸಿಡೆಂಟ್ (ಫೈನಾನ್ಸ್) ಹುದ್ದೆಯು, ಜಿಎಸ್‌ಟಿಎನ್‌'ಗಾಗಿ ಆರ್ಥಿಕ ಸಂಪನ್ಮೂಲ ನಿರ್ವಹಣೆಯ ಜವಾಬ್ದಾರಿ ಹೊಂದಿರುತ್ತದೆ. ಈ ಹುದ್ದೆಯನ್ನು ಹೊಂದುವವರು, ಎಲ್ಲಾ ಶಾಸನಬದ್ಧ ಮತ್ತು ನೀತಿ ನಿಯಮಗಳ ಅನುಸರಣೆಯನ್ನು ಕೂಡ ನಿಭಾಯಿಸಬೇಕಾಗುತ್ತದೆ, ನಿರಂತರವಾಗಿ ಮೇಲ್ವಿಚಾರಣೆ ಮಾಡಬೇಕಾಗುತ್ತದೆ, ಆರ್ಥಿಕ ನಿರ್ವಹಣೆ, ಅಕೌಂಟಿಗ್ ಕುರಿತಾಗಿ ಎಲ್ಲಾ ರೀತಿಯ ವರದಿಗಳನ್ನು ಸಲ್ಲಿಸಬೇಕಾಗುತ್ತದೆ ಮತ್ತು ಸಂಸ್ಥೆಯ ಅಲ್ಪ ಮತ್ತು ದೀರ್ಘಾವಧಿ ಕಾರ್ಯತಂತ್ರಕ್ಕೆ ಸಂಬಂಧಿತ ಆರ್ಥಿಕ ನಿರ್ಧಾರಗಳಿಗೆ ಒಳ ಹರಿವುಗಳನ್ನು ನೀಡಬೇಕಾಗುತ್ತದೆ.

ಪ್ರಾಯ:
1) ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕದ ಮೇರೆಗೆ, 56 ವರ್ಷ ಅಥವಾ ಅದಕ್ಕಿಂತ ಕಡಿಮೆ ವಯಸ್ಸಿನ, ಸೇವೆಯಲ್ಲಿರುವ ಸರ್ಕಾರಿ ಅಧಿಕಾರಿಗಳು.
2) ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕದ ಮೇರೆಗೆ, ಗರಿಷ್ಠ 45 ವರ್ಷ ಖಾಸಗಿ ಕ್ಷೇತ್ರದ ಉದ್ಯೋಗಿಗಳಿಗೆ.

ಕಾರ್ಯಾನುಭವ:
- **ಖಾಸಗಿ ಕ್ಷೇತ್ರದ ಅಭ್ಯರ್ಥಿಗಳಿಗೆ:** ಹಣಕಾಸು ಸೇವೆಗಳು/ಸರ್ಕಾರಿ/ಪಿಎಸ್‌ಯು ಕ್ಷೇತ್ರದಲ್ಲಿ ಭಾರಿ ಕ್ರಾಸ್–ಸೆಕ್ಷನ್ ಹೊಂದಿರುವ ರಿಟೇಲ್ ಮತ್ತು ಬಿಜನೆಸ್ ಯೂಸರ್ಸ್ ಮಾದರಿಯ, ಬೃಹತ್ ಪ್ರಮಾಣದ ಐಟಿ ವ್ಯವಹಾರ ಸಂಸ್ಕರಣೆಯಲ್ಲಿ ವಿಶೇಷ ಪರಿಣಿತಿ ಹೊಂದಿರುವ ಸಂಸ್ಥೆಯಲ್ಲಿ, ಕನಿಷ್ಠ **15–18 ವರ್ಷಗಳ** ಕಾರ್ಯಾನುಭವ ಹೊಂದಿರಬೇಕು. ಅಲ್ಲದೆ, ಟಾಪ್ ಮ್ಯಾನೇಜ್‌ಮೆಂಟ್ ತಂಡದಲ್ಲಿ ಕನಿಷ್ಠ **5 (ಐದು) ವರ್ಷಗಳ ಕಾಲ** ಕಾರ್ಯನಿರ್ವಹಿಸಿದ ಅನುಭವ ಇರಬೇಕು. ಅಭ್ಯರ್ಥಿಯು, ಅಂಗೀಕೃತ ಸಂಸ್ಥೆಗಳಿಂದ/ಸಿಎ'ನಿಂದ **ಎಂಬಿಎ (ಫೈನಾನ್ಸ್) ವಿಷಯದಲ್ಲಿ ಪದವಿ ಹೊಂದಿರುವುದು ಕಡ್ಡಾಯ.**
- **ಸರ್ಕಾರಿ ಮತ್ತು ಪಿಎಸ್‌ಯು ಅಭ್ಯರ್ಥಿಗಳಿಗೆ:** ಅಖಿಲ ಭಾರತ ಸೇವೆಗಳ/ಕೇಂದ್ರ ಸೇವೆಗಳ/ಕೇಂದ್ರಿಯ ಪಿಎಸ್‌ಯು'ಗಳಲ್ಲಿನ ಗ್ರೂಪ್ ಎ ಲೆವೆಲ್‌ನಲ್ಲಿ ಕನಿಷ್ಠ 13 ವರ್ಷಗಳ ಸೇವಾನುಭವ ಹೊಂದಿರುವ ಮತ್ತು ಲೆವೆಲ್ 13 ರಲ್ಲಿ ಅನಲಾಗಸ್ ಹುದ್ದೆಗಳನ್ನು ನಿರ್ವಹಿಸಿರುವ ಅಥವಾ ಮಾತೃ ವೃಂದ ಅಥವಾ ಇಲಾಖೆಯಲ್ಲಿಯೇ ನಿಯಮಿತ ಆಧಾರದ ಮೇರೆಗೆ, ಲೆವೆಲ್ 12 ರಲ್ಲಿ ಐದು ವರ್ಷ ಅನುಭವ ಹೊಂದಿರಬೇಕು.

ಅರ್ಜಿ ಸಲ್ಲಿಕೆಗೆ ಸೂಚನೆಗಳು:
- **ಖಾಸಗಿ ಕ್ಷೇತ್ರದ ಅಭ್ಯರ್ಥಿಗಳಿಗೆ:** ಕಡ್ಡಾಯವಾಗಿ ಕವರ್ ಲೆಟರ್ ಒಳಗೊಂಡಿರುವ ಅಪ್–ಟು–ಡೇಟ್ ರೆಸ್ಯೂಮ್ ಪ್ರತಿಯನ್ನು, **8ನೇ ಜೂನ್, 2026** ರೊಳಗೆ **careers@gstn.org.in** ವಿಳಾಸಕ್ಕೆ ಕಳುಹಿಸುವುದು.
- **ಸರ್ಕಾರಿ ಮತ್ತು ಪಿಎಸ್‌ಯು ಉದ್ಯೋಗಿಗಳಿಗೆ:** ಕಡ್ಡಾಯವಾಗಿ ಕವರ್ ಲೆಟರ್ ಒಳಗೊಂಡಿರುವ ಅಪ್–ಟು–ಡೇಟ್ ರೆಸ್ಯೂಮ್ ಪ್ರತಿಯನ್ನು, **8ನೇ ಜೂನ್, 2026** ರೊಳಗೆ **careers@gstn.org.in** ವಿಳಾಸಕ್ಕೆ ಕಳುಹಿಸುವುದು. ಅಲ್ಲದೆ, ನಿಮ್ಮ ಅಭ್ಯರ್ಥಿತನವು ಪರಿಗಣನೆಗೆ ಒಳಗಾಗಬೇಕಾದಲ್ಲಿ, ನಿಮ್ಮ ಅರ್ಜಿಗಳನ್ನು ಸೂಕ್ತ ವಿಧಾನದಲ್ಲಿ ವೃಂದ ನಿರಾಕ್ಷೇಪಣೆ, ವಿಜಿಲನ್ಸ್ ನಿರಾಕ್ಷೇಪಣೆ ಮತ್ತು ಹಿಂದಿನ ಐದು ವರ್ಷಗಳ ಅಪಾರ್ ವಿವರಗಳೊಂದಿಗೆ ಸಲ್ಲಿಸತಕ್ಕದ್ದು. ಅದಾಗ್ಯೂ, ಅರ್ಜಿದಾರರು, ಅಡ್ವಾನ್ಸ್ ಪ್ರತಿಯನ್ನು **careers@gstn.org.in** ಮುಖಾಂತರ ಜಿಎಸ್‌ಟಿಎನ್ ಸಂಸ್ಥೆಗೆ ಸಲ್ಲಿಸಬಹುದಾಗಿರುತ್ತದೆ.

ಸಂಪೂರ್ಣ ವಿವರಗಳನ್ನು ತಿಳಿದುಕೊಳ್ಳಲು, ದಯವಿಟ್ಟು **www.gstn.org.in** ವೆಬ್‌ಸೈಟ್‌ನ 'ಕರಿಯರ್ ಸೆಕ್ಷನ್' ಪರಿಶೀಲಿಸಿರಿ.
CBC 15319/12/0009/2627

ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ
ಬೆಳಗುಂಬ ರಸ್ತೆ, ತುಮಕೂರು – 572103
ಫ್ಯಾಕ್ಸ್ :0816–2255761 ದೂರವಾಣಿ : 2272280
ಸಂಖ್ಯೆ, ಟಿಯುಡಿಎ/ತಾಂತ್ರಿಕ–ಎಇಇ/ಮರು ಟೆಂಡರ್–01/2026–27 ದಿನಾಂಕ:– 05–05–2026

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆದ್ಯಾದೇಶ 1999–2000 ರ ಪ್ರಕಾರ ಹಾಗೂ KW-1, ಮತ್ತು KW-2, ಸ್ಟಾಂಡರ್ಡ್ ಬಿಡ್ ಡಾಕ್ಯುಮೆಂಟ್ ರೀತ್ಯಾ ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆ ಗೊಳಪಟ್ಟಂತೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕಾಮಗಾರಿಗಳಿಗೆ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. (ವೆಬ್ ವಿಳಾಸ: **https//kppp.karnataka.gov.in)** ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು. ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕವೇ ನಿಗಧಿಪಡಿಸಿದ ದಿನಾಂಕ ಹಾಗೂ ಸಮಯದೊಳಗೆ ಸಲ್ಲಿಸುವುದು.

ಖಾಲಿ ಟೆಂಡರ್ ಫಾರಂಗಳಿಗೆ ಅರ್ಜಿ ಸಲ್ಲಿಸುವ ದಿನಾಂಕ	**ದಿನಾಂಕ: 05–05–2026 ರಿಂದ ದಿನಾಂಕ 19–05–2026 ವೇಳೆ 17–00 ಗಂಟೆಯವರೆಗೆ**
ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ	**ದಿನಾಂಕ: 19–05–2026 ವೇಳೆ 17–00 ಗಂಟೆಯವರೆಗೆ**
ತಾಂತ್ರಿಕ ಬಿಡ್ ತೆರೆಯುವ ಸಮಯ ಮತ್ತು ದಿನಾಂಕ	**ದಿನಾಂಕ: 21–05–2026 ಬೆಳಿಗ್ಗೆ 11.00 ಗಂಟೆಗೆ**
ಆರ್ಥಿಕ ಬಿಡ್ ತೆರೆಯುವ ದಿನಾಂಕ	**ತಾಂತ್ರಿಕ ಬಿಡ್ ಅನುಮೋದನೆಯ ನಂತರ**

ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಬಹುದು.

ಸಹಿ/– ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು
DIPR/TUM/RO-24/26-27/Oysters

ನೈಋತ್ಯ ರೈಲ್ವೆ
ರೈಲ್ವೆ ಸಚಿವಾಲಯ
ಅಧಿಸೂಚನೆ
ಹುಬ್ಬಳ್ಳಿ, ದಿನಾಂಕ 23 ಏಪ್ರಿಲ್, 2026
ರೈಲ್ವೆ ಕಾಯಿದೆ, 1989 (2008ರ ತಿದ್ದುಪಡಿ)ರ ಸೆಕ್ಷನ್ 20A ಅಡಿಯಲ್ಲಿ ಅಧಿಸೂಚನೆ

S.O. 2120(E).- ರೈಲ್ವೆ ಕಾಯಿದೆ, 1989 (1989ರ 24ನೇ ಕಾಯಿದೆ) ರ ಸೆಕ್ಷನ್ 20A ರ ಉಪವಿಭಾಗ (1) ರ ಮೂಲಕ ನೀಡಲಾದ ಅಧಿಕಾರಗಳನ್ನು ಬಳಸಿಕೊಂಡು, ಕೇಂದ್ರ ಸರ್ಕಾರವು ಸಾರ್ವಜನಿಕ ಉದ್ದೇಶಕ್ಕಾಗಿ, ಕೆಳಗಿನ ಅನುಬಂಧದಲ್ಲಿರುವ ವೇಳಾಪಟ್ಟಿಯಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾದ ಭೂಮಿಯನ್ನು "ವಿಶೇಷ ರೈಲ್ವೆ ಯೋಜನೆ"ಗಾಗಿ ಅಗತ್ಯವಿದೆ ಎಂದು ತೃಪ್ತಿಗೊಂಡು, ಅಂದರೆ:

"ಕಾಮಸಮುದ್ರಂ ಮತ್ತು ಬಿಸನಟ್ಟಂ ನಿಲ್ದಾಣಗಳ ನಡುವೆ ಕಿ.ಮೀ. 273/100–200 ರಲ್ಲಿ ಇರುವ ಲೆವೆಲ್ ಕ್ರಾಸಿಂಗ್ ಸಂಖ್ಯೆ 112 ರ ಬದಲಿಗೆ ರಸ್ತೆ ಮೇಲ್ಸೇತುವೆ (ROB) ನಿರ್ಮಾಣ (ಕಾಮಸಮುದ್ರಂ ಗ್ರಾಮ, ಬಂಗಾರಪೇಟೆ ತಾಲ್ಲೂಕು, ಕೋಲಾರ ಜಿಲ್ಲೆ), ಕರ್ನಾಟಕ ರಾಜ್ಯದಲ್ಲಿ"

ಈ ಮೂಲಕ ಆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಉದ್ದೇಶವನ್ನು ಘೋಷಿಸುತ್ತದೆ.

ಈ ಭೂಮಿಗೆ ಸಂಬಂಧಿಸಿದ ಆಸಕ್ತಿ ಹೊಂದಿರುವ ಯಾವುದೇ ವ್ಯಕ್ತಿ, ಈ ಅಧಿಸೂಚನೆ ಅಧಿಕೃತ ಗಜೆಟ್‌ನಲ್ಲಿ ಪ್ರಕಟವಾದ ದಿನಾಂಕದಿಂದ ಮೂವತ್ತು (30) ದಿನಗಳೊಳಗೆ, ಮೇಲ್ಕಾಣಿಸಿದ ಉದ್ದೇಶಕ್ಕಾಗಿ ಭೂಮಿಯ ಬಳಕೆಗೆ ವಿರೋಧ ವ್ಯಕ್ತಪಡಿಸಬಹುದು, ರೈಲ್ವೆ ಕಾಯಿದೆಯ ಸೆಕ್ಷನ್ 20D ರ ಉಪವಿಭಾಗ (1) ಅಡಿಯಲ್ಲಿ.

ಅಂತಹ ಎಲ್ಲ ವಿರೋಧಗಳನ್ನು ಬರವಣಿಗೆಯ ರೂಪದಲ್ಲಿ, ಸಂಬಂಧಿತ ಪ್ರಾಧಿಕಾರರಾದ: ಭೂಸ್ವಾಧೀನಾಧಿಕಾರಿ (Incharge), ಸಹಾಯಕ ಆಯುಕ್ತ, ಕೋಲಾರ ಹಾಗೂ ಪ್ರಾದೇಶಿಕ ಆಯುಕ್ತ, ಬೆಂಗಳೂರು ಇವರಿಗೆ ಸಲ್ಲಿಸಬೇಕು.

ಅವರು ವಿರೋಧದ ಆಧಾರಗಳನ್ನು ವಿವರಿಸಬೇಕು. ಸಂಬಂಧಿತ ಪ್ರಾಧಿಕಾರವು, ವಿರೋಧಿಯನ್ನು ವ್ಯಕ್ತಿಗತವಾಗಿ ಅಥವಾ ಕಾನೂನು ಪ್ರತಿನಿಧಿಯ ಮೂಲಕ ಕೇಳುವ ಅವಕಾಶ ನೀಡುತ್ತದೆ ಮತ್ತು ಅಗತ್ಯವೆಂದು ಕಂಡರೆ ಹೆಚ್ಚಿನ ತನಿಖೆ ನಡೆಸಿ, ವಿರೋಧವನ್ನು ಅಂಗೀಕರಿಸಬಹುದು ಅಥವಾ ತಿರಸ್ಕರಿಸಬಹುದು.

ಸೆಕ್ಷನ್ 20D ರ ಉಪವಿಭಾಗ (2) ಅಡಿಯಲ್ಲಿ ಸಂಬಂಧಿತ ಪ್ರಾಧಿಕಾರ ನೀಡುವ ಆದೇಶ ಅಂತಿಮವಾಗಿರುತ್ತದೆ.

ಈ ಅಧಿಸೂಚನೆಯಡಿ ಒಳಗೊಂಡಿರುವ ಭೂಮಿಯ ನಕ್ಷೆಗಳು ಮತ್ತು ಇತರೆ ವಿವರಗಳು, ಆಸಕ್ತಿ ಹೊಂದಿರುವ ವ್ಯಕ್ತಿಗಳು ಮೇಲ್ಕಾಣಿಸಿದ ಕಚೇರಿಯಲ್ಲಿ ಪರಿಶೀಲಿಸಲು ಲಭ್ಯವಿರುತ್ತವೆ.

ವೇಳಾಪಟ್ಟಿ

ಕ್ರ. ಸಂ.	ಗ್ರಾಮದ ಹೆಸರು	ಸರ್ವೇ ಸಂಖ್ಯೆ	ಭಾಗ	ವಿಸ್ತೀರ್ಣ (A-G-A)	ವಿಸ್ತೀರ್ಣ (ಹೇ)
1	ಕಾಮಸಮುದ್ರಂ	33	33/*/XX	0–1–2	0.0111731
			33/*/2	0–1–10	0.0063245
2	ಕಾಮಸಮುದ್ರಂ	39	39/*/2A	0–4–8	0.0356061
3	ಕಾಮಸಮುದ್ರಂ	40	40/*/2	0–0–4	0.002599
4	ಕಾಮಸಮುದ್ರಂ	28	28/*/2	0–1–5	0.013012
5	ಕಾಮಸಮುದ್ರಂ	85	26/*/*	0–9–7	0.09011
ಒಟ್ಟು				**0–18–4**	**0.1588247**

[F. No. SWR/W352/RSP/Land-112/2026]
ಹೆಚ್ಚಿನ ವಿವರಗಳಿಗೆ **https://egazette.gov.in** ಗೆ ಲಾಗ್‌ಆನ್ ಮಾಡಿ.
ನಿಂಗಪ್ಪ ಚಂದಪ್ಪ ಚಲುವಾದಿ,
ಉಪ ಮುಖ್ಯ ಎಂಜಿನಿಯರ್ / ರಸ್ತೆ ಮೇಲ್ಸೇತುವೆ, ನೈಋತ್ಯ ರೈಲ್ವೆ
ಪಿಯುಬಿ/100/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2026–27
ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.
South Western Railway-SWR | SWRRLY | @SWRAILWAYHQ | @sw_railways

ಎಸ್‌ಎಸ್‌ಎಲ್‌ಸಿ ಸಾಧಕ

ರಾಜೀವ್‌ಗಾಂಧಿ ಪಬ್ಲಿಕ್ ಶಾಲೆ, ಲಗ್ಗೆರೆ

ಎನ್. ಕಿಶೋರ್ ಶೇ 98

ಯಲಹಂಕ: ಕರಗ ಸಂಭ್ರಮ

ಪ್ರಜಾವಾಣಿ ವಾರ್ತೆ

ಯಲಹಂಕ: ಯಲಹಂಕದ ವಹ್ನಿಕುಲ ಕ್ಷತ್ರಿಯ ಆರಾಧ್ಯದೇವಿ ಮಹೇಶ್ವರಮ್ಮನವರ ಹೂವಿನ ಕರಗ ಮಹೋತ್ಸವ ಹಾಗೂ ವಿವಿಧ ದೇವರುಗಳ ಪಲ್ಲಕ್ಕಿ ಉತ್ಸವ ಈಚೆಗೆ ವಿಜೃಂಭಣೆಯಿಂದ ನಡೆಯಿತು.

ಬಜಾರ್ ರಸ್ತೆಯಲ್ಲಿರುವ ಮಹೇಶ್ವರಮ್ಮನವರ ದೇವಾಲಯದಿಂದ ಹೊರಟ ಹೂವಿನ ಕರಗ, ಕೋಟೆಬೀದಿ, ಬೆಸ್ತರಬೀದಿ, ಕಾಮಾಕ್ಷಮ್ಮ ಬಡಾವಣೆ, ಹೊಸಬೀದಿ, ಗಾಂಧಿನಗರ, ಮನವರ್ತಿ ತೋಟ, ಡೌನ್‌ಬಜಾರ್‌ರಸ್ತೆ, ಮಾರುತಿನಗರ ಹಾಗೂ ವೆಂಕಟಾಲ ಮತ್ತಿತರ ಬಡಾವಣೆಗಳಲ್ಲಿ ಸಂಚರಿಸಿ ಮತ್ತೆ ದೇವಾಲಯಕ್ಕೆ ಆಗಮಿಸಿತು.

ಕರಗ ಮನೆಗಳ ಮುಂದೆ ಬಂದಾಗ ಮಹಿಳೆಯರು ಆರತಿ ಬೆಳಗಿ ಹೂವಿನ ಅರ್ಚನೆಮಾಡಿ ಸ್ವಾಗತಿಸಿದರು. ಸುತ್ತಮುತ್ತಲ ಗ್ರಾಮಗಳ 24 ದೇವರಿಂದ ಅಲಂಕೃತಗೊಂಡಿದ್ದ ಪಲ್ಲಕ್ಕಿ ಉತ್ಸವ, ಕರಗ ಮಹೋತ್ಸವಕ್ಕೆ ವಿಶೇಷ ಮೆರುಗು ನೀಡಿತು.

ಸುತ್ತಮುತ್ತಲ ಗ್ರಾಮಗಳ ಸಾವಿರಾರು ಜನರು ಕರಗ ವೀಕ್ಷಿಸಿದರು. ಅಯ್ಯಪ್ಪ ಅವರು 6ನೇ ಬಾರಿಗೆ ಕರಗ ಹೊತ್ತಿದ್ದರು. ಕರಗ ಮಹೋತ್ಸವ ಪ್ರಯುಕ್ತ ಕೆರೆ ಆವರಣದ ಕರಗಮಂಟಪವನ್ನು ಹೂವು, ದೀಪಗಳಿಂದ ಅಲಂಕರಿಸಲಾಗಿತ್ತು.

ಯಲಹಂಕದ ಮಹೇಶ್ವರಮ್ಮನವರ ಹೂವಿನ ಕರಗ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು

ಮಕ್ಕಳ ವಿರುದ್ಧದ ಸೈಬರ್ ಅಪರಾಧ ಹೆಚ್ಚಳ

ನವದೆಹಲಿ(ಪಿಟಿಐ): ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ದತ್ತಾಂಶದ ಪ್ರಕಾರ, 2024ರಲ್ಲಿ ಭಾರತದಲ್ಲಿ ಮಕ್ಕಳ ವಿರುದ್ಧ ನಡೆದಿರುವ ಪ್ರತಿ 10 ಸೈಬರ್ ಅಪರಾಧಗಳಲ್ಲಿ ಸುಮಾರು 9 ಅಪರಾಧಗಳು ಮಕ್ಕಳನ್ನು ಅಶ್ಲೀಲವಾಗಿ ಚಿತ್ರಿಸುವಂತಹ ವಿಷಯಗಳನ್ನು ಒಳಗೊಂಡಿದೆ.

ದೇಶದಾದ್ಯಂತ ಒಟ್ಟಾರೆ ಅಪರಾಧ ಪ್ರಮಾಣದಲ್ಲಿ ಇಳಿಕೆ ಕಂಡುಬಂದರೂ, ಮಕ್ಕಳ ಮೇಲಿನ ಅಪರಾಧಗಳು ಹೆಚ್ಚುತ್ತಲೇ ಇವೆ ಎಂದು ಇತ್ತೀಚೆಗೆ ಬಿಡುಗಡೆ ಆಗಿರುವ ಎನ್‌ಸಿಆರ್‌ಬಿ ಅಂಕಿಅಂಶಗಳು ತಿಳಿಸಿವೆ.

2023ರಲ್ಲಿ ಭಾರತದಾದ್ಯಂತ ಮಕ್ಕಳ ವಿರುದ್ಧ 1,77,335 ಪ್ರಕರಣಗಳು ದಾಖಲಾಗಿದ್ದರೆ, 2024ರಲ್ಲಿ 1,87,702 ಪ್ರಕರಣಗಳು ದಾಖಲಾಗಿವೆ. ವರ್ಷದಲ್ಲಿ ಮಕ್ಕಳ ಮೇಲಿನ ಅಪರಾಧ ಪ್ರಕರಣಗಳು ಶೇ 5.8ರಷ್ಟು ಹೆಚ್ಚಾಗಿದೆ.

ಇದಕ್ಕೆ ವ್ಯತಿರಿಕ್ತವಾಗಿ, ಕಳೆದ 4 ವರ್ಷಗಳಲ್ಲಿ ಭಾರತದಲ್ಲಿ ಒಟ್ಟಾರೆ ಅಪರಾಧಗಳ ಪ್ರಮಾಣ ಶೇ 10.8ರಷ್ಟು ಕಡಿಮೆ ಆಗಿದ್ದು, 2020ರಲ್ಲಿ 66.01 ಲಕ್ಷ ಪ್ರಕರಣಗಳಿತ್ತು. 2024ರಲ್ಲಿ 58.86 ಲಕ್ಷ ಪ್ರಕರಣಗಳಿಗೆ ಇಳಿದಿದೆ. ಇದೇ ಅವಧಿಯಲ್ಲಿ, 2020ರಲ್ಲಿ ಮಕ್ಕಳ ಮೇಲಿನಅಪರಾಧಗಳ ಸಂಖ್ಯೆ 1,28,531ರಷ್ಟಿತ್ತು. ಅದು 2024ರಲ್ಲಿ 1,87,702ಕ್ಕೆ ಏರಿಕೆಯಾಗಿದೆ. 4 ವರ್ಷಗಳಲ್ಲಿ ಮಕ್ಕಳ ಮೇಲಿನ ಅಪರಾಧಗಳ ಪ್ರಮಾಣ ಶೇ46ರಷ್ಟು ಏರಿಕೆಯಾಗಿದೆ.

3 ದಿನಗಳ ಕದನ ವಿರಾಮಕ್ಕೆ ರಷ್ಯಾ–ಉಕ್ರೇನ್ ಒಪ್ಪಿಗೆ

ವಾಷಿಂಗ್ಟನ್ (ಎಪಿ): 'ಮೂರು ದಿನಗಳ ಕದನ ವಿರಾಮ ಹಾಗೂ ಕೈದಿಗಳ ವಿನಿಮಯಕ್ಕೆ ರಷ್ಯಾ ಹಾಗೂ ಉಕ್ರೇನ್ ಒಪ್ಪಿಗೆ ಸೂಚಿಸಿವೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

ಡೊನಾಲ್ಡ್ ಟ್ರಂಪ್

'ಈಗಿನ ನಿರ್ಧಾರವು ದೀರ್ಘಕಾಲದಿಂದ ನಡೆಯುತ್ತಿರುವ ಯುದ್ಧದ ಅಂತ್ಯವಾಗಿರಬಹುದು' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಶನಿವಾರದಿಂದ ಸೋಮವಾರದ ತನಕ ಕದನ ವಿರಾಮ ಜಾರಿಯಲ್ಲಿರಲಿದೆ ಎಂದು ಟ್ರಂಪ್ ಅವರು ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ.

81 ವರ್ಷಗಳ ಹಿಂದೆ ಜರ್ಮನಿಯ ನಾಜಿಯ ವಿರುದ್ಧ ಜಯಗಳಿಸಿದ ದಿನವಾದ ಮೇ 9 ಅನ್ನು ರಷ್ಯಾವು ವಿಜಯ ದಿನವಾಗಿ ಆಚರಿಸುತ್ತದೆ. ಉಕ್ರೇನ್ ಕೂಡ ಎರಡನೇ ಮಹಾ ಯುದ್ಧದಲ್ಲಿ ಭಾಗವಹಿಸಿತ್ತು.

ಕದನ ವಿರಾಮದ ವೇಳೆ ಎಲ್ಲ ಚಟುವಟಿಕೆಗಳನ್ನು ಸ್ಥಗಿತಗೊಳಿಸಿ, ಉಭಯ ರಾಷ್ಟ್ರಗಳು ಸಾವಿರ ಕೈದಿಗಳನ್ನು ವಿನಿಮಯ ಮಾಡಿಕೊಳ್ಳಲು ಒಪ್ಪಿಗೆ ಸೂಚಿಸಿವೆ.



'ಲಟೇಪ್' ಮೈಸೂರು ಸೈಕ್ಲಿಂಗ್ ಅ.10ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಟೂರ್ ಡಿ ಫ್ರಾನ್ಸ್ ಸರಣಿ'ಯ ಚೊಚ್ಚಲ 'ಲಟೇಪ್ ಮೈಸೂರು ಸೈಕ್ಲಿಂಗ್ ಸ್ಪರ್ಧೆ'ಯು ಅಕ್ಟೋಬರ್ 4ರಂದು ನಡೆಯಲಿದೆ.

ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ ಅವರು ನಗರದ ಖಾಸಗಿ ಹೋಟೆಲ್‌ನಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಸ್ಪರ್ಧೆಯ ಲೋಗೊ ಹಾಗೂ ವೆಬ್‌ಸೈಟ್ ಅನಾವರಣ ಮಾಡಿದರು.

ನಾಲ್ಕು ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದ್ದು, 100 ಕಿ.ಮೀ. ರೇಸ್‌ನಲ್ಲಿ ವಿವಿಧ ದೇಶಗಳ ಅಮೆಚೂರ್ ಸೈಕ್ಲಿಸ್ಟ್‌ಗಳು ಭಾಗವಹಿಸುವ ನಿರೀಕ್ಷೆಯಿದೆ. ಫಿಟ್ನೆಸ್ ಆಸಕ್ತರಿಗಾಗಿ 50 ಕಿ.ಮೀ. ಸ್ಪರ್ಧೆ, 20 ಕಿ.ಮೀ. ಮನರಂಜನಾ ಸ್ಪರ್ಧೆ ಹಾಗೂ ಮಕ್ಕಳಿಗಾಗಿ 1 ಕಿ.ಮೀ. ಸ್ಪರ್ಧೆ ಇರಲಿದೆ. ಸ್ಪರ್ಧೆಯಲ್ಲಿ ಅಗ್ರ ಮೂರು ಸ್ಥಾನ ಪಡೆದ ಸೈಕ್ಲಿಸ್ಟ್‌ಗಳಿಗೆ 'ಲಟೇಪ್ ಪ್ಯಾರಿಸ್'ನಲ್ಲಿ ಭಾಗವಹಿಸುವ ಅವಕಾಶ ಸಿಗಲಿದೆ ಎಂದು ಆಯೋಜಕರಾದ 'ಎನ್‌ಇಬಿ ಸ್ಪೋರ್ಟ್ಸ್' ಸಂಸ್ಥೆಯ ಚೇರ್ಮನ್ ನಾಗರಾಜ್ ಅಡಿಗಾಸ್ ಹೇಳಿದರು.

'ಸುಂದರ ಪ್ರಕೃತಿ ಹಾಗೂ ಸಾಹಸಮಯ ರಸ್ತೆ ಮಾರ್ಗ ಹೊಂದಿರುವ 'ಪಾರಂಪರಿಕ ತಾಣ' ಮೈಸೂರಿನಲ್ಲಿ ಸ್ಪರ್ಧೆ ನಿಗದಿಯಾಗಿದ್ದು, ಮಾರ್ಗ ದಿಕ್ಸೂಚಿಯನ್ನು ಇನ್ನಷ್ಟೇ ನಿರ್ಧರಿಸಬೇಕಿದೆ. ಕರ್ನಾಟಕದಲ್ಲಿ ಅಂತರರಾಷ್ಟ್ರೀಯ ಮಟ್ಟದ ಸೈಕ್ಲಿಂಗ್ ಸ್ಪರ್ಧೆ ನಡೆಯುತ್ತಿರುವುದು ಇದೇ ಮೊದಲು' ಎಂದು ಅವರು ಹೇಳಿದರು.

'ಲಟೇಪ್ ಮೈಸೂರು ಸೈಕ್ಲಿಂಗ್ ಸ್ಪರ್ಧೆ'ಯ ಆಯೋಜಕರಾದ 'ಎನ್‌ಇಬಿ ಸ್ಪೋರ್ಟ್ಸ್' ಸಂಸ್ಥೆಯ ಚೇರ್ಮನ್ ನಾಗರಾಜ್ ಅಡಿಗಾಸ್ ಅವರು ಪತ್ರಕರ್ತರೊಂದಿಗೆ ಶುಕ್ರವಾರ ಮಾತನಾಡಿದರು

'ಲಟೇಪ್' ಸೈಕ್ಲಿಂಗ್ ಸ್ಪರ್ಧೆಯು 123 ವರ್ಷಗಳ ಇತಿಹಾಸ ಹೊಂದಿದೆ. 'ಲಟೇಪ್' ಸರಣಿಯ ಅಡಿಯಲ್ಲಿ ಪ್ರತಿವರ್ಷ ಸುಮಾರು 21 ದೇಶಗಳಲ್ಲಿ, 30ಕ್ಕೂ ಹೆಚ್ಚು ಸ್ಪರ್ಧೆಗಳು ನಡೆಯಲಿವೆ. ಭಾರತದಲ್ಲಿ ಇದೇ ಮೊದಲ ಬಾರಿಗೆ ಈ ಸ್ಪರ್ಧೆ ನಿಗದಿಯಾಗಿದೆ.

ಕರ್ನಾಟಕದ ಅಂತರರಾಷ್ಟ್ರೀಯ ಸೈಕ್ಲಿಸ್ಟ್‌ಗಳಿಗೆ ನೆರವು ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಷ್ಯನ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸಲಿರುವ ಕರ್ನಾಟಕದ ಸೈಕ್ಲಿಸ್ಟ್‌ಗಳಿಗೆ ಸ್ಕಾಟ್ ಏರೋ ಬೈಕ್ ಮತ್ತು ಅವಶ್ಯಕ ಸಲಕರಣೆಗಳನ್ನು ಕೇರ್ ಟ್ರಸ್ಟ್ ಶನಿವಾರ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಪ್ರದಾನ ಮಾಡಲಾಗುವುದು.

'ಪ್ರಗತಿ ಆಟೊಮೇಷನ್ ಪ್ರೈವೆಟ್ ಲಿಮಿಟೆಡ್‌ನ ಕಾರ್ಪೊರೆಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯಲ್ಲಿ ಒಟ್ಟು ₹10.20 ಲಕ್ಷ ಮೌಲ್ಯದ ಏರೋ ಬೈಕ್ ಮತ್ತು ಸಲಕರಣೆಗಳನ್ನು ನೀಡಲಾಗುವುದು. ಶನಿವಾರ ಅರಮನೆ ಮೈದಾನದಲ್ಲಿ ಬೆಳಿಗ್ಗೆ 8 ರಿಂದ 11ರವರೆಗೆ ಕಾರ್ಯಕ್ರಮ ನಡೆಯಲಿದೆ. ಕರ್ನಾಟಕ ಅಮೆಚೂರ್ ಸೈಕ್ಲಿಂಗ್ ಸಂಸ್ಥೆಯು ಪ್ರತಿಭಾವಂತ ಮತ್ತು ಗ್ರಾಮೀಣಮಟ್ಟದ ಸೈಕ್ಲಿಸ್ಟ್‌ಗಳಿಗೆ ನೆರವು ಕೋರಿತ್ತು. ಸಂಸ್ಥೆಯು ಸೂಚಿಸಿದ ಅರ್ಹ ಸೈಕ್ಲಿಂಗ್‌ಪಟುಗಳಿಗೆ ನೆರವು ನೀಡಲಾಗುತ್ತಿದೆ' ಎಂದು ಕೇರ್ ಟ್ರಸ್ಟ್ ಕಾರ್ಯದರ್ಶಿ ಗುರುರಾಜ್ ಮುಗಳಖೋಡ್ ತಿಳಿಸಿದ್ದಾರೆ.

ಸೈಕ್ಲಿಸ್ಟ್‌ಗಳಾದ ಗಂಗಾ ದಂಡಿನ್, ಅನುಪಮಾ ಗುಳೇದ್, ಶ್ರೀನಿವಾಸ್ ರಜಪೂತ್, ದೀಪಿಕಾ ಫಡತಾರೆ, ಸ್ವಾರ್ ನರ್ಜರಿ ಮತ್ತು ಪವಿತ್ರಾ ಕುರ್ತಕೋಟಿ ಅವರಿಗೆ ಸಲಕರಣೆಗಳನ್ನು ನೀಡಲಾಗುವುದು.

'ನಮ್ಮ ಸಂಸ್ಥೆಯು ಬೇರೆ ಬೇರೆ ಕ್ಷೇತ್ರಗಳಲ್ಲಿರುವ ಅರ್ಹ ಫಲಾನುಭವಿಗಳನ್ನು ಗುರುತಿಸಿ ನೆರವು ನೀಡುವ ಕಾರ್ಯ ಮಾಡುತ್ತಿದೆ. ಕಾರ್ಪೊರೆಟ್ ಸಂಸ್ಥೆಗಳ ಸಿಎಸ್‌ಆರ್ ಅನುದಾನದ ನೆರವು ಪಡೆದುಕೊಂಡು ಅರ್ಹರಿಗೆ ಅಗತ್ಯವಿರುವ ಸೌಲಭ್ಯಗಳನ್ನು ಒದಗಿಸುತ್ತೇವೆ. ನಾವು ವಿವಿಧ ಉದ್ಯಮಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಮಾನ ಮನಸ್ಕರು ಸೇರಿ ಈ ಸಂಸ್ಥೆ ರಚನೆ ಮಾಡಿದ್ದೇವೆ' ಎಂದೂ ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಟ್ರಸ್ಟಿಗಳಾದ ಆನಂದ್, ರಶ್ಮಿ, ರಾಘವೇಶ್, ಸೈಕ್ಲಿಂಗ್ ಸಂಸ್ಥೆಯ ಪದಾಧಿಕಾರಿ ಶ್ರೀಶೈಲ ಕುರಣಿ, ಲೋಕೇಶ್, ಪ್ರಗತಿ, ಮನೋಜಕುಮಾರ್ ಮತ್ತು ಸೂರಜ್ ಅವರು ಹಾಜರಿರುವರು.

ಬೆಂಗಳೂರು ರೇಸ್

ಎಕ್ಸಲೆಂಟ್ ಲಾಸ್ ಗೆಲ್ಲುವ ನಿರೀಕ್ಷೆ

ಕುಣಿಗಲ್ ಸ್ಟಡ್ ಟ್ರೋಫಿ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಎಕ್ಸಲೆಂಟ್ ಲಾಸ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 3:00ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಆಲಂಗಿರ್ 2, ಸ್ಟಾರ್ ಆಫ್ ಇಂಡಿಯಾ 1, ಅಶ್ಯೂರೆನ್ಸಸ್ 6
2ನೇ ರೇಸ್: ಸ್ಪ್ಲೆಂಡಿಡ್ ಡ್ರೀಮ್ 7, ಸರ್ಕಲ್ ಆಫ್ ಡ್ರೀಮ್ಸ್ 3, ರಾಡ್ನಿ 1
3ನೇ ರೇಸ್: ಹುಸನಾರ 1, ರಾಯ್ಖ್‌ಮಟಾಯ್ಖ್ 4, ಅನ್ನಾಬೆಲ್ಲೆ 2
4ನೇ ರೇಸ್: ಎಕ್ಸಲೆಂಟ್ ಲಾಸ್ 5, ನೆವರ್ ಗಿವ್ ಇನ್ 6, ರಿಕಾರ್ಡೊ 1
5ನೇ ರೇಸ್: ದಿ ಆರ್ಚರ್ 6, ಸೀಝ್ ಸ್ಟಾರ್ಮ್ 5, ಅಟ್ಮಾನ್ 1
6ನೇ ರೇಸ್: ಫೈನಲ್ ಕಾಲ್ 1, ಫ್ಲಾಶ್ 3, ಸೂಪರ್ ಕೈಂಡ್ 4

ಉತ್ತಮ ಬೆಟ್: ಆಲಂಗಿರ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಭೂಮಿಕಾ

ಮಹಿಳೆಯರ ಆಪ್ತ ಸಂಗಾತಿ

ತಾಯಿ ವೀಣಾ ಶ್ರೀನಿವಾಸನ್ ಅವರೊಂದಿಗೆ ಅರ್ಚನಾ ಜೋಯಿಸ್

ನಾನು ನನ್ನಮ್ಮ

ಸವಾಲು–ಜವಾಬ್ದಾರಿಗಳ ತಂತಿಯ ಮೇಲೆ ಬದುಕೆಂಬ ಏಕತಾರಿಯನ್ನು ಹಿಡಿದು ನಡೆಯುವ ಅಮ್ಮಂದಿರೆಲ್ಲ ಸ್ಫೂರ್ತಿಯ ಚಿಲುಮೆಗಳೇ. ಅಂಥ ಜೀವವನ್ನು ನೆನೆಯಲು 'ಅಮ್ಮಂದಿರ ದಿನ'ವೊಂದು ನೆಪವಷ್ಟೆ. ಈ ಹೊತ್ತಿನಲ್ಲಿ, ತಮ್ಮ ಅಮ್ಮನ ಜೊತೆಗಿನ ಒಡನಾಟವನ್ನು, ಸಾರ್ಥಕ ಎನಿಸಿದ ಕ್ಷಣಗಳನ್ನು ಹಂಚಿಕೊಂಡಿದ್ದಾರೆ ಕತೆಗಾರ **ವಸುಧೇಂದ್ರ** ಮತ್ತು ಚಿತ್ರನಟಿ **ಅರ್ಚನಾ ಜೋಯಿಸ್**

ಅವಳು ಕೊಟ್ಟ ಆಸ್ತಿ ಒಂದೆರಡಲ್ಲ!

• ವಸುಧೇಂದ್ರ

'ಅಮ್ಮಂದಿರ ದಿನ'ದ ವಿಶೇಷ (ಮೇ 10)

ಅಮ್ಮನಿಗೆ ಆಕರ್ಷಕವಾಗಿ ಸುಳ್ಳು ಹೇಳಲು ಬರುತ್ತಿತ್ತು! ಅದು ಕತೆಗಾರರಿಗೆ ಇರಬೇಕಾದ ಬಹುಮುಖ್ಯ ಗುಣ. ಅವಳ ದೆಸೆಯಿಂದ ನನಗೂ ಆ ಸದ್ಗುಣ (!) ಬಂದುಬಿಟ್ಟಿದೆ. ಒಂದು ದಿನದ ಮಟ್ಟಿಗೆ ತನ್ನ ತವರೂರು ಬಳ್ಳಾರಿಗೆ ಹೋಗಿ ಬಂದರೂ ಸಾಕು, ಕೇವಲ ಐವತ್ತು ಕಿಲೊಮೀಟರ್ ದೂರದ ಆ 'ಮಹಾಪ್ರಯಾಣ'ವನ್ನು ಅಮ್ಮ ಮೂರು ದಿನಗಳ ಕಾಲ ಕತೆ ಮಾಡಿ ಹೇಳುತ್ತಿದ್ದಳು. ನಾವು ಮಕ್ಕಳು ಮತ್ತು ಅಪ್ಪನ ಮಾತಂತಿರಲಿ, ಓಣಿಯ ಜನರೂ ಮೈಯೆಲ್ಲಾ ಕಿವಿಯಾಗಿಸಿಕೊಂಡು ಆಕೆಯ ಬಳ್ಳಾರಿ ಯಾತ್ರೆಯ ವಿವರಗಳನ್ನು ಕೇಳುತ್ತಿದ್ದರು.

ಇನ್ನು ದೂರದ ಮಂತ್ರಾಲಯಕ್ಕೋ ತಿರುಪತಿಗೋ ಹೋಗಿಬಂದರಂತೂ ತೀರಿತು. ತಿಂಗಳುಗಟ್ಟಲೆ ಅದರ ಆಕರ್ಷಕ ಪ್ರವಾಸ ಕಥನ ನಿತ್ಯ ಧಾರಾವಾಹಿಯಾಗಿ ನಮ್ಮನೆಯಲ್ಲಿ ನಡೆಯುತ್ತಲೇ ಇರುತ್ತಿತ್ತು. ಹೇಗಾದರೂ ಮಾಡಿ ಆಕೆಯ ಕತೆಯಲ್ಲಿ ತಪ್ಪು ಹುಡುಕುವ ಕೆಟ್ಟ ಹವ್ಯಾಸ ನನಗೆ. ಆಕೆಯನ್ನು ಸಿಕ್ಕಿಸಿಹಾಕಲು ನಾನು ಕಷ್ಟದಿಂದ ಪ್ರಯತ್ನಿಸಿದರೆ, ನನಗಿಂತಲೂ ಹಲವು ನದಿಯ ನೀರು ಕುಡಿದ ಆಕೆ ಮತ್ತೊಂದು ಉಪಕತೆಯನ್ನು ಸೃಷ್ಟಿಸಿ ನನ್ನನ್ನೇ ಬೆಪ್ಪು ಮಾಡಿಬಿಡುತ್ತಿದ್ದಳು. ನನಗೇ ಗೊತ್ತಿಲ್ಲದೆ ಅವಳನ್ನು ಅನುಸರಿಸಲು ತೊಡಗಿದ ನಾನು, ಏನೋ ಸೃಷ್ಟಿಸಿ ಕತೆಯಾಗಿಸಿ ಹೇಳಿದರೆ, ಆಕೆ ಸುಲಭವಾಗಿ ನನ್ನ ತಪ್ಪನ್ನು ಗುರುತಿಸಿ ಖೆಡ್ಡಾದಲ್ಲಿ ಕೆಡವುತ್ತಿದ್ದಳು. 'ಸುಳ್ಳು ಹೇಳೋ ಬುಳ್ಳಾ ಅಂದರೆ, ಬಳ್ಳಾರಿ ಮುಂದೆ ಬಲು ಹೊಳಿ ಬಲು ಹೊಳಿ ಅಂತಾನೆ' ಎಂದು ಹೊಳೆಯಿಲ್ಲದ ಬಳ್ಳಾರಿಯ ಉಪಮೆ ಬಳಸಿ ನನ್ನನ್ನು ಹಂಗಿಸುತ್ತಿದ್ದಳು. ಆಕೆ ಬಳಸುತ್ತಿದ್ದ ಭಾಷೆ, ಗಾದೆ ಮಾತುಗಳು, ನುಡಿಗಟ್ಟುಗಳು, ಒಗಟುಗಳು, ಪುರಾಣದ ಕತೆಗಳು, ದೆವ್ವದ ಪ್ರಸಂಗಗಳು, ಯಾರದ್ದೋ ಎಡವಟ್ಟು ಸಂಗತಿಗಳು, ಹಾದರದ ಸಂಗತಿಗಳು, ಪೋಲಿ ಮಾತುಗಳು- ಒಂದೇ ಎರಡೇ! ಅವೆಲ್ಲವೂ ನನ್ನ ಆಸ್ತಿಯೆಂದು ಈಗ ಗೊತ್ತಾಗುವಾಗ ಕಣ್ಣುಗಳು ತೇವವಾಗುತ್ತವೆ.

ಆದರೆ ತಾಯಿಯಿಂದ ಗುಣಗಳು ಮಾತ್ರವಲ್ಲದೆ ರೋಗಗಳೂ ನಮಗೆ ಉಡುಗೊರೆಯಾಗಿ ಬರುತ್ತವೆ. ಆಕೆಗಿದ್ದ ಸಕ್ಕರೆಕಾಯಿಲೆ ಈಗ ನನಗೂ ಸಣ್ಣದಾಗಿ ಪ್ರಾರಂಭವಾಗಿದೆ. ಅಂದು ಅರ್ಥವಾಗದ ಅಮ್ಮನ ಒದ್ದಾಟ, ಅವಳ ವೇದನೆ, ಹಬ್ಬದ ದಿನ ಮನೆಯವರಿಗೆಲ್ಲಾ ಹೋಳಿಗೆ ಮಾಡಿ ಬಡಿಸಿ ತಾನು ಸಪ್ಪೆಯಾದ ಚಪಾತಿ ತಿನ್ನುವಾಗ ಅವಳ ಕಣ್ಣಲ್ಲಿ ಮೂಡುತ್ತಿದ್ದ ಭಾವ- ಎಲ್ಲವೂ ಈಗ ಅರ್ಥವಾಗಿ ಅವಳ ಮೇಲೆ ಇನ್ನಷ್ಟು ಪ್ರೀತಿ ಉಕ್ಕುತ್ತದೆ. ರೋಗವೂ ತಂದೆ-ತಾಯಿ ಕೊಟ್ಟ ಆಶೀರ್ವಾದ ಎಂದು ಭಾವಿಸಿದರೆ ನಮ್ಮ ನೋವು ತುಸು ತಗ್ಗುತ್ತದೆ. ನಮ್ಮ ಕಾಲದಲ್ಲಿರುವ ಒಳ್ಳೆಯ ಔಷಧಿಗಳು, ರೋಗದ ಕುರಿತು ಮಾಹಿತಿ, ಸುಲಭವಾಗಿ ರಕ್ತಪರೀಕ್ಷೆ ಮಾಡಿಸಿಕೊಳ್ಳುವ ವ್ಯವಸ್ಥೆ- ಅವ್ಯೊಂದೂ ಇಲ್ಲದ ಹೊತ್ತಲ್ಲಿ ಆಕೆ ಪಟ್ಟ ಕಷ್ಟದ ಮುಂದೆ ನನ್ನ ಒದ್ದಾಟ ಅಷ್ಟೇನೂ ದೊಡ್ಡದಲ್ಲ ಎಂದು ಅರ್ಥವಾಗಿ ಮನಸ್ಸು ಸಮಾಧಾನಗೊಳ್ಳುತ್ತದೆ. ನನ್ನ ರಕ್ತಪರೀಕ್ಷೆಗಾಗಿ ಮನೆಗೆ ಬಂದ ವ್ಯಕ್ತಿಯನ್ನು ನೋಡಿದಾಗ, ಅದಕ್ಕಾಗಿ ಇಡೀ ದಿನ ವ್ಯಯಿಸಿ ಅಮ್ಮ ದೂರದ ಬಳ್ಳಾರಿಗೆ ಹೋಗಿ ಬರುತ್ತಿದ್ದುದು ನೆನಪಾಗಿ ಹೃದಯ ಬೆಚ್ಚಗಾಗುತ್ತದೆ.

ಆದರೆ ತಾಯಿಯ ಎಲ್ಲ ಗುಣಗಳೂ ನಮಗೆ ಬರುವುದಿಲ್ಲ. ಅಮ್ಮನಿಗೆ ಜಗತ್ತಿನಲ್ಲಿ ಯಾರನ್ನಾದರೂ ಏನನ್ನಾದರೂ ಎದುರಿಸುವ ಧೈರ್ಯವಿತ್ತು. ಎಂತಹ ಕಷ್ಟದ ಪರಿಸ್ಥಿತಿ ಬಂದರೂ ಹೋರಾಡುವ ಗುಂಡಿಗೆ ಅವಳಿಗಿತ್ತು. ಅಗತ್ಯವಿದ್ದರೆ ಬೀದಿಯಲ್ಲಿ ನಿಂತು ಜಗಳ ಮಾಡುವುದೂ ಗೊತ್ತಿತ್ತು. ಯಾರದೇ ಮುಲಾಜಿಗೆ ಒಳಗಾಗದೆ, ತನಗೆ ಬೇಡವೆನ್ನಿಸಿದ್ದಕ್ಕೆ 'ಇಲ್ಲ' ಎಂದು ಹೇಳುವುದು ಆಕೆಗೆ ಅತ್ಯಂತ ಸುಲಭವಾಗಿತ್ತು. ಯಾರಾದರೂ ತನ್ನ ಕುಟುಂಬವನ್ನು ಕೆಣಕಿದರೆ, ಅವಮಾನ ಮಾಡಿದರೆ, ಅವರ ಮುಖದ ಮೇಲೆ ನೀರಿಳಿಸುವುದನ್ನು ಕರಗತ ಮಾಡಿಕೊಂಡಿದ್ದಳು. ಆದರೆ ಅಪ್ಪನಿಗೆ ಅಂತಹ ಗಟ್ಟಿಗತನ ಇರಲೇ ಇಲ್ಲ. ಚಿಕ್ಕ ಕಂಟಕ ಎದುರಾದರೂ ಹೌಹಾರಿ ಕುಳಿತುಕೊಳ್ಳುತ್ತಿದ್ದ ಆತನನ್ನು ನೋಡಿ 'ಈ ಗಂಡಸಿಗಂತೂ ಧೈರ್ಯಾನೇ ಇಲ್ಲ ನೋಡಪ್ಪ' ಎಂದು ಪ್ರೀತಿಯಿಂದ ಸಿಡುಕುತ್ತಿದ್ದಳು. ಅಮ್ಮನ ಈ ಧೈರ್ಯದ ಸ್ವಭಾವ ನನಗೆ ಬರದೆ, ಪೂರ್ತಿ ಅಪ್ಪನಂತೇ ಆಗಿ ಕೂತಿದ್ದೇನೆ. ಅಪ್ಪನ ಆ ಭಯಸ್ಥ ಗುಣ ನನಗೂ ಬಂದುಬಿಟ್ಟಿದೆ. ಬದುಕಿದ್ದರೆ ಅಮ್ಮ ನನಗೂ ಅಪ್ಪನಿಗೆ ಬೈದಂತೆಯೇ ಬೈಯುತ್ತಿದ್ದಳೇನೋ ಎಂದು ಅನ್ನಿಸುತ್ತದೆ.

ನಾನು ಸರ್ಕಾರಿ ಕೆಲಸ ಸಿಕ್ಕರೂ ಸೇರದೆ ಖಾಸಗಿ ಮಲ್ಟಿನ್ಯಾಷನಲ್ ಕೆಲಸಕ್ಕೆ ಸೇರಿದ್ದಕ್ಕೆ ಅಮ್ಮ ಸಿಟ್ಟಾಗಿದ್ದಳು. 'ರಿಟೈರ್ಡ್ ಆದ ಮೇಲೂ ಪಿಂಚಣಿ ಬರೋ ಸರ್ಕಾರಿ ಕೆಲಸ ಬ್ಯಾಡ ಅಂತೀಯಲ್ಲೋ, ನಿಂಗೆ ಬುದ್ಧಿ ನೆಟ್ಟಗದಾ ಇಲ್ಲಾ. ನಾಳೆ ಬೆಳಿಗ್ಗೆ ಅರವತ್ತು ದಾಟಿದರೆ ತಿನ್ನೋದಕ್ಕೆ ಏನು ಮಾಡ್ತಿ?' ಎಂದು ಬೇಸರದಿಂದ, ಭವಿಷ್ಯದ ಭಯದಿಂದ ನನ್ನನ್ನು ಗದರಿಸಿದ್ದಳು. ನಾನು ಎದುರು ಮಾತಾಡದೆ ನನ್ನ ಪಾಡಿಗೆ ನಾನು ಖಾಸಗಿ ಕೆಲಸಕ್ಕೆ ಸೇರಿದ್ದೆ. ಅದು ತಿಳಿದಾಗ 'ಎಲ್ಲಾ ಅಪ್ಪನ ಬುದ್ಧಿ. ಒಳಗೊಳಗೇ ಗುಮ್ಮನಗುಸುಗನ ತರಹ ಸಂಚು ಮಾಡಿಬಿಟ್ಟ' ಎಂದಿದ್ದಳು.

ವಿಚಿತ್ರವೆಂದರೆ, ಅಮ್ಮ ತೀರಿದ ನಂತರ ನಾನು ಅಮ್ಮನನ್ನು ಕುರಿತು ಧ್ಯಾನಿಸುತ್ತಾ 'ನಮ್ಮಮ್ಮ ಅಂದ್ರೆ ನಂಗಿಷ್ಟ' ಎಂಬ ಕೃತಿಯನ್ನು ಬರೆದು ಪ್ರಕಟಿಸಿದೆ. ಈಗಲೂ ವರ್ಷಕ್ಕೆ ಏನಿಲ್ಲವೆಂದರೂ ಅದರ ಒಂದೆರಡು ಸಾವಿರ ಪ್ರತಿಗಳಾದರೂ ಖರ್ಚಾಗುತ್ತವೆ. ಸುಮಾರು 35,000 ಪ್ರತಿಗಳು ಈಗಾಗಲೇ ಮಾರಾಟವಾಗಿವೆ. ನಾನೇ ಅದರ ಪ್ರಕಾಶಕ. ತೆಲುಗು ಮತ್ತು ತಮಿಳಿನಲ್ಲೂ ಈ ಕೃತಿ ಪ್ರಕಟವಾಗಿ ಜನರ ಮೆಚ್ಚುಗೆ ಗಳಿಸಿದೆ. ಈಗ ಇಂಗ್ಲಿಷಿನಲ್ಲಿ ಖ್ಯಾತ ಪ್ರಕಾಶನ ಸಂಸ್ಥೆಯಿಂದ 'I love my Amma' ಎಂದು ಪ್ರಕಟವಾಗಿದೆ. ಇವೆಲ್ಲವುಗಳಿಂದ ನನಗೆ ಸಾಕಷ್ಟು ಗೌರವಧನ ಬರುತ್ತಿದೆ. ಒಂದರ್ಥದಲ್ಲಿ ಅಮ್ಮ ನನ್ನೊಳಗೆ ಕೂತು ಈ ಪುಸ್ತಕ ಬರೆಸಿ, ಪಿಂಚಣಿ ಬರುವಂತೆ ಮಾಡಿ ತನ್ನ ಕಾರ್ಯ ಸಾಧಿಸಿಕೊಂಡಳೆಂದೇ ನನಗನ್ನಿಸುತ್ತದೆ.

ಚಿಕ್ಕಂದಿನಲ್ಲಿ ಕಷ್ಟಗಳು ಇರಲಿಲ್ಲವೆಂದಲ್ಲ. ಆದರೆ ಆಗವು ಕಷ್ಟಗಳೆಂದು ಗೊತ್ತಾಗುತ್ತಿರಲಿಲ್ಲ. ನಮ್ಮ ಸುತ್ತಮುತ್ತಲಿನ ಎಲ್ಲರ ಮನೆಯ ಬದುಕೂ ನಮ್ಮಂತೆಯೇ ಇರುತ್ತಿತ್ತು. ತಿಂಗಳ ಕೊನೆಗೆ ಊಟಕ್ಕೆ ತುಸು ಕಷ್ಟವಾದರೆ, ವರ್ಷಕ್ಕೆ ಒಂದು ಜೊತೆಗಿಂತಲೂ ಹೆಚ್ಚು ಬಟ್ಟೆ ಕೊಳ್ಳಲು ಆಗದಿದ್ದರೆ, ಹರಿದ ಬಟ್ಟೆಗಳಿಗೆ ಮತ್ತೆ ಮತ್ತೆ ತೇಪೆ ಹಾಕಿಕೊಂಡರೆ, ದಿನಸಿ ಅಂಗಡಿಯಲ್ಲಿ ಉದ್ರಿ ಕೊಳ್ಳಲು ಹೋದಾಗ ಅಂಗಡಿಯವ ನಿರ್ಲಕ್ಷಿಸಿದರೆ... ನಾವು ಯಾರೂ ಅದನ್ನು ದೊಡ್ಡ ಸಮಸ್ಯೆಯಾಗಿ ಪರಿಗಣಿಸುತ್ತಿರಲಿಲ್ಲ.

ಸಣ್ಣ ಸ್ಟೀಲ್ ಪಾತ್ರೆ ಕೊಂಡರೂ ಸಾಕು, ಲಕ್ಷಾಂತರ ರೂಪಾಯಿ ಬೆಲೆಯ ಒಡವೆಯನ್ನು ಕೊಂಡಂತಹ ಸಂತೋಷವನ್ನು ಪರ್ಯಾಯವಾಗಿ ಅನುಭವಿಸುವುದನ್ನು ಅಮ್ಮ ಮತ್ತು ಆಕೆಯ ಗೆಳತಿಯರು ಕಂಡುಕೊಂಡಿದ್ದರು. ಆದ್ದರಿಂದ ನನಗೆ ಬಾಲ್ಯ ಕಷ್ಟವಾಗಿತ್ತು ಎಂದು ಯಾವತ್ತೂ ಅನ್ನಿಸುವುದೇ ಇಲ್ಲ. ಅಮ್ಮನಿಗೂ ಹಾಗನ್ನಿಸದಂತೆ ಮನೆಯಲ್ಲಿ ಪ್ರೀತಿಯ ವಾತಾವರಣವಿತ್ತು.

(ಅಮ್ಮನ ಭಾವಚಿತ್ರವನ್ನು ಸಾರ್ವಜನಿಕವಾಗಿ ಬಳಸಲು ಲೇಖಕರು ಇಚ್ಛಿಸಿಲ್ಲ)

ಅವ್ಯಕ್ತ ಪ್ರೀತಿಯ ಗಟ್ಟಿಗಿತ್ತಿ

• ಅರ್ಚನಾ ಜೋಯಿಸ್

ಎಲ್ಲರ ಬದುಕಿನಲ್ಲೂ ಅಮ್ಮ- ಅಪ್ಪನ ಸ್ಥಾನವನ್ನು ತುಂಬುವುದಕ್ಕೆ ಬೇರೆ ಯಾರಿಗೂ ಸಾಧ್ಯವೇ ಇಲ್ಲ. ಈಗಿನ ಪೀಳಿಗೆಯಲ್ಲಿ ಬಹುತೇಕ ಹೆಣ್ಣುಮಕ್ಕಳು ಹೊರಗೆ ದುಡಿಯುತ್ತಾರೆ. ಎಲ್ಲವನ್ನೂ ನಿಭಾಯಿಸುತ್ತಾರೆ. ಆದರೆ, ನನ್ನಮ್ಮ ಮನೆ, ಮಕ್ಕಳು, ಅವರ ಬೇಕು-ಬೇಡಗಳನ್ನೆಲ್ಲ ಅರ್ಥ ಮಾಡಿಕೊಂಡು, ಅವರಿಗೆ ಭಾವನಾತ್ಮಕ ಬೆಂಬಲ ನೀಡುತ್ತಾ ನಮ್ಮನ್ನೆಲ್ಲ ಬೆಳೆಸಿದ ರೀತಿ ನನ್ನೊಳಗೆ ಸದಾ ಅಚ್ಚರಿಯನ್ನು ಉಂಟು ಮಾಡುತ್ತದೆ.

ಇವತ್ತಿಗೂ ನನ್ನ ಅಮ್ಮ ನನ್ನ ಬದುಕಿನಲ್ಲಿ ಬಹುದೊಡ್ಡ ಪಾತ್ರವನ್ನೇ ವಹಿಸುತ್ತಿದ್ದಾರೆ. ಚಿತ್ರೀಕರಣಕ್ಕಾಗಿ ದಿನ ನಿಗದಿ ಮಾಡುವುದರಿಂದ ಹಿಡಿದು, ಮಾಡಿದ ಕೆಲಸಕ್ಕೆ ದುಡ್ಡು ಬಂತೇ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡುವವರೆಗೂ ಅಮ್ಮ ಎಲ್ಲವನ್ನೂ ನೋಡಿಕೊಳ್ಳುತ್ತಾರೆ. ಅಷ್ಟೇ ಅಲ್ಲ ನಾನು ಏನು ಊಟ ಮಾಡುತ್ತಿದ್ದೇನೆ, ಅದರಲ್ಲಿ ಪ್ರೋಟೀನ್ ಇದೆಯೇ ಎಂಬುದನ್ನು ಖುದ್ದು ಪರಿಶೀಲನೆ ಮಾಡುತ್ತಾರೆ. ಹೊರಗೆ, ಶೂಟಿಂಗ್‌ನಲ್ಲಿ ಊಟ ಮಾಡುವುದು ಅಷ್ಟು ಒಳ್ಳೆಯದಲ್ಲ ಎನ್ನುವ ಕಾರಣಕ್ಕೆ ಸ್ವತಃ ಮನೆಯಲ್ಲಿ ಪ್ರೋಟೀನ್ ಪುಡಿಯನ್ನು ತಯಾರಿಸಿ ಕೊಡುತ್ತಾರೆ. ಹೀಗೆ ನನ್ನ ವೈಯಕ್ತಿಕ ಬದುಕಿನ ಬಗ್ಗೆ ಅಮ್ಮ ಮಾಡುವ ಕಾಳಜಿಗೆ ಅವರಷ್ಟೇ ಸಾಟಿ ಎಂದು ಮಾತ್ರ ಹೇಳಬಲ್ಲೆ.

ನಾವು ಚಿಕ್ಕಮಕ್ಕಳಾಗಿದ್ದಾಗ ತುತ್ತು ಉಣಿಸುವುದು ಬೇರೆ. ಆದರೆ, ಈಗಲೂ ಅಂತಹ ಕಾಳಜಿ ತೋರಿಸುವುದು ಇದೆಯಲ್ಲ, ಅದಕ್ಕೆ ದೊಡ್ಡ ಮಟ್ಟದ ಜೀವನಪ್ರೀತಿ ಇರಲೇಬೇಕಾಗುತ್ತದೆ. ನಾನು ಎಷ್ಟು ಪ್ರಯತ್ನಪಟ್ಟರೂ ಅಳವಡಿಸಿಕೊಳ್ಳಲು ಸಾಧ್ಯವೇ ಆಗದಂತಹ ಅಮ್ಮನ ಗುಣವೆಂದರೆ ವಿಪರೀತ ಶುಚಿ. ಸ್ವಚ್ಛತೆಯೇ ಅಮ್ಮನ ಸದಾಕಾಲದ ಧ್ಯಾನ. ಹಾಲು ಕಾಯಿಸುವಾಗ ಒಂದು ಚೂರು ಉಕ್ಕಿದರೂ ಗ್ಯಾಸ್ ಕಟ್ಟೆಯನ್ನು ಮೂರು ಬಾರಿ ಸ್ವಚ್ಛ ಮಾಡುತ್ತಾರೆ. ಅಡುಗೆ ಮಾಡುವಾಗ ಇತ್ತ ತೆಗೆದಿಟ್ಟುಕೊಂಡ ಉಪ್ಪಿನ ಡಬ್ಬಿಯನ್ನು ಮುಚ್ಚದೇ ಬಿಟ್ಟಿದ್ದರೆ, ಸ್ವಲ್ಪ ಸಮಯ ನೋಡುತ್ತಾರೆ; ತಕ್ಷಣವೇ ಅದನ್ನು ಮುಚ್ಚಿ ಅದರ ಜಾಗದಲ್ಲಿ ಇಟ್ಟುಬಿಡು-ತ್ತಾರೆ. ಅವರ ಶುಚಿ, ಅಚ್ಚುಕಟ್ಟುತನವನ್ನು ನಾನು ನೋಡಬಹುದಷ್ಟೆ, ಕಲಿಯಲು ಸಾಧ್ಯವೇ ಆಗದು.

ಏಳು ತಿಂಗಳ ಹಿಂದೆ ನನ್ನ ತಂದೆಗೆ ಗಂಭೀರವಾದ ಆರೋಗ್ಯ ಸಮಸ್ಯೆ ಉಂಟಾಗಿತ್ತು. ಅದೇ ಹೊತ್ತಿಗೆ ನನ್ನ ತಂಗಿಗೆ ಎರಡನೇ ಮಗು ಹುಟ್ಟಿತ್ತು. ಒಂದು ಕಡೆ, ಅನಾರೋಗ್ಯದಿಂದ ಬಳಲುತ್ತಿದ್ದ ಅಪ್ಪ; ಮತ್ತೊಂದು ಕಡೆ, ಬಾಣಂತಿ ಮಗಳು ಇಬ್ಬರನ್ನೂ ಕಕ್ಕುಲಾತಿಯಿಂದ ಸಲಹಿದರು ಅಮ್ಮ. ಎಲ್ಲ ಸವಾಲುಗಳ ನಡುವೆ ಕೌಟುಂಬಿಕ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವು-ದಕ್ಕೆ ಗಟ್ಟಿತನವೊಂದು ಇರಲೇಬೇಕಾಗುತ್ತದೆ. ಆ ಗಟ್ಟಿತನವೇ ನನ್ನಮ್ಮ.

ಆದರೆ ಅಮ್ಮ ಪ್ರೀತಿಯನ್ನು ವ್ಯಕ್ತಪಡಿಸು-ವುದರಲ್ಲಿ ಮಾತ್ರ ಸದಾ ಹಿಂದೆ. ನನಗೆ ಬುದ್ಧಿ ಬಂದಾಗಿನಿಂದ, ಅವಳು ಹೇಗೆ ನಮ್ಮನ್ನೆಲ್ಲ ಮುದ್ದು ಮಾಡಿದಳು ಎಂಬುದರ ಚಿತ್ರಣವೇ ನೆನಪಿಗೆ ಬರುವುದಿಲ್ಲ. ಅಪ್ಪಿ ಮುದ್ದು ಮಾಡುತ್ತಾ, ಲಲ್ಲಗರೆಯುವುದರಲ್ಲಿ ಅಮ್ಮ ತುಸು ಹಿಂದೆಯೇ ಅಂತ ಆಗಾಗ್ಗೆ ಅನ್ನಿಸುವುದುಂಟು. ನಾನು ಭರತನಾಟ್ಯ ತರಗತಿಗಳನ್ನು ನಡೆಸುತ್ತೇನೆ. ಕಳೆದ ಫೆಬ್ರುವರಿಯಲ್ಲಿ ಈ ನನ್ನ ಸಂಸ್ಥೆಗೆ ಎರಡು ವರ್ಷ ತುಂಬಿತು. ಆ ಹೊತ್ತಿನಲ್ಲಿ, ನನ್ನ ಬದುಕೇ ಆಗಿರುವ ಅಪ್ಪ–ಅಮ್ಮನಿಗೆ ಸನ್ಮಾನದ ಗೌರವ ನೀಡುವ ಭಾಗ್ಯ ಒದಗಿಬಂದಿತ್ತು. ಆ ಕ್ಷಣ ಅಮ್ಮನ ಕಣ್ಣುಗಳಲ್ಲಿ ಸಾರ್ಥಕದ ಕಣ್ಣಹನಿ ಜಿನುಗಿದ್ದು ನೋಡಿ ಮನಸ್ಸು ತುಂಬಿಬಂತು.

ನೋಡಲು ಅಂದ ತಿನ್ನಲು ಚಂದ

ರಸಾಸ್ವಾದ

ಹೊಸ ಟ್ರೆಂಡ್ ಪಾಪ್ಸಿಕಲ್

ಬೇಸಿಗೆಯ ಖಾದ್ಯಗಳಲ್ಲಿ ಪಾಪ್ಸಿಕಲ್ ಸದ್ಯದ ಟ್ರೆಂಡ್. ಮಾಡಲು ಸುಲಭ, ತಿನ್ನುತ್ತಿದ್ದರೆ ಮನಸೋಲುವ ಪಾಪ್ಸಿಕಲ್ ತಾಜಾ ಹಣ್ಣಿನಿಂದ ತಯಾರಿಸಬಹುದಾದ ಐಸ್‌ಕ್ಯಾಂಡಿ. ಹಣ್ಣುಗಳನ್ನು ನೇರವಾಗಿ ಕೊಟ್ಟರೆ ಮಕ್ಕಳು ತಿನ್ನುವುದಿಲ್ಲವೇ? ಹಾಗಿದ್ದರೆ ಪಾಪ್ಸಿಕಲ್ ಮಾಡಿಕೊಡಿ. ಕಲ್ಲಂಗಡಿ, ದ್ರಾಕ್ಷಿ, ಮಾವು, ಕಿವಿ ಫ್ರೂಟ್ ಹೀಗೆ ಯಾವ ಹಣ್ಣಿನಿಂದಲಾದರೂ ಸಲುಭವಾಗಿ ಇದನ್ನು ತಯಾರಿಸಬಹುದು. ಮಾಡಲು ಪಾಪ್ಸಿಕಲ್ ಮೌಲ್ಡ್ ಇರಬೇಕಷ್ಟೆ. ಅದಿಲ್ಲದಿದ್ದರೂ ಉದ್ದನೆ ಲೋಟದಲ್ಲೂ ತಯಾರಿಸಬಹುದು.

ಹೀಗೆ ಮಾಡಿ: ನಿಮಗಿಷ್ಟದ ಒಂದೇ ಬಗೆಯ ಹಣ್ಣನ್ನು ತೆಗೆದುಕೊಳ್ಳಬಹುದು ಅಥವಾ ಮೂರ್ನಾಲ್ಕು ಬಗೆಯ ಹಣ್ಣುಗಳನ್ನೂ ಬಳಸಬಹುದು. ಕಲ್ಲಂಗಡಿ, ಕಿವಿ ಫ್ರೂಟ್ ಅನ್ನು ಪ್ರತ್ಯೇಕವಾಗಿ ರುಬ್ಬಿಕೊಳ್ಳಬೇಕು. ಹಣ್ಣಿನ ರಸಕ್ಕೆ ಸ್ವಲ್ಪ ಜೇನುತುಪ್ಪ ಅಥವಾ ಸಕ್ಕರೆ ಹಾಕಿ ಚೆನ್ನಾಗಿ ಮಿಕ್ಸ್ ಮಾಡಬೇಕು. ಬಳಿಕ ಪಾಪ್ಸಿಕಲ್ ಅಚ್ಚುಗಳಲ್ಲಿ ಅಥವಾ ಉದ್ದನೆ ಲೋಟದಲ್ಲಿ ಹಣ್ಣಿನ ರಸ ತುಂಬಿಸಿ, ಐಸ್‌ಕ್ರೀಂ ಕಡ್ಡಿ ಸಿಕ್ಕಿಸಬೇಕು. ಬೇಕಿದ್ದರೆ ಹಣ್ಣಿನ ಸಣ್ಣ ಸಣ್ಣ ಹೋಳುಗಳನ್ನೂ ಅದರಲ್ಲಿ ಸೇರಿಸಬಹುದು. ಬಳಿಕ ಅಚ್ಚಿಗೆ ಮುಚ್ಚಳ ಮುಚ್ಚಿ 6–8 ಗಂಟೆ ಕಾಲ ಫ್ರೀಜರ್‌ನಲ್ಲಿ ಇಟ್ಟು ತೆಗೆದರೆ ರುಚಿಕರ ಪಾಪ್ಸಿಕಲ್ ಸಿದ್ಧ. ಮೂರ್ನಾಲ್ಕು ಬಗೆಯ ಹಣ್ಣಿನ ಸ್ವಾದ ಬೇಕೆಂದರೆ, ಒಂದು ಹಣ್ಣಿನ ರಸವನ್ನು ಸ್ವಲ ಭಾಗ ಹಾಕಿ ಫ್ರೀಜ್ ಮಾಡಿ, ಬಳಿಕ ಮತ್ತೊಂದು ಹಣ್ಣಿನ ರಸ ಹಾಕಿ ಮತ್ತೆ ಫ್ರೀಜ್ ಮಾಡಬೇಕು.

ಹಾಲು, ಕ್ರೀಮ್, ರೋಸ್ ಸಿರಪ್, ಚಾಕೊಲೇಟ್ ಸಿರಪ್ ಬಳಸಿಯೂ ಇದನ್ನು ತಯಾರಿಸಬಹುದು. ಪ್ರತ್ಯೇಕವಾಗಿ ಹಣ್ಣಿನ ರಸಗಳನ್ನು ರುಬ್ಬಿಕೊಂಡು, ಒಂದಾದ ಬಳಿಕ ಒಂದು ಫ್ರೀಜ್ ಮಾಡಿಯೂ ಇಡಬಹುದು. ಮನೆಯಲ್ಲೇ ಮಾಡಿದ ಪಾಪ್ಸಿಕಲ್ ಹೊರಗಿನ ಐಸ್‌ಕ್ರೀಮ್‌ಗಿಂತ ಹೆಚ್ಚು ಆರೋಗ್ಯಕರ.

ಗೊತ್ತೇ ಫ್ರೂಟ್ ಕಬಾಬ್?

ಮಾಂಸಾಹಾರಪ್ರಿಯರಿಗೆ ಕಬಾಬ್ ಅಚ್ಚುಮೆಚ್ಚು. ಕಡ್ಡಿಯಲ್ಲಿ ಸಿಕ್ಕಿಸಿಕೊಂಡು ಕಬಾಬ್ ಸವಿಯುವವರೇ ಹೆಚ್ಚು. ಆದರೆ ಬೇಸಿಗೆಯಲ್ಲಿ ಮಾಂಸಾಹಾರ ಬೇಡ ಎನಿಸಿದವರು ಅಥವಾ ಶುದ್ಧ ಸಸ್ಯಾಹಾರಿಗಳು ಎಲ್ಲರಿಗೂ ಇಷ್ಟವಾಗಬಹುದಾದ ಖಾದ್ಯ ಫ್ರೂಟ್ ಕಬಾಬ್. ಮಾಡಲು ಸುಲಭ, ನೋಡಲು ಅತ್ಯಾಕರ್ಷಕ. ಒಂದೇ ನೋಟಕ್ಕೆ ಮಕ್ಕಳನ್ನು ಬರಸೆಳೆಯುವ ಫ್ರೂಟ್ ಕಬಾಬ್ ಹೀಗೆ ಮಾಡಿ.

ವಿವಿಧ ಹಣ್ಣುಗಳನ್ನು ಸಣ್ಣ ಸಣ್ಣ ತುಂಡುಗಳನ್ನಾಗಿ ಕತ್ತರಿಸಿ. ಸ್ಟ್ರಾಬೆರ್ರಿ, ದ್ರಾಕ್ಷಿ, ಪಪ್ಪಾಯ, ಕಲ್ಲಂಗಡಿ, ಮಾವಿನಹಣ್ಣು, ಅನಾನಸ್, ಬಾಳೆಹಣ್ಣು ಹೀಗೆ ಎಲ್ಲವನ್ನೂ ಒಂದೇ ಅಳತೆಯಲ್ಲಿ ಕತ್ತರಿಸಬೇಕು. ಮರದ ಕಡ್ಡಿಗೆ ಹಣ್ಣಿನ ತುಣುಕುಗಳನ್ನು ಜೋಡಿಸಬೇಕು. ಬಳಿಕ ಇದರ ಮೇಲೆ ಚಾಕೊಲೇಟ್ ಸಾಸ್ ಅಥವಾ ಜೇನುತುಪ್ಪವನ್ನು ಹಾಕಿ ಸವಿಯಲು ಕೊಡಬಹುದು. ಬಾಳೆಹಣ್ಣು ಕಪ್ಪಾಗುವುದನ್ನು ತಡೆಯಲು, ಕತ್ತರಿಸಿದ ತುಂಡುಗಳಿಗೆ ನಿಂಬೆರಸ ಲೇಪಿಸಬೇಕು. ಹೀಗೆ ಜೋಡಿಸಿದ ಕಬಾಬ್‌ಗಳನ್ನು ಫ್ರಿಜ್‌ನಲ್ಲಿಟ್ಟು ತುಸು ತಣ್ಣಗಾದ ಬಳಿಕ ಸವಿದರೆ ಹೆಚ್ಚು ರುಚಿ. ಕಬಾಬ್ ತಯಾರಿಗೂ ಮುನ್ನ ಹಣ್ಣುಗಳನ್ನು ಚೆನ್ನಾಗಿ ತೊಳೆಯುವುದನ್ನು ಮರೆಯಬೇಡಿ.

• ಸುನಾದ

'ಅಮ್ಮ, ಮಧ್ಯಾಹ್ನಕ್ಕೆ ಏನ್ ಅಡುಗೆ ಮಾಡ್ತೀಯ', 'ಸಂಜೆಗೆ ಏನಾದ್ರೂ ಸ್ಪೆಷಲ್ ಮಾಡಮ್ಮ', 'ಹಸಿವಾಗ್ತಿದೆ, ತಿನ್ನೋಕೆ ಏನಾದ್ರೂ ಕೊಡಮ್ಮ...' ಬೇಸಿಗೆ ರಜೆ ಬಂತೆಂದರೆ, ಚಿಕ್ಕ ಮಕ್ಕಳಿರುವ ಮನೆಗಳಲ್ಲಿ ಇಂತಹ 'ವಾಣಿ'ಗಳು ಕಿವಿಗೆ ಬಿಳುತ್ತಲೇ ಇರುತ್ತವೆ. ರಜೆಯ ಮಜಾದಲ್ಲಿರುವ ಮಕ್ಕಳಿಗೆ ದಿನವೂ ಹೊಸತೇನನ್ನಾದರೂ ಮೆಲ್ಲುವ ಕಾತರ. ಅಡುಗೆ ಮನೆಯತ್ತಲೇ ಅವರ ದೃಷ್ಟಿ ನೆಟ್ಟಿರುತ್ತದೆ. ಇಲ್ಲವೇ ಹೊರಗೆ ಸಿಗುವ ಐಸ್‌ಕ್ರೀಮ್, ಜಂಕ್‌ಫುಡ್‌ಗಳತ್ತ ಮನಸ್ಸು ಎಳೆಯುತ್ತಿರುತ್ತದೆ. ಈ ಬಯಕೆ ಪೂರೈಸುತ್ತಲೇ, ಪ್ರಖರ ಬಿಸಿಲು ಮಕ್ಕಳ ದೇಹ ಸೋಕದಂತೆ ಆರೋಗ್ಯಕರ ಖಾದ್ಯಗಳನ್ನು ತಯಾರಿಸುವುದು ಅಮ್ಮಂದಿರ ನಿತ್ಯದ ಸವಾಲು.

ದೇಹದ ನೀರಿನಂಶವನ್ನು ಕಾಪಿಟ್ಟುಕೊಳ್ಳುವ, ಆಕರ್ಷಕವಾಗಿ ಕಾಣುವ, ಆರೋಗ್ಯಕ್ಕೆ ಪೌಷ್ಟಿಕಾಂಶ ಒದಗಿಸುವ ಖಾದ್ಯಗಳ ತಯಾರಿ ಬೇಸಿಗೆ ದಿನಗಳಲ್ಲಿ ಅತಿ ಅಗತ್ಯ. ರಜೆ ಬಂದರೆ ಸಾಕು ಮಕ್ಕಳಿಗೆ ಬೇಸಿಗೆ ಶಿಬಿರ, ಕ್ರೀಡಾ ತರಬೇತಿ, ಸಂಗೀತ, ನೃತ್ಯ ಪಾಠ ಹೀಗೆ ಅವರ ಪಠ್ಯೇತರ ಚಟುವಟಿಕೆಯತ್ತ ಗಮನಹರಿಸುವ ಧಾವಂತದಲ್ಲಿ, ಮಕ್ಕಳ ಆರೋಗ್ಯದ ಸಂಗತಿ ಹಿನ್ನೆಲೆಗೆ ಸರಿಯುತ್ತದೆ. ಹೀಗಾದಾಗ ಅವರ ಆರೋಗ್ಯದಲ್ಲಿ ಏರುಪೇರು ಆಗುವ ಸಂಭವವೇ ಹೆಚ್ಚು. ಅದಕ್ಕೆ ದಾರಿ ಮಾಡಿಕೊಡದೆ ನಿತ್ಯದ ಆಹಾರದ ಮೆನುವನ್ನು ಬದಲಿಸಿಕೊಳ್ಳುವುದು ಒಳಿತು.

ದೇಹಕ್ಕೆ ಆದಷ್ಟೂ ತಂಪು ನೀಡುವ ಚಿಯಾ ಸೀಡ್ಸ್, ಪುದೀನ, ಸೌತೆಕಾಯಿ, ಹೆಚ್ಚು ನೀರಿನಂಶ ಇರುವ ಹಣ್ಣುಗಳು, ಗುಲ್ಕನ್, ಲೆಮನ್ ಗ್ರಾಸ್, ಅಕ್ಕಿ ಗಂಜಿ, ಸೋಂಪು, ನಿಂಬೆಹಣ್ಣು, ತರಕಾರಿ, ಮೊಸರು, ಮಜ್ಜಿಗೆ, ಯೋಗರ್ಟ್, ರಾಗಿ... ಹೀಗೆ ನಿತ್ಯದ ಅಡುಗೆಯಲ್ಲಿ ಇವು ಪ್ರಾಧಾನ್ಯ ಪಡೆದರೆ ದೇಹವನ್ನು ಹೈಡ್ರೇಟ್ ಆಗಿ ಇಡಬಹುದು. ಇವುಗಳನ್ನು ನೇರವಾಗಿ ಕೊಟ್ಟರೆ ಮುಖ ಸಿಂಡರಿಸಿಕೊಳ್ಳುವ ಮಕ್ಕಳೇ ಹೆಚ್ಚು. ಆಕರ್ಷಕವಾದ ರೀತಿಯಲ್ಲಿ ತಯಾರಿಸಿ ಕೊಟ್ಟರೆ ಮಕ್ಕಳಿಗೂ ಖುಷಿ, ಅಮ್ಮಂದಿರಿಗೂ ತೃಪ್ತಿ. ಅಂತಹ ಕೆಲವು ರೆಸಿಪಿಗಳು ನಿಮಗಾಗಿ...

ತಂಪಾದ ರಾಗಿ– ಕ್ಯಾರೆಟ್ ಸ್ಮೂದಿ

ದೇಹಕ್ಕೆ ಪೌಷ್ಟಿಕಾಂಶ ಒದಗಿಸುವ, ಡಯಟ್‌ಗೂ ಸಹಕರಿಸುವ ಸ್ಮೂದಿ ಈಗ ಎಲ್ಲೆಡೆಯೂ ಜನಪ್ರಿಯ. ಈ ಬೇಸಿಗೆಗೆ ರಾಗಿ ಹಾಗೂ ಕ್ಯಾರೆಟ್ ಬಳಸಿ ತಂಪನೆಯ ಸ್ಮೂದಿ ಮಾಡಬಹುದು.

ಏನೇನು ಬೇಕು? ರಾಗಿ ಹಿಟ್ಟು 2–3 ಚಮಚ, ತುರಿದ ಕ್ಯಾರೆಟ್ 1/2 ಕಪ್, ನೀರು 2 ಕಪ್, ನೆನೆಸಿದ ಬಾದಾಮಿ 10–15, ಖರ್ಜೂರ 3ರಿಂದ 4 (ಸಿಹಿಗಾಗಿ), ಚಿಟಿಕೆ ಏಲಕ್ಕಿ ಪುಡಿ, ಅಲಂಕಾರಕ್ಕೆ ಒಣಹಣ್ಣುಗಳು.

ಹೀಗೆ ಮಾಡಿ: ಒಂದು ಪಾತ್ರೆಯಲ್ಲಿ ರಾಗಿ ಹಿಟ್ಟನ್ನು ಅರ್ಧ ಕಪ್ ನೀರು ಹಾಕಿ ಗಂಟಿಲ್ಲದಂತೆ ಕಲೆಸಬೇಕು. ಉಳಿದ ನೀರನ್ನು ಗ್ಯಾಸ್ ಮೇಲಿಟ್ಟು ಬಿಸಿ ಮಾಡಿ ಅದಕ್ಕೆ ರಾಗಿ ಮಿಶ್ರಣ ಹಾಗೂ ತುರಿದ ಕ್ಯಾರೆಟ್ ಹಾಕಿ ಗಂಟಿಲ್ಲದಂತೆ ಸೇರಿಸಿ 5ರಿಂದ 7 ನಿಮಿಷ ಬೇಯಿಸಬೇಕು. ಮಿಶ್ರಣ ದಪ್ಪಗಾಗಿ ಕುದಿಬಂದ ಬಳಿಕ ಗ್ಯಾಸ್ ಆಫ್ ಮಾಡಿ ತಣ್ಣಗಾಗಲು ಬಿಡಬೇಕು.

ಬಳಿಕ ಮಿಕ್ಸಿಗೆ ನೆನೆಸಿದ ಬಾದಾಮಿ, ಖರ್ಜೂರ, ಏಲಕ್ಕಿ ಪುಡಿ ಹಾಕಿ ನುಣ್ಣಗೆ ರುಬ್ಬಿಕೊಳ್ಳಬೇಕು. ತಣ್ಣಗಾದ ರಾಗಿ ಮಿಶ್ರಣವನ್ನು ಸೇರಿಸಿ ಚೆನ್ನಾಗಿ ಬ್ಲೆಂಡ್ ಮಾಡಿ ಗ್ಲಾಸ್‌ಗೆ ಹಾಕಿ ಒಣಹಣ್ಣುಗಳಿಂದ ಅಲಂಕರಿಸಿದರೆ ರಾಗಿ– ಕ್ಯಾರೆಟ್ ಸ್ಮೂದಿ ಸವಿಯಲು ಸಿದ್ಧ. ಇದನ್ನು ಫ್ರಿಜ್‌ನಲ್ಲಿಟ್ಟು ತಣ್ಣಗಾದ ಬಳಿಕ ಸವಿಯಬಹುದು ಅಥವಾ ಹಾಗೆಯೂ ಕುಡಿಯಬಹುದು. ಫೈಬರ್ ಹಾಗೂ ಪ್ರೋಟೀನ್‌ನಿಂದ ಕೂಡಿರುವ ಈ ಸ್ಮೂದಿ ಬೇಸಿಗೆಗೆ ಉತ್ತಮ ಖಾದ್ಯ.

ಅವಳಿಲ್ಲದ ಆ ಮನೆ...



ಭಾವಯಾನ

• ಜಗದೀಶ ಬಳಂಜ

ಜೀವನದಲ್ಲಿ ಕೆಲವೊಂದು ಸಂಬಂಧಗಳು ಅಥವಾ ವ್ಯಕ್ತಿಗಳ ಮೌಲ್ಯ ತಿಳಿಯುವುದೇ ಅವರನ್ನು ನಾವು ಕಳೆದುಕೊಂಡಾಗ. ಜೊತೆಗಿದ್ದಾಗ ಅವರ ಬಗ್ಗೆ ನಾವು ಅಷ್ಟಾಗಿ ಯೋಚಿಸುವುದಿಲ್ಲ. ಆದರೆ ಅವರು ಇಲ್ಲವಾದಾಗ ಉಂಟಾಗುವ ಯಾತನೆ ಇದೆಯಲ್ಲ, ಅದು ಬದುಕಿನಲ್ಲಿ ನಿರ್ವಾತವನ್ನು ಸೃಷ್ಟಿಸಿಬಿಡುತ್ತದೆ.

ನನ್ನ ಬದುಕಿನಲ್ಲಿ ಅದು ಎಂದಿಗೂ ಭಯ ಹುಟ್ಟಿಸುವ ರಾತ್ರಿ. ಆ ಒಂದು ರಾತ್ರಿ ಬರದಿದ್ದರೆ ನನ್ನ ಬದುಕು ಎಷ್ಟು ಸುಂದರವಾಗಿ ಇರುತ್ತಿತ್ತು ಎಂದು ಎಷ್ಟೋ ಬಾರಿ ಅಂದುಕೊಂಡಿದ್ದೇನೆ. ಬಾನಲ್ಲಿ ಚಂದಿರನಿಲ್ಲದ ಗಾಢ ರಾತ್ರಿ. ಹಗಲಿನಲ್ಲಿ ಇದ್ದಂತೆ ರೋಗಿಗಳು ಮತ್ತು ಅವರ ಮನೆಯವರ ಓಡಾಟವಿಲ್ಲದೆ ನಿಶ್ಯಬ್ದವಾಗಿದ್ದ ಆಸ್ಪತ್ರೆ. ಐಸಿಯುನಲ್ಲಿ ಸಾವು– ಬದುಕಿನ ನಡುವೆ ಹೋರಾಡುತ್ತಿದ್ದ ಅಮ್ಮ. 'ನಮ್ಮ ಪ್ರಯತ್ನ ನಾವು ಮಾಡುತ್ತಿದ್ದೇವೆ ಅಷ್ಟೆ' ಎಂದು ಲಗುಬಗೆಯಿಂದ ಓಡಾಡುತ್ತಿದ್ದ ವೈದ್ಯರು ಮತ್ತು ನರ್ಸ್‌ಗಳು. ಆತಂಕದಿಂದ ಐಸಿಯು ಬಾಗಿಲಿನ ಕಡೆ ನೋಡುತ್ತಾ ನಿಂತಿದ್ದ ನಾನು.

ಬದುಕಿನಲ್ಲಿ ಯಾವತ್ತೂ ದೇವರನ್ನು ಅಷ್ಟು ಬೇಡಿಕೊಂಡಿದ್ದೇ ಇಲ್ಲ. ಆದರೆ ಅಂದು ಮಾತ್ರ ಪ್ರತಿಕ್ಷಣವೂ 'ಅವಳನ್ನು ಉಳಿಸಿಕೊಡು' ಎನ್ನುವ ನಿವೇದನೆಯಲ್ಲದೆ ಬೇರೇನೂ ಇರಲಿಲ್ಲ. ಅದಕ್ಕೂ ಮೊದಲು ಹಲವಾರು ಬಾರಿ ಬೇರೆಯವರಿಗಾಗಿ ಆಸ್ಪತ್ರೆಯಲ್ಲಿ ಸಲೀಸಾಗಿ ಓಡಾಡಿದ್ದ ನನಗೆ, ಆ ದಿನ ಮಾತ್ರ ಕೈ ಕಾಲುಗಳು ನಡುಗುತ್ತಿದ್ದವು. ಆ ಚಳಿಯ ರಾತ್ರಿಯಲ್ಲೂ ದೇಹ ಬೆವರುತ್ತಿತ್ತು.

ಮಧ್ಯರಾತ್ರಿಯ ಹೊತ್ತಿಗೆ ವೈದ್ಯರೊಬ್ಬರು ಬಂದು 'ಕಿಡ್ನಿ ಕೆಲಸ ಮಾಡುತ್ತಿಲ್ಲ. ಡಯಾಲಿಸಿಸ್ ಮಾಡಬೇಕು' ಅಂದಾಗ, 'ಬೇಗ ಬೇಗ ಮಾಡಿ' ಎಂದಿದ್ದೆ. ಆಗಲಾದರೂ ಅಮ್ಮ ಬದುಕುತ್ತಾಳೆ ಅನ್ನುವ ನಂಬಿಕೆಯಿಂದ ನಿಟ್ಟುಸಿರುಬಿಟ್ಟಿದ್ದೆ.

ಅದಾಗಿ ಒಂದೆರಡು ತಾಸು ಕಳೆದಿತ್ತಷ್ಟೆ. ಸಪ್ಪೆ ಮೋರೆ ಹಾಕಿಕೊಂಡು ಹೊರಬಂದ ವೈದ್ಯರು ಹೇಳಿದ್ದಿಷ್ಟೇ 'ಕ್ಷಮಿಸಿ, ಉಳಿಸಿಕೊಳ್ಳಲು ಆಗಲಿಲ್ಲ'. ಆ ಮಾತು ಕೇಳಿದ್ದೊಂದೇ ನೆನಪು. ಮತ್ತೇನಾಯಿತೋ ಗೊತ್ತಿಲ್ಲ. ಮರುದಿನ ಕಣ್ಣು ಬಿಟ್ಟಾಗ, ಮನೆಯೊಳಗೆ ಮಲಗಿಸಿದ್ದ ಅಮ್ಮನ ಶವದ ಎದುರಿಗೆ ಇದ್ದೆ. ಹೃದಯ ಪೂರ್ತಿ ಖಾಲಿಯಾದಂತೆ ಅನ್ನಿಸಿತ್ತು. ಮನದೊಳಗೆ ಅಪಾರವಾದ ನೋವು ಹೆಪ್ಪುಗಟ್ಟಿದ್ದರೂ ಅವಳನ್ನು ಕಳುಹಿಸಿಕೊಡುವುದೊಂದೇ ನಮ್ಮ ಮುಂದಿದ್ದ ಆಯ್ಕೆ.

ಅವಳಿದ್ದಾಗ ಒಂದಿನಿತೂ ಕಾಡದ ಒಂಟಿತನ, ಅವಳು ಬಿಟ್ಟುಹೋದ ಮರುಕ್ಷಣವೇ ಆವರಿಸಿತು. ಅವಳು ಕೊಟ್ಟ ಕೈತುತ್ತು, ತೋರಿದ ಕಾಳಜಿ, ಅವಳ ಅಪ್ಪುಗೆ, ಬೆಚ್ಚಗಿನ ಮಡಿಲು ನೆನಪುಗಳಾಗಿ ಕಾಡಲಾರಂಭಿಸಿದವು.

ಈಗ ಅವಳು ಹೋಗಿ ವರುಷ ಐದಾದರೂ, ಪ್ರತಿದಿನ ಅನಿಸುವುದೊಂದೇ 'ಅಮ್ಮ ಇರಬೇಕಿತ್ತು'. ಎಲ್ಲರಂತೆ ನಾನೂ ಪ್ರತಿದಿನ ಅಮ್ಮನ ಜೊತೆ ಮಾತನಾಡಬೇಕು, ನನ್ನ ಸುಖ, ಸಂತೋಷವನ್ನು ಹಂಚಿಕೊಳ್ಳಬೇಕು ಎಂಬ ಬಯಕೆ ದಿನದಿನವೂ ಸತ್ತು ಬದುಕುತ್ತದೆ. ಆದರೆ ಆ ಬಯಕೆ ತೀರಿಸಲು ಅವಳು ಮಾತ್ರ ಇಲ್ಲ. ಅಮ್ಮನಿಲ್ಲದ ಊರಿನ ಮನೆ ಎಷ್ಟು ಬರಿದಾಗಿದೆ ಅಂದರೆ, ನೀರವ ಮೌನ ಬಿಟ್ಟು ಬೇರೇನೂ ಅಲ್ಲಿಲ್ಲ. ಕೆಲಸದಿಂದ ರಜೆ ಪಡೆದು, ಆ ಮನೆಗೆ ಬಂದರೆ ಕಾಣುವುದು ಬರೀ ವಸ್ತುಗಳು ಮತ್ತು ಯಾವುದೋ ಮೂಲೆಯಲ್ಲಿ ತನ್ನದೇ ಕೆಲಸದಲ್ಲಿ ನಿರತರಾಗಿರುವ ಅಪ್ಪ ಅಷ್ಟೇ. ಮಗ ಮನೆಗೆ ಬಂದ ಎಂದು ಸಂಭ್ರಮ ಪಡುವವರಿಲ್ಲ, ಕುಳ್ಳಿರಿಸಿ ಮಮತೆ ತೋರುವವರಿಲ್ಲ, ನಿನಗೆ ಇಷ್ಟವಾಗಿದ್ದನ್ನು ಮಾಡಿದ್ದೇನೆ, ತಿನ್ನು ಎನ್ನುವವರಿಲ್ಲ.

ನಾನು ಕಾರು ತೆಗೆದುಕೊಳ್ಳಬೇಕು, ಅದರಲ್ಲಿ ಅಮ್ಮನನ್ನು ಕೂರಿಸಿಕೊಂಡು, ಅವಳು ಇಷ್ಟಪಡುವ ಎಲ್ಲ ಸ್ಥಳಗಳನ್ನೂ ತೋರಿಸಿಕೊಂಡು ಬರಬೇಕು ಎನ್ನುವುದು ನನ್ನ ಬಹುದೊಡ್ಡ ಕನಸಾಗಿತ್ತು. ಆದರೆ ಆಗ ಅಂತಹ ಸ್ಥಿತಿವಂತಿಕೆ ಇರಲಿಲ್ಲ. ಇಂದು ಕಾರು ಕೊಳ್ಳುವ ಸಾಮರ್ಥ್ಯವಿದೆ. ಅದರಲ್ಲಿ ಕುಳಿತು ಸಂಭ್ರಮಿಸಲು ಅವಳಿಲ್ಲ.

ಕಷ್ಟಗಳ ಕೂಪದ ನಡುವೆಯೂ ತನ್ನವರಿಗಾಗಿ ಬದುಕಿದ ಜೀವಕ್ಕೆ ಸುಖದ ದಿನಗಳನ್ನು ನೀಡುವ ಭಾಗ್ಯ ನನಗೆ ಇಲ್ಲದಾಯಿತಲ್ಲ ಎನ್ನುವ ನೋವು ಸದಾ ಕಾಡುತ್ತದೆ. ಅವಳ ಅಗಲಿಕೆಯ ನೋವನ್ನು ಸ್ನೇಹಿತರ ಒಡನಾಟದಲ್ಲಿ ಮರೆಯಲು ಪ್ರಯತ್ನಿಸುತ್ತಿದ್ದೇನೆ. ಆದರೆ ಅದು ಸುಲಭವಲ್ಲ. ಯಾಕೆಂದರೆ ಹೆತ್ತತಾಯಿಗೆ ಯಾರಾದರೂ ಸರಿಸಾಟಿಯಾಗಲು ಸಾಧ್ಯವೇ? ಜೀವ ಕೊಟ್ಟು ನಮ್ಮ ಬದುಕಿನಲ್ಲಿ ಒಂದಾಗಿ ಬೆರೆತುಹೋಗುವ ಅಮ್ಮನಿಗೆ ನಮನ ಸಲ್ಲಿಸಲು 'ಅಮ್ಮಂದಿರ ದಿನ' ಒಂದು ಸಾಂಕೇತಿಕ ನೆಪವಷ್ಟೆ.

ಯಾಕೆಂದರೆ ಅಮ್ಮ ಎನ್ನುವುದು ಬರಿಯ ಸಂಬಂಧವಲ್ಲ. ಅಲ್ಲಿ ಪ್ರೀತಿ, ಮಮತೆ, ಹುಸಿಮುನಿಸು, ಕಿತ್ತಾಟ, ಜಗಳ, ಬೈಗುಳ ಎಲ್ಲವೂ ಇರುತ್ತದೆ. ಆದರೆ ಅದಕ್ಕಿಂತ ಮಿಗಿಲಾದ ಬಂಧವೊಂದು ಬಿಗಿಯಾಗಿರುತ್ತದೆ. ಎಷ್ಟೇ ಆಸ್ತಿ, ಅಂತಸ್ತು ಇದ್ದರೂ ಆ ಬಂಧ ಬೇರೆಲ್ಲೂ ಸಿಗಲು ಸಾಧ್ಯವಿಲ್ಲ. ಅದಕ್ಕೇ ಅಮ್ಮನೊಂದಿಗೆ ಆದಷ್ಟೂ ಹೆಚ್ಚಿನ ಸಮಯವನ್ನು ಕಳೆಯಲು ಪ್ರಯತ್ನಿಸಿ. ಅವಳಿಗಾಗಿ ಏನಾದರೂ ಮಾಡಬೇಕೆನಿಸಿದರೆ ಇಂದೇ ಮಾಡಿ. ಕಳೆದುಹೋದ ಸಮಯ ಮತ್ತು ಜೀವ ಮತ್ತೆ ಸಿಗವು.

ಆ ತಾಯಿ ಮಾಡಿದ್ದು ಸರಿಯೇ?

ಅಂತರಂಗ

ಅಕ್ಷರ ದಾಮ್ಲೆ, ಮನಃಶಾಸ್ತ್ರಜ್ಞ

• ಬೆಂಗಳೂರಿನಲ್ಲಿ ಇತ್ತೀಚೆಗೆ ಮಹಿಳೆಯೊಬ್ಬರು ತಮ್ಮ 13 ವರ್ಷದ ಮಗಳನ್ನು ಉಸಿರುಗಟ್ಟಿಸಿ ಕೊಂದು ತಾವೂ ನೇಣಿಗೆ ಶರಣಾದರು. ಸಾಮಾಜಿಕ ಮಾಧ್ಯಮಗಳಲ್ಲಿ ಆ ಅಮ್ಮ– ಮಗಳ ಬಗೆಬಗೆಯ ಭಾವಚಿತ್ರಗಳನ್ನು ನೋಡಿ ನನ್ನ ಮನಸ್ಸು ಕಲಕಿಹೋಯಿತು. ಈಗಷ್ಟೇ ಅರಳುತ್ತಿದ್ದ ಆ ಮಗುವನ್ನು ಕೈಯಾರೆ ಕೊಲ್ಲುವುದಕ್ಕೆ ಆ ತಾಯಿಗೆ ಹೇಗಾದರೂ ಮನಸ್ಸು ಬಂತು? ಗಂಡನಿಗೆ ಹುಷಾರಿರಲಿಲ್ಲ, ಆರ್ಥಿಕ ಸಂಕಷ್ಟವಿತ್ತು, ಹೀಗಾಗಿ ಆಕೆ ಖಿನ್ನತೆಗೆ ಒಳಗಾಗಿದ್ದರು ಎಂಬ ಮಾತು ಕೇಳಿಬಂತು. ಕಾರಣ ಏನೇ ಇದ್ದರೂ 'ಕ್ಷಮಯಾ ಧರಿತ್ರಿ' ಅನ್ನಿಸಿಕೊಳ್ಳುವ ಹೆಣ್ಣುಮಕ್ಕಳು ಇತ್ತೀಚಿನ ದಿನಗಳಲ್ಲಿ ಇಷ್ಟೊಂದು ಕ್ರೂರವಾಗಿ ವರ್ತಿಸುತ್ತಿರುವುದು ಏಕೆ? ಹೆತ್ತ ಕುಡಿಗಳನ್ನೇ ಕೊಲ್ಲಲು ಮುಂದಾಗುವಷ್ಟು ದೃಢ ನಿರ್ಧಾರ ಮಾಡುವವರು, ಬದುಕುವ ಛಲ ತೋರುವುದಿಲ್ಲವೇಕೆ?

ಭಾರತಿ, ಮಂಡ್ಯ

ನಿಮ್ಮ ಪ್ರಶ್ನೆ ಬಹಳ ಮಾರ್ಮಿಕವಾದದ್ದು. ತಾನೇ ಹೆತ್ತ ಮಗುವಿನ ಜೀವವನ್ನು ತನ್ನದೇ ಕೈಯಾರೆ ಹೊಸಕಿ ಹಾಕುವುದಕ್ಕೆ ಆ ತಾಯಿಗೆ ಹೇಗೆ ಮನಸ್ಸಾಗಿರಬಹುದು ಅಂತ ಯೋಚನೆ ಮಾಡಿದರೆ ಆಶ್ಚರ್ಯವೆನಿಸುತ್ತದೆ. ಆದರೆ ಆಕೆಯ ಜೀವನದ ಸಂಘರ್ಷಗಳು ಏನಿದ್ದವು ಎಂಬುದನ್ನು ಅಳೆಯುವುದಕ್ಕೆ ನಮಗೆ ಕಷ್ಟಸಾಧ್ಯ. ಯಾಕೆಂದರೆ ಯಾವಾಗ ಆರೋಗ್ಯದ ಸಮಸ್ಯೆ, ಆರ್ಥಿಕ ಸಂಕಷ್ಟ ಅಥವಾ ಅಸಹಾಯಕತೆ ಇರುತ್ತದೋ ಆಗ ಕೆಲವೊಮ್ಮೆ ಜೀವನ ರೋಸಿ ಹೋಗುತ್ತದೆ. ನೆಂಟರು ಇಷ್ಟರು ಸಹಾಯ ಮಾಡುತ್ತಾರೆ ಅನ್ನುವ ಹಾಗಿದ್ದರೂ ಎಷ್ಟು ಸಮಯ ಸಹಾಯ ಮಾಡುತ್ತಾರೆ ಅನ್ನುವಂಥ ಪ್ರಶ್ನೆ ಮನಸ್ಸಿನಲ್ಲಿ ಮೂಡುತ್ತದೆ. ಆಕೆಗೆ ಅಂತಹ ಸಣ್ಣ ಸಹಕಾರವೂ ಅಗತ್ಯ ಸಮಯದಲ್ಲಿ ಸಿಕ್ಕಿತೋ ಇಲ್ಲವೋ ಎಂಬುದು ನಮಗೆ ತಿಳಿದಿಲ್ಲ.

ಅನಾರೋಗ್ಯದ ಸಂದರ್ಭದಲ್ಲಿ ಎಷ್ಟೋ ಬಾರಿ ಆಸ್ಪತ್ರೆಗಳಿಗೆ ಹೋಗಿ ಗಂಟೆಗಟ್ಟಲೆ, ದಿನಗಟ್ಟಲೆ ಕಾಯುವಂತಹ ಪರಿಸ್ಥಿತಿ ಇರುತ್ತದೆ. ಖಾಸಗಿ ಆಸ್ಪತ್ರೆಗೆ ಹೋಗುವಂಥ ಪರಿಸ್ಥಿತಿ ಆಕೆಗೆ ಇಲ್ಲದಿದ್ದಿರಬಹುದು. ಸರ್ಕಾರಿ ಆಸ್ಪತ್ರೆಗಳಲ್ಲಿ ಬಹಳ ಉತ್ತಮ ವೈದ್ಯರು ಇದ್ದರೂ ರೋಗಿಗಳ ಸಂಖ್ಯೆ ಹೆಚ್ಚಿರುವ ಕಾರಣ, ಅಲ್ಲಿ ಶುಶ್ರೂಷೆ ಪಡೆದುಕೊಳ್ಳುವುದು ಒಂದು ಹೋರಾಟವೇ ಸರಿ. ಮಾತ್ರವಲ್ಲ ಎಷ್ಟೋ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ಪಡೆಯುವ ಸೌಲಭ್ಯಗಳಿದ್ದರೂ ಅನೇಕ ಕಡೆಗಳಲ್ಲಿ ಬೇರೆ ಬೇರೆ ರೀತಿಯ ಖರ್ಚುಗಳನ್ನು ಮಾಡಬೇಕಾಗುತ್ತದೆ. ಇಲ್ಲವಾದರೆ ಆ ಸೌಲಭ್ಯಗಳು ಲಭ್ಯವಾಗುವುದಿಲ್ಲ.

ಜೀವನದಲ್ಲಿ ಕೆಲವೊಮ್ಮೆ ಹೋರಾಟ ಅನ್ನುವುದು ನಮ್ಮ ಆಯ್ಕೆ ಎಂದಾದಾಗ, ನಮಗೆ ಹೋರಾಟದ ಸೋಲು- ಗೆಲುವಿಗಿಂತ ಹೋರಾಟ ಮಾಡುವ ಪ್ರಕ್ರಿಯೆಯೇ ಮುಖ್ಯವಾಗುತ್ತದೆ. ಆದರೆ ಅದು ಪ್ರಾರಬ್ಧವಾದಾಗ ಎಷ್ಟೋ ಬಾರಿ ಕೈಚೆಲ್ಲುವ ಮನಸ್ಸಾಗುತ್ತದೆ. ಪ್ರಶ್ನೆಯಲ್ಲಿ ಉಲ್ಲೇಖಿಸಿದ ಮಹಿಳೆಯ ಪರಿಸ್ಥಿತಿಯೂ ಅಂತಹದ್ದೇ ಇದ್ದಿರಬಹುದು. ಬಹುಶಃ ತಾನು ಸಾಯುವುದು ಎಂದು ನಿರ್ಧಾರ ಮಾಡಿದ ಮೇಲೆ, ಮಗಳನ್ನು ಉಳಿಸಿ ಹೋದರೆ ಆಕೆಯ ಜೀವನಕ್ಕೆ ಮುಂದೆ ಯಾರು ಗತಿ ಅನ್ನುವಂತಹ ಪ್ರಶ್ನೆ ಆಕೆಗೆ ಇನ್ನೂ ದೊಡ್ಡದಾಗಿ ಕಾಡಿರಬಹುದು.

ಆಕೆ ಮಾಡಿದ್ದು ಸರಿಯೇ ಎಂದರೆ, ಖಂಡಿತವಾಗಿಯೂ ಸರಿಯಲ್ಲ. ಆದರೆ ಜೀವನದ ಸವಾಲುಗಳ ಸನ್ನಿವೇಶವನ್ನು ನೋಡಿದಾಗ, ಆಕೆಯ ಕುರಿತು ಅನುಕಂಪ ಮೂಡುತ್ತದೆ. ಆಕೆಯಂತೆಯೇ ಹೋರಾಟದಲ್ಲಿ ಇರುವಂತಹ ಅನೇಕ ಮಹಿಳೆಯರು ನಮ್ಮ ಸಮಾಜದಲ್ಲಿ ಇದ್ದಾರೆ. ಇಂತಹ ಪ್ರಕರಣಗಳು ಮರುಕಳಿಸದಂತೆ ಮಾಡುವುದು ನಮ್ಮೆಲ್ಲರ ಜವಾಬ್ದಾರಿ. ಸ್ತ್ರೀ ಸಂಘಟನೆಗಳು ಇಂತಹ ಕೈಂಕರ್ಯದಲ್ಲಿ ದೊಡ್ಡ ಕೊಡುಗೆಗಳನ್ನು ಕೊಡುವುದಕ್ಕೆ ಸಾಧ್ಯವಿದೆ. ಯಾರಿಗೆಲ್ಲ ಸಹಾಯ ಬೇಕು ಅಂತಹವರಿಗೆ ಸರಿಯಾದ ಸಮಯಕ್ಕೆ ಸಹಕಾರ ದೊರಕುವಂತೆ ಮಾಡುವ ಪ್ರಯತ್ನ ಸಮಾಜದಲ್ಲಿ ಬಹಳ ದೊಡ್ಡಮಟ್ಟಿಗಿನ ಬದಲಾವಣೆಯನ್ನು ತರುವುದಕ್ಕೆ ನಾಂದಿ ಹಾಡಬಹುದು.

'ರೈತರ ಪ್ರಗತಿಗೆ ಸಹಕಾರ ಇಲಾಖೆ ಶ್ರಮಿಸಲಿ'

ಸಹಕಾರ ನಿಬಂಧಕರ ಕಚೇರಿ ಸಮೃದ್ಧಿ ಭವನ ಉದ್ಘಾಟನೆಯಲ್ಲಿ ಸಿ.ಎಂ ಕಿವಿಮಾತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರೈತರೊಂದಿಗೆ ನೇರ ಒಡನಾಟ ಹೊಂದಿರುವ ಸಹಕಾರ ಇಲಾಖೆಯು ರೈತಾಪಿ ವರ್ಗದ ಪ್ರಗತಿಗೆ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

ಅಲಿ ಅಸ್ಕರ್ ರಸ್ತೆಯ ಸಹಕಾರ ನಿಬಂಧಕರ ಕಚೇರಿ ಆವರಣದಲ್ಲಿ ನಿರ್ಮಿಸಲಾಗಿರುವ 'ಸಹಕಾರ ಸಮೃದ್ಧಿ ಸೌಧ'ವನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

'ಯಾವ ಕ್ಷೇತ್ರವೂ ಸಹಕಾರ ಕ್ಷೇತ್ರದಿಂದ ಹೊರತಾಗಿರಲು ಸಾಧ್ಯವಿಲ್ಲ. 2023ರಲ್ಲಿ ಈ ಕಟ್ಟಡದ ಭೂಮಿ ಪೂಜೆ ನಾನೇ ನೆರವೇರಿಸಿದ್ದೆ. ಮೂರು ವರ್ಷಗಳಲ್ಲಿ ₹19.43 ಕೋಟಿ ವೆಚ್ಚದಲ್ಲಿ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದೆ. ವಿಧಾನಸೌಧದಂತೆಯೇ ಸಹಕಾರ ಸೌಧವನ್ನು ನಿರ್ಮಿಸಿದ್ದೀರಿ. ದೊಡ್ಡ ಕಟ್ಟಡ ನಿರ್ಮಾಣ ಮಾಡಿದ್ದು, ಇದನ್ನು ಚೆನ್ನಾಗಿ ಬಳಸಿಕೊಳ್ಳಿ. ಸೌಧದ ಒಳಗೆ ನಿಮ್ಮ ಸೇವೆಯೂ ಚೆನ್ನಾಗಿ ಇರಲಿ' ಎಂದು ಕಿವಿಮಾತು ಹೇಳಿದರು.

'ಒಂದು ಊರಿನಲ್ಲಿ ಒಂದು ಶಾಲೆ, ಪಂಚಾಯಿತಿ ಮತ್ತು ಸಹಕಾರ ಸಂಘ ಇರಲೇಬೇಕು. ಆಗ ಮಾತ್ರ ಗ್ರಾಮಗಳ ಸರ್ವತೋಮುಖ ಪ್ರಗತಿ ಸಾಧ್ಯ ಎಂದು ಪ್ರಧಾನಿಯಾಗಿದ್ದ ನೆಹರೂ ಹೇಳಿದ್ದರು. ಹಾಲಿನ ಸಹಕಾರ ಸಂಘಗಳು ಪ್ರತಿ ಊರಿನಲ್ಲಿ ರೂಪುಗೊಂಡು ಬದಲಾವಣೆಗೆ ಕಾರಣವಾಗಿದೆ. ಉತ್ತರ ಕರ್ನಾಟಕ ಭಾಗದಲ್ಲೂ ಹೆಚ್ಚಿಸಬೇಕು' ಎಂದು ತಿಳಿಸಿದರು. ಸಚಿವ ಎಚ್.ಕೆ.ಪಾಟೀಲ, ಶಾಸಕ ರಿಜ್ವಾನ್ ಅರ್ಷದ್, ವಿಧಾನಪರಿಷತ್ ಸದಸ್ಯೆ ಬಿಲ್ಕಿಸ್ ಬಾನು, ಸಹಕಾರ ಇಲಾಖೆ ಕಾರ್ಯದರ್ಶಿ ಎಸ್.ಬಿ. ಶೆಟ್ಟಣ್ಣವರ್, ನಿಬಂಧಕ ಪಿ.ಎಸ್. ಕಾಂತರಾಜು ಉಪಸ್ಥಿತರಿದ್ದರು.

ಕುಡಿಯಿರಿ, ದಿನಾ ಕುಡಿಯಬೇಡಿ: ಸಿದ್ದರಾಮಯ್ಯ

'ಕುಡಿಯುವುದು ತಪ್ಪಲ್ಲ. ದಿನವೂ ಕುಡಿದು ಅದನ್ನೇ ಚಟ ಮಾಡಿಕೊಳ್ಳಬಾರದಷ್ಟೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಿವಿಮಾತು ಹೇಳಿದರು.

'ಸಹಕಾರ ಸಮೃದ್ಧಿ ಸೌಧ' ಉದ್ಘಾಟನೆ ಸಮಾರಂಭದಲ್ಲಿ ಮಾತನಾಡಿದ ಅವರು, 'ಪಟ್ಟಣಗಳಿಗೆ ಹಾಲು ಹೆಚ್ಚು ಸರಬರಾಜು ಆಗುತ್ತಿದ್ದರೆ, ಹಾಲು ಉತ್ಪಾದಿಸುವ ಹಳ್ಳಿಗಳಿಗೆ ಮದ್ಯ ಬಂದಿದೆ ಎನ್ನುವುದು ಸಂಸತ್ತಿನಲ್ಲಿ ಚರ್ಚೆಯಾಗಿದೆ' ಎಂದಾಗ, ಸಭೆ ನಗೆಗಡಲಲ್ಲಿ ತೇಲಿತು.

'ಹಿಂದೆ ದೇವಾನುದೇವತೆಗಳೇ ಕುಡಿಯುತ್ತಿದ್ದರು. ನೀವು ಕುಡಿಯಬೇಡ ಅನ್ನುವುದು, ನಮ್ಮ ಮಂತ್ರಿಗಳೂ ಕುಡಿಯುವುದಿಲ್ಲವೇ' ಎಂದರು.

'ನೀನು ಕುಡಿಯುವುದಿಲ್ಲ ಎಂದರೆ, ಯಾಕೆ ಹುಟ್ಟಿದ್ದೀಯಾ ಎಂದು ಆರ್.ಎಲ್.ಜಾಲಪ್ಪ ತಮಾಷೆ ಮಾಡೋರು' ಎಂದು ಅವರು ನೆನಪು ಮಾಡಿಕೊಂಡರು.

ಬೆಂಗಳೂರಿನಲ್ಲಿ ಸಹಕಾರ ಸಮೃದ್ಧಿ ಸೌಧ ಉದ್ಘಾಟನೆ ವೇಳೆ ಸಿದ್ದರಾಮಯ್ಯ ಶುಕ್ರವಾರ ಪುಷ್ಪಾರ್ಚನೆ ಮಾಡಿದರು. ಎಚ್.ಕೆ. ಪಾಟೀಲ, ರಿಜ್ವಾನ್ ಅರ್ಷದ್, ಡಿ.ಕೆ.ಶಿವಕುಮಾರ್ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

'ಕೂತವನದೇ ಕುರ್ಚಿ, ಬಿಡಿಸಲಾಗದು'

ಸಿದ್ದರಾಮಯ್ಯ ಎದುರೇ 'ಕುರ್ಚಿ' ಪ್ರಸ್ತಾಪಿಸಿದ ಡಿಸಿಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿಎಂ ಅವರು ನನ್ನ ಪಕ್ಕದಲ್ಲಿಯೇ ಕುಳಿತಿದ್ದಾರೆ. ಕೂತವನದೇ ಕುರ್ಚಿ, ಒಬ್ಬನದೇ ಚೆಂಡು ಎನ್ನುವಂತಾಗಿದೆ. ಯಾರನ್ನೂ ಬಿಡಿಸಲು ಆಗೋಲ್ಲ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾರ್ಮಿಕವಾಗಿ ಹೇಳಿದರು.

ಶುಕ್ರವಾರ ನಡೆದ 'ಸಹಕಾರ ಸಮೃದ್ಧಿ ಸೌಧ' ಉದ್ಘಾಟನೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಇಬ್ಬರೂ ಪಾಲ್ಗೊಂಡಿದ್ದರು. ರಾಜ್ಯ ಕಾಂಗ್ರೆಸ್‌ನಲ್ಲಿ ಎಂದೂ ಮುಗಿಯದ ಕಥೆಯಂತಾಗಿರುವ 'ಅಧಿಕಾರ ಹಸ್ತಾಂತರ'ದ ವಿಷಯ ಮತ್ತೆ ಚಾಲ್ತಿಗೆ ಬಂದಿದೆ. ವೇದಿಕೆಯಲ್ಲಿದ್ದ ಸಿದ್ದರಾಮಯ್ಯ ಅವರತ್ತ ನೋಡುತ್ತಲೇ ನಗುಮುಖದಲ್ಲೇ ಶಿವಕುಮಾರ್, ಕುರ್ಚಿಯ ಕಾಲನ್ನು ಎಳೆಯುವ ಯತ್ನ ನಡೆಸಿದರು. ಮುಖ್ಯಮಂತ್ರಿಯವರು ನಗುತ್ತಲೇ ಶಿವಕುಮಾರ್ ಮಾತು ಆಲಿಸಿದರು.

'ಯಾರು ಕುರ್ಚಿಯಲ್ಲಿ ಕುಳಿತಿರುತ್ತಾರೋ ಅವರದ್ದೇ ಕುರ್ಚಿ. ಯಾರ ಕೈಯಲ್ಲಿ ಚೆಂಡು ಇರುತ್ತದೆಯೋ ಅವರದ್ದೇ ಚೆಂಡು. ಇದು ನಮ್ಮ ರಾಜಕೀಯದ ಕಥೆ ಹೇಳ್ತಿದ್ದೀನಿ, ನಿಮ್ಮದಲ್ಲ. ನೀವು ದಿನದ ಕೆಲಸ ಮಾಡ್ತೀರಿ. ಮನೆಗೆ ಹೋಗ್ತೀರಿ' ಎಂದು ಶಿವಕುಮಾರ್ ಸಹಕಾರ ಇಲಾಖೆ ಅಧಿಕಾರಿ, ಸಿಬ್ಬಂದಿಯತ್ತ ನೋಡಿ ಹೇಳಿದರು.

ವೇದಿಕೆಯಲ್ಲಿದ್ದ ಕಾನೂನು ಸಚಿವ ಎಚ್.ಕೆ. ಪಾಟೀಲ ಅವರನ್ನು ಉದ್ದೇಶಿಸಿ ಮಾತನಾಡಿದ ಶಿವಕುಮಾರ್, 'ನೋಡಿ ನಮ್ಮ ಪಾಟೀಲರು 45-50 ವರ್ಷ ದಿಂದ ಸಹಕಾರ ವಲಯದ ಕುರ್ಚಿಯನ್ನು ಬಿಡುತ್ತಲೇ ಇಲ್ಲ. ಪಟ್ಟಣ ಬ್ಯಾಂಕ್‌ಗಳ ಸಹಕಾರ ಮಹಾಮಂಡಳದಲ್ಲಿದ್ದಾರೆ. ಕಾನೂನಿನಲ್ಲೂ ಬದಲಾವಣೆ ಮಾಡಿದ್ದಾರೆ' ಎಂದರು.

'ನಾನು ವಿದ್ಯಾರ್ಥಿಯಾಗಿದ್ದಾಗಲೆ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆ ಅವರು ನನ್ನನ್ನು ಟಿಎಪಿಸಿಎಂಎಸ್‌ಗೆ ನೇಮಿಸಿದ್ದರು. ಮುಂದೆ ಸಹಕಾರ ಕ್ಷೇತ್ರದ ಸಚಿವನಾಗಿಯೂ ಕೆಲಸ ಮಾಡಿದೆ' ಎಂದು ಶಿವಕುಮಾರ್ ಹೇಳಿದರು.

'ರೈತರ ಹೆಸರಲ್ಲಿ ಸಾಲ, ಬಡ್ಡಿ ವಹಿವಾಟು ನಿಲ್ಲಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರೈತರ ಪಹಣಿ ಇಟ್ಟುಕೊಂಡು ಅವರ ಹೆಸರಿನಲ್ಲಿ ವ್ಯವಸಾಯ ಸೇವಾ ಸಹಕಾರ ಸಂಘ ಕಾರ್ಯದರ್ಶಿಗಳು ಸಾಲ ಪಡೆದು, ಬಡ್ಡಿಗೆ ನೀಡಿ ದೊಡ್ಡ ಅವ್ಯವಹಾರ ನಡೆಸುತ್ತಿರುವುದನ್ನು ತಡೆಯಬೇಕು' ಎಂದು ಸಹಕಾರ ಇಲಾಖೆ ಹಿರಿಯ ಅಧಿಕಾರಿಗಳಿಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚನೆ ನೀಡಿದರು.

'ಸಹಕಾರ ಇಲಾಖೆಯ ಜಂಟಿ, ಉಪ ಹಾಗೂ ಸಹಾಯಕ ನಿಬಂಧಕರು ಸೂಕ್ಷ್ಮವಾಗಿ ಕೆಲಸ ಮಾಡಿದರೆ ರೈತರ ಹೆಸರಲ್ಲಿ ಆಗುವ ಅನ್ಯಾಯ ತಪ್ಪಿಸಬಹುದು' ಎಂದು ಹೇಳಿದರು.

'ಸಹಕಾರ ಬ್ಯಾಂಕ್‌ಗಳ ಮೇಲೆ ಈಗಲೂ ನಂಬಿಕೆಯಿದೆ. ಆದರೆ ಬೆಂಗಳೂರಿನ ಗುರು ರಾಘವೇಂದ್ರ ಸಹಕಾರ ಬ್ಯಾಂಕ್, ಅಮಾನತ್ ಸಹಕಾರ ಬ್ಯಾಂಕ್‌ಗಳು ನಡೆದುಕೊಂಡ ರೀತಿ ನಮ್ಮ ಮುಂದೆಯೇ ಇದೆ. ಇಂತಹ ಚಟುವಟಿಕೆಗಳ ಮೇಲೆ ಸಹಕಾರ ಇಲಾಖೆ ಅಧಿಕಾರಿಗಳು ನಿಗಾ ವಹಿಸಬೇಕು. ಸಹಕಾರ ವಲಯದಲ್ಲಿ ರಾಜಕೀಯ ಒತ್ತಡವೂ ಇರುತ್ತದೆ. ಸಚಿವರು, ಶಾಸಕರೇ ಸಹಕಾರ ಬ್ಯಾಂಕ್‌ಗಳ ನಿರ್ದೇಶಕರಾಗಿ ರಾಜಕೀಯ ಶಕ್ತಿ ಉಳಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಆದರೆ, ಆತ್ಮಸಾಕ್ಷಿಗೆ ಅನುಗುಣವಾಗಿ ಕೆಲಸ ಮಾಡಿದರೆ ಸಹಕಾರ ವಲಯ ಉಳಿಸಬಹುದು' ಎಂದರು.

35 ಎನ್‌ಕೌಂಟರ್: 3 ಮಂದಿ ಹತ್ಯೆ

ಲಖನೌ, ಉತ್ತರಪ್ರದೇಶ (ಪಿಟಿಐ): ಕಳೆದೆರಡು ದಿನಗಳಿಂದ ರಾಜ್ಯದಾದ್ಯಂತ 35 ಎನ್‌ಕೌಂಟರ್ ನಡೆಸಿರುವ ಉತ್ತರ ಪ್ರದೇಶ ಪೊಲೀಸರು ಮೂರು ಮಂದಿ ಶಂಕಿತ ಕ್ರಿಮಿನಲ್‌ಗಳನ್ನು ಹತ್ಯೆ ಮಾಡಿದ್ದಾರೆ. ಕಾರ್ಯಾಚರಣೆಯ ವೇಳೆ 36 ಮಂದಿ ಗಾಯಗೊಂಡಿದ್ದು, 60 ಮಂದಿ ಶಂಕಿತರನ್ನು ವಶಕ್ಕೆ ಪಡೆಯಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಸಂಘಟಿತ ಅಪರಾಧಗಳ ಜಾಲವನ್ನು ಮಟ್ಟಹಾಕುವ ನಿಟ್ಟಿನಲ್ಲಿ ಅಪರಾಧ ಚಟುವಟಿಕೆಗಳ ವಿರುದ್ಧ ಸರ್ಕಾರದ ಶೂನ್ಯ ಸಹಿಷ್ಣುತೆ ನೀತಿಯನ್ನು ಈ ಕಾರ್ಯಾಚರಣೆಯು ಪ್ರತಿಬಿಂಬಿಸಿದೆ' ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ರಾಜೀವ್ ಕೃಷ್ಣ ತಿಳಿಸಿದ್ದಾರೆ. ರಾಜ್ಯದ ಮುಜಫ್ಫರ್ ನಗರ, ಹರ್ದೋಯಿ, ಮಥುರಾ, ಬರೇಲಿ, ಗೊಂಡ, ಇಟಾವಾ, ಶ್ರಾವಸ್ತಿ, ಲಖೀಂಪುರ ಖೇರಿ, ಶಾಮಲಿ, ವಾರಾಣಸಿ, ಫತೇಪುರ್, ಕೌಶಾಂಬಿ, ಅಮ್ರೋಹ, ರಾಯ್ ಬರೇಲಿ, ಜೌನ್‌ಪುರ, ಜಿಲ್ಲೆಗಳಲ್ಲಿ ಎನ್‌ಕೌಂಟರ್ ನಡೆದಿದೆ. ಆರೋಪಿಗಳನ್ನು ಬಂಧಿಸಲು ಪೊಲೀಸರು ತೆರಳಿದ ವೇಳೆ ಪ್ರತಿದಾಳಿ ನಡೆಸಿದಾಗ ಆರೋಪಿಗಳ ಕಾಲಿಗೆ ಗುಂಡಿನ ದಾಳಿ ನಡೆಸಲಾಗಿದೆ.

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ

ದೂರವಾಣಿ: 0831-2407207/2407212 ಇ-ಮೇಲ್ ವಿಳಾಸ: dsadmbgm@gmail.com

ಟೆಂಡರ್ ಪ್ರಕಟಣೆ (6ನೇ ಕರೆ)

ಬೆಳಗಾವಿ ಜಿಲ್ಲೆಯ ಗ್ರಾಮ ಪಂಚಾಯತಿ ಗ್ರಂಥಾಲಯಗಳಿಗೆ ಪೀಠೋಪಕರಣಗಳನ್ನು ಪೂರೈಸುವ ಸಲುವಾಗಿ.

ಉಪ ಕಾರ್ಯದರ್ಶಿಗಳು (ಆಡಳಿತ), ಜಿಲ್ಲಾ ಪಂಚಾಯತ ಬೆಳಗಾವಿ ಇವರು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ https://kppp.karnataka.gov.in ಮೂಲಕ ಬೆಳಗಾವಿ ಜಿಲ್ಲೆಯ 477 ಗ್ರಾಮ ಪಂಚಾಯತ ಗ್ರಂಥಾಲಯಗಳಿಗೆ ಪೀಠೋಪಕರಣಗಳನ್ನು ಪೂರೈಸಲು ಅರ್ಹ ಬಿಡ್‌ದಾರರಿಂದ ತಾಂತ್ರಿಕ ಮತ್ತು ವಾಣಿಜ್ಯ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ. ಈ ಟೆಂಡರ್‌ನಲ್ಲಿ ಭಾಗವಹಿಸಲು ಸಿದ್ಧರಿರುವ ನಿರೀಕ್ಷಿತ ಬಿಡ್‌ದಾರರು ಅಗತ್ಯವಾಗಿ ಮೇಲೆ ತಿಳಿಸಿದ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು.

ಟೆಂಡರ್ ವೇಳಾಪಟ್ಟಿ

1	ಟೆಂಡರ್ ಉಲ್ಲೇಖ ಸಂಖ್ಯೆ ಮತ್ತು ದಿನಾಂಕ (6ನೇ ಕರೆ)	ನಂ./ಜಿಪಂಬೆ/ಆಡಳಿತ/ಗ್ರಂಥಾಲಯ/ವಿವ-43/ 2024-25 ದಿನಾಂಕ: 08.05.2026
2	ಅಂದಾಜು ಬಿಡ್ ಮೌಲ್ಯ	ರೂ. 477 ಲಕ್ಷಗಳು
3	ಟೆಂಡರ್ ಡಾಕ್ಯುಮೆಂಟ್ ಡೌನಲೋಡ್ ಮಾಡಲು ಲಭ್ಯವಾಗುವ ಮತ್ತು ಟೆಂಡರ್ ಪ್ರಾರಂಭದ ದಿನಾಂಕ	ದಿನಾಂಕ: 08.05.2026
4	ಬಿಡ್ ಪೂರ್ವ ಸಭೆ	ದಿನಾಂಕ: 18.05.2026 ಸಮಯ: 11.00 ಪೂರ್ವಾಹ್ನ @ಜಿಲ್ಲಾ ಪಂಚಾಯತ ಕಚೇರಿ, ಬೆಳಗಾವಿ
5	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 27.05.2026 ಸಮಯ: 05.00 ಅಪರಾಹ್ನ
6	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ: 29.05.2026 ಸಮಯ: 11.00 ಪೂರ್ವಾಹ್ನ
7	ಮಾದರಿಗಳನ್ನು ಸಲ್ಲಿಸಲು ತಾತ್ಕಾಲಿಕ ದಿನಾಂಕ ಮತ್ತು ಸಮಯ	ದಿನಾಂಕ: 29.05.2026 ಸಮಯ: 11.00 ಪೂರ್ವಾಹ್ನ @ಜಿಲ್ಲಾ ಪಂಚಾಯತ ಕಚೇರಿ, ಬೆಳಗಾವಿ
8	ವಾಣಿಜ್ಯ ಬಿಡ್ ತೆರೆಯುವ ತಾತ್ಕಾಲಿಕ ದಿನಾಂಕ ಮತ್ತು ಸಮಯ	ದಿನಾಂಕ: 30.05.2026 ಸಮಯ: 11.00 ಪೂರ್ವಾಹ್ನ
9	EMD ಮೊತ್ತ ಶೇ. 1.5%	ರೂ. 7,15,500/-

ಈ ಟೆಂಡರ್‌ನಲ್ಲಿ ಭಾಗವಹಿಸಲು ನಿರೀಕ್ಷಿತ ಪೂರೈಕೆದಾರರು https://kppp.karnataka.gov.in ವೆಬ್‌ಸೈಟ್‌ಗೆ ಭೇಟಿ ನೀಡುವ ಮೂಲಕ ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಬಹುದು.

ಯಾವುದೇ ಟೆಂಡರ್ ಸ್ಪಷ್ಟೀಕರಣಕ್ಕಾಗಿ ಮೊಬೈಲ್ ಸಂಖ್ಯೆ: 9480854001 & e-mail: dsadmbgm@gmail.com ಸಂಪರ್ಕಿಸಬಹುದು.

ಸಹಿ/- ಉಪಕಾರ್ಯದರ್ಶಿಗಳು (ಆಡಳಿತ) ಜಿಲ್ಲಾ ಪಂಚಾಯತ ಬೆಳಗಾವಿ ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ

ಸಹಿ/- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ ಮತ್ತು ಟೆಂಡರ್ ಅನುಮೋದನೆ ಪ್ರಾಧಿಕಾರ

ವಾ.ಸಾ.ಇ./ಬೆಳಗಾವಿ/220/2026-27/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ | ಜಿಲ್ಲಾ ಪಂಚಾಯಿತಿ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು

ದೂರವಾಣಿ ಸಂಖ್ಯೆ-08262-220936 E-Mail: zpedckm@rediffmail.com

ಟೆಂಡರ್ ಪ್ರಕಟಣೆ ಸಂಖ್ಯೆ:29/2025-26/4ನೇ ಕರೆ/302/ ದಿನಾಂಕ :05.05.2026

-ಟೆಂಡರ್ ಪ್ರಕಟಣೆ :- (4ನೇ ಕರೆ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು ರವರು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೆ.ಪಿ.ಪಿ.ಪಿ. ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಗರಿಷ್ಠ ಅಂದಾಜು ಮೊತ್ತ ರೂ.65.12 ಲಕ್ಷಗಳು ಮತ್ತು ಕನಿಷ್ಠ ಅಂದಾಜು ಮೊತ್ತ ರೂ.29.44 ಲಕ್ಷಗಳು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ Standard Tender Document KW-2& 3 ರಂತೆ ವಿವರಗಳನ್ನು ಲಗತ್ತಿಸತಕ್ಕದ್ದು, ಸದರಿ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ. ಮೂಲಕ ಡೌನ್ ಲೋಡ್ ಮಾಡಿದ ಡಾಕ್ಯೂಮೆಂಟ್ ಗಳನ್ನು ದಿನಾಂಕ : 05.05.2026 ರಿಂದ ದಿನಾಂಕ :18.05.2026 ರವರೆಗೆ ಸಂಜೆ 5.30 ಗಂಟೆಯೊಳಗೆ ಭರ್ತಿ ಮಾಡಿ ಅಪ್‌ಲೋಡ್ ಮಾಡುವುದು. ತಾಂತ್ರಿಕ ಬಿಡ್ಡನ್ನು ದಿನಾಂಕ:20.05.2026 ರಂದು ಸಂಜೆ 5.05 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು ಸಾಧ್ಯವಾದಲ್ಲಿ ದಿನಾಂಕ:25.05.2026 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಈ ದಿನಾಂಕದಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರು ದಿನವನ್ನು ಪರಿಗಣಿಸಲಾಗುವುದು. ಪ್ರಕಟಣೆಯನ್ನು kppp.karnataka.gov.in website ನಲ್ಲಿ ಓದಿಕೊಳ್ಳುವುದು, ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/-ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು

ಪುರಸಭೆ ಕಾರ್ಯಾಲಯ ರೋಣ-582209. ಜಿ: ಗದಗ.

ದೂರವಾಣಿ : 08381-267234

E-mail: itstaff_ulb_ron@yahoo.in Website: www.ronatown.mrc.gov.in

ಕ್ರಸಂ/ಪುಸರೋ/CMIDP/ /ವಹಿ/ /2026-27 ದಿನಾಂಕ : 07-05-2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪೋರ್ಟಲ್ ಮುಖಾಂತರ)

ರೋಣ ಪುರಸಭೆಯಿಂದ ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯುಮ -2000 ರ ಪ್ರಕಾರ "ಕೆ.ಪಿ.ಪಿ ಪೋರ್ಟಲ್" ಪದ್ಧತಿಯಲ್ಲಿ ಸನ್.2025-26ನೇ ಸಾಲಿನ CMIDP ಅನುದಾನದಲ್ಲಿ ಮಂಜೂರಾದ ಕ್ರಿಯಾ ಯೋಜನೆಯ ಕಾಮಗಾರಿಯ ನಿರ್ವಹಣೆಗಾಗಿ ಕೆ.ಡಬ್ಲ್ಯೂ-3 "ಕೆ.ಪಿ.ಪಿ.ಪಿ." ನೊಂದಾಯಿತ ಅರ್ಹ ಗುತ್ತಿಗೆದಾರರಿಗೆ ಮರು ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನ್ನು "ಕೆ.ಪಿ.ಪಿ.ಪಿ. ಪೋರ್ಟಲ್" ವೆಬ್‌ಸೈಟ್ www.ronatown.mrc.gov.in/Tenders, ಅಥವಾ http://kppp.karnataka.gov.in ಮೂಲಕ ಷರತ್ತುಗಳಂತೆ ಟೆಂಡರ್‌ನಲ್ಲಿ ಭಾಗವಹಿಸಲು ಪ್ರಚಾರ ಪಡಿಸಲಾಗಿದೆ.

ಅ.ನಂ.	ಇಂಡೆಂಟ್ ನಂಬರ್	ಅಂದಾಜು ಮೊತ್ತ (ಲಕ್ಷಗಳಲ್ಲಿ)	ಮಿಸಲಾತಿ
1	DMA/2025-26/OW/WORK_INDENT 52999/CALL-2	65.00	CAT-1
	Total	65.00	

ಸೂಚನೆ : ಸದರ ಟೆಂಡರ್‌ಗಳಿಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿಗಳಿದ್ದಲ್ಲಿ ಕೆ.ಪಿ.ಪಿ.ಪಿ ಪ್ರೋಟಲ್‌ನಲ್ಲಿ ಮಾತ್ರ ಪ್ರಕಟಣೆ ಮಾಡಲಾಗುವುದು.

ನಿರ್ಧಾರಿತ ದಿನಾಂಕಗಳ ವಿವರ :

(1) ದಿನಾಂಕ : 16-05-2026 ಸಾಯಂಕಾಲ 5-30 ಗಂಟೆವರೆಗೆ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಟೆಂಡರ್ ಫಾರ್ಮಗಳಿಗೆ ಅರ್ಜಿ ಸಲ್ಲಿಸಬಹುದು. (2) ತಾಂತ್ರಿಕ್ ಬಿಡ್ ತೆರೆಯುವ ದಿನಾಂಕ : 18-05-2026 (3) ಆರ್ಥಿಕ ಬಿಡ್ ತೆರೆಯುವ ದಿನಾಂಕ : 20-05-2026

ಸಹಿ/- ಮುಖ್ಯಾಧಿಕಾರಿಗಳು ಪುರಸಭೆ ರೋಣ | ಸಹಿ/- ಆಡಳಿತಾಧಿಕಾರಿ ಪುರಸಭೆ ರೋಣ

ವಾ.ಸಾ.ಸಂ.ಇ/ಗದಗ/56/ದೇಶಪಾಂಡೆಪಬ್ಲಿಸಿಟಿ/2026-27

ಪೊಲೀಸ್ ಇಲಾಖೆ

ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ರವರ ಕಛೇರಿ, ಕರ್ನಾಟಕ ರಾಜ್ಯ,

ನಂ.2 ನೃಪತುಂಗ ರಸ್ತೆ ಬೆಂಗಳೂರು-560 001.

ಸಂಖ್ಯೆ: 04/ಸಂಗ್ರಹ-1/2026-27(ಭಾ-2) ದಿನಾಂಕ : 07.05.2026

ಇ-ಖರೀದಿ ಟೆಂಡರ್ ನೋಟೀಸ್

ಪೊಲೀಸ್ ಅಧಿಕಾರಿ/ ಸಿಬ್ಬಂದಿಗಳಿಗೆ ಅವಶ್ಯವಿರುವ ಈ ಕೆಳಕಂಡ ಕಿಟ್ ಸಾಮಗ್ರಿಗಳನ್ನು ಖರೀದಿಸಲು ಕೆಟಿಪಿಪಿ ಅಧಿನಿಯಮ 1999 ನಿಯಮ 2000 ರ ಪ್ರಕಾರ ಕರ್ನಾಟಕ ಸರ್ಕಾರದ (https://kppp.karnataka.gov.in) ಇ-ಪೋರ್ಟಲ್ 2.0 ನಲ್ಲಿ ಇ-ಟೆಂಡರ್ ಪ್ರಕ್ರಿಯೆ ಮೂಲಕ ಅರ್ಜಿಗಳನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ.

ಕ್ರ ಸಂ	ಸಾಮಗ್ರಿಗಳ ವಿವರಗಳು	ಟೆಂಡರ್ ಸಂಖ್ಯೆ	ಒಟ್ಟು ಪ್ರಮಾಣ (ಜೊತೆ/ಸಂಖ್ಯೆ/ಮೀ ಗಳಲ್ಲಿ)	ಅಂದಾಜು ಮೊತ್ತ
1	Khaki PV Cloth (DPO & Other Units)	KSP/2026-27/IND0603	2,37,854	4,22,69,034.34
2	Khaki PV Cloth (COP & Other Units)	KSP/2026-27/IND0604	2,37,853	4,22,68,856.63
3	White PV Cloth	KSP/2026-27/IND0605	24,618	43,87,912.32
4	Ankle Shoes with PU Rubber Sole (DPO & Other Units)	KSP/2026-27/IND0606	34,832	3,02,46,018.88
5	Ankle Shoes with PU Rubber Sole (COP & Other Units)	KSP/2026-27/IND0607	34,832	3,02,46,018.88
6	Brown Oxford Shoes	KSP/2026-27/IND0608	13,667	1,38,86,492.02
7	Ladies Shoes	KSP/2026-27/IND0609	7,997	75,55,885.48
8	Navy Blue Peak Cap	KSP/2026-27/IND0610	78,500	1,86,28,050.00
9	Khaki Peak Cap	KSP/2026-27/IND0611	13,784	26,24,887.12
10	Khaki Socks	KSP/2026-27/IND0612	1,52,284	88,32,472.00

ಟೆಂಡರ್‌ಗಳನ್ನು ಆಹ್ವಾನಿಸಿದ ದಿನಾಂಕ : 06.05.2026 @ ಇ-ಪೋರ್ಟಲ್ 2.0, ಟೆಂಡರ್ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ ಮತ್ತು ಸಮಯ : 05.06.2026 ಸಮಯ 17.30 ಗಂಟೆ. ಮೇಲ್ಕಂಡ ಸಾಮಗ್ರಿಗಳನ್ನು ಒದಗಿಸಲು ಇಚ್ಛಿಸುವವರು ಇ-ಖರೀದಿ 2.0 ಪೋರ್ಟಲ್‌ನಲ್ಲಿ ನೊಂದಾಯಿಸಿಕೊಳ್ಳಬೇಕು. ಇ-ಖರೀದಿಯ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಇ-ಖರೀದಿ ಪ್ರಕ್ಯೂರ್‌ಮೆಂಟ್ ಸೆಲ್‌ನಲ್ಲಿ ವ್ಯವಸ್ಥೆಗೊಳಿಸುತ್ತಿದ್ದು, ಎಲ್ಲಾ ಬಿಡ್‌ದಾರರು ದೂರವಾಣಿ ಸಂಖ್ಯೆ: +91 80 46010000 & +91 80 68948777 ಗಳಿಗೆ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು. ಇ-ಖರೀದಿ ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಿಡ್‌ದಾರರು ಇ-ಖರೀದಿ 2.0 ಫ್ಲಾಟ್ ಫಾರಂನಲ್ಲಿ ನೊಂದಾಯಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ.

ಸಹಿ/-
ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ರವರ ಪರವಾಗಿ

DIPR/CP/568/NR/2026-27

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕಾರ್ಯಪಾಲಕ ಅಭಿಯಂತರವರ ಕಚೇರಿ, ನೀಸ&ಒಚ(ಪಶ್ಚಿಮ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು- 570 020

ಸಂ.: ಮೈನಪಾ/ಕಾ.ಇಂ./ನೀಸ&ಒಚ (ಪಶ್ಚಿಮ)/ಸ.ಅ./ಟಿಎನ್-03/141/2026-27 ದಿನಾಂಕ: 08.05.2026

ಪೂರ್ಣಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಅನುದಾನಗಳಲ್ಲಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ವಿವರ	ಕಾಮಗಾರಿಗಳ ಸಂಖ್ಯೆ	ಟೆಂಡರ್ ಮೊತ್ತ (ರೂ. ಲಕ್ಷಗಳಲ್ಲಿ)	ಸಂಜೆ 5.30 ಗಂಟೆ ನಂತರ	ಸಂಜೆ 4.30 ಗಂಟೆ ಒಳಗೆ	ಸಂಜೆ 4.30 ಗಂಟೆ ನಂತರ
				ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1	KW-1, KW-2 & Service Tender	06	106.78	08.05.2026	25.05.2026	26.05.2026

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/- ಕಾರ್ಯಪಾಲಕ ಅಭಿಯಂತರರು
ನೀಸ&ಒಚ(ಪಶ್ಚಿಮ) ವಿಭಾಗ, ಮೈಸೂರು ಮಹಾನಗರ ಪಾಲಿಕೆ, ಮೈಸೂರು.

DIPR/MYS/151/SA/2026-27

ಕರ್ನಾಟಕ ಅರಣ್ಯ ಇಲಾಖೆ | ಸಾಮಾಜಿಕ ಅರಣ್ಯ ವಿಭಾಗ, ದಾವಣಗೆರೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ ವಿಭಾಗ, ದಾವಣಗೆರೆ ಇವರ ಕಾರ್ಯಾಲಯ

ದೂರವಾಣಿ ಸಂಖ್ಯೆ: 08192-261350 ಇ-ಮೇಲ್: dcfsfdvg@gamil.com

ಸಂಖ್ಯೆ:ಬಿ1/ಸಅಸಂ/ಇ-ಟೆಂಡರ್/ಸಿಆರ್-05/2026-27 ದಿನಾಂಕ: 06-05-2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

[ಲಕೋಟೆ-2 ರಲ್ಲಿ]

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, 2026-27 ನೇ ಸಾಲಿನಲ್ಲಿ ದಾವಣಗೆರೆ ಸಾಮಾಜಿಕ ಅರಣ್ಯ ವಿಭಾಗದ ವಿವಿಧ ವಲಯಗಳಲ್ಲಿ ರಸ್ತೆಬದಿ ಹಾಗೂ ಬ್ಲಾಕ್ ನಡುತೋಪುಗಳನ್ನು ಬೆಳೆಸುವುದು, ಸಸಿಗಳನ್ನು ಬೆಳೆಸುವುದು ಹಾಗೂ ನಿರ್ವಹಣಾ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಕರ್ನಾಟಕ ಅರಣ್ಯ ಇಲಾಖೆಯಲ್ಲಿ 2026-27ನೇ ಸಾಲಿನಲ್ಲಿ ಅರಣ್ಯ ಗುತ್ತಿಗೆದಾರರೆಂದು ಹೆಸರನ್ನು ನೊಂದಾಯಿಸಿಕೊಂಡಿರುವಂತಹ ಅರ್ಹ ಗುತ್ತಿಗೆದಾರರಿಂದ ಮಾತ್ರ ಈ ಪತ್ರಕ್ಕೆ ಲಗಾಯತ್ತಿಸಲ್ಪಟ್ಟಿರುವ ನಮೂನೆಯಲ್ಲಿಯ ಪ್ರಕಾರ ಕರ್ನಾಟಕ ಸರ್ಕಾರದ ಇ-ಪೋರ್ಟಲ್ (http://kppp.karnataka.g ov.in)ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ.

(1) ಇ-ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ (ತಾಂತ್ರಿಕ & ಆರ್ಥಿಕ) 15-05-2026 ಬೆಳಿಗ್ಗೆ 11.00 ಗಂಟೆಗೆ (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ 16-05-2026 ಬೆಳಿಗ್ಗೆ 11.00 ಗಂಟೆಗೆ (3) ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ 18-05-2026 ಬೆಳಿಗ್ಗೆ 11.00 ಗಂಟೆಗೆ

ಪ್ರಥಮ ಟೆಂಡರ್ ಕರೆ ಯಶಸ್ವಿಯಾಗದಿದ್ದಲ್ಲಿ ಮರು ಟೆಂಡರ ವಿವರ.
(ಮರು ಟೆಂಡರಿಗೆ ಪ್ರತ್ಯೇಕ ನೋಟಿಫಿಕೇಷನ್ ಹೊರಡಿಸಲಾಗುವುದಿಲ್ಲ.)

(1) ಇ-ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ 24-05-2026 ಬೆಳಿಗ್ಗೆ 11.00 ಗಂಟೆಗೆ (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ 25-05-2026 ಬೆಳಿಗ್ಗೆ 11.00 ಗಂಟೆಗೆ (3) ಆರ್ಥಿಕ ಬಿಡ್ ತೆರೆಯುವ ದಿನಾಂಕ 27-05-2026 ಬೆಳಿಗ್ಗೆ 11.00 ಗಂಟೆಗೆ

ವಾಸಾಇ/ದಾವಣಗೆರೆ/69/ಕೆಎಸ್ಎಂಸಿಎ/2026-27

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ದಾವಣಗೆರೆ.

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.

ಸಂ:ಕಾ.ಸಾ.ಚಿ/ಪಿ.ಬಿ-1,2/ಅಲ್ಪಾವಧಿ ಟೆಂಡರ್ ಪ್ರಕಟಣೆ - ಐ.ಎಫ್.ಟಿ-04/2026-27 ದಿನಾಂಕ: 07-05-2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರ ಮಾನ್ಯ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ& ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ ಇವರು ಕೆಟಿಪಿಪಿ ಆಕ್ಟ್-2000 ನಿಯಮದಂತೆ ಹಾಗೂ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-1,2, 3 ಹಾಗೂ 4 (ಟೆಂಡರ್‌ಗಿಟ್ಟ ಮೊತ್ತ ಕನಿಷ್ಠ ರೂ.3.50 ಲಕ್ಷ ರೂಗಳು ಹಾಗೂ ಗರಿಷ್ಟ ರೂ.240.16 ಲಕ್ಷ ರೂಗಳು) ನಿಬಂಧನೆಗಳಿಗೊಳಪಟ್ಟಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ- ಫೋರ್ಟಲ್ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್‌ಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಒಟ್ಟು 12 ಕಾಮಗಾರಿಗಳ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಸದರಿ ಟೆಂಡರ್ ಪ್ರಕ್ರಿಯೆಗಳನ್ನು ಈ ಕೆಳಗಿನಂತೆ ನಿಗದಿಪಡಿಸಿದೆ. ದಿ:07-05-2026 ರಿಂದ ಕೆಪಿಪಿ-ಫೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ:15-05-2026 ಸಾಯಂಕಾಲ 5.30 ರವರೆಗೆ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ:16-05-2026 ರ ಸಾಯಂಕಾಲ 4.00 ಗಂಟೆಯವರೆಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ: 17-05-2026 ಸಾಯಂಕಾಲ 04-30 ಗಂಟೆಯ ನಂತರ (ಸಾಧ್ಯವಾದಲ್ಲಿ), ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ:18-05-2026 ಸಾಯಂಕಾಲ 04-30 ಗಂಟೆಯ ನಂತರ(ಸಾಧ್ಯವಾದಲ್ಲಿ). ಸದರಿ ಕಾಮಗಾರಿಯಲ್ಲಿ ಟೆಂಡರ್ ಮೊತ್ತ ಅಥವಾ ಇ.ಎಂ.ಡಿ.ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ ನಲ್ಲಿನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತ ಅಂತಿಮವಾಗಿರುತ್ತವೆ. ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ (08194-231811) ಹಾಗೂ ಕೆ.ಪಿ.ಪಿ.ಪಿ ಪೋರ್ಟಲ್ ಸಹಾಯಕ ದೂರವಾಣಿ ಸಂಖ್ಯೆ: +91-8046010000+91-8068948777 ರಿಂದ ಪಡೆಯಬಹುದು.

DIPR/CTA/KSMCA/92/2026-27

ಸಹಿ/-ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ KEONICS ISO 9001 : 2008

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಸಂಖ್ಯೆ 59, 1ನೇ ಮಹಡಿ, ಕುಮಾರ ಪಾರ್ಕ್ ಪಶ್ಚಿಮ, ರೈಲ್ವೆ ಪ್ಯಾರಲಲ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು 560020

ನಂ: KSEDC/P101/2026-27 ದಿನಾಂಕ: 08.05.2026

ಇ-ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ನಿಯಮದನ್ವಯ ಕೆಪಿಪಿಪಿ ಪೋರ್ಟ್‌ಲ್ ಮುಖಾಂತರ ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಮೆ: ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್), ಸಂಸ್ಥೆಯು **Request for Proposal (RFP) for Selection of Service Provider for Scanning and Digitization of Files and Records at the Department of Mines and Geology, Bengaluru Urban District** ಗಾಗಿ ಸಂಸ್ಥೆಗಳನ್ನು ಆಯ್ಕೆ ಮಾಡಲು 21 ದಿನಗಳ ಅವಧಿಗೆ ಓಪನ್ ಇ-ಟೆಂಡರ್ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಬಿಡ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: http://kppp.karnataka.gov.inನಲ್ಲಿ ವಿವರವನ್ನು ಪಡೆಯಬಹುದು, ಹೆಚ್ಚಿನ ಮಾಹಿತಿಗಾಗಿ ಕಿಯೋನಿಕ್ಸ್ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು (ದೂರವಾಣಿ ಸಂಖ್ಯೆ: 080 2222 5645).

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ವಿವರ	ಟೆಂಡರ್‌ನ್ನು ಸಲ್ಲಿಸುವ ಕೊನೆಯ ದಿನಾಂಕ
1	KEONICS/2026-27/SE0136	Request for Proposal (RFP) for Selection of Service Provider for Scanning and Digitization of Files and Records at the Department of Mines and Geology, Bengaluru Urban District	27.05.2026

DIPR/CP/567/SA/2026-27

ಸಹಿ/- ನಿರ್ದೇಶಕರು (ಹಣಕಾಸು)

ಬೆಂಗಳೂರು ದಕ್ಷಿಣ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಸಮನ್ವಯ ಮತ್ತು ಯೋಜನೆ, 4ನೇ ಮಹಡಿ, ಜಯನಗರ ಹಳೆಯ ಶಾಪಿಂಗ್ ಕಾಂಪ್ಲೆಕ್ಸ್, ಜಯನಗರ 4ನೇ ಬ್ಲಾಕ್, ಬೆಂಗಳೂರು - 560011

ನಂ. ಕಾಅ(ಸ&ಯೋ)ಬೆದನಪಾ/ಕೆಪಿಪಿಪಿ/ಟೆಂಡರ್-01/2026-27 ದಿನಾಂಕ : 08.05.2026

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

ದ್ವಿ ಲಕೋಟೆ ಪದ್ಧತಿ, ಅಲ್ಪಾವಧಿ ಟೆಂಡರ್

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಸಮನ್ವಯ ಮತ್ತು ಯೋಜನೆ, ವಲಯ-1, ಬೆಂದನಪಾ ರವರು ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕಾಮಗಾರಿಗಾಗಿ ನಿರ್ಮಾಣಕ್ಕಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು
1.	2026-27ನೇ ಸಾಲಿಗೆ Disaster Management ಅಡಿಯಲ್ಲಿ ಬೆಂಗಳೂರು ದಕ್ಷಿಣ ನಗರ ಪಾಲಿಕೆಯಲ್ಲಿ ನಿಯಂತ್ರಣ ಕೊಠಡಿ ವಲಯ-1 ಅನ್ನು ಒದಗಿಸುವುದು. **ಟೆಂಡರ್‌ಗಿಟ್ಟ ಮೊತ್ತ (ರೂಪಾಯಿಗಳಲ್ಲಿ & ಜಿಎಸ್‌ಟಿ ಸೇರಿದಂತೆ): : ರೂ. 1,00,00,000/-, ಇಎಂಡಿ ಮೊತ್ತ : ರೂ. 2,00,000/-.**

ಟೆಂಡರ್‌ನ ಕಾರ್ಯಸೂಚಿ: (1) ಬಿಡ್ ಪೂರ್ವ ಸಭೆಯು ನಡೆಯುವ ದಿನಾಂಕ, ಸಮಯ ಮತ್ತು ಸ್ಥಳ : **13.05.2026, ಬೆಳಿಗ್ಗೆ 11.30 ಗಂಟೆಗೆ** ಅಭಿಯಂತರರು, ಸಮನ್ವಯ & ಯೋಜನೆ, 4ನೇ ಮಹಡಿ, ಜಯನಗರ ಹಳೆ ಶಾಪಿಂಗ್ ಕಾಂಪ್ಲೆಕ್ಸ್, ಜಯನಗರ 4ನೇ ಬ್ಲಾಕ್, ಬೆಂಗಳೂರು-560011. (2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **21.05.2026 ರಿಂದ ಸಂಜೆ 4.00 ಗಂಟೆಯವರೆಗೆ.** (3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 22.05.2026 ರಂದು ಸಂಜೆ 5.00 ಗಂಟೆಗೆ.** (4) ಹಣಕಾಸು ಬಿಡ್ ಅನ್ನು ಬಿಡ್‌ದಾರರಿಗೆ ತಿಳಿಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಸಮನ್ವಯ & ಯೋಜನೆ, ಬೆಂದನಪಾ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

CIN - U04010KA2002SGC030438

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮೂಲಕ)

ಸಂಖ್ಯೆ:ಬೆವಿಕಂ/ಮುಪ್ರವ್ಯ(ಯೋ)/ಉಪ್ರವ್ಯ-1/ಸಪ್ರವ್ಯ-1/ಬಿಸಿ-14/26-27/CYS-44

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತದಿಂದ ದಾವಣಗೆರೆ ವಿಭಾಗದ, ನಗರ ಉಪವಿಭಾಗ 1 ಮತ್ತು 2 ರಲ್ಲಿ ಸುರಕ್ಷತೆ ಮತ್ತು ವಿದ್ಯುತ್ ಸರಬರಾಜಿನ ಗುಣಮಟ್ಟ ಸುಧಾರಣೆಯ ದೃಷ್ಟಿಯಿಂದ, ಕಳ್ಳತನಕ್ಕೆ ಒಳಗಾಗುವ, ಅಪಾಯಕಾರಿ ಸ್ಥಳಗಳು, ಶಾಲೆಗಳು ಮತ್ತು ದೇವಸ್ಥಾನದ ಆವರಣಗಳಲ್ಲಿ ಅಸ್ತಿತ್ವದಲ್ಲಿರುವ LT ಮೇಲ್ಮಾರ್ಗಗಳನ್ನು LT ಎ ಬಿ ಕೇಬಲ್‌ಗೆ ಬದಲಾಯಿಸುವ ಕಾಮಗಾರಿಗಳಿಗೆ ಪೂರ್ಣ ಗುತ್ತಿಗೆ ಆಧಾರದಲ್ಲಿ ಶೇಖಡವಾರು ಆಧಾರದಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ವಿವರಗಳು ಕೆಳಕಂಡಂತಿದೆ: (1) **ಟೆಂಡರ್ ವಿಚಾರಣೆ ಸಂಖ್ಯೆ** BESCOM/2026-27/EL/WORK_INDENT 1082 (2) **ಬಿಡ್ ದಸ್ತಾವೇಜುಗಳ ಲಭ್ಯತೆ: 11.05.2026** ನಂತರದಲ್ಲಿ (3) **ಬಿಡ್ ಗೆ ಸಂಬಂಧಿಸಿದ ವಿಚಾರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 20.05.2026, 17:00 ಗಂಟೆಯ** ಮೊದಲು (4) **ಬಿಡ್ ಪೂರ್ವಭಾವಿ ಸಭೆಯ ದಿನಾಂಕ: 21.05.2026, 11:00 ಗಂಟೆಗೆ** (5) **ಸ್ಥಳ:** ಮುಖ್ಯ ಪ್ರಧಾನ ವ್ಯವಸ್ಥಾಪಕರು (ವಿ) ರವರ ಕಛೇರಿ, ಯೋಜನೆಗಳು ಶಾಖೆ, ಬಿ ಬ್ಲಾಕ್, 4ನೇ ಮಹಡಿ, ಬೆಳಕು ಭವನ, ನಿಗಮ ಕಛೇರಿ, ಕೆ ಆರ್ ವೃತ್ತ, ಬೆವಿಕಂ, ಬೆಂಗಳೂರು-560001. (6) **ಬಿಡ್ಡುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 11.06.2026, 15:00 ಗಂಟೆ (7) ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ: 12.06.2026, 15:30 ಗಂಟೆಗೆ**

ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್: https://kppp.karnataka.gov.in ಮೂಲಕ ಬಿಡ್ ದಸ್ತಾವೇಜುಗಳನ್ನು ಡೌನ್ ಲೋಡ್ ಮಾಡಿಕೊಳ್ಳಬಹುದು ಹಾಗು ಅಗತ್ಯ ನೆರವನ್ನು ಪಡೆದುಕೊಳ್ಳಬಹುದು. ಇ-ಪ್ರೊಕ್ಯೂರ್‌ಮೆಂಟ್ ಸಹಾಯ ಸಂಪರ್ಕ ಸಂಖ್ಯೆ: +91-8046010000, +91-8068948777 ಮತ್ತು ಇ ಮೇಲ್: support@eprochelpdesk.com. ಆಸಕ್ತ ಬಿಡ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ನೊಂದಾಯಿಸಿಕೊಂಡು ಬಿಡ್‌ದಾರರು ಕಛೇರಿ ಕೆಲಸದ ಸಮಯದಲ್ಲಿ ಸಹಾಯ ಪಡೆದುಕೊಳ್ಳಬಹುದಾಗಿರುತ್ತದೆ.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ : 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಸಹಿ/-
ಮುಖ್ಯ ಪ್ರಧಾನ ವ್ಯವಸ್ಥಾಪಕರು (ವಿ) ಯೋಜನೆಗಳು, ಬೆವಿಕಂ.

ಕರ್ನಾಟಕ ವಿಜ್ಞಾನ ಮತ್ತು ತಂತಜ್ಞಾನ ಪ್ರೋತ್ಸಾಹಕ ಸೊಸೈಟಿ (ಕೆಸ್ಟೆಪ್ಸ್)

ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ

ಕೊಠಡಿ ಸಂಖ್ಯೆ: 505, 5ನೇ ಮಹಡಿ, 5ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು-560001,

ದೂ: 080-26711166, ಇ-ಮೇಲ್: ksteps.dst@gmail.com | ಜಾಲತಾಣ: http://ksteps.karnataka.gov.in

ಸಂ: . KSTePS/Udupi/Gallery/2026-27/08 ದಿನಾಂಕ:07.05.2026

ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ (ಕೆಸ್ಟೆಪ್ಸ್), ಬೆಂಗಳೂರು ಈ ಕೆಳಗಿನ ವಿವರಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ಇಂಡೆಂಟ್ ಸಂಖ್ಯೆ	ವಿವರ
1.	KSTePS/Udupi/Thematic Gallery2/2025-26 dtd: 07.05.2026 **ITBTST/2026-27/SE0047**	ಕೆಸ್ಟೆಪ್ಸ್, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರದ ಮುಖಾಂತರ ಡಾ. ಯು. ಆರ್. ರಾವ್ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ, ಉಡುಪಿಯಲ್ಲಿ Mysteries of Ocean Gallery ಮತ್ತು Fun Science Gallery ಗಳನ್ನು ಸ್ಥಾಪಿಸಲು ಟೆಂಡರ್ ಆಹ್ವಾನಿಸಿರುವ ಬಗ್ಗೆ.
2.	KSTePS/Udupi/Fun Science Gallery/2026-27 dtd: 08.05.2026 **ITBTST/2026-27/SE0048**	

ಕೆಪಿಪಿ ಪೋರ್ಟಲ್ https://kppp.karnataka.gov.in ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು. ಹೆಚ್ಚಿನ ವಿವರಗಳಿಗೆ ಕಛೇರಿ ಸಮಯದಲ್ಲಿ ಕೆಸ್ಟೆಪ್ಸ್ ಸಂಸ್ಥೆಯನ್ನು ಸಂಪರ್ಕಿಸಬಹುದಾಗಿರುತ್ತದೆ.

ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:

1) ITBTST/2026-27/SE0047 - **15.05.2026 till 4.00 p.m.**
2) ITBTST/2026-27/SE0048 - **22.05.2026 till 5.30 p.m.**

ಸಹಿ/-
ವ್ಯವಸ್ಥಾಪಕ ನಿರ್ದೇಶಕರು

ವಾಸಾಸಂಇ/ವಾಪ್ರ/ಜಿಎ/585/2026-27

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಇನ್ನೊಬ್ಬರ ಹುಚ್ಚುತನ ಕಾಣಿಸುವಷ್ಟು ಸುಲಭವಾಗಿ ನಮ್ಮ ಹುಚ್ಚುತನ ನಮಗೆ ಕಾಣಿಸದು.

–ಶಿವರಾಮ ಕಾರಂತ

ಸಂಪಾದಕೀಯ

ಸಹಪಂಕ್ತಿ ಭೋಜನ, ದೇಗುಲ ಪ್ರವೇಶ ಜಾತೀಯತೆ ತಿಳಿಗೊಳಿಸುವ ಸಂದೇಶ

ಮೈಸೂರು ಜಿಲ್ಲೆಯ ಹುಣಸೂರಿನಲ್ಲಿ ಇತ್ತೀಚೆಗೆ ನಡೆದಿರುವ ದಲಿತರು-ಬ್ರಾಹ್ಮಣರ ಸಹಭೋಜನದ ಕಾರ್ಯಕ್ರಮ ಸಾಮಾಜಿಕ ಸೌಹಾರ್ದದ ದೃಷ್ಟಿಯಿಂದ ಮಹತ್ವದ ಸಂಕೇತವಾಗಿದೆ. ಜಾತೀಯತೆಯನ್ನು ಬಲಪಡಿಸುವ ಹಾಗೂ ಜಾತಿದೌರ್ಜನ್ಯದ ಘಟನೆಗಳೇ ಎಲ್ಲೆಡೆ ಕಣ್ಣಿಗೆ ರಾಚುತ್ತಿರುವಾಗ, ಜಾತಿ ಹೆಸರಿನಲ್ಲಿ ನಡೆಯುವ ತರತಮಗಳನ್ನು ತಿಳಿಗೊಳಿಸುವ ನಿಟ್ಟಿನಲ್ಲಿ ಹುಣಸೂರಿನ ವಿದ್ಯಮಾನಕ್ಕೆ ವಿಶೇಷ ಮಹತ್ವವಿದೆ. ಅಸ್ಪೃಶ್ಯತೆ ನಿರ್ಮೂಲನೆ ಉದ್ದೇಶದಿಂದ ದೇವಸ್ಥಾನದ ಆಡಳಿತ ಮಂಡಳಿ ಹಾಗೂ ದಲಿತ ಸಂಘರ್ಷ ಸಮಿತಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ, ದೇವಸ್ಥಾನದ ಆವರಣಕ್ಕೆ ಸೀಮಿತವಾಗಿದ್ದ ದಲಿತರನ್ನು ಮಂದಿರ ಪ್ರವೇಶ ಮಾಡಿಸಿ, ಮಂಗಳಾರತಿಯನ್ನು ನೀಡಲಾಗಿದೆ. ಬ್ರಾಹ್ಮಣರ ಬೀದಿಯಲ್ಲಿರುವ ಲಕ್ಷ್ಮೀನರಸಿಂಹ ಸ್ವಾಮಿ ದೇವಾಲಯದ ಆವರಣದಲ್ಲಿ ದಲಿತರೊಂದಿಗೆ ಬ್ರಾಹ್ಮಣರು ಸಹಪಂಕ್ತಿ ಭೋಜನ ಮಾಡಿದ್ದಾರೆ. ಈ ಮೂಲಕ ಅನಿಷ್ಟ ಜಾತಿಪದ್ಧತಿಯನ್ನು ತೊಡೆದುಹಾಕುವ ಸಂದೇಶ ನೀಡಲಾಗಿದೆ. ಬ್ರಾಹ್ಮಣರು ಮತ್ತು ಸಾಮಾಜಿಕವಾಗಿ ಪ್ರಬಲವಾದ ಇತರೆ ಸಮುದಾಯಗಳು ದಲಿತರನ್ನು ದೂರವಿಟ್ಟದ್ದರಿಂದ ಕಳೆದುಕೊಂಡಿದ್ದೇ ಜಾಸ್ತಿ ಎನ್ನುವ ಅರಿವು ಹಾಗೂ ದಲಿತರೊಂದಿಗಿನ ಒಡನಾಟದ ಮೂಲಕ ಅಸ್ಪೃಶ್ಯತೆ ನಿರ್ಮೂಲನೆ ಮಾಡುವುದು ಅವಶ್ಯ ಎನ್ನುವ ವಿವೇಕ ಈ ಹೊತ್ತಿಗೆ ಅಗತ್ಯವಾದುದು.

ಸಂವಿಧಾನವು ದಶಕಗಳ ಹಿಂದೆಯೇ ದೇಶದ ಎಲ್ಲ ನಾಗರಿಕರಿಗೂ ಸಮಾನ ಹಕ್ಕುಗಳನ್ನು ನೀಡಿದೆ ಹಾಗೂ ಜಾತಿ ತಾರತಮ್ಯಗಳನ್ನು ನಿರ್ಬಂಧಿಸಿದೆ. ಆದರೆ, ದೇಶದ ಅನೇಕ ಭಾಗಗಳಲ್ಲಿ ಈಗಲೂ ದಲಿತರನ್ನು ದೇವಸ್ಥಾನಗಳ ಹೊರ ಆವರಣದಲ್ಲಿಯೇ ಉಳಿಸಲಾಗಿದೆ. ಕುಡಿಯುವ ನೀರು, ಆಹಾರದಂಥ ಜೀವನವಶ್ಯಕ ಸಂಗತಿಗಳಿಂದ ಹಿಡಿದು ಕ್ಷೌರ, ಹೋಟೆಲ್‌ಗಳಂಥ ಸಾರ್ವಜನಿಕ ಸೇವೆಗಳಿಗೆ ಸಂಬಂಧಿಸಿದಂತೆಯೂ ಜಾತೀಯತೆ ಆಚರಿಸಲಾಗುತ್ತಿದೆ. ದೇವರ ಕೋಲನ್ನು ಬಾಲಕನೊಬ್ಬ ಮುಟ್ಟಿದ ಕಾರಣಕ್ಕೆ ಕುಟುಂಬವನ್ನು ಬಹಿಷ್ಕರಿಸುವ, ಪರಿಶಿಷ್ಟ ಜಾತಿಯ ಮಹಿಳೆ ನೀರು ಕುಡಿದಳೆನ್ನುವ ಕಾರಣಕ್ಕಾಗಿ ಕಿರು ನೀರು ಸರಬರಾಜು ಟ್ಯಾಂಕ್ ಸ್ವಚ್ಛಗೊಳಿಸುವ ಘಟನೆಗಳು ರಾಜ್ಯದಲ್ಲಿ ನಡೆದಿವೆ. ದಲಿತರ ಮೇಲೆ ಹಲ್ಲೆ, ಅತ್ಯಾಚಾರ, ಅವಮಾನ ಎಸಗುವಂಥ ಘಟನೆಗಳು ನಾಡಿನ ಒಂದಲ್ಲಾ ಒಂದು ಕಡೆ ಪ್ರತಿದಿನ ವರದಿಯಾಗುತ್ತಿವೆ. ಸ್ಮಶಾನ ಬಳಕೆಗೆ ಸಂಬಂಧಿಸಿದಂತೆಯೂ ಜಾತಿ ಆಧಾರಿತ ನಿರ್ಬಂಧಗಳು ಇನ್ನೂ ಜೀವಂತವಾಗಿವೆ ಹಾಗೂ ಈ ನಿರ್ಬಂಧಗಳು ಸಂವಿಧಾನದ ಆಶಯಗಳನ್ನು ಅಣಕಿಸುವಂತಿವೆ; ಕಾನೂನುಗಳಿಗೆ ಸವಾಲು ಎಸೆಯುವಂತಿವೆ. ಇಂಥ ಸಾಮಾಜಿಕ ಸಂದಿಗ್ಧದ ಸಂದರ್ಭದಲ್ಲಿ, ಹುಣಸೂರಿನ ಘಟನೆಯನ್ನು ಸಾಮಾಜಿಕ ಜಾಗೃತಿಯ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಮುನ್ನೆಲೆಗೆ ತರುವ ಪ್ರಯತ್ನವಾಗಿ ನೋಡಬೇಕಾಗಿದೆ. ದಲಿತರು ದೇಗುಲ ಪ್ರವೇಶಕ್ಕೆ ಪ್ರಯತ್ನಿಸಿದಾಗ ಊರಿನಲ್ಲಿ ಉದ್ವಿಗ್ನ ಪರಿಸ್ಥಿತಿ ತಲೆದೋರುವ ಘಟನೆಗಳು ಈಗಲೂ ನಡೆಯುತ್ತಿವೆ. ಆದರೆ, ಹುಣಸೂರಿನಲ್ಲಿ ಬ್ರಾಹ್ಮಣರೇ ದಲಿತರನ್ನು ದೇಗುಲಕ್ಕೆ ಆಹ್ವಾನಿಸಿ, ಸಹಪಂಕ್ತಿ ಭೋಜನ ಏರ್ಪಡಿಸಿ ಹೊಸತೊಂದು ಮಾದರಿ ಸೃಷ್ಟಿಸಿದ್ದಾರೆ. ಜಾತ್ಯತೀತ ಸಮಾಜವನ್ನು ರೂಪಿಸಲು ಪ್ರಯತ್ನಿಸುವುದು ಸಾಮಾಜಿಕವಾಗಿ ಮೇಲ್ವರ್ಗದಲ್ಲಿರುವ ಜಾತಿಗಳ ಹೊಣೆಗಾರಿಕೆ ಹಾಗೂ ನೈತಿಕ ಕರ್ತವ್ಯ ಎನ್ನುವುದರ ಸಂಕೇತದಂತಿರುವ ಈ ನಡೆ ಉಳಿದ ಊರುಗಳಿಗೂ ಮಾದರಿಯಾಗಬೇಕು.

ದಲಿತರ ದೇಗುಲ ಪ್ರವೇಶ ಹಾಗೂ ಬ್ರಾಹ್ಮಣರೊಂದಿಗಿನ ಸಹಪಂಕ್ತಿ ಭೋಜನದ ಹುಣಸೂರಿನ ಘಟನೆ ಜಾತೀಯತೆಯನ್ನು ತಿಳಿಗೊಳಿಸುವ ಸೌಹಾರ್ದದ ಸಂಕೇತದಂತಿದೆ.

ದಲಿತಕೇರಿಗಳಲ್ಲಿ ಸ್ವಾಮೀಜಿಗಳು ಪಾದಯಾತ್ರೆ ನಡೆಸುವ ಹಾಗೂ ದಲಿತರ ಮನೆಗಳಲ್ಲಿ ಭೋಜನ ಸ್ವೀಕರಿಸುವ ಕಾರ್ಯಕ್ರಮಗಳ ಮೂಲಕ ಸಾಮಾಜಿಕ ರಾಡಿಯನ್ನು ತಿಳಿಗೊಳಿಸುವ ಪ್ರಯತ್ನಗಳು ರಾಜ್ಯದಲ್ಲಿ ಆಗಾಗ ನಡೆದಿವೆ. ಆದರೆ, ಸೌಹಾರ್ದದ ಈ ನಡೆಗಳನ್ನು ಮರೆಸುವಂತೆ ಜಾತಿ ತಾರತಮ್ಯದ ಆಚರಣೆ ವ್ಯಾಪಕವಾಗಿದೆ. ವಿಭಜಕ ರಾಜಕಾರಣವೂ ಜಾತಿಪದ್ಧತಿಯನ್ನು ಬಲಗೊಳಿಸುತ್ತಿದೆ. ಇಂಥ ಸಂಕೀರ್ಣ ಸಂದರ್ಭದಲ್ಲಿ, ಹುಣಸೂರಿನ ಘಟನೆಯು ತೀರಾ ಸಣ್ಣ ವಿದ್ಯಮಾನವಾದರೂ ಅದಕ್ಕೆ ಸಾಮಾಜಿಕ ಮಹತ್ವವಿದೆ. ಇಂಥ ಸಣ್ಣಪುಟ್ಟ ಸಂಗತಿಗಳೇ ಸಾಮಾಜಿಕ ಸೌಹಾರ್ದದ ಬಗ್ಗೆ ನಂಬಿಕೆ ಉಳಿಯಲು ಆಸರೆಗಳಾಗಿವೆ. ಅಸ್ಪೃಶ್ಯತೆ ಹಾಗೂ ಕೋಮುವಾದದ ಆಚರಣೆಗೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವಕಾಶವಿಲ್ಲ ಎನ್ನುವುದನ್ನು ಜಾತೀಯ ಮನಸ್ಸುಗಳಿಗೆ ಮನವರಿಕೆ ಮಾಡಿಕೊಡುವುದರಲ್ಲಿ ಸರ್ಕಾರಗಳು ಹಾಗೂ ಕಾನೂನು ವಿಫಲವಾಗಿವೆ. ದೇಶದ ಜಾತ್ಯತೀತ ಸ್ವರೂಪವನ್ನು ಗಾಸಿಗೊಳಿಸುವ ಮೂಲಕ ರಾಜಕೀಯಲಾಭ ಪಡೆಯುವ ಪ್ರವೃತ್ತಿ ದೇಶದಲ್ಲಿ ಚಾಲ್ತಿಯಲ್ಲಿದೆ. ಸಾಂವಿಧಾನಿಕ ಮಾರ್ಗದಿಂದ ಅಪೂರ್ಣವಾಗಿ ಉಳಿದಿರುವ ಸೌಹಾರ್ದದ ಆಶಯಗಳನ್ನು ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಗತಿಗಳ ಮೂಲಕ ಸಾಧಿಸುವ ಪ್ರಯತ್ನ ಸದ್ಯದ ಅಗತ್ಯವಾಗಿದೆ. ದಲಿತರು ಹಾಗೂ ಸಾಮಾಜಿಕವಾಗಿ ಮೇಲ್ವರ್ಗಕ್ಕೆ ಸೇರಿದವರಿಗೆ– ಹಿಂದೂ ಮತ್ತು ಮುಸಲ್ಮಾನರಿಗೆ– ಸಂಬಂಧಿಸಿದಂತೆ ಸೌಹಾರ್ದದ ಹಲವು ಸಂಕೇತಗಳು, ಬಹುತ್ವದ ಆಚರಣೆಗಳು ನಾಡಿನ ವಿವಿಧ ಭಾಗಗಳಲ್ಲಿವೆ. ಅಂಥ ನಿದರ್ಶನಗಳನ್ನು ಮುನ್ನೆಲೆಗೆ ತರುವ ಮೂಲಕ ಸಾಮಾಜಿಕ ಸೌಹಾರ್ದದ ಅಗತ್ಯವನ್ನು ಸಮಾಜಕ್ಕೆ ಮನವರಿಕೆ ಮಾಡಿಕೊಡುವುದು ಎಲ್ಲ ಪ್ರಜ್ಞಾವಂತರ ಹೊಣೆಗಾರಿಕೆಯಾಗಿದೆ. ಹುಣಸೂರಿನ ಘಟನೆ ಅಂತಹ ಹೊಣೆಗಾರಿಕೆಯಾಗಿದೆ ಹಾಗೂ ನಾಡಿಗೆ ಮಾದರಿ ಆದುದಾಗಿದೆ.

ಜಾಲಡಾಣ

ಕೊಪ್ಪಳಕ್ಕೆ ಬನ್ನಿರಯ್ಯ!

ಸಿಎಂ ಸಿದ್ದರಾಮಯ್ಯ, ಕೊಪ್ಪಳಕ್ಕೆ ಬರಲು ಸಿದ್ಧರಾಗಿರಯ್ಯ! ಜೊತೆಗಿರಲಿ ಆರೋಗ್ಯ ಮಂತ್ರಿ, ಪರಿಸರ ಮಂತ್ರಿ, ಕೃಷಿ ಮಂತ್ರಿ, ದೊಡ್ಡ ಕೈಗಾರಿಕಾ ಮಂತ್ರಿ, ಜಿಲ್ಲಾ ಉಸ್ತುವಾರಿ ಮಂತ್ರಿ, ಕನ್ನಡ–ಸಂಸ್ಕೃತಿ ಸಚಿವರು. ನೋಡ ಬನ್ನಿ: ನಮ್ಮೂರುಗಳ ನರಕ, ಕಾರ್ಖಾನೆಗಳ ಅಭಿವೃದ್ಧಿ, ಹೊಗೆ ಬೂದಿ ವಿಷಾನಿಲ ಸಿದ್ಧಿ. ಕರೆಯಬೇಕೆ ಕಳಸ ಕನ್ನಡಿ ಹಿಡಿದು! ಕೊಪ್ಪಳಕ್ಕೆ ಬನ್ನಿರಯ್ಯ ಎಂದು!

ಅಲ್ಲಮಪ್ರಭು ಬೆಟ್ಟದೂರು, ಕವಿ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಇ.ಡಿ ಮತ್ತು ಐ.ಟಿ ಅನ್ನು ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ ಎಂಬ ಕಾಂಗ್ರೆಸ್ ಆರೋಪದಲ್ಲಿ ಹುರುಳಿಲ್ಲ. ತಮಗೆ ಅನುಕೂಲವಾಗುವಂತೆ 'ಕೈ' ನಾಯಕರು ವ್ಯಾಖ್ಯಾನ ಮಾಡುತ್ತಾರೆ. ಗೆದ್ದಾಗ ಎಲ್ಲವೂ ಸರಿಯಾಗಿದೆ ಎನ್ನುತ್ತಾರೆ. ಸೋತಾಗ ವ್ಯವಸ್ಥೆಯೇ ಸರಿಯಿಲ್ಲ ಎನ್ನುತ್ತಾರೆ.

ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಬೃಹತ್ ಕೈಗಾರಿಕೆ ಸಚಿವ

25 ವರ್ಷಗಳ ಹಿಂದೆ

ಬುಧವಾರ, 9-5-2001

• ಪಂಚತಾರಾ ಹೋಟೆಲ್‌ನಲ್ಲಿ ಟ್ರಾವೆಲ್ಸ್ ನೌಕರನ ಕೊಲೆ

ಬೆಂಗಳೂರು, ಮೇ 8– ಡಾಲರ್ ವಿನಿಮಯ ಸಲುವಾಗಿ ಟ್ರಾವೆಲ್ಸ್ ಏಜೆನ್ಸಿಯೊಂದರ ನೌಕರನೊಬ್ಬನನ್ನು ಸೋಮವಾರ ರಾತ್ರಿ ನಗರದ ಅಶೋಕ ಪಂಚತಾರಾ ಹೋಟೆಲ್‌ಗೆ ಕರೆಸಿಕೊಂಡ ಅಪರಿಚಿತ ದುಷ್ಕರ್ಮಿಗಳು, ಆತನಿಗೆ ಮಾದಕ ವಸ್ತು ಸೇವಿಸುವಂತೆ ಮಾಡಿ ಕೊಲೆಗೈದು 4 ಲಕ್ಷ ರೂಪಾಯಿ ನಗದು ದೋಚಿ ಪರಾರಿಯಾಗಿದ್ದಾರೆ.

ಬಿಟಿಎಂ ಲೇಔಟ್ ನಿವಾಸಿ ಕೆ.ಆರ್.ಎ.ಪಿ. ಆಚಾರ್ಯ (50) ಕೊಲೆಯಾದ ವ್ಯಕ್ತಿ. ಇವರ ಜತೆ ಹೋಟೆಲ್‌ಗೆ ಹೋಗಿದ್ದ ಸದಾಶಿವ ನಗರದ ನರಸಿಂಹನ್ (45) ಎಂಬಾತನನ್ನೂ ಕೊಲೆ ಮಾಡಲು ಯತ್ನಿಸಿದ್ದರಾದರೂ ಅವರು ಪಾರಾಗಿದ್ದಾರೆ. ಗಂಭೀರ ಪರಿಸ್ಥಿತಿಯಲ್ಲಿರುವ ಅವರು ಮಲ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

75 ವರ್ಷಗಳ ಹಿಂದೆ

ಬುಧವಾರ, 9-5-1951

• ಕೇಂದ್ರದಿಂದ ಮೈಸೂರಿಗೆ ಮತ್ತೆ 1 ಕೋಟಿ ರೂ. ಸಾಲ

ನವದೆಹಲಿ, ಮೇ 8– ಈ ವರ್ಷ ಮೈಸೂರು ಸರ್ಕಾರಕ್ಕೆ ಭಾರತ ಸರ್ಕಾರವು ಇನ್ನೂ ಒಂದೂವರೆ ಕೋಟಿ ರೂಪಾಯಿ ಸಾಲ ಕೊಡುವ ಸಂಭವವಿದೆಯೆಂದೂ ಪಾರ್ಲಿಮೆಂಟಿನಲ್ಲಿ ಸಂಸ್ಥಾನ ಶಾಖಾ ಸಚಿವ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ಯರು, ಮೈಸೂರಿನ ಎಚ್.ಎಸ್. ರುದ್ರಪ್ಪನವರ ಪ್ರಶ್ನೆಗೆ ಉತ್ತರ ಕೊಡುತ್ತ ತಿಳಿಸಿದರು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಲಕ್ಕವಳ್ಳಿ ಬಳಿ ಮೈಸೂರು ಸರ್ಕಾರ ಕೈಗೊಂಡಿರುವ ನೀರಾವರಿ ಯೋಜನೆಗೆ ಸಂಬಂಧವಾಗಿ ಈ ಸಹಾಯ ದ್ರವ್ಯವನ್ನು ಕೊಡಲಾಗುವುದೆಂದು ತಿಳಿಸಿದರು.

ವಿಪಕ್ಷ ಆತ್ಮಾವಲೋಕನಕ್ಕೆ ಸಕಾಲ

ವಿಶ್ಲೇಷಣೆ

ಯೋಗೇಂದ್ರ ಯಾದವ್

> ಬಿಜೆಪಿಯ ಆಕ್ರಮಣಕಾರಿ ಚುನಾವಣಾ ರಾಜಕಾರಣಕ್ಕೆ ಸಮರ್ಥ ಪ್ರತಿರೋಧ ರೂಪಿಸುವಲ್ಲಿ ಪ್ರತಿಪಕ್ಷಗಳು ವಿಫಲವಾಗಿವೆ. ವಿರೋಧ ಪಕ್ಷಗಳು ತಮ್ಮನ್ನು ತಾವು ರಚನಾತ್ಮಕವಾಗಿ ಪರಿಷ್ಕರಿಸಿಕೊಳ್ಳದೆ ಹೋದರೆ, ಪ್ರಜಾಸತ್ತಾತ್ಮಕ ಸ್ಪರ್ಧೆ ಕೊನೆಯುಸಿರೆಳೆಯಲಿದೆ. ಗಣತಂತ್ರದ ಬಗ್ಗೆ ವಿಶ್ವಾಸ ಹೊಂದಿರುವ ಪಕ್ಷಗಳು ಒಟ್ಟಾಗಿ ತಮ್ಮ ಕಾರ್ಯತಂತ್ರದ ಪರಾಮರ್ಶೆ ನಡೆಸಲು ಇದು ಸಕಾಲ.

ವಿರೋಧ ಪಕ್ಷಗಳಿಗೆ ಇದು ಆತ್ಮಾವಲೋಕನದ ಕ್ಷಣ; ಕೆಲವು ಕಹಿ ಸತ್ಯಗಳನ್ನು ಎದುರಿಸಬೇಕಾದ ಕ್ಷಣ ಮತ್ತು ಕೆಲವು ಕಠಿಣ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಾದ ಕ್ಷಣ.

ಎರಡು ವರ್ಷಗಳ ಹಿಂದೆ ಲೋಕಸಭಾ ಚುನಾವಣೆಯ ಉತ್ತಮ ಫಲಿತಾಂಶವು ತೆರೆದಿದ್ದ ಅವಕಾಶಗಳ ಬಾಗಿಲು ಆಗಿನಿಂದ ಕುಗ್ಗುತ್ತಲೇ ಬಂದಿದ್ದು, ಈಗ ಸಂಪೂರ್ಣವಾಗಿ ಮುಚ್ಚಿಹೋಗಿದೆ ಎಂಬುದರಲ್ಲಿ ಸಂದೇಹ ಬೇಡ. ಸಂಪೂರ್ಣ ಅಧಿಕಾರವನ್ನು ವಶಪಡಿಸಿಕೊಳ್ಳುವ ಬಿಜೆಪಿಯ ತುಡಿತವು ಪಶ್ಚಿಮ ಬಂಗಾಳದ ಗೆಲುವಿನೊಂದಿಗೆ ಮತ್ತೊಂದು ಹಂತ ಮುಂದಕ್ಕೆ ಸಾಗಿದೆ. ಸಮಕಾಲೀನ ಭಾರತದ ಚುನಾವಣಾ ವ್ಯವಸ್ಥೆಯ ಬಗ್ಗೆ ಅಳಿದುಳಿದ ನಿಷ್ಠೆ ಕೂಡ ಈಗ ಇನ್ನೊಂದು ಹಂತಕ್ಕೆ ಹಿಂದಕ್ಕೆ ಸರಿದಿದೆ. ವಿರೋಧ ಪಕ್ಷಗಳು ತಮ್ಮ ರಾಜಕಾರಣವನ್ನು ಪುನರ್‌ರೂಪಿಸಿ, ಕಾರ್ಯತಂತ್ರವನ್ನು ಪರಿಷ್ಕರಿಸಿ, ಚುನಾವಣಾ ಯಂತ್ರವನ್ನು ಪುನಶ್ಚೇತನಗೊಳಿಸದೇ ಇದ್ದರೆ ಪ್ರಜಾಸತ್ತಾತ್ಮಕ ಸ್ಪರ್ಧೆಯು ಸತ್ತೇ ಹೋಗಲಿದೆ. ಚುನಾವಣಾ ಕಣವನ್ನು ಮರು ಸಮತೋಲನಗೊಳಿಸಲು ಮತ್ತು ನ್ಯಾಯಸಮ್ಮತ ಸ್ಥಿತಿ ಕಾಣಿಸುವಂತೆ ಮಾಡಲು ಯಾರಾದರೂ ಪ್ರಯತ್ನ ಮಾಡದೇ ಇದ್ದರೆ, ಜನರ ಇಚ್ಛೆಯ ಪ್ರತಿಪಾದನೆಯೇ ಚುನಾವಣೆ ಎಂಬುದು ಇಲ್ಲವಾಗಲಿದೆ. ಇದು ವಿರೋಧ ಪಕ್ಷಗಳಿಗೆ ಮಾತ್ರವಲ್ಲ, ಆಡಳಿತಾರೂಢರಿಗೂ ಕೆಟ್ಟ ಸುದ್ದಿಯೇ ಆಗಿದೆ.

ಕೇರಳಂ ಮತ್ತು ತಮಿಳುನಾಡು ವಿಧಾನಸಭೆ ಚುನಾವಣೆಯ ಫಲಿತಾಂಶ ಈ ಹಸಿ ವಾಸ್ತವದಿಂದ ನಮ್ಮ ಗಮನವನ್ನು ಬೇರೆಡೆಗೆ ಸೆಳೆಯದಿರಲಿ. ಕೇರಳಂನಲ್ಲಿ ಪರ್ಯಾಯವಾಗಿ ನಡೆಸುತ್ತಿದ್ದ ಆಡಳಿತ ವ್ಯವಸ್ಥೆಯು ಈ ಬಾರಿ ಸ್ವಲ್ಪ ತಡವಾಗಿ ಅನುಷ್ಠಾನಕ್ಕೆ ಬಂದಿದೆ ಅಷ್ಟೇ. ಆಡಳಿತ ಪಕ್ಷವನ್ನು ಬದಲಿಸುವ ವಾಡಿಕೆಯ ಇಚ್ಛೆ ಮತ್ತು 'ಎಲ್‌ಡಿಎಫ್' ಸರ್ಕಾರದ ವಿರುದ್ಧ ಇದ್ದ ಅತೃಪ್ತಿಯಿಂದಾಗಿ ಇಂತಹ ಫಲಿತಾಂಶ ಬಂದಿದೆ. ಸಹಜವಾಗಿಯೇ 'ಯುಡಿಎಫ್' ಇದರ ಫಲಾನುಭವಿ ಮತ್ತು ಅಧಿಕಾರ ಬದಲಾವಣೆಯು ಒಂದು ಅವಧಿ ತಡವಾಗಿರುವುದು ಗೆಲುವಿನ ಅಂತರ ದೊಡ್ಡದಾಗಲು ಕಾರಣ. ಬಿಜೆಪಿ ತನ್ನ ಮತಗಳಿಕೆಯನ್ನು ಹೆಚ್ಚಿಸಿಕೊಂಡಿಲ್ಲ ಎಂಬ ಸಮಾಧಾನವು ಆಡಳಿತ ಪಕ್ಷವು ಹೊಂದಿರುವ ಅಪಾರ ಬಲದ ಮುಂದೆ ತಾತ್ಕಾಲಿಕ ಎನಿಸಿಬಿಡುತ್ತದೆ. ಅಲ್ಪಸಂಖ್ಯಾತರ ಮತಗಳ ಮೇಲಿನ 'ಯುಡಿಎಫ್' ಅವಲಂಬನೆಯು ದೀರ್ಘಾವಧಿಯಲ್ಲಿ ಸಮಸ್ಯೆಗೆ ಕಾರಣವಾಗಬಹುದು.

ತಮಿಳುನಾಡಿನಲ್ಲಿ ವಿಜಯ್ ಅವರ 'ಟಿವಿಕೆ'ಯ ಸಿನಿಮೀಯ ಯಶಸ್ಸು ಸ್ಫೂರ್ತಿದಾಯಕವಾದರೂ ಎಲ್ಲೆಡೆ ಅದನ್ನು ಅನುಕರಿಸಲು ಸಾಧ್ಯವಿಲ್ಲ. ಡಿಎಂಕೆಯ ಪ್ರಾಬಲ್ಯ, ಜೊತೆಗಿದ್ದ ದುರಹಂಕಾರ ಮತ್ತು ತಮ್ಮನ್ನು ಸೋಲಿಸಲಾಗದು ಎಂಬ ಮನಃಸ್ಥಿತಿಯಿಂದಾಗಿ ಜನರು ಪರ್ಯಾಯದತ್ತ ನೋಡುವಂತೆ ಮಾಡಿತು. ಸದಾ ಕುಸಿಯುತ್ತಲೇ ಇರುವ ಮತ್ತು ಪುನರ್ ರೂಪುಗೊಂಡ 'ಎಐಎಡಿಎಂಕೆ' ಪರ್ಯಾಯವಾಗುವ ಶಕ್ತಿ ಹೊಂದಿಲ್ಲ; ಜೊತೆಗೆ ರಾಜ್ಯದ ರಾಜಕೀಯ ಸಂಸ್ಕೃತಿಗೆ ಒಗ್ಗದ ಬಿಜೆಪಿಯ ಅಧೀನದಲ್ಲಿ 'ಎಐಎಡಿಎಂಕೆ' ಇದೆ ಎಂಬ ಭಾವನೆಯೂ ಇದೆ. ಈ ಶೂನ್ಯವನ್ನು ತುಂಬಲು ದ್ರಾವಿಡ ಸಿದ್ಧಾಂತವನ್ನು ಹೊಂದಿರುವ ಆದರೆ, 'ಡಿಎಂಕೆ' ರಾಜಕೀಯ ಮಾದರಿಗಿಂತ ಭಿನ್ನವಾದ ವ್ಯಕ್ತಿಯೊಬ್ಬರು ಬೇಕಿದ್ದರು. ತಾಜಾ ಪರ್ಯಾಯವೊಂದನ್ನು ನೀಡಿದ್ದ ಎಂಜಿಆರ್ ಮಾದರಿ ಜನರ ಮುಂದೆ ಇತ್ತು. ಡಿಎಂಕೆ 'ರಾಜಕೀಯ ಪ್ರತಿಸ್ಪರ್ಧಿ' ಮತ್ತು ಬಿಜೆಪಿ 'ಸೈದ್ಧಾಂತಿಕ ವೈರಿ' ಹಾಗೂ ತಾವು ಪೆರಿಯಾರ್, ಕಾಮರಾಜ್ ಮತ್ತು ಅಂಬೇಡ್ಕರ್ ಅನುಯಾಯಿ ಎಂದು ವಿಜಯ್ ಘೋಷಿಸಿಕೊಂಡಿದ್ದರು ಎಂಬುದೂ ಗಮನಾರ್ಹ. ರಾಜ್ಯದಲ್ಲಿ ಇಂತಹ ಸಂಯೋಜನೆ ವಿಶಿಷ್ಟವಾಗಿತ್ತು.

ಅಸ್ಸಾಂನಲ್ಲಿ ವಿರೋಧ ಪಕ್ಷಗಳು ಯಾವುದೇ ನೆಪದ ಹಿಂದೆ ಅಡಗಿಕೊಳ್ಳಲು ಬಿಡಬಾರದು. ಭಾರತದ ಚುನಾವಣಾ ಇತಿಹಾಸದಲ್ಲಿಯೇ ಹಿಂದೆಂದೂ ಇಲ್ಲದ ರೀತಿಯುಲ್ಲಿ ಕೋಮು ದೃಷ್ಟಿಕೋನದಲ್ಲಿ ಬಿಜೆಪಿಗೆ ಅನುಕೂಲ ಆಗುವ ರೀತಿಯಲ್ಲಿ ಕ್ಷೇತ್ರಗಳ ಗಡಿ ಬದಲಾಯಿಸಲು ಚುನಾವಣಾ ಆಯೋಗವನ್ನು ಆ ಪಕ್ಷವು ಬಳಸಿಕೊಂಡಿತು ಎಂಬುದು ನಿಜ. ಮತದಾನಕ್ಕೂ ಮೊದಲೇ ಬಿಜೆಪಿ ತನಗೆ 10 ಸ್ಥಾನಗಳನ್ನು ಕೊಟ್ಟುಕೊಂಡಿತ್ತು. ಅಸ್ಸಾಂ ಮುಖ್ಯಮಂತ್ರಿಯು 'ಮಿಯಾ' ಸಮುದಾಯದ ವಿರುದ್ಧ ಕೋಮುದ್ವೇಷದ ಹೇಳಿಕೆಗಳನ್ನು ನಿರ್ಲಜ್ಜವಾಗಿ ನೀಡುತ್ತಲೇ ಬಂದರು. ಚುನಾವಣಾ ಆಯೋಗ ಮತ್ತು ಸುಪ್ರೀಂ ಕೋರ್ಟ್ ಮೂಕಪ್ರೇಕ್ಷಕವಾಗಿದ್ದವು. ಹೀಗೆಲ್ಲ ಇದ್ದರೂ ವಿರೋಧ ಪಕ್ಷಗಳು ಆಡಳಿತ ಪಕ್ಷವನ್ನು ಎದುರಿಸುವ ಛಾತಿ ತೋರಿಸಿಲ್ಲ ಎಂಬುದೂ ನಿಜ.

ಬಿಜೆಪಿ ಸರ್ಕಾರ ಮತ್ತು ವಿಶೇಷವಾಗಿ ಮುಖ್ಯಮಂತ್ರಿಯ ವಿರುದ್ಧ ಭ್ರಷ್ಟಾಚಾರದ ಆರೋಪಗಳಿದ್ದವು. ಜುಬಿನ್ ಗರ್ಗ್ ಸಾವು ಸರ್ಕಾರದ ವಿರುದ್ಧದ ತುಂಬು ಭಾವನಾತ್ಮಕ ವಿಚಾರವಾಗಿತ್ತು. ಇವೆಲ್ಲವನ್ನೂ ಸರ್ಕಾರದ ವಿರುದ್ಧ ಬಳಸಿಕೊಳ್ಳುವಲ್ಲಿ ವಿರೋಧ ಪಕ್ಷಗಳು ವಿಫಲವಾದವು. ಚುನಾವಣೆಯನ್ನು ಹೇಗೆ ಸೋಲಬಹುದು ಎಂಬುದಕ್ಕೆ ಇದು ಉದಾಹರಣೆಯಾಗಿದೆ.

ಪಶ್ಚಿಮ ಬಂಗಾಳದಲ್ಲಿನ ವಿರೋಧ ಪಕ್ಷವು ಇಂತಹ ದೌರ್ಬಲ್ಯಗಳನ್ನು ತೋರಲಿಲ್ಲ. ಬಿಜೆಪಿ ನಿರಾಯಾಸವಾಗಿ ಗೆಲ್ಲಲು ಮಮತಾ ಬ್ಯಾನರ್ಜಿ ಅವಕಾಶ ಕೊಟ್ಟರು ಎಂದು ಯಾರೂ ಆರೋಪಿಸುವಂತಿಲ್ಲ. ಅವರಲ್ಲಿ ಕಾರ್ಯತಂತ್ರ, ಚೈತನ್ಯ ಮತ್ತು ಬಿಜೆಪಿಯನ್ನು ಎದುರಿಸುವ ಗಟ್ಟಿ ವ್ಯವಸ್ಥೆ ಇದ್ದವು. ವಿರೋಧ ಪಕ್ಷಗಳಲ್ಲಿ ಒಗ್ಗಟ್ಟು ಇರಲಿಲ್ಲ. ಎಡಪಕ್ಷಗಳು ಪ್ರತ್ಯೇಕವಾಗಿ ಸ್ಪರ್ಧಿಸಿದ್ದು ಮಮತಾ ಅವರಿಗೆ ಅನುಕೂಲವಾಯಿತು. ಕಾಂಗ್ರೆಸ್‌ನಿಂದ ಟಿಎಂಸಿಗೆ ಆದ ಹಾನಿ ಸ್ವಲ್ಪ ಮಾತ್ರ. ಪಶ್ಚಿಮ ಬಂಗಾಳವು ವಿರೋಧ ಪಕ್ಷಗಳಿಗೆ ಅಧ್ಯಯನಯೋಗ್ಯ ಪ್ರಕರಣ. ವಿರೋಧ ಪಕ್ಷಗಳ ಪ್ರತಿಯೊಬ್ಬ ನಾಯಕನೂ ಆತಂಕದಿಂದಲೇ ಗಮನಿಸಿದ ರಾಜ್ಯವೂ ಇದು ಹೌದು.

ಸುತ್ತು ಬಳಸು ಬೇಡ: ಗಣನೀಯವಾದ 'ಆಡಳಿತ ವಿರೋಧಿ ಅಲೆ', ಸರ್ಕಾರದ ಕುರಿತು ಜನರಲ್ಲಿ ಗುಪ್ತಗಾಮಿನಿಯಂತೆ ಅತೃಪ್ತಿ ಮತ್ತು ಆಕ್ರೋಶ ಇಲ್ಲದಿದ್ದರೆ ಈ ಮಟ್ಟದ ಚುನಾವಣಾ ಫಲಿತಾಂಶ ಬರಲು ಸಾಧ್ಯವಿಲ್ಲ. ಇವೆಲ್ಲವನ್ನು ಈವರೆಗೆ ನಿರ್ಲಕ್ಷಿಸಲಾಗಿತ್ತು. ಮಮತಾ ಅವರ ಮೇಲೆಯೇ ಜನರಿಗೆ ಆಕ್ರೋಶ ಇತ್ತು ಎಂದಲ್ಲ; ಸ್ಥಳೀಯ ನಾಯಕರು ಮತ್ತು ಆಡಳಿತದ ಗುಣಮಟ್ಟದ ಕುರಿತು ಜನರಲ್ಲಿ ಅಸಮಾಧಾನ ಇತ್ತು. ಬೇರೆ ರಾಜ್ಯಗಳಲ್ಲಿ ಇದೇ ರೀತಿಯ ಅಥವಾ ಅದಕ್ಕಿಂತ ಕೆಟ್ಟದಾದ ಆಡಳಿತ ನಡೆಸಿದ ಪಕ್ಷಗಳು ಶಿಕ್ಷೆ ಇಲ್ಲದೆ ಪಾರಾಗಿವೆ ಎಂಬುದು ನಿಜ. ಬಿಜೆಪಿ ಮತ್ತು ಅದಕ್ಕೆ ನಿಷ್ಠವಾಗಿರುವ ಮಾಧ್ಯಮಗಳು ಸಿಕ್ಕ ಅವಕಾಶವನ್ನು ಸರಿಯಾಗಿ ಬಳಸಿಕೊಂಡವು. ವಿರೋಧ ಪಕ್ಷವು ತನ್ನ ಆಳ್ವಿಕೆಯ ದಕ್ಷತೆಯನ್ನು ಪ್ರಾಮಾಣಿಕವಾಗಿ ಆತ್ಮಾವಲೋಕನಕ್ಕೆ ಒಳಪಡಿಸಬೇಕಿದೆ. ರಾಷ್ಟ್ರೀಯ ರಾಜಕಾರಣಕ್ಕೆ ಯಾವುದೇ ಯೋಜನೆ ರೂಪಿಸುವುದಕ್ಕೆ ಮುನ್ನ ಪಶ್ಚಿಮ ಬಂಗಾಳ ಮಾತ್ರವಲ್ಲ, ಪಂಜಾಬ್, ಕರ್ನಾಟಕ, ತೆಲಂಗಾಣ ಮತ್ತು ಹಿಮಾಚಲ ಪ್ರದೇಶದ ಆಡಳಿತವನ್ನು ನಿಕಷಕ್ಕೆ ಒಡ್ಡಬೇಕಿದೆ.

ಅಂತಿಮವಾಗಿ, ಪಶ್ಚಿಮ ಬಂಗಾಳ ಚುನಾವಣೆಯ ಅತ್ಯಂತ ಕಳವಳಕಾರಿ ಸತ್ಯವೊಂದನ್ನು ಒಪ್ಪಿಕೊಳ್ಳೋಣ. ಈಗಿನ ಫಲಿತಾಂಶವು ಜನರ ಇಚ್ಛೆಯ ಪ್ರತಿಫಲನಕ್ಕೆ ಸೀಮಿತವಲ್ಲ. ಬಿಜೆಪಿಯ ಗೆಲುವು ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗದ ಯೋಜಿತ ಕಾರ್ಯಾಚರಣೆಯ ಫಲವೂ ಹೌದು. 2024ರ ಲೋಕಸಭಾ ಚುನಾವಣೆಯಲ್ಲಿನ ಹಿನ್ನಡೆಯ ಬಳಿಕ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಜರ್ಝರಿತವಾಗಿ, ಟಿಎಂಸಿಯನ್ನು ಎದುರಿಸುವ ಸ್ಥಿತಿಯಲ್ಲಿ ಇರಲಿಲ್ಲ. ಕೇಂದ್ರ ಸರ್ಕಾರ ಮತ್ತು ಬಿಜೆಪಿ ಪರವಾಗಿರುವ ಮಾಧ್ಯಮಗಳು ಬಿಜೆಪಿಗೆ ಆಸರೆಯಾದವು. ನರೇಗಾ ಮತ್ತು ಪ್ರಧಾನಮಂತ್ರಿ ಆವಾಸ್ ಯೋಜನೆಯನಂತಹ ಕಾರ್ಯಕ್ರಮಗಳನ್ನು ಸ್ಥಗಿತಗೊಳಿಸಿ, ಪಶ್ಚಿಮ ಬಂಗಾಳ ಸರ್ಕಾರಕ್ಕೆ ಸಂಪನ್ಮೂಲ ದೊರೆಯದಂತೆ ಕೇಂದ್ರವು ನೋಡಿಕೊಂಡಿತು. ಅಸ್ಸಾಂಗಿಂತಲೂ ಹೆಚ್ಚು ಪಶ್ಚಿಮ ಬಂಗಾಳದಲ್ಲಿ ಕೋಮುದ್ವೇಷದ ವಿಷಮಯವಾದ ಪ್ರಚಾರ ನಡೆಸಿದ್ದನ್ನು ಚುನಾವಣಾ ಆಯೋಗ ಸುಮ್ಮನೆ ನೋಡುತ್ತಾ ನಿಂತಿತು. ಈ ಎಲ್ಲಕ್ಕಿಂತ ಹೆಚ್ಚಾಗಿ, ಬೇರೆ ಯಾವುದೇ ರಾಜ್ಯದಂತಲ್ಲದೆ, ಗಣತಿ ನಮೂನೆ ಮತ್ತು ಪೌರತ್ವ ದಾಖಲೆಗಳನ್ನು ಸಲ್ಲಿಸಿದ್ದ 27 ಲಕ್ಷ ಜನರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲಾಯಿತು (ಒಟ್ಟು 90 ಲಕ್ಷ ಜನರ ಹೆಸರು ತೆಗೆಯಲಾಗಿದೆ). ಈ ರದ್ದತಿಯು ತಪ್ಪು ಮತ್ತು ಉದ್ದೇಶಪೂರ್ವಕ ಎಂದು ಪ್ರತಿಯೊಂದು ಸ್ವತಂತ್ರ ತನಿಖೆಯೂ ಹೇಳಿದೆ. ಈ ಹೆಸರು ರದ್ದತಿಯು ರಾಜ್ಯದ ಒಟ್ಟು ಮತದಾರರ ಶೇ 4.3ರಷ್ಟಿದೆ. ಟಿಎಂಸಿಗಿಂತ ಬಿಜೆಪಿಗೆ ಸಿಕ್ಕ ಹೆಚ್ಚುವರಿ ಮತಗಳ ಪ್ರಮಾಣ ಶೇ 4.6ರಷ್ಟು. ಇದೊಂದು ಪ್ರಶ್ನೆಯನ್ನು ಕೇಳಲೇಬೇಕಿದೆ: ಈ 27 ಲಕ್ಷ ಜನರಿಗೆ ಮತದಾನಕ್ಕೆ ಅವಕಾಶ ಕೊಟ್ಟಿದ್ದರೆ ಫಲಿತಾಂಶದ ಮೇಲೆ ಅದು ಯಾವ ಪರಿಣಾಮ ಬೀರುತ್ತಿತ್ತು?

ವಿರೋಧ ಪಕ್ಷಗಳೆಲ್ಲವೂ ಒಟ್ಟಾಗಿ ಈ ಕಠಿಣ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಿದೆ: ಭಾರತದ ಚುನಾವಣೆಯ ಪ್ರಾಮಾಣಿಕತೆಯು ಕನಿಷ್ಠ ಸ್ವೀಕಾರಾರ್ಹ ಮಟ್ಟಕ್ಕಿಂತಲೂ ಕೆಳಕ್ಕೆ ಇಳಿದಿದೆಯೇ? ಚುನಾವಣಾ ಕಣದಿಂದ ಪರಾರಿ ಎಂಬಂತೆ ತೋರಿಸಿಕೊಳ್ಳದೆಯೇ ಯೋಜಿತ ಚುನಾವಣಾ ಫಲಿತಾಂಶವನ್ನು ನ್ಯಾಯಸಮ್ಮತಗೊಳಿಸಲು ವಿರೋಧ ಪಕ್ಷಗಳು ನಿರಾಕರಿಸುವುದು ಹೇಗೆ? ವಿರೋಧ ಪಕ್ಷವು ಈಗ ಅಥವಾ ಪಶ್ಚಿಮ ಬಂಗಾಳದ ಈ ಫಲಿತಾಂಶದ ಬಳಿಕವೂ ಅಲ್ಲದಿದ್ದರೆ ತನ್ನ ಗುರಿಯನ್ನು ಎಲ್ಲಿ ಮತ್ತು ಯಾವಾಗ ನಿಗದಿಪಡಿಸಿಕೊಳ್ಳಬೇಕು ಎಂಬುದನ್ನು ನಿರ್ಧರಿಸಿಕೊಳ್ಳಬೇಕಿದೆ.

ವಾಚಕರ ವಾಣಿ

ಇ–ಖಾತೆ ವಿಳಂಬ: ವಹಿವಾಟು ಮರೀಚಿಕೆ

ಗ್ರಾ.ಪಂ. ವ್ಯಾಪ್ತಿಯಲ್ಲಿ ಇ–ಖಾತೆ ಪ್ರಕ್ರಿಯೆ ವಿಳಂಬವಾಗಿದೆ. ಮನೆ ಕಟ್ಟುವ, ಕಟ್ಟಿದ ಮನೆಗೆ ವಿದ್ಯುತ್ ಸಂಪರ್ಕ ಪಡೆಯುವ, 30 × 40ಕ್ಕಿಂತ ದೊಡ್ಡ ನಿವೇಶನಗಳಿಗೆ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆಯುವ ಕನಸು ನುಚ್ಚುನೂರಾಗಿದೆ. ಡಿಜಿಟಲ್ ರೂಪದಲ್ಲಿ ಇ–ಖಾತೆ ನೀಡುವ ಪ್ರಕ್ರಿಯೆ 2025ರ ಅಂತ್ಯದಲ್ಲಿ ಆರಂಭವಾಯಿತು. ಅಲ್ಲಿಂದೀಚೆಗೆ ಭೌತಿಕ ರೂಪದಲ್ಲಿಯೂ ದಾಖಲೆ ಪಡೆಯಲಾಗದೆ, ಡಿಜಿಟಲ್ ದಾಖಲೆಗಳೂ ಸಿಗದೆ, ಒಂದಿಲ್ಲೊಂದು ಸಮಸ್ಯೆ ಸಾಮಾನ್ಯ ಎನ್ನುವಂತಾಗಿದೆ. ಮನೆ ಕಟ್ಟುವವರಿಗೆ, ನಿವೇಶನ ಕೊಳ್ಳುವ ಮತ್ತು ಮಾರುವವರಿಗೆ, ಕಟ್ಟಡ ಕಾರ್ಮಿಕರಿಗೆ ತೊಂದರೆ ಆಗುತ್ತಿದೆ. ಈ ಸಮಸ್ಯೆಗೆ ಕೊನೆ ಯಾವಾಗ?

ಉದಂತ ಶಿವಕುಮಾರ, ಬೆಂಗಳೂರು

ಅಪ್ಲ್ಯಾಸ್ಟಿಕ್ ರಕ್ತಹೀನತೆ: ಅಲಕ್ಷ್ಯ ಸಲ್ಲದು

'ಥಲಸ್ಸೇಮಿಯಾ: ಅರಿವಿನ ಹೆಜ್ಜೆಯ ಅಗತ್ಯ' (ಲೇ: ಶ್ರೀಗುರು, ಪ್ರ.ವಾ., ಮೇ 8) ಸಕಾಲಿಕ ಬರಹ. ಇದೇ ರೀತಿಯಾಗಿ ರಕ್ತಕ್ಕೆ ಸಂಬಂಧಿಸಿದ 'ಅಪ್ಲ್ಯಾಸ್ಟಿಕ್ ರಕ್ತಹೀನತೆ' ಎಂಬ ಅಪರೂಪದ ಕಾಯಿಲೆಯಿಂದ ಕಳೆದ ವರ್ಷ ನಮ್ಮ ಕುಟುಂಬದ ಸದಸ್ಯರು ಸಾವಿಗೀಡಾದರು. ಮೂಳೆ ಮಜ್ಜೆ ರಕ್ತಕಣಗಳ ಉತ್ಪಾದನೆಯನ್ನೇ ನಿಲ್ಲಿಸುವ ಹಾಗೂ ರೋಗನಿರೋಧಕ ವ್ಯವಸ್ಥೆಯೇ ಮೂಳೆ ಮಜ್ಜೆಯ ಮೇಲೆ ದಾಳಿ ಮಾಡುವ ಈ ರೋಗಕ್ಕೆ ಮೂಳೆ ಮಜ್ಜೆ ಕಸಿಯೇ ಶಾಶ್ವತ ಪರಿಹಾರ. ತೀವ್ರವಾದ ಆಯಾಸ, ಸೋಂಕು, ಒಸಡು–ಮೂಗಿನಲ್ಲಿ ರಕ್ತಸ್ರಾವ ಕಾಣಿಸಿಕೊಳ್ಳುವಂಥ ರೋಗಲಕ್ಷಣಗಳು ಕಂಡುಬಂದ ತಕ್ಷಣ ವೈದ್ಯರ ಸಲಹೆ ಪಡೆದರೆ ಅಮೂಲ್ಯ ಜೀವ ಉಳಿಸಬಹುದು.

ರಮೇಶ್ ಪಾಟೀಲ್, ಡೋಣಮರಡಿ

ಪರೀಕ್ಷಾ ಹೊಣೆ: 'ಅತಿಥಿ'ಗಳಿಗೆ ಬೇಡವೆ?

ವಿ.ವಿ.ಗಳ ವ್ಯಾಪ್ತಿಯ ಪದವಿ ಕಾಲೇಜುಗಳಲ್ಲಿ ಶೀಘ್ರವೇ ಸೆಮಿಸ್ಟರ್ ಪರೀಕ್ಷೆಗಳು ಆರಂಭವಾಗಲಿವೆ. ಪರೀಕ್ಷಾ ಕಾರ್ಯಕ್ಕೆ ಪರಿವೀಕ್ಷಕರನ್ನಾಗಿ ಪೂರ್ಣಾವಧಿ ಉಪನ್ಯಾಸಕರೊಂದಿಗೆ ಅತಿಥಿ ಉಪನ್ಯಾಸಕರನ್ನು ಬಳಸಿಕೊಳ್ಳುವುದು ರೂಢಿ. ಆದರೀಗ ವಿ.ವಿ.ಗಳ ಬೋಧನಾವಧಿಯ ದಿನಗಳು ಮುಗಿಯುವ ಕೊನೆಯ ದಿನದಂದೇ ಅವರನ್ನು ಕೈಬಿಡಲಾಗುತ್ತಿದೆ. ಇದರಿಂದ ಅವರನ್ನು ಬಳಸಿಕೊಳ್ಳಲು ಪ್ರಾಂಶುಪಾಲರಿಗೆ ತೊಡಕಾಗಿದೆ. ಜೊತೆಗೆ, ನಿಯಮಾನುಸಾರ ಪರೀಕ್ಷಾ ವೀಕ್ಷಕರನ್ನಾಗಿ ಪೂರ್ಣಾವಧಿ ಅಧ್ಯಾಪಕರನ್ನೇ ನೇಮಿಸಬೇಕಿದೆ. ಆದರೆ, ಅವರಿಗೆ ಪರೀಕ್ಷಾ ಅವಧಿಯ ವಿಶೇಷ ರಜೆ ಸೌಲಭ್ಯ ಒದಗಿಸುವ ತಂತ್ರಗಾರಿಕೆಯ ಭಾಗವಾಗಿ ಅದಕ್ಕೂ ಅತಿಥಿ ಉಪನ್ಯಾಸಕರನ್ನು ನೇಮಿಸಲಾಗುತ್ತದೆ. ಈ ಒಪ್ಪಂದದ ನಿಯೋಜನೆಯನ್ನು ಕೆಲವು ಕಾಲೇಜುಗಳ ಶಿಫಾರಸು ಮೇರೆಗೆ ವಿ.ವಿ.ಗಳು ಅನುಸರಿಸುತ್ತಾ ಬಂದಿವೆ. ಶಿಸ್ತುಬದ್ಧವಾಗಿ ಪರೀಕ್ಷೆ ನಡೆಯಲು ಅತಿಥಿ ಉಪನ್ಯಾಸಕರ ಸೇವೆ ಬಳಸಿಕೊಳ್ಳಬೇಕಿದೆ.

ಸಂಪತ್ ಬೆಟ್ಟಗೆರೆ, ಮೂಡಿಗೆರೆ

ರಾಜ್ಯದಲ್ಲಿ ದ್ವಿಭಾಷಾ ನೀತಿ ಕಡ್ಡಾಯ ಆಗಲಿ

ರಾಜ್ಯ ಶಿಕ್ಷಣ ನೀತಿ ಆಯೋಗದ ವರದಿಯ ಅನುಷ್ಠಾನಕ್ಕೆ ಸಂಪುಟ ಉಪಸಮಿತಿ ರಚಿಸಲು ತೀರ್ಮಾನಿಸಿರುವುದು ಸ್ವಾಗತಾರ್ಹ. ಶಾಲಾ ಶಿಕ್ಷಣದಲ್ಲಿ ದ್ವಿಭಾಷಾ ನೀತಿ ಕಡ್ಡಾಯವಾಗಲಿ. ಸ್ಥಳೀಯ ಭಾಷೆಯನ್ನು (ಕನ್ನಡ) ಮಾತೃಭಾಷೆಯನ್ನಾಗಿ ಪರಿಗಣಿಸಿ, ಪ್ರಥಮ ಭಾಷೆಯಾಗಿಯೂ ಮತ್ತು ಇಂಗ್ಲಿಷ್ ಅನ್ನು ದ್ವಿತೀಯ ಭಾಷೆ ಆಗಿಯೂ ನಿಗದಿಪಡಿಸುವುದು ಸೂಕ್ತ. ಐದನೆಯ ತರಗತಿಯವರೆಗೆ ಸ್ಥಳೀಯ ಭಾಷೆಯೇ (ಮಾತೃಭಾಷೆ) ಬೋಧನಾ ಮಾಧ್ಯಮ ಆಗಬೇಕೆಂಬುದು ಶಿಕ್ಷಣ ತಜ್ಞರ ಪ್ರತಿಪಾದನೆಯಾಗಿದೆ ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿಯೂ ಇದನ್ನೇ ಹೇಳುತ್ತಿದೆ. ಶಿಕ್ಷಣ ಇಲಾಖೆ ಅಳವಡಿಸಿಕೊಂಡಿರುವ ಎನ್‌ಸಿಇಆರ್‌ಟಿಯ 6ರಿಂದ 9ನೇ ತರಗತಿಯ ವಿಜ್ಞಾನ ಮತ್ತು ಗಣಿತ ಪಠ್ಯಪುಸ್ತಕಗಳು ಉತ್ತಮದರ್ಜೆಯ ಪುಸ್ತಕಗಳಾದರೂ, ಮಕ್ಕಳ ವಯೋಮಾನಕ್ಕೆ ಅರಗಿಸಿಕೊಳ್ಳಲು ಕಷ್ಟ ಹಾಗೂ ಎಳೆಯರಿಗೆ ಬೋಧಿಸಲು ಶಿಕ್ಷಕರಿಗೂ ಕಠಿಣವಾಗಿವೆ. ಅವುಗಳನ್ನು ರದ್ದುಗೊಳಿಸಿ ಮಕ್ಕಳ ಬೌದ್ಧಿಕ ಸಾಮರ್ಥ್ಯಕ್ಕೆ ಅನುಗುಣವಾಗಿ ಪಠ್ಯ ಪುಸ್ತಕಗಳು ರಚನೆಯಾಗಲಿ.

ಪು.ಸೂ. ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ಜಾತೀಯತೆ ಸಮಾಜಕ್ಕಂಟಿದ ಕ್ಯಾನ್ಸರ್

ಮೈಸೂರು ಜಿಲ್ಲೆಯ ಹುಣಸೂರಿನಲ್ಲಿ ದಲಿತರು ಮತ್ತು ಬ್ರಾಹ್ಮಣರು ಸಹಪಂಕ್ತಿ ಭೋಜನ ಮಾಡಿರುವುದು ವರದಿಯಾಗಿದೆ. ಇದು ದಲಿತರು ಸಂಭ್ರಮಿಸುವ ವಿಚಾರವಲ್ಲ. ಶ್ರೇಣೀಕೃತ ಸಮಾಜ ನಡೆಸುತ್ತಿರುವ ದಲಿತರ ದೇವಸ್ಥಾನ ಪ್ರವೇಶ ನಿರಾಕರಣೆಯಂತಹ ಸಾಮಾಜಿಕ ಶೋಷಣೆಗಳು ದಲಿತೇತರ ಜಾತಿಗಳು ಮುಖ ತಗ್ಗಿಸುವಂತೆ ಮಾಡಿವೆ. ಈಗೀಗ ಜಾತಿ ಅಸ್ಪೃಶ್ಯತೆಯು ಸಾಂದರ್ಭಿಕವಾಗಿ ಸೃಷ್ಟಿಯಾಗುತ್ತಿರುವುದೇ ಹೆಚ್ಚು. ಜನರು ಮಾನಸಿಕವಾಗಿ ಬದಲಾಗುವವರೆಗೂ ಇಂತಹ ಸಹಪಂಕ್ತಿ ಭೋಜನ ನಡೆಯಬೇಕು. ಜಾತಿ ತಾರತಮ್ಯದ ಬೇರನ್ನು ಕಿತ್ತುಹಾಕುವ ತನಕ ಜನ–ಮಾಧ್ಯಮಗಳು ವಿರಮಿಸಬಾರದು.

ಸೋಮಶೇಖರ್, ಕದಿರೇಹಳ್ಳಿ

ಅಸಂಬದ್ಧ ಹೇಳಿಕೆ: ಸೌಜನ್ಯ ಮೀರದಿರಲಿ

ಬಿಜೆಪಿ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು, ತಮಿಳುನಾಡಿನ ರಾಜಕೀಯ ಪರಿಸ್ಥಿತಿ ಕುರಿತಂತೆ 'ಕಾಂಗ್ರೆಸ್‌ನ ಸ್ಥಿತಿ ಭಿಕ್ಷೆ ಬೇಡುವಂತಾಗಿದೆ' ಎಂದಿದ್ದಾರೆ. ಅವರ ಹೇಳಿಕೆ ಸದಭಿರುಚಿಯಿಂದ ಕೂಡಿದ್ದಲ್ಲ. ಚುನಾವಣೆಯಲ್ಲಿ ಯಾವುದೇ ಪಕ್ಷಕ್ಕೆ ಪೂರ್ಣ ಬಹುಮತ ಬಾರದ ಸಂದರ್ಭದಲ್ಲಿ ಇತರ ಪಕ್ಷಗಳ ನೆರವಿನೊಂದಿಗೆ ಸರ್ಕಾರ ರಚಿಸಲು ಸಂವಿಧಾನದಲ್ಲಿ ಅವಕಾಶವಿದೆ. ನಾರಾಯಣಸ್ವಾಮಿ ಅವರು ಪ್ರತಿನಿಧಿಸುವ ಬಿಜೆಪಿಗೆ ಇದುವರೆಗೆ ಕರ್ನಾಟಕದಲ್ಲಿ ಪೂರ್ಣ ಬಹುಮತಗಳಿಸಲು ಒಮ್ಮೆಯೂ ಸಾಧ್ಯವಾಗಿಲ್ಲ. ಪ್ರತಿ ಬಾರಿ ಸರ್ಕಾರ ರಚಿಸಿದಾಗಲೂ ಪಕ್ಷೇತರರು ಇಲ್ಲವೆ ಜೆಡಿಎಸ್‌ನ ನೆರವು ಪಡೆದಿದೆ ಎಂಬುದನ್ನು ಅವರು ಮರೆತಂತಿದೆ. ಬಿಜೆಪಿಯು ತಮಿಳುನಾಡಿನಲ್ಲಿ ಎಐಎಡಿಎಂಕೆ ಜೊತೆ ಮೈತ್ರಿ ಮಾಡಿಕೊಂಡಿರುವುದನ್ನೂ ಮರೆತಿದ್ದಾರೆ. ರಾಜಕೀಯ ನಾಯಕರ ಹೇಳಿಕೆಗಳು ಸೌಜನ್ಯದ ಎಲ್ಲೆ ಮೀರಿದರೆ ಅದು ತಿರುಗುಬಾಣವಾಗುವ ಸಾಧ್ಯತೆಯೇ ಹೆಚ್ಚು.

ಎಂ.ಜಿ. ರಂಗಸ್ವಾಮಿ, ಹಿರಿಯೂರು

ಚುರುಮುರಿ

ಗಮ್ ಗಮ್ ಗೋವಿಂದಂ!

• ತುರುವೇಕೆರೆ ಪ್ರಸಾದ್

'ಪಂಚರಾಜ್ಯ ಎಲೆಕ್ಷನ್ನಲ್ಲಿ ಕಮಲಕ್ಕೆ ಪಂಚಕಜ್ಜಾಯ, ಕೈಗೆ 'ಪಂಚ್' ಕಜ್ಜಾಯ, ಕುಡ್ಲೋರಿಗೆ ಪಂಚಗವ್ಯ ಸಿಕ್ಕದೆ. ಒಟ್ನಲ್ಲಿ ರಾಜಕೀಯ ಪಂಚಾಂಗನೇ ಬದ್ಲಾಗದೆ' ಎಂದ ಗುದ್ಲಿಂಗ.

'ವ್ಹಾ ಕಣ್ಲಾ! ಸೋತ ಎಲೆಕ್ಷನ್ನು, ಹುಡುಗಿ ಸೆಲೆಕ್ಷನ್ನು ಎರಡೂ ಒಂದೇ! ಕಳ್ಕಂಡ ಛಾನ್ಸು ಪದೇ ಪದೇ ಬರ್ತಿರ್ತದೆ ಕಣ್ಮುಂದೆ, ಹ್ಯಾಂಗ್ ಓವರ್ರೇ ಓಗಲ್ಲ ನೋಡು' ಎಂದ ಮಾಲಿಂಗ.

'ವ್ಹಾ! ಗೇಮ್ ನಾಟ್ ಓವರ್ ಅಂತ ಅಸೆಂಬ್ಲಿ ಡಿಸಾಲ್ವ್ ಆದ್ರೂ ದೀದಿ ಕುರ್ಚಿಗೆ ಹ್ಯಾಂಗ್ ಆಗವ್ರಲ್ಲಪ್ಪ... ಸೋಲಿಸಿದರೇನು ಸುವೇಂದು, ನಾನು ಹಾಕ್ಕಂಡು ಕೂತ್ಕತೀನಿ ಗೋಂದು ಅಂತಾವ್ರೆ'.

'ಎಣ್ ಮಕ್ಳು ಮನೇಲೇ ಯಜಮಾನಿಕೆ ಬುಡು ಅಂದ್ರೆ ಉರಿದು ಬೀಳ್ತರೆ, ಇನ್ನು ಸಿಎಂ ಸೀಟಿನ ವ್ಯಾಮೋಹ ಅಷ್ಟು ಸುಲಭವಾಗಿ ಓಯ್ತದೇನ್ಲಾ? ಇಂದ್ರಮ್ಮನ್ ತರ ದೀದಿನೂ ನಿಜವಾದ ಓರಾಟಗಾರ್ತಿ ಕಣ್ಲಾ!' ಎಂದ ಕಲ್ಲೇಶಿ.

'ಊ ಕಣ್ಲಾ! ಬೇರೆ ದೇಶ್ದಾಗೆಲ್ಲಾ ಈ ಸರ್ವಾಧಿಕಾರಿಗಳು ಎಲೆಕ್ಷನ್ ಸೋತ್ರೂ ಕುರ್ಚಿಗೇ ಅಂಟ್ಕಂಡು ಕುಂತಿರ್ತಾರೆ, ಜಿಂಬಾಬ್ವೆಯ ರಾಬರ್ಟ್ ಮೊಗಾಬೆ ತರ. ನಮ್ ಎಣ್ ಮಕ್ಳೂ ನಾವು ಗೂಬೆ ಅಲ್ಲ, ಲೇಡಿ ಮೊಗಾಬೆ ಅಂತ ಪ್ರೂವ್ ಮಾಡವ್ರೆ'.

'ಒಟ್ನಾಗೆ ದೀದಿ ದೇಶಕ್ಕೇ ಮಾದರಿ ಆಗವ್ರೆ! ನನ್ ಎಂಡ್ರು 'ದೀದಿ ಗಮ್ ಕಂಪನಿ' ಅಂತ ಒಂದು ಸ್ಟಾರ್ಟಪ್ ಮಾಡ್ಬೇಕು ಅಂತಾವ್ಳೆ'.

'ಲೇಯ್ ಇಲ್ಲಿ, ಎಂಡ್ ಅಪ್ಪೇ ಆಗ್ತಿಲ್ಲವಲ್ಲೋ! ದೀದಿನೇ ಮಾದರಿ ಆಗಿ ಸೋತೋರೆ ಸೀಟು ಬುಡಾಕಿಲ್ಲ ಅಂತಾವ್ರೆ, ಇನ್ನು ಗೆದ್ದು ಶಾಸಕರ ಬೆಂಬಲ ಇರೋರು ಎಂಗ್ ಬುಟ್ಟಾರು ಅಂತ ಟಗರು ಬಂಡೆ ಮೇಲೆ ಗುರ್ ಅನ್ನಬಹುದು'.

'ಅಂಗಾದ್ರೆ ಬಂಗಾಳದ ಪಬಂಪಬಂ ದೀದಿ ಪದ ಇಲ್ಲಿ ಗಮ್ ಗಮ್ ಗೋವಿಂದಂ. ಬಂ ಬಂ ಶಂಖನಾದಂ!' ಎಂದ ಪರ್ಮೇಶಿ.

ಎಲ್ಲರೂ 'ಸಕತ್ ಕಣ್ಲಾ' ಎಂದು ಪರ್ಮೇಶಿಯ ಬೆನ್ನು ಗುದ್ದಿದರು.

ಸಂಗತ

ಚೌಕಟ್ಟು ವಿಸ್ತರಿಸಿಕೊಳ್ಳಬೇಕಾಗಿದೆ 'ದಯೆ'

ಪ್ರಾಣಿ–ಪಕ್ಷಿಗಳ ಕುರಿತಾದ ನಮ್ಮ ಮರುಕ ನಿರ್ದಿಷ್ಟ ಸಂದರ್ಭಗಳಿಗೆ ಸೀಮಿತ ಆಗಬಾರದು. ಪ್ರಕೃತಿಪ್ರೇಮದ ವ್ಯಾಪ್ತಿಯಲ್ಲಿ ಎಲ್ಲ ಜೀವಸಂಕುಲಗಳೂ ಬರಬೇಕು.

• ನಾ. ಕಾರಂತ ಪೆರಾಜೆ

ಉಡುಪಿ ಜಿಲ್ಲೆಯ ಕಟಪಾಡಿಯಲ್ಲಿ ಹಿಂದೊಮ್ಮೆ ಕಾಗೆಯೊಂದು ಸುದ್ದಿ ಮಾಡಿತ್ತು! ಪ್ರಶಾಂತ ಎನ್ನುವವರು ಚಿಕ್ಕ ಕಾಗೆ (ವಾಯಸ) ಮರಿಯನ್ನು ಆರೈಕೆ ಮಾಡಿ ಬೆಳೆಸಿದರು. ಅಪರಕ್ರಿಯೆ ಪ್ರಕ್ರಿಯೆಯಲ್ಲಿ ಬಲಿಯ ಅನ್ನವನ್ನು ಕಾಗೆ ತಿಂದರೆ ಮೃತರಿಗೆ ಸದ್ಗತಿ ಎನ್ನುವುದು ನಂಬುಗೆ. ಸಾಕಿದ ಕಾಗೆಯನ್ನು ಅಂತಹ ಕ್ರಿಯೆಗಳಿಗೆ ಬಳಸಬಹುದೆನ್ನುವ ಅಥವಾ ಬಳಸುತ್ತಾರೆನ್ನುವ (ಸತ್ಯವೋ, ಸುಳ್ಳೋ) ಸುದ್ದಿಗಳು ನವಮಾಧ್ಯಮಗಳಲ್ಲಿ ಬಣ್ಣಬಣ್ಣವಾಗಿ ಹರಿದಾಡಿದವು. ಅನೇಕರಿಗೆ ಪ್ರಾಣಿ ದಯೆ ಉಕ್ಕಿತು. ಮಾಧ್ಯಮದ ಬೆಳಕು ಬಿತ್ತು. ಅರಣ್ಯ ಇಲಾಖೆ ಚುರುಕಾಯಿತು. ದೂರದ ಕಾಡೊಳಗೆ ಕಾಗೆಯನ್ನು ಬಿಡುವಲ್ಲಿಗೆ ಇಲಾಖೆಯ ನಿಟ್ಟುಸಿರು!

ಪ್ರಾಣಿ–ಪಕ್ಷಿಗಳ ಕುರಿತಾದ ಕಾಳಜಿ, ಪ್ರೀತಿ, ದಯೆ ಶ್ಲಾಘ್ಯ. ವರ್ತಮಾನದಲ್ಲಿ ಅನಿವಾರ್ಯ ಕೂಡ. ಆದರೆ, ಈ ದಯೆ ಆಯ್ದ ಸಂದರ್ಭಗಳಲ್ಲಿ ಮಾತ್ರ ಏಕೆ? ಅಥವಾ ನಮ್ಮ ಕಾಳಜಿ–ಚಿಂತನೆ ಸೀಮಿತ ಚೌಕಟ್ಟು ದಾಟುತ್ತಿಲ್ಲ ಏಕೆ?

ಒಂದು ಕಾಲಘಟ್ಟದಲ್ಲಿ ಕಾಗೆಗಳ ಸಂತತಿ ಎಷ್ಟಿತ್ತು? ಈಗ ಎಷ್ಟಿದೆ? ಕಾಗೆ ಒಂದೇ ಅಲ್ಲ, ಪಕ್ಷಿಸಂಕುಲಗಳ ಸಂಖ್ಯೆ ಗಣನೀಯ ಸಂಖ್ಯೆಯಲ್ಲಿ ಕುಸಿದಿದೆ. ಮನೆಯ ಸೂರಲ್ಲಿ ಗೂಡು ಕಟ್ಟಿ, ಮನೆ ಮಂದಿಯ ಮಧ್ಯೆ ಹಾರಾಡುತ್ತಿದ್ದ ಗುಬ್ಬಚ್ಚಿಗಳೂ ಕಾಣೆಯಾಗಿವೆ. ಮಳೆಗಾಲದಲ್ಲಿ ಕಪ್ಪೆಗಳ ಕೂಗು ಹಿಂದಿನಷ್ಟು ಕೇಳಿಸುತ್ತಿಲ್ಲ. ಯಾಕೆ ಹೀಗೆ ಎನ್ನುವ ಪ್ರಶ್ನೆಯನ್ನು ನಮಗೆ ನಾವೇ ಹಾಕಿ ಕೊಂಡಾಗ ನಿರುತ್ತರಿಗಳಾಗುತ್ತೇವೆ.



ಬದುಕಿನಲ್ಲಿ ಕೀಟನಾಶಕಗಳ ಬಳಕೆ ವ್ಯಾಪಕವಾಗಿದೆ; ತಿನ್ನುವ ಅನ್ನದಿಂದ ಶುರುವಾಗಿ ಕಳೆ ನಾಶಕದ ತನಕ. ಬೇಕೋ ಬೇಡವೋ ಅವ್ಯಾಹತವಾಗಿ ಸಿಂಪಡಣೆಯಾಗುವ ವಿಷದ ಪರಿಣಾಮ ಅನುಭವಿಸುತ್ತಿದ್ದೇವೆ. ಕೃಷಿಯಲ್ಲಿ ಕೀಟನಾಶಕಗಳ ಬಳಕೆ ಹೊಸತೇನಲ್ಲ. ಹಿಂದೆಲ್ಲಾ ಅನುಭವಿಗಳು ಡೋಸೇಜನ್ನು ನಿಗದಿ ಮಾಡುತ್ತಿದ್ದರು. ಈಗ ಹಾಗಲ್ಲವಲ್ಲ. ಡೋಸೇಜ್ ನಿರ್ಧಾರ ಮಾಡುವವರಿಗೆ ಪರಿಸರ, ಆರೋಗ್ಯದ ಕಾಳಜಿ ಹುಟ್ಟುವುದಿಲ್ಲ.

ಕೀಟನಾಶಕಗಳ ದುಷ್ಪರಿಣಾಮಗಳಿಂದ ಮನುಷ್ಯನೇ ಸಾಯುತ್ತಿದ್ದಾನೆ. ಆಸ್ಪತ್ರೆಗಳಿಗೆ ಹೋದರೆ ಒಂದು ಯಾಕೆ, ಸಹಸ್ರಾರು ಉದಾಹರಣೆಗಳು ಕಣ್ಣಮುಂದೆ ರಾಚುತ್ತವೆ. ಇನ್ನು ಪ್ರಾಣಿ–ಪಕ್ಷಿ, ಕೀಟಗಳ ಪಾಡು ಹೇಳಬೇಕಾಗಿಲ್ಲ. ಒಂದು ಕಾಗೆಗಾಗಿ ಮಿಡಿಯುವ ಮನಸ್ಸು, ಇಡೀ ಪಕ್ಷಿಸಂಕುಲ ನಾಶದಲ್ಲಿರುವಾಗ ಮೌನವಾಗಿರುತ್ತದೆ. 'ದಯೆ' ಎನ್ನುವುದು 'ಉಳಿವಿನ' ಹಿನ್ನೆಲೆಯಲ್ಲೂ ಯೋಚಿಸಬೇಕು. ಪರಿಸರವನ್ನು ವಿಷದಿಂದ ಮುಕ್ತಿಗೊಳಿಸುವ 'ದಯೆ' ನಮ್ಮೊಳಗೆ ಮೂಡಿದಾಗ 'ಪ್ರಾಣಿದಯೆ'ಗೆ ಗೌರವ.

ರಾಜಸ್ಥಾನದ ಲಪೋಡಿಯಾದಲ್ಲಿ ಪ್ರಾಣಿ–ಪಕ್ಷಿಗಳ 'ದಯೆ'ಯು ಬದುಕಿನೊಳಗೆ ಮಿಳಿತಗೊಂಡಿದೆ. ಹಕ್ಕಿಗಳಿಗೆ ಕಲ್ಲು ಎಸೆಯಬಾರದು. ಎಸೆದುದು ಗೊತ್ತಾದರೆ ಐನೂರು ರೂಪಾಯಿ ದಂಡ. ಹಕ್ಕಿಗಳ ಹೊಟ್ಟೆತಂಪಿಗಾಗಿ ಅಲ್ಲಲ್ಲಿ 'ಧಾನ್ಯ ಬ್ಯಾಂಕ್'ಗಳ ಸ್ಥಾಪನೆ. ಜಾನುವಾರು, ಹಕ್ಕಿಗಳಿಗೆ ಸುಲಭದಲ್ಲಿ ನೀರು ಸಿಗುವ ವ್ಯವಸ್ಥೆ. ಅಲ್ಲಿ ಮರ ಕಡಿಯುವುದು ಅಪರಾಧ. ಕಡಿದರೆ ಶಿಕ್ಷೆ ಖಚಿತ. ಒಂದು ಮರ ಕಡಿದರೆ ಎರಡು ಗಿಡ ನೆಟ್ಟು ಸಾಕುವ ಶಿಕ್ಷೆ. ಇವೆಲ್ಲಾ 'ದಯೆ'ಯ ಪ್ರಾಮಾಣಿಕ ಪುಟಗಳು.

ಇನ್ನೇನು ಗಣೇಶೋತ್ಸವ ಸಮೀಪಿಸುತ್ತಿದೆ. ಭರ್ಜರಿ ಆಚರಣೆಗೆ ಮನಸ್ಸು ಸಿದ್ಧವಾಗುತ್ತಿದೆ. ಕಳೆದ ವರ್ಷ ಧಾರವಾಡದ ಸ್ನೇಹಿತ ರೊಬ್ಬರು ಸಂದೇಶ ಕಳುಹಿಸಿದ್ದರು. ಅಲ್ಲಿ ಗಣೇಶೋತ್ಸವ ಮಂಟಪದ ಅಲಂಕಾರಕ್ಕೆ ಗೀಜಗನ ಗೂಡುಗಳಿಗೆ ಬೇಡಿಕೆ. ಕಾಡೆಲ್ಲಾ ಅಲೆದು ಗೂಡಿನಲ್ಲಿದ್ದ ಮರಿ ಗಳನ್ನು, ಮೊಟ್ಟೆಗಳನ್ನು ಹೊಸಕಿಹಾಕಿ ಗೂಡನ್ನು ಆಯುವ ಒಂದಷ್ಟು ಮಂದಿ ಇದ್ದಾರಂತೆ. ಹೀಗೆ ಸಂಗ್ರಹಿಸಿದ ಗೂಡುಗಳು ದುಬಾರಿ ಕ್ರಯಕ್ಕೆ ಮಾರಾಟವಾಗುತ್ತವೆ. ಸರಿ, ಇದನ್ನು ನಂಬುಗೆ ಅಂತ ಕರೆಯೋಣ. ಹೊಟ್ಟೆಪಾಡು ಎಂದು ಗ್ರಹಿಸೋಣ. ಆದರೆ, ನಾಶವಾದ ಮೊಟ್ಟೆಗಳು ಹಾಗೂ ಚಿಕ್ಕ ಮರಿಗಳಿಗೆ ದನಿ ಕೊಡುವವರು ಯಾರು? 'ದಯೆ' ಇಂತಹ ಸಂದರ್ಭದಲ್ಲಿ ದನಿಯೆತ್ತಬೇಕು.

ಮೂರ್ನಾಲ್ಕು ವರ್ಷಗಳ ಹಿಂದೆ ಗೋವಾಕ್ಕೆ ಹೋಗಿದ್ದೆ. ತಾಜ್ ಹೋಟೆಲಿನ ಸನಿಹದ ಆವರಣದಲ್ಲಿ ಸಹಸ್ರಾರು ಪಾರಿವಾಳಗಳು ಸ್ವಚ್ಛಂದವಾಗಿದ್ದವು. ಪ್ರವಾಸಿಗರಲ್ಲಿ ಅನೇಕರು ಕಾಳನ್ನು ಹಾಕುತ್ತಿದ್ದರು. ಇನ್ನೂ ಕೆಲವರು ದೊಡ್ಡ ಗದ್ದಲ ಎಬ್ಬಿಸಿ, ಪಾರಿವಾಳಗಳಿಗೆ ಭಯ ಹುಟ್ಟಿಸಿ, ಅವೆಲ್ಲಾ ಏಕಕಾಲಕ್ಕೆ ಭಯದಿಂದ ಹಾರುವುದನ್ನು ನೋಡಿ ಸಂತೋಷ ಪಡುತ್ತಿದ್ದರು. ಆಗ ಅಲ್ಲಿನ ರಕ್ಷಕ ಭಟ ಏನು ಹೇಳಿರಬಹುದು? 'ಇವರಿಗೆಲ್ಲಾ ಹೃದಯ ಇಲ್ಲ. ದಯೆಯಿಲ್ಲ, ದಾಕ್ಷಿಣ್ಯವಿಲ್ಲ. ಪಕ್ಷಿಪ್ರೀತಿ ಇಲ್ಲವೇ ಇಲ್ಲ'. ಹೌದು. ಮನುಷ್ಯರಾದ ನಮ್ಮಲ್ಲಿ ಮಾನವೀಯ ಸ್ಪಂದನಗಳೇ ಇಲ್ಲದಿದ್ದ ಮೇಲೆ ಪಕ್ಷಿಗಳ ಕುರಿತಾದ ದಯೆ ಎಲ್ಲಿಂದ ಬಂದೀತು?

ಸ್ವ–ಆಸಕ್ತಿಗಾಗಿ ಪಕ್ಷಿ, ನಾಯಿ, ಮೊಲ ಸಾಕುವವರಿದ್ದಾರೆ. ಮಾರಾಟ ಉದ್ದೇಶ ಅಲ್ಲೋ ಇಲ್ಲೋ ಬಿಟ್ಟರೆ ಮತ್ತೆಲ್ಲಾ ತಂತಮ್ಮ ಸಂತೋಷಕ್ಕಾಗಿ ಸಾಕುತ್ತಾರೆ. ಆಹಾರ, ನೀಡಿ ಸಲಹುತ್ತಾರೆ. ಮನೆಯ ಸದಸ್ಯರಂತೆ ಕಾಪಾಡುತ್ತಾರೆ. ಅವುಗಳು ಮೃತಪಟ್ಟಾಗ ರಕ್ತಸಂಬಂಧಿ ಮರಣಿಸಿದಂತೆ ಕಣ್ಣೀರು ಹಾಕುತ್ತಾರೆ. ಇವೆಲ್ಲಾ ಬಾಯಿಬಾರದ ಪ್ರಾಣಿ, ಪಕ್ಷಿಸಂಕುಲ ಮತ್ತು ಮನುಷ್ಯನ ಮಧ್ಯೆ ಅವ್ಯಕ್ತವಾಗಿ ಉಂಟಾಗುವ ದಯೆ, ಪ್ರೀತಿಯ ಅನುಸಂಧಾನ. 'ದಯೆ' ಎನ್ನುವುದು ಆಚರಣೆಯಲ್ಲಿ ಬಾರದೆ ಅದೊಂದು 'ಸ್ವ–ಸ್ಥಾಪನೆ'ಗಿರುವ ಟೂಲ್ ಆಗಬಾರದು.

ಒಂದು ಕಾಗೆಯ ಕುರಿತು ಹುಟ್ಟಿದ ಮರುಕ ಸ್ವಾಗತಾರ್ಹ; ಅದು ಪ್ರಾಣಿ–ಪಕ್ಷಿ, ಕೀಟ ಸಂಕುಲಗಳ ರಕ್ಷಣೆಗೂ ಹಬ್ಬಲಿ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಜಕಾರಣದ ಹಾದಿ...

ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕಿನ ಬೂಕನಕೆರೆ ಎಂಬ ಸಣ್ಣ ಹಳ್ಳಿಯಿಂದ ಸಾಮಾನ್ಯ ವ್ಯಕ್ತಿಯಾಗಿ ಬಂದ ಬಿ.ಎಸ್.ಯಡಿಯೂರಪ್ಪ ಅವರು ಕರ್ನಾಟಕದ ರಾಜಕೀಯದಲ್ಲಿ ತಮ್ಮದೇ ಆದ ಇತಿಹಾಸ ನಿರ್ಮಿಸಿದ ರಾಜಕಾರಣಿ. ಐದು ದಶಕಗಳ ರಾಜಕಾರಣದಲ್ಲಿ ಎರಡೂವರೆ ದಶಕ ವಿರೋಧ ಪಕ್ಷದಲ್ಲೇ ಇದ್ದು ಸರ್ಕಾರಗಳನ್ನು ಎಚ್ಚರಿಸುತ್ತಾ ಬಂದಿದ್ದ ಯಡಿಯೂರಪ್ಪ ಅವರ ರಾಜಕೀಯ ಪಯಣದ ಹೆಜ್ಜೆಗುರುತುಗಳು ಇಲ್ಲಿವೆ

- **1975:** ಜನಸಂಘದ ಶಿಕಾರಿಪುರ ತಾಲ್ಲೂಕು ಅಧ್ಯಕ್ಷರಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದರು.
- **1977:** ಶಿವಮೊಗ್ಗ ಜಿಲ್ಲೆ ಶಿಕಾರಿಪುರದ ಪುರಸಭಾ ಅಧ್ಯಕ್ಷರಾಗಿ ಪಟ್ಟಣದಲ್ಲಿ ಹಲವು ಅಭಿವೃದ್ಧಿ ಕಾರ್ಯಗಳು ಅನುಷ್ಠಾನ ಆಗುವಂತೆ ನೋಡಿಕೊಂಡರು.
- **1981-82:** ಯಡಿಯೂರಪ್ಪ ಅವರ ರಾಜಕೀಯ ಜೀವನದ ತಿರುವಿಗೆ ಕಾರಣವಾಗಿದ್ದು ಜೀತ ಪದ್ಧತಿಯ ವಿರುದ್ಧದ ಹೋರಾಟ. ಜೀತಮುಕ್ತರಿಗೆ ಪುನರ್ವಸತಿ ಕಲ್ಪಿಸಲು ಶಿಕಾರಿಪುರ ತಾಲ್ಲೂಕು ಪಂಚಾಯಿತಿ ಎದುರು ಸತತವಾಗಿ ಒಂದು ತಿಂಗಳು ಹಗಲು–ರಾತ್ರಿ ಧರಣಿ ನಡೆಸಿದರು. ಶಿಕಾರಿಪುರದಿಂದ ಶಿವಮೊಗ್ಗದ ತನಕ 2,000 ಮಂದಿ ಜೀತದಾಳುಗಳ ಜೊತೆ ಪಾದಯಾತ್ರೆ ಮಾಡಿದರು. ಈ ಹೋರಾಟದ ಮೂಲಕ ಜೀತದಾಳುಗಳಿಗೆ ಸೌಲಭ್ಯ ಕಲ್ಪಿಸಲು ಯಶಸ್ವಿಯಾದರು.
- **1983:** ಶಿಕಾರಿಪುರ ವಿಧಾನಸಭಾ ಕ್ಷೇತ್ರದಿಂದ ಕರ್ನಾಟಕ ವಿಧಾನಸಭೆಗೆ ಭಾರಿ ಮತಗಳ ಅಂತರದಿಂದ ಆಯ್ಕೆಯಾದದರು. ಅವರ ರಾಜಕೀಯ ಜೀವನದಲ್ಲಿ ಇದೊಂದು ಬಹುದೊಡ್ಡ ಮೈಲಿಗಲ್ಲು. ಆ ನಂತರ ಅವರು ತಿರುಗಿ ನೋಡಲಿಲ್ಲ. ಶಾಸಕರಾಗಿದ್ದಾಗಲೇ ಶಿವಮೊಗ್ಗ ಜಿಲ್ಲೆಯ ಬಿಜೆಪಿ ಅಧ್ಯಕ್ಷರಾಗಿಯೂ ಆಯ್ಕೆಯಾದರು.
- **1983, 1985, 1989, 1994, 2004, 2008, 2013, 2018:** ವಿಧಾನಸಭೆಗೆ ಆಯ್ಕೆ. ದೇವೇಗೌಡರು ಮತ್ತು ಜೆ.ಎಚ್. ಪಟೇಲ್ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿ ಅತ್ಯಂತ ಪ್ರಭಾವಿಯಾಗಿ ಕಾರ್ಯನಿರ್ವಹಿಸಿದರು.
- **1988:** ಬಿಜೆಪಿಯ ರಾಜ್ಯ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ. ಅಂದು ಪಕ್ಷಕ್ಕಾಗಿ ಪೂರ್ಣ ಸಮಯ ಕೊಡುತ್ತೇನೆಂದು ಪ್ರತಿಜ್ಞೆ ಮಾಡಿದ ಯಡಿಯೂರಪ್ಪ ಪಕ್ಷಕ್ಕಾಗಿ ದುಡಿದರು. ವಿಧಾನಸಭೆಯ ಹೊರಗೆ ಮತ್ತು ಒಳಗೆ ಜನಪರ ಹೋರಾಟಗಳನ್ನು ನಡೆಸಿ ರಾಜ್ಯದಲ್ಲಿ ಬಿಜೆಪಿಯನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸಿದರು. 1997ರಲ್ಲಿ ಹಾಗೂ 2016ರಲ್ಲೂ ಬಿಜೆಪಿ ರಾಜ್ಯ ಅಧ್ಯಕ್ಷರಾಗಿ ಕಾರ್ಯನಿರ್ವಹಿದರು.
- **1992:** ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಲಾಲ್‌ಕೃಷ್ಣ ಅಡ್ವಾಣಿ ಅವರು ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಅವರ ಅಪೇಕ್ಷೆಯಂತೆ ಕರ್ನಾಟಕದಲ್ಲಿ ಬಿಜೆಪಿಯನ್ನು ಶಕ್ತಿಶಾಲಿಯನ್ನಾಗಿ ಕಟ್ಟಿ ಬೆಳೆಸಿದ ಕೀರ್ತಿ ಯಡಿಯೂರಪ್ಪ ಅವರದು.
- **2012:** ಪಕ್ಷ ತನ್ನ ಪರವಾಗಿ ನಿಲ್ಲಲಿಲ್ಲ ಎಂದು ಸಿಟ್ಟಿಗೆದ್ದ ಅವರು ಪಕ್ಷ ತೊರೆದು ಕೆಜೆಪಿ ಕಟ್ಟಿದರು.
- **2014:** ಕೆಜೆಪಿಯನ್ನು ಬಿಜೆಪಿಯೊಂದಿಗೆ ವಿಲೀನಗೊಳಿಸಿ ಮತ್ತೆ ಪಕ್ಷದಲ್ಲಿ ಸಕ್ರಿಯರಾದರು.
- **2014:** ಲೋಕಸಭಾ ಚುನಾವಣೆಗೆ ಶಿವಮೊಗ್ಗ ಕ್ಷೇತ್ರದಿಂದ ಸ್ಪರ್ಧಿಸಿ ಮೂರು ಲಕ್ಷಕ್ಕೂ ಅಧಿಕ ಮತಗಳ ಅಂತರದಿಂದ ಗೆಲುವು ಸಾಧಿಸಿದ್ದರು. ಕೇಂದ್ರದಲ್ಲಿ ಕೃಷಿ ಸಚಿವರಾಗಬೇಕೆಂಬ ಅವರ ಆಸೆ ಕೈಗೂಡಲಿಲ್ಲ.
- **2018:** ರಾಜ್ಯ ರಾಜಕಾರಣಕ್ಕೆ ಮರಳಿದರು.

ಅನಂತಕುಮಾರ್ ಅವರೊಂದಿಗೆ. ವಿ.ಎಸ್.ಆಚಾರ್ಯ ಅವರು ಚಿತ್ರದಲ್ಲಿದ್ದಾರೆ

ಬಿಎಸ್‌ವೈ ಹೆಜ್ಜೆಗುರುತು

• ವೈ.ಗ. ಜಗದೀಶ್

‘ಕೊಟ್ಟ ಕುದುರೆಯ ಏರದವ ವೀರನೂ ಅಲ್ಲ, ಧೀರನೂ ಅಲ್ಲ, ಶೂರನೂ ಅಲ್ಲ’ ಎಂಬ ಮಾತನ್ನು ಬಿ.ಎಸ್. ಯಡಿಯೂರಪ್ಪ ಅವರು ಪದೇ ಪದೇ ಹೇಳುತ್ತಿದ್ದರು. ಅವಿರತ ಹೋರಾಟ, ಸಂಘಟನಾ ಚಾತುರ್ಯ, ಜಾತಿ ಬಲ ಎಲ್ಲವೂ ಇದ್ದರೂ ಅವರಿಗೆ ಯಾರೂ ಕರೆದು ಅಧಿಕಾರ ಕೊಟ್ಟಿದ್ದಿಲ್ಲ. ಬಿಡುಬೀಸಾಗಿ ಹೋಗುತ್ತಿದ್ದ ಕುದುರೆಯ ಮೂಗುದಾರ ಹಿಡಿದು, ಅದನ್ನು ಬಗ್ಗಿಸಿ ಮೇಲೇರಿ ಕುಳಿತಿದ್ದೇ ಅವರ ಕಾರ್ಯಶೈಲಿ. ಎರಡು ಬಾರಿ ವಾರದ ಅವಧಿ, ಎರಡು ಬಾರಿ ಅಲ್ಪಾವಧಿ ಮುಖ್ಯಮಂತ್ರಿಯಾದರೂ ಅದು ತಮ್ಮ ಛಲ, ಹಟ ಹಾಗೂ ತಂತ್ರಗಾರಿಕೆಯ ಫಲವಷ್ಟೆ. ಅವರೇ ಯಾವಾಗಲೂ ಹೇಳುತ್ತಿದ್ದಂತೆ ಅಧಿಕಾರ ಅವರಿಗೆ ‘ದೇವ ದುರ್ಲಭ’.



ವಾಜಪೇಯಿ ಅವರೊಂದಿಗೆ

ಚುನಾವಣಾ ರಾಜಕಾರಣದಲ್ಲಿ 50 ವರ್ಷ ಪೂರೈಸುತ್ತಿರುವ ಹೊತ್ತಿನೊಳಗೆ ‘ಬಿಎಸ್‌ವೈ ಅಭಿಮಾನೋತ್ಸವ’ ನಡೆಯುತ್ತಿದೆ. ಇಷ್ಟು ಸುದೀರ್ಘ ಅವಧಿ ಸಲೀಸಿನದ್ದಾಗಿರಲಿಲ್ಲ. ಕಲ್ಲು ಮುಳ್ಳು, ತಡೆಗೋಡೆಗಳ ದುರ್ಗಮ ದಾರಿಯಲ್ಲಿ ಪಯಣಿಸಿದ ಅವರು, ತಾವಂದುಕೊಂಡಂತೆ ಅಧಿಕೃತವಾಗಿ ಎರಡು ಬಾರಿ ವಿಧಾನಸೌಧದ ಮೂರನೇ ಮಹಡಿಯಲ್ಲಿ ಆಸೀನರಾಗಿ ಅಧಿಕಾರವನ್ನೂ ಅನುಭವಿಸಿದರು. ಬೀಳುಗಳನ್ನು ಬಿಳಲುಗಳಾಗಿ ಬಳಸಿಕೊಂಡು ಅಧಿಕಾರದ ಉನ್ನತ ಸ್ತರವನ್ನು ಏರಿದರು. ಅಭಿವೃದ್ಧಿಪರ ಧೋರಣೆ, ಜನಪರ ಕಾಳಜಿ ಆರಂಭದ ದಿನಗಳಿಂದಲೂ ಅವರ ಜತೆಗೂಡಿ ಬಂದಿವೆ.

1976ರಲ್ಲಿ ಶಿಕಾರಿಪುರ ಪುರಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದಿದ್ದರು. ಆ ಕಾಲದಲ್ಲಿ ಚುನಾವಣೆ ಪ್ರಚಾರಕ್ಕೆ ಗೋಡೆಗಳ ಮೇಲೆ ಬರೆಯುವ ಪರಿಪಾಟವಿತ್ತು. ಚುನಾವಣೆ ಪ್ರಚಾರಕ್ಕೆ ಗೋಡೆಗಳನ್ನು ಬಳಸಬಾರದು ಎಂದು ತಾಕೀತು ಮಾಡಿದ್ದ ಅವರು, ಪಟ್ಟಣದ ಸೌಂದರ್ಯ ಹಾಳಾಗದಂತೆ ಎಚ್ಚರಿಕೆ ವಹಿಸಿದ್ದರು. ಅಂದಿನ ಕಾಲದಲ್ಲಿ ಸಣ್ಣಪುಟ್ಟ ಪಟ್ಟಣಗಳಲ್ಲಿ ಬೀದಿ ದೀಪಕ್ಕೆ ಬಲ್ಬ್ ಬಳಸುತ್ತಿದ್ದರು. ಅವರು ಮೊದಲ ಬಾರಿ ಸದಸ್ಯರಾದಾಗ ಶಿಕಾರಿಪುರ ಪಟ್ಟಣದ ಬೀದಿಗಳಿಗೆ ಟ್ಯೂಬ್ ಲೈಟ್ ಬಂದವು. ಆಗ ಮನೆಗೊಂದು ನಲ್ಲಿ ನೀರಿನ ಸಂಪರ್ಕ ಎಂಬುದು ಕನಸಿನ ಮಾತಾಗಿತ್ತು. ಬೀದಿಗೊಂದು ಇದ್ದ ನಲ್ಲಿಯಿಂದಲೋ ಅಥವಾ ಬಾವಿಯಿಂದಲೋ ನೀರು ತರಬೇಕಿತ್ತು. ಮನೆಮನೆಗೂ ಆಗಲೇ ಅವರು ನಲ್ಲಿ ಹಾಕಿಸಿದ್ದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ

ಚುನಾವಣೆ ಎಂಬುದು ಮಹಿಳೆಯರಿಗೆ ಗಗನ ಕುಸುಮವಾಗಿತ್ತು. ಅವರ ಪತ್ನಿ ಮೈತ್ರಾದೇವಿ ಅವರು ಒಂದನೇ ಡಿವಿಜನ್‌ನಿಂದ ಗೆದ್ದು ಸದಸ್ಯರಾಗಿದ್ದರು. ಅವಧಿ ಮುಗಿದ ಬಳಿಕ ನಡೆದ ಚುನಾವಣೆ ವೇಳೆ ಅಲ್ಲಿ ನಿಲ್ಲುವುದು ಬೇಡ, ತಮ್ಮ ಎದುರಾಳಿಗಳು ಪ್ರಭಾವಿಗಳಾಗಿರುವ ಐದನೇ ಡಿವಿಜನ್‌ನಲ್ಲಿ ತಮ್ಮ ಪತ್ನಿಯನ್ನು ನಿಲ್ಲಿಸಿದ್ದರು. ಒಂದನೇ ಡಿವಿಜನ್‌ನಲ್ಲಿ ನಿಂತಿದ್ದರೆ ಸಲೀಲಾಗಿ ಗೆಲ್ಲಬಹುದಾದ ಅವಕಾಶವನ್ನು ಕೈಬಿಟ್ಟು, ಕ್ಷೇತ್ರ ಬದಲಿಸಿದ್ದರು. ಅಲ್ಲಿ ಗೆಲ್ಲಲಿಲ್ಲ. ಹೀಗೆ, ಸವಾಲು ಸ್ವೀಕರಿಸುವ ಗುಣ ಅವರಲ್ಲಿ ಮೈಗೂಡಿತ್ತು.

‘1994ರ ಚುನಾವಣೆ ಪೂರ್ವದಲ್ಲಿ ಪಕ್ಷ ಸಂಘಟನೆಗೆ ಹಣವೇ ಇರಲಿಲ್ಲ. ಮನೆಗಳಲ್ಲಿ ಇರುವ ಸ್ಥಿರ ದೂರವಾಣಿ ಸಂಖ್ಯೆಯ ವಿವರಗಳಿರುವ ಪುಸ್ತಕವನ್ನು ಟೆಲಿಕಾಂ ಇಲಾಖೆ ಮುದ್ರಿಸುತ್ತಿತ್ತು. ಅದನ್ನಿಟ್ಟುಕೊಂಡು ಒಂದೇ ಹೆಸರಿನಲ್ಲಿ ಆರೇಳು ಫೋನ್‌ಗಳಿರುವುದನ್ನು ಪತ್ತೆ ಮಾಡುತ್ತಿದ್ದೆವು. ಒಂದು ಫೋನ್ ಇಟ್ಟುಕೊಳ್ಳುವುದೇ ಶ್ರೀಮಂತಿಕೆಯ ಸೂಚಕವಾಗಿದ್ದಾಗ, ಅಷ್ಟು ಫೋನ್ ಸಂಪರ್ಕಗಳಿದ್ದವರು ಶ್ರೀಮಂತರು ಎಂದು ಭಾವಿಸಿ ಅವರನ್ನು ಸಂಪರ್ಕಿಸುತ್ತಿದ್ದೆವು. ಯಡಿಯೂರಪ್ಪ, ಅನಂತಕುಮಾರ್ ಅವರನ್ನು ಕರೆದುಕೊಂಡು ಹೋಗಿ ನೆರವು ಕೇಳುತ್ತಿದ್ದೆವು. ಒಂದಿಷ್ಟು ಹಣವನ್ನು ಕೆಲವರು ಕೊಟ್ಟಿದ್ದುಂಟು. ಆ ಹೊತ್ತಿಗೆ ಬಿಜೆಪಿಗೆ ಸೇರಿದ್ದ ಪ್ರಭಾವಿ ನಾಯಕರೊಬ್ಬರು ತಮಗಿರುವ ಸಂಪರ್ಕ ಬಳಸಿ, ನಾವು ಹೋಗುವ ಮೊದಲೇ ಅಂತಹ ಶ್ರೀಮಂತರನ್ನು ಭೇಟಿಯಾಗಿ ಹಣ ಪಡೆದಿರುತ್ತಿದ್ದರು. ನಿಮ್ಮ ಪಕ್ಷಕ್ಕೆ ಹಣ ಬೇಕೆಂದು ಅವರು ತೆಗೆದುಕೊಂಡು ಹೋದರಲ್ಲ ಎಂದು ತಾವು ಭೇಟಿಯಾಗಲು ಹೋದವರು ಹೇಳುತ್ತಿದ್ದರು. ಆದರೆ, ಅದು ಪಕ್ಷಕ್ಕೆ ಬರುತ್ತಿರಲಿಲ್ಲ. ನಮ್ಮ ಪಕ್ಷಕ್ಕೆ ಆಸ್ತಿ ಆಗುತ್ತಾನೆ ಎಂದು ಕರೆತಂದರೆ ನಮಗೆ ಬರಬೇಕಾದ ಹಣವನ್ನೆಲ್ಲ ಆತ ಪಡೆಯುತ್ತಿದ್ದಾನಲ್ಲ ಎಂದು ಯಡಿಯೂರಪ್ಪ ಅಕ್ಷರಶಃ ಕಣ್ಣೀರಿಟ್ಟಿದ್ದರು’ ಎಂದು ನೆನಪು ಮಾಡಿಕೊಳ್ಳುತ್ತಾರೆ ಅವರ ಒಡನಾಡಿಯಾಗಿದ್ದ ಎಂ.ಎಚ್. ಶ್ರೀಧರ.

ಪಕ್ಷ ಸಂಘಟನೆಯ ಹೊಸ ಹೊಳಹುಗಳು ಯಡಿಯೂರಪ್ಪ ಅವರಿಗೆ ಹೊಳೆಯುತ್ತಿದ್ದವು. ಧರಣಿ, ಪಾದಯಾತ್ರೆ, ಚಳವಳಿ ಎಂದು ದಿಢೀರ್ ಘೋಷಿಸಿಬಿಡುತ್ತಿದ್ದರು. ಆದರೆ ಅದನ್ನು ಕಾರ್ಯರೂಪಕ್ಕೆ ಇಳಿಸುವ ದಾರಿಯ ಬಗ್ಗೆ ಅಷ್ಟು ಗಮನ ಹರಿಸುತ್ತಿರಲಿಲ್ಲ. ಈ ವಿಷಯದಲ್ಲಿ ಎಚ್.ಎನ್. ಅನಂತಕುಮಾರ್ ಒಂದು ಹೆಜ್ಜೆ ಮುಂದಿರುತ್ತಿದ್ದರು. ಈಗ ಬಿಜೆಪಿಯಲ್ಲಿರುವ ಎರಡನೇ ತಲೆಮಾರಿನ ಯುವ ಪಡೆಯನ್ನು ಮುಂದಿಟ್ಟು, ಹೋರಾಟಕ್ಕೆ ಬೇಕಾದ ತಳಹದಿಯನ್ನು ಅನಂತಕುಮಾರ್ ರೂಪಿಸುತ್ತಿದ್ದರು. ಇಬ್ಬರೂ ಕೂಡಿ ಆರಂಭದ ದಿನಗಳಲ್ಲಿ ಪಕ್ಷವನ್ನು ಹೀಗೆ ತಳಮಟ್ಟದಲ್ಲಿ ಸಂಘಟಿಸಿದರು.

ಬ್ಯಾನರ್, ಬಂಟಿಂಗ್ಸ್, ಬಾವುಟಗಳ ಆಕರ್ಷಣೆಗಿಂತ ‘ಜನಾಲಂಕಾರ’ ಬೇಕು ಎಂಬುದು ಯಡಿಯೂರಪ್ಪನವರ ದೃಢ ನಿಲುವಾಗಿತ್ತು. ಜನರನ್ನು ಸೇರಿಸುವ ಸಾಮರ್ಥ್ಯ ಇರುವವರು ಜತೆಗಿರಬೇಕು ಎಂದು ಅವರು ಬಯಸುತ್ತಿದ್ದರು. 2007ರಲ್ಲಿ ಜೆಡಿಎಸ್–ಬಿಜೆಪಿಯ 20:20 ಸರ್ಕಾರ ಬರುವವರೆಗೂ ಅವರ ಜತೆಗಿದ್ದವರೆಲ್ಲ ಅಂತಹ ನಾಯಕರೇ ಆಗಿದ್ದರು. ಬಳಿಕ ಆಗಿದ್ದು ಬೇರೆ. ಹಣ ಬಲ ಇರುವವರು, ಕುಟುಂಬಸ್ಥರು ಜತೆಯಾದರು. ಬಳಿಕ ಚಿತ್ರಣವೇ ಬದಲಾಯಿತು.

ಹೋರಾಟದ ಬೀದಿ: ಬಿಜೆಪಿ ಎಂದರೆ ಬಿಎಸ್‌ವೈ, ಬಿಎಸ್‌ವೈ ಎಂದರೆ ಬಿಜೆಪಿ ಎಂಬ ಅನ್ವರ್ಥ ಪದಗಳು ಚಾಲ್ತಿಯಾಗುವಷ್ಟು ಪಕ್ಷಕ್ಕೆ ದುಡಿದವರು. ಜೀತ ವಿಮುಕ್ತಿ, ನೀರಾವರಿಗಾಗಿ ಹೋರಾಟ, ಬಗರ್‌ಹುಕುಂ ರೈತರ ಪರ ಪಾದಯಾತ್ರೆ, ಮೆಕ್ಕೆಜೋಳ, ಹತ್ತಿಗೆ ಬೆಲೆ ಕುಸಿದಾಗ ಧರಣಿ, ಬಿತ್ತನೆ ಬೀಜ, ಗೊಬ್ಬರಕ್ಕಾಗಿ ಚಳವಳಿ, ಕೂಲಿಗಾಗಿ ಕಾಳು (ಈಗಿನ ನರೇಗಾ) ಯೋಜನೆಯಡಿ ಅಕ್ರಮದ ಕುರಿತು ಅವಿರತ ಹೋರಾಟವನ್ನು ನಡೆಸಿದರು. ಈಗಿನ ಬಿಜೆಪಿ ನಡೆಸುತ್ತಿರುವಂತೆ ಧಾರ್ಮಿಕ ಭಾವನೆಗಳನ್ನು ಪ್ರಚೋದಿಸುವ ಹೋರಾಟವನ್ನು ಯಡಿಯೂರಪ್ಪ ಮುನ್ನಡೆಸಿದವರಲ್ಲ. ಅದಕ್ಕೆ ಆಸ್ಪದವೂ ಇರಲಿಲ್ಲ. ಹೀಗಾಗಿ, ಎಲ್ಲ ಜಿಲ್ಲೆಗಳಲ್ಲಿ ನಿಧಾನವಾಗಿ ಬಿಜೆಪಿ ನೆಲೆಯೂರಲು ಆರಂಭಿಸಿತು.

ವಿರೋಧ ಪಕ್ಷದ ನಾಯಕರಾಗಿದ್ದಾಗ ಸದನದಲ್ಲಿ ಮಾತಿಗೆ ನಿಂತು ತಮ್ಮ ಬಿಳಿ ಬಣ್ಣದ ಸಫಾರಿಯ ಎರಡು ಜೇಬುಗಳಿಂದ ಒಂದೊಂದೇ ಚೀಟಿಯನ್ನು ತೆಗೆದು ಅವರು ಸರ್ಕಾರದ ಬೆವರಿಳಿಸುತ್ತಿದ್ದರು.

ಅಧಿಕಾರದ ಅಂಚು: 2004ರ ಚುನಾವಣೆ ವೇಳೆಗೆ ಎಸ್. ಬಂಗಾರಪ್ಪ ಅವರು ಬಿಜೆಪಿ ಸೇರಿದ್ದು ಆ ಪಕ್ಷದ ಬಲವನ್ನು ಹೆಚ್ಚಿಸಿತು. ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬಂತು. ಆ ಸರ್ಕಾರದಲ್ಲಿ ಜೆಡಿಎಸ್‌ನೊಳಗಿನ ಆಂತರಿಕ ಸಮರ ತೀವ್ರಗೊಂಡು, ಸಿಡಿದೆದ್ದ ಎಚ್.ಡಿ.ಕುಮಾರಸ್ವಾಮಿ ತಮ್ಮ ಬೆಂಬಲಿಗರ ಜತೆ ಧರ್ಮಸಿಂಗ್ ನೇತೃತ್ವದ ಕಾಂಗ್ರೆಸ್‌ನ ಮೈತ್ರಿ ಸರ್ಕಾರದಿಂದ ಹೊರಬಂದರು. ಬಳಿಕ ಜೆಡಿಎಸ್–ಬಿಜೆಪಿ ಕೂಡಿಕೆ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ಅಲ್ಲಿಯವರೆಗೆ ಅಧಿಕಾರದ ರುಚಿ ನೋಡದೇ ಇದ್ದ ಯಡಿಯೂರಪ್ಪ ಮತ್ತು ಬಿಜೆಪಿಯ ಶಾಸಕರು ಮೊದಲ ಬಾರಿಗೆ ಸರ್ಕಾರಿ ಸೌಲತ್ತುಗಳ ಸೊಬಗು ನೋಡಿದರು. ಯಡಿಯೂರಪ್ಪ ಉಪಮುಖ್ಯಮಂತ್ರಿಯೂ ಆದರು. ಇದು ಅವರ ಮೊದಲ ಮಜಲು.

ಸಿದ್ಧಗಂಗಾ ಮಠದ ಶಿವಕುಮಾರ ಶ್ರೀಗಳ ಆಶೀರ್ವಾದ ಪಡೆದ ಸಂದರ್ಭ

20:20 ಅವಧಿ ಮೈತ್ರಿಯನ್ನು ಮುರಿದ ಕುಮಾರಸ್ವಾಮಿ, ಅಧಿಕಾರವನ್ನು ಬಿಟ್ಟುಕೊಡಲಿಲ್ಲ. ವಿಶ್ವಾಸದ್ರೋಹ ಎಂಬ ಘೋಷಣೆ ಮುಂದಿಟ್ಟುಕೊಂಡು, ಅನುಕಂಪದ ಅಲೆ ಗಿಟ್ಟಿಸಿದ ಯಡಿಯೂರಪ್ಪ ಆ ಕಾಲದಲ್ಲಿ ವೀರಶೈವ–ಲಿಂಗಾಯತ ನಾಯಕರಾಗಿ ಹೊರಹೊಮ್ಮಿದರು. 2008ರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಶಾಸಕರನ್ನು ಗೆಲ್ಲಿಸಲು ಸಾಧ್ಯವಾಯಿತಾದರೂ, ಅಧಿಕಾರ ಹಿಡಿಯಲು ಬೇಕಾದ ಸರಳ ಬಹುಮತ ಸಿಗಲಿಲ್ಲ. ಆಗ, ಐವರು ಪಕ್ಷೇತರ ಸದಸ್ಯರ ಬೆಂಬಲದೊಂದಿಗೆ ಯಡಿಯೂರಪ್ಪ ಮುಖ್ಯಮಂತ್ರಿಯಾದರು. ಆದರೆ, ಚುನಾವಣೆ ಪೂರ್ವದಲ್ಲಿ ಭಾರಿ ಪ್ರಮಾಣದಲ್ಲಿ ಹೂಡಿಕೆ ಮಾಡಿದ್ದ ಕೆಲವರು ಅಡ್ಡಗಾಲು ಹಾಕುತ್ತಲೇ ಬಂದರು. ಪಕ್ಷೇತರರನ್ನು ಸಹಿಸಿಕೊಳ್ಳುವುದು ಸುಲಭವಾಗಿರಲಿಲ್ಲ. ತಮ್ಮ ಅಧಿಕಾರ ಸ್ಥಿರಗೊಳಿಸಿಕೊಳ್ಳಲು ಆ ಕಾಲದಲ್ಲಿ ಯಡಿಯೂರಪ್ಪ ‘ಆಪರೇಷನ್ ಕಮಲ’ ಎಂಬ ಪ್ರಜಾಪ್ರಭುತ್ವಕ್ಕೆ ಮಾರಕವಾದ ಅಸ್ತ್ರ ಬಳಸಿ, ಯಶಸ್ವಿಯೂ ಆದರು.

ಸಂಭ್ರಮ ಪೂರ್ಣಾವಧಿಗೆ ಉಳಿಯಲಿಲ್ಲ. ಚೆಕ್‌ನಲ್ಲಿ ಲಂಚ ಪಡೆದ ಆರೋಪಕ್ಕೆ ಯಡಿಯೂರಪ್ಪ ಗುರಿಯಾದರು. ಲೋಕಾಯುಕ್ತ ತನಿಖಾ ವರದಿ, ರಾಜಕೀಯದಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಸಿತು. ಅದನ್ನೇ ಮುಂದು ಮಾಡಿದ ಬಿಜೆಪಿ ವರಿಷ್ಠರು, ಅಧಿಕಾರದಿಂದ ಇಳಿಸಿದರು. ಬಳಿಕ, ಜೈಲಿಗೂ ಹೋಗಬೇಕಾಯಿತು.

ಆದರೂ ಯಡಿಯೂರಪ್ಪ ಛಲ ಬಿಡಲಿಲ್ಲ. ಕೆಜೆಪಿ ಕಟ್ಟಿ, ಮತ್ತೊಂದು ಸಾಹಸಕ್ಕೆ ಮುಂದಾದರೂ, ಅದು ಫಲ ಕೊಡಲಿಲ್ಲ. 2014 ಲೋಕಸಭೆ ಚುನಾವಣೆ ಹೊತ್ತಿಗೆ ಬಿಜೆಪಿಗೆ ಮರಳಿದರು. 2018ರಲ್ಲಿ ಅಧಿಕಾರಕ್ಕೆ ಬರಲೇಬೇಕೆಂಬ ಹಟತೊಟ್ಟು ರಾಜ್ಯವಿಡೀ ಸುತ್ತಾಡಿದರು. ಅಷ್ಟೊತ್ತಿಗಾಗಲೇ ಲಿಂಗಾಯತರ ಅನಭಿಷಕ್ತ ನಾಯಕ ಎಂಬ ಬಿರುದು ಪಡೆದಿದ್ದರೂ ಬಹುಮತ ದಕ್ಕಲಿಲ್ಲ. 2008ರಲ್ಲಿ ಮಾಡಿದಂತೆ ಸಂಖ್ಯಾಬಲ ಕೂಡಿಸುವ ವಿಶ್ವಾಸದೊಂದಿಗೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿಯೇ ಬಿಟ್ಟರು. ಬಹುಮತ ಸಾಬೀತುಪಡಿಸಲಾಗದೇ, ಎರಡೇ ದಿನಕ್ಕೆ ರಾಜೀನಾಮೆ ನೀಡಿದರು.

ಸಮಾವೇಶವೊಂದರಲ್ಲಿ ಕಿಕ್ಕಿರಿದು ಸೇರಿದ್ದ ಜನಸ್ತೋಮವನ್ನು ಉದ್ದೇಶಿಸಿ ಮಾತು

ಹೇಗಾದರೂ ಮಾಡಿ ಮುಖ್ಯಮಂತ್ರಿ ಪಟ್ಟ ಹಿಡಿದೇ ತೀರುವೆ ಎಂಬ ಛಲಕ್ಕೆ ನಿಂತರು. ಅಸಮಾಧಾನಿತರಾಗಿದ್ದ ಕಾಂಗ್ರೆಸ್, ಜೆಡಿಎಸ್ ಶಾಸಕರನ್ನು ‘ಆಪರೇಷನ್ ಕಮಲ’ದ ಬಲೆಗೆ ಕೆಡವಿದ ಯಡಿಯೂರಪ್ಪ, ಮತ್ತೆ ಮುಖ್ಯಮಂತ್ರಿ ಗದ್ದುಗೆಗೆ ಏರಿದರು. ಸಂಪುಟ ವಿಸ್ತರಣೆಗೆ ಅನುಮತಿಯನ್ನೇ ಕೊಡದ ಬಿಜೆಪಿ ವರಿಷ್ಠರು ತಿಂಗಳಿಗೂ ಹೆಚ್ಚು ಸತಾಯಿಸಿದರು. ಆ ವೇಳೆ, ಮಳೆ ಹಾಗೂ ಪ್ರವಾಹ ಕರ್ನಾಟಕವನ್ನು ಕಂಗೆಡಿಸಿದಾಗ ಏಕಾಂಗಿಯಾಗಿ ರಾಜ್ಯ ಸುತ್ತಿ, ಸಂತ್ರಸ್ತರ ಅಳಲು ಆಲಿಸಿದರು. ಅವಧಿ ಪೂರ್ಣಗೊಳಿಸಲು ಬಿಜೆಪಿ ವರಿಷ್ಠರು ಬಿಡಲಿಲ್ಲ. ಎರಡು ವರ್ಷವಾಗುತ್ತಲೇ ಅಧಿಕಾರವನ್ನು ಬಿಟ್ಟು ಕೆಳಗೆ ಇಳಿಯಲೇಬೇಕಾಯಿತು. ಇದು ಅವರ ರಾಜಕೀಯ ನಡಿಗೆಯ ಕತೆ–ವ್ಯಥೆ.

ಸುಧಾರಣೆಯ ಹಾದಿ: ಯಡಿಯೂರಪ್ಪ ಎಂದೂ ಅಳುಕಿದವರಲ್ಲ. ಕರ್ನಾಟಕದಲ್ಲಿ ತಾವು ಹೇಳಿದ್ದೇ ನಡೆಯಬೇಕೆಂದು ಪ್ರತಿಪಾದಿಸಿ, ಅದನ್ನು ಸಾಧಿಸಿದವರು. ಎರಡನೇ ಅವಧಿಯಲ್ಲಿ ಮುಖ್ಯ ಮಂತ್ರಿಯಾಗಿದ್ದಾಗ ಕರ್ನಾಟಕದಲ್ಲಿ ಪ್ರವಾಹ ಎದುರಾಯಿತು. ಅದಕ್ಕೆ, ಕೇಂದ್ರದಿಂದ ಪರಿಹಾರ ಸಿಕ್ಕಿರಲಿಲ್ಲ. ಬಳ್ಳಾರಿಗೆ ಬಂದಿದ್ದ ಪ್ರಧಾನಿ ನರೇಂದ್ರ ಮೋದಿ ಅವರ ಎದುರೇ ಬಹಿರಂಗ ವೇದಿಕೆಯಲ್ಲಿ ರಾಜ್ಯಕ್ಕೆ ಅನ್ಯಾಯವಾಗಿದೆ ಎಂದು ಗುಡುಗಿದ್ದರು.



ವಿಧಾನಸಭೆಯಲ್ಲಿ ಮಾತು

ಯಡಿಯೂರಪ್ಪ ಕೋಮುವಾದಿ ರಾಜಕಾರಣ ಮಾಡಿದವರಲ್ಲ. ತಮ್ಮ ಬಜೆಟ್‌ನಲ್ಲಿ ಮುಸ್ಲಿಂ, ಕ್ರೈಸ್ತ ಸಮುದಾಯಕ್ಕೆ ಸಾಕಷ್ಟು ಅನುದಾನ, ಯೋಜನೆಗಳನ್ನೂ ಘೋಷಿಸಿದ್ದರು. ಕೋವಿಡ್ ಮಾರಿ ಆವರಿಸಿದಾಗ, ತಬ್ಲೀಗಿ ಜಮಾತ್ ಎಂಬ ಮುಸ್ಲಿಂ ಸಮುದಾಯದ ಸಂಘಟನೆ ದೆಹಲಿಯಲ್ಲಿ ಹಮ್ಮಿಕೊಂಡಿದ್ದ ಶಿಬಿರಕ್ಕೆ ಹೋಗಿದ್ದ ಕೆಲವರು ಕರ್ನಾಟಕಕ್ಕೆ ವಾಪಸ್ ಬಂದರು. ಅವರಲ್ಲಿ ಕೋವಿಡ್ ಇರುವುದು ಪತ್ತೆಯಾಗಿತ್ತು. ‘ಮುಸ್ಲಿಮರು ಕೋವಿಡ್ ಹರಡುತ್ತಿದ್ದಾರೆ’ ಎಂದು ಬಿಜೆಪಿಯ ಕೆಲವು ನಾಯಕರು ದೂರಿದ್ದರು. ಇದರಿಂದ ಸಿಟ್ಟಿಗೆದ್ದ ಯಡಿಯೂರಪ್ಪ, ಯಾರೊಬ್ಬರೂ ಇಂತಹ ಮಾತನ್ನು ಆಡಕೂಡದು ಎಂದು ಎಲ್ಲರ ಬಾಯಿ ಮುಚ್ಚಿಸಿದ್ದರು.

ಕುಮಾರಸ್ವಾಮಿ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾಗಿ ಹಣಕಾಸು ಖಾತೆ ಹೊಂದಿದ್ದ ಅವರು, ಸಾರಾಯಿ ಹಾಗೂ ಲಾಟರಿಯನ್ನು ಸಂಪೂರ್ಣ ನಿಷೇಧಿಸಿದರು. ರೈತರ ಸಾಲಮನ್ನಾ ಕೂಡ ಮಾಡಿಸಿದರು.

ಯಡಿಯೂರಪ್ಪನವರು ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದಾಗಲೇ, ಜೈವಿಕ ಇಂಧನ ಅಭಿವೃದ್ಧಿ ಮಂಡಳಿ, ಸಾವಯವ ಕೃಷಿ ಮಿಷನ್ ಸ್ಥಾಪಿಸಿದ್ದರು. ಪಶ್ಚಿಮಘಟ್ಟದ ಅಭಿವೃದ್ಧಿಗೆ ಕಾರ್ಯಪಡೆಯನ್ನು ರಚಿಸಿದ್ದರು. ಈಗ ಕೇಂದ್ರದ ನೀತಿಯ ಆಯೋಗದ ಸದಸ್ಯರಾಗಿರುವ ಪ್ರೊ. ಕೆ.ವಿ. ರಾಜು ಅವರನ್ನು ಆಗಲೇ ಆರ್ಥಿಕ ಸಲಹೆಗಾರರನ್ನಾಗಿ ನೇಮಿಸಿಕೊಂಡಿದ್ದರು. ಯಡಿಯೂರಪ್ಪನವರದ್ದು ಪ್ರಶ್ನಾತೀತ ಕನ್ನಡ ಪ್ರೇಮ. ತಂತ್ರಾಂಶ ಅಭಿವೃದ್ಧಿಗೆ ಆದ್ಯತೆ ನೀಡಿದ್ದರು.

ಕುಟುಂಬ ರಾಜಕಾರಣ, ಭ್ರಷ್ಟಾಚಾರದ ಆರೋಪಗಳು ಅವರ ಸುತ್ತ ಸುತ್ತಿಕೊಂಡವು. ಅದರಿಂದ ಹೊರಬರಲು ಅವರಿಗೆ ಸಾಧ್ಯವಾಗಲಿಲ್ಲ. ಇಳಿ ವಯಸ್ಸಿನಲ್ಲಿ ಪೋಕ್ಸೊ ಪ್ರಕರಣವೊಂದು ತಳಕು ಹಾಕಿಕೊಂಡಿತು. ದ್ರಷ್ಟಾರನಂತೆ ರಾಜ್ಯವನ್ನು ಮುನ್ನಡೆಸಬಹುದಾಗಿದ್ದ ಜನ ನಾಯಕರೊಬ್ಬರು, ತಮ್ಮದೇ ಆದ ಪ್ರಮಾದಗಳಿಂದ ತುಸು ಹಿನ್ನಡೆ ಅನುಭವಿಸಿದರು. ಹಾಗಿದ್ದರೂ, ಮಕ್ಕಳಿಗೆ ಬೈಸಿಕಲ್, ಭಾಗ್ಯಲಕ್ಷ್ಮಿ ಬಾಂಡ್, ಕೋವಿಡ್ ಕಾಲದಲ್ಲಿ ಉಚಿತ ಲಸಿಕೆ, ಹತ್ತು ಹಲವು ರೈತ ಪರ ಯೋಜನೆಗಳಿಂದ ಯಡಿಯೂರಪ್ಪ ಇನ್ನೂ ಜನಮಾನಸದಲ್ಲಿ ನಾಯಕರಾಗಿಯೇ ಉಳಿದಿದ್ದಾರೆ.

ಜನಪರ ಕಾರ್ಯಕ್ರಮಗಳು

- ಎಚ್.ಡಿ.ಕುಮಾರಸ್ವಾಮಿ ನೇತೃತ್ವದ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾಗಿ ಹಣಕಾಸು ಖಾತೆಯನ್ನು ಹೊಂದಿದ್ದ ಯಡಿಯೂರಪ್ಪ, ಸಮಾಜದ ಕೆಡುಕುಗಳಿಗೆ ಕಾರಣವಾಗಿದ್ದ ಲಾಟರಿ ಹಾಗೂ ಸಾರಾಯಿ ನಿಷೇಧ ಮಾಡುವಲ್ಲಿ ಪ್ರಧಾನ ಪಾತ್ರವಹಿಸಿದರು.
- 2008-2011ರಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಅನೇಕ ಸುಧಾರಣೆ ಜನಪರ ಕಾರ್ಯಕ್ರಮಗಳನ್ನು ಜಾರಿಗೊಳಿಸಿದರು.
- 2008: ದೇಶದಲ್ಲೇ ಮೊಟ್ಟಮೊದಲ ಬಾರಿಗೆ ಪ್ರತ್ಯೇಕ ಕೃಷಿ ಬಜೆಟ್ ಮಂಡಿಸಿದರು. ರಾಜ್ಯದಲ್ಲಿ ಮೊದಲ ಬಾರಿಗೆ ಶೂನ್ಯ ಬಡ್ಡಿ ದರದಲ್ಲಿ ರೈತರ ಕೃಷಿ ಸಾಲ ಯೋಜನೆ ಜಾರಿಗೊಳಿಸಿದರು.
- ಸಾವಯವ ಕೃಷಿ ಯೋಜನೆ ರೂಪಿಸಿ ₹10.05 ಕೋಟಿ ವಿನಿಯೋಗ ಮಾಡಲಾಯಿತು. 83 ಸಾವಿರ ರೈತರನ್ನು ಇದರಲ್ಲಿ ತೊಡಗುವಂತೆ ಮಾಡಿ 76 ಸಾವಿರ ಹೆಕ್ಟೇರ್ ಭೂಮಿಯಲ್ಲಿ ಇದನ್ನು ಜಾರಿಗೊಳಿಸಲಾಯಿತು.
- ಸುವರ್ಣಭೂಮಿ ಯೋಜನೆಯಿಂದಾಗಿ 10 ಲಕ್ಷ ರೈತರ ಕುಟುಂಬಕ್ಕೆ ಅನುಕೂಲವಾಯಿತು.
- ಬಿಪಿಎಲ್ ಕಾರ್ಡ್ ಹೊಂದಿರುವ ಕುಟುಂಬದಲ್ಲಿ ಹುಟ್ಟಿದ ಹೆಣ್ಣುಮಕ್ಕಳಿಗೆ ಭಾಗ್ಯಲಕ್ಷ್ಮಿ ಯೋಜನೆಯಡಿ 10.18 ಲಕ್ಷ ಬಾಂಡ್‌ಗಳನ್ನು ವಿತರಿಸಲಾಯಿತು. ₹1,376 ಕೋಟಿ ಹಣವನ್ನು ಇದಕ್ಕೆ ವ್ಯಯಿಸಲಾಯಿತು.
- ಸಂಧ್ಯಾ ಸುರಕ್ಷಾ ಯೋಜನೆಯಡಿ 65 ವರ್ಷ ಮೇಲ್ಪಟ್ಟ ಕಡುಬಡವರಿಗೆ ₹400 ಮಾಸಾಶನ ಘೋಷಣೆ.
- ಸರ್ಕಾರಿ, ಅನುದಾನಿತ ಶಾಲೆಗಳ ಎಂಟನೇ ತರಗತಿ ಮಕ್ಕಳಿಗೆ ₹125 ಕೋಟಿ ವೆಚ್ಚದಲ್ಲಿ ಸೈಕಲ್ ವಿತರಣೆ.
- ಆರೋಗ್ಯ ಕವಚ ಯೋಜನೆಯಡಿ ಸರ್ಕಾರಿ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ತುರ್ತು ಸೇವೆಯ ವಾಹನಗಳನ್ನು ಜನರ ಬಳಕೆಗೆ ಬಿಡುಗಡೆ.
- ಕೋವಿಡ್‌ನಿಂದ ಮೃತಪಟ್ಟ ಬಿಪಿಎಲ್ ಕುಟುಂಬಕ್ಕೆ ₹1 ಲಕ್ಷ ರೂಪಾಯಿ ನೆರವು
- ನೇಕಾರರ ₹1 ಲಕ್ಷದವರೆಗಿನ ಸಾಲ ಮನ್ನಾ, ಮೀನುಗಾರರ ಸಾಲ ಮನ್ನಾ, ರೈತ ಸುರಕ್ಷಾ ಫಸಲ್ ಬಿಮಾ ಯೋಜನೆ ವಿಮೆ ಪಾವತಿ, ಕೆರೆಗಳ ಪುನಶ್ಚೇತನಕ್ಕೆ ಮಿಷನ್ ಕಲ್ಯಾಣಿ ಯೋಜನೆಗಳ ಜಾರಿ.
- ಕೋವಿಡ್ ಸೋಂಕಿನಿಂದ ತಂದೆ-ತಾಯಿ ಇಬ್ಬರನ್ನೂ ಕಳೆದುಕೊಂಡು ಅನಾಥರಾದ ಮಕ್ಕಳಿಗೆ ಶಿಕ್ಷಣ ಒದಗಿಸಲು ತಿಂಗಳಿಗೆ ₹3,500 ನೀಡುವ ಮುಖ್ಯಮಂತ್ರಿ ಬಾಲಸೇವಾ ಯೋಜನೆ ಜಾರಿ.
- 21 ವರ್ಷ ತುಂಬಿದ ಹೆಣ್ಣುಮಕ್ಕಳಿಗೆ ₹1 ಲಕ್ಷ ನೆರವು ಘೋಷಣೆ.

ಮಾಹಿತಿ: ಚಂದ್ರಹಾಸ ಹಿರೇಮಳಲಿ

ಪ್ರಧಾನಿ ನರೇಂದ್ರ ಮೋದಿ ಅವರೊಂದಿಗಿನ ಸಂಗ್ರಹ ಚಿತ್ರ

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

09 ಮೇ 2026 ಶನಿವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣ ಸಪ್ತಮಿ ಗಂ. 14-03 ನಕ್ಷತ್ರ: ಶ್ರವಣ ಗಂ. 23-25 ಯೋಗ: ಶುಕ್ಲ ಗಂ. 26-36 ಕರಣ: ಬವ ಗಂ. 14-03, ಮೇಷ ಮಾಸದ 26 ನೇ ದಿನ. ಮಳೆ ನಕ್ಷತ್ರ : ಭರಣಿ 4 ನೇ ಪಾದ. ರಾಹುಕಾಲ : ಬೆಳಿಗ್ಗೆ 09-00 - 10-30, ಸೂರ್ಯೋದಯ : 06-10 ಸೂರ್ಯಾಸ್ತ : 06-44, ಮುಸ್ಲಿಂ ದಿನಾಂಕ : 21 ಜುಲ್ಕಾದಾ, ಅದೃಷ್ಟ ಸಂಖ್ಯೆ : 8, 12

ಮೇಷ: ಹೊಂದಾಣಿಕೆಯ ಮನೋಭಾವ ಕಡಿಮೆಯಾಗುವುದರಿಂದ ಕುಟುಂಬದಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗದಂತೆ ಜಾಗ್ರತೆ ವಹಿಸಿ. ನೀವೇ ವಿಮರ್ಶಿಕೊಳ್ಳಿ, ಸರಿ ತಪ್ಪುಗಳ ಅರಿವಾಗಲಿದೆ.

ವೃಷಭ: ಮಗನ ವಿಷಯದಲ್ಲಿ ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಎಡವಿದ ಅನುಭವ ಆಗಲಿದೆ. ಗೆಳೆಯನಿಂದ ಸವಾಲುಗಳನ್ನು ಎದುರಿಸುವಲ್ಲಿ ಸಹಾಯ ನಿರೀಕ್ಷಿಸಬಹುದು. ಆತ್ಮವಿಶ್ವಾಸ ನಿಮ್ಮನ್ನು ರಕ್ಷಿಸಲಿದೆ.

ಮಿಥುನ: ದೇವರ ಆಶೀರ್ವಾದ ಇರುವುದರಿಂದ ಪ್ರಯಾಣ ಅನುಕೂಲಕರ-ವಾಗಿ ಮತ್ತು ಅನಾಯಾಸವಾಗಿ ಇರುತ್ತದೆ. ಸೋದರ ಮಾವನ ಆರೋಗ್ಯದ ವ್ಯತ್ಯಾಸದಿಂದ ದಿನಚರಿಯಲ್ಲಿ ಬದಲಾವಣೆ ಉಂಟಾಗುತ್ತದೆ.

ಕರ್ಕಾಟಕ: ರಿಯಲ್ ಎಸ್ಟೇಟ್ ವ್ಯವಹಾರಸ್ಥರಿಗೆ ಕಾರ್ಯಸಾಧನೆಗೆ ಅನುಕೂಲಕರ ಹಾಗೂ ಲಾಭದಾಯಕ ವಾತಾವರಣ ಸಿಗಲಿದೆ. ದಿನದ ಮೊದಲಾರ್ಧ ಬೇಸರವಿದ್ದರೆ ಕೊನೆಯನ್ನು ಸಂತೋಷದಲ್ಲಿ ಕಳೆಯುತ್ತೀರಿ.

ಸಿಂಹ: ಉದರಬಾಧೆಯನ್ನು ಉಪಶಮನ ಮಾಡಿಕೊಳ್ಳುವುದಕ್ಕಾಗಿ ಹಸಿ ತರಕಾರಿಯನ್ನೋ ಅಥವಾ ಸ್ನಿಗ್ಧ ಆಹಾರವನ್ನಷ್ಟೇ ಸೇವಿಸಿ. ವಿವಾಹ ಯೋಗ್ಯ ವಯಸ್ಕರಿಗೆ ಪ್ರಯತ್ನವಿದ್ದರೆ ಮದುವೆ ನಿಶ್ಚಯವಾಗುವುದು.

ಕನ್ಯಾ: ವ್ಯವಹಾರದಲ್ಲಿ ವಿದೇಶಿ ಸಂಪರ್ಕಗಳು ಅಥವಾ ದೊಡ್ಡ ಮಟ್ಟದ ದೇಶೀಯ ವ್ಯವಹಾರಗಳ ಸಂಪರ್ಕಗಳು ಹೆಚ್ಚಲಿವೆ. ದಂಪತಿಗಳ ಮಧ್ಯೆ ಅನವಶ್ಯಕವಾದ ವಾದ ವಿವಾದ ಉಂಟಾಗಬಹುದು.

ತುಲಾ: ಇಂದ್ರಿಯಗಳ ಚಾಂಚಲ್ಯತೆ ಏಕಾಗ್ರತೆಯನ್ನು ಭಂಗಗೊಳಿಸುವ ಜತೆಗೆ ಹಾದಿ ತಪ್ಪಿಸುವ ಸಾಧ್ಯತೆ ಹೆಚ್ಚಿರುತ್ತದೆ. ಕೆಲಸ ಕಾರ್ಯಗಳನ್ನು ಮುಗಿಸಿಕೊಳ್ಳಲು ಆತುರ ತೋರುವಿರಿ.

ವೃಶ್ಚಿಕ: ಪೊಲೀಸ್ ಅಧಿಕಾರಿಗಳಿಗೆ ಸರಿ ತಪ್ಪು ತೀರ್ಮಾನಿಸುವುದು ಕಷ್ಟ. ವೃತ್ತಿಯಲ್ಲಿ ಒತ್ತಡ ಹೆಚ್ಚುವುದು. ನೀಲಿವಸ್ತ್ರ ಅಥವಾ ಹರಳು ಕಾರ್ಯಸಾಧನೆಗೆ ಸಹಾಯಕವಾಗಲಿದೆ. ವ್ಯವಹಾರ ನಡೆಸುವುದಕ್ಕಾಗಿ ಸಾಲ ತೆಗೆದುಕೊಳ್ಳಬೇಡಿ.

ಧನು: ಹಿರಿಯರ ಮಾರ್ಗದರ್ಶನದಂತೆ ನಡೆದು ಕೆಲಸಗಳನ್ನು ಮಾಡುವುದರಿಂದ ಅಡೆತಡೆಗಳು ಇರುವುದಿಲ್ಲ. ಉದ್ಯೋಗ ಬದಲಾವಣೆಯ ಬಗ್ಗೆ ತೀರ್ಮಾನಿಸಬೇಡಿ. ವಕೀಲಿ ವೃತ್ತಿಯವರಿಗೆ ಅಧ್ಯಯನದ ಕೊರತೆ ಕಾಣಲಿದೆ.

ಮಕರ: ಕಟ್ಟಡ ನಿರ್ಮಾಣದ ಗುತ್ತಿಗೆಯನ್ನು ಪಡೆಯುವವರು ಆಮೂಲಾಗ್ರ ಚಿಂತನೆ ನಡೆಸಿ ಒಪ್ಪಿಕೊಳ್ಳುವುದು ಸೂಕ್ತ. ಸ್ಥಾನ ಬದಲಾವಣೆಯಿಂದ ಮನಸ್ಸಿಗೆ ನೆಮ್ಮದಿಯ ವಾತಾವರಣ ಸೃಷ್ಟಿಯಾಗುವುದು.

ಕುಂಭ: ಹಣಕಾಸು ಸಂಸ್ಥೆಗಳ ನೆರವಿನಿಂದ ಬಹುದಿನದ ಸ್ವಂತ ಉದ್ದಿಮೆ ಪ್ರಾರಂಭಿಸುವ ಯೋಜನೆ ಕೈಗೂಡುವುದು. ಮನದಲ್ಲಿರುವ ಆಲೋಚನೆಗಳನ್ನು ಕಾರ್ಯರೂಪಕ್ಕೆ ಇಳಿಸಲು ಸೂಕ್ತ ದಿನವಾಗಿದೆ.

ಮೀನ: ಅಧಿಕಾರದಲ್ಲಿ ಸ್ಥಾನಮಾನ ಪಡೆಯಲು ಧಾರ್ಮಿಕ ಕಾರ್ಯಗಳನ್ನು ನಡೆಸಿ. ಗಿಡ ಮೂಲಿಕೆಗಳಿಂದ ಉದರವ್ಯಾಧಿಗಳು ಗುಣವಾಗಲಿವೆ. ಅಸಾಮಾನ್ಯ ವ್ಯಕ್ತಿಯನ್ನು ವ್ಯಾಪಾರ ನಿಮಿತ್ತ ಭೇಟಿ ಮಾಡುವಿರಿ.

ಪದಬಂಧ 6397

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನಾಳಿಕೆಯಿರಿಸಿ ತಿಳಿಸಿರುವ ವಿಚಾರ ಮಾರ್ಗ (4)
3.ದೇಶದ ಹತ್ತಿರವಿರುವ ಜಾಗ! (3)
5.ಹಾಡಿನ ಆರಂಭದ ಸಾಲು (3)
7. ಪ್ರಶ್ನೆಗೆ ಪೂರಕವಾಗಿ ಹೇಳಿದ ಮಾತು (3)
8.ಅಧೀರನ ಜೊತೆ ಧೈರ್ಯವಂತನಿದ್ದಾನಲ್ಲಾ! (2)
9.ಎಲ್ಲರೂ ಒಟ್ಟಾಗಿಯೇ ಹಾಡುವಿಕೆ (5)
12.ಪವಿತ್ರವಾಗಿರುವ ಇಂದ್ರನ ಆಯುಧ (2)
13.ಬಣವೆ ಹಾಕಲು ಈ ತೊಂದರೆಯೇ? (3)
14.ರಂಗನ್ನು ಹಚ್ಚಿಕೊಂಡವನ ವರ್ಣನೆ (3)
17.ಪರವಾಗಿಯೇ ಪಡೆದುಕೊಂಡ ಸಂಬಳ (3)
18.ರತ್ನ ಖಚಿತ ವಸ್ತು (4)

ಮೇಲಿಂದ ಕೆಳಕ್ಕೆ

1.ತಾಪವಿದ್ದಾಗ ತೋರಿದ ಶೌರ್ಯ (3)
2.ಹಾಲು ಮೊಸರಿನ ಸಾರವತ್ತಾದ ಭಾಗ (2)
3.ಇದು ಅತೀ ತೀಕ್ಷ್ಣವಾದುದು! (3)
4.ಆಯುಧಗಳನ್ನಿಡುವ ಕೋಣೆ (4)
6.ಲಾಸಾಗಿದ್ದರೂ ತೋರಿದ ಬೆಡಗು! (3)
7.ದಾಹವಿದ್ದಾಗ ನೀಡಿದ ದೃಷ್ಟಾಂತ (5)
11.ಈತ ಮುಸಲ್ಮಾನ ದೊರೆ (3)
12.ತಪ್ಪು ಕೆಲಸಕ್ಕಾಗಿ ವಿಷಾದಿಸುವಿಕೆ (4)
13.ಬರದೊಳಗಿರುವ ಅನಾಗರಿಕ ಕಾಣುತ್ತಿದ್ದಾನೆಯೇ? (3)
15.ನೆಗೆದಾಡಿದಾಗ ತಲೆದೋರಿದ ಶೀತ! (3)
16.ತಲೆಗೂದಲನ್ನು ತೆಗೆಯುವುದು (2)



6396ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಾವಕಾಶ 3.ಆರಾಧಕ 5.ಕರಡು 6.ಕುಲಾವಿ 7.ಮದ್ದು 9.ಸ್ವಹಸ್ತಾಕ್ಷರ 11.ಮಾಸು 13.ಪರಾತ 15.ಸುಕೃತ 16.ಯಥೋಚಿತ 17.ಕಡಿವಾಣ

ಮೇಲಿಂದ ಕೆಳಕ್ಕೆ:
1.ಸಾರ್ವಭೌಮ 2.ಶಕಟ 3.ಆಡು 4.ಕಲಾವಿದ 6.ಕುಟೀರ 8.ಪ್ರಸ್ತಾಪ 9.ಸ್ವಗತ 10.ತಾಪತ್ರಯ 12.ಸುಮಬಾಣ 14.ಜಾತಕ 15.ಸುತ

ಸುಡೊಕು 6780

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	4		2		9	6		1
9						2	7	
	7	2	1		4			8
		4		3		1		2
2	8		6	9			4	
		7			8		6	5
	5							7
		6	8		2			
4	2			5		8		

6779 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	24,326
ಇಂದಿನ ಅಂತ್ಯ:	24,176
ದಿನದ ಕನಿಷ್ಠ:	24,126
	↓ 150

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	
100 ಕ್ಕೆ	₹590
12 ಕ್ಕೆ	₹84
ಮೈಸೂರು: 100 ಕ್ಕೆ	₹595

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹252.50
ಆರ್‌ಎಸ್‌ಎಸ್-5	₹246
ಗುಡ್ ಲಾಟ್	₹215

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹301-592
ದ್ವಿತಳಿ (ಬಿ.ವಿ)	₹355-762

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1610 (1610)
ಸೋಯಾ (ರಿಫೈನ್ಡ್)	₹1500 (1510)
ಸೂರ್ಯಕಾಂತಿ (ರಿಫೈನ್ಡ್)	₹1640(1640)
ಪಾಮೋಲಿನ್	₹1480 (1480)

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹23000
ಎಸಿ	₹14000
ಆರ್‌ಪಿ	₹18150
ಆರ್‌ಸಿ	₹9775

ಶೇ 10ರಷ್ಟು ಸುಂಕ ಅಸಿಂಧು

ವಾಷಿಂಗ್ಟನ್ (ಪಿಟಿಐ): ಭಾರತ ಸೇರಿದಂತೆ ಜಗತ್ತಿನ ವಿವಿಧ ರಾಷ್ಟ್ರಗಳ ಮೇಲೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿಧಿಸಿರುವ ಶೇ 10ರಷ್ಟು ಸುಂಕವನ್ನು ಅಮೆರಿಕದ ಫೆಡರಲ್ ನ್ಯಾಯಾಲಯವು ರದ್ದುಗೊಳಿಸಿದೆ. ಅಲ್ಲದೆ ಈ ಸುಂಕ ಅಸಿಂಧು ಮತ್ತು ಕಾನೂನುಬಾಹಿರ ಎಂದು ಹೇಳಿದೆ.

ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿಧಿಸಿದ್ದ ಹೆಚ್ಚುವರಿ ಪ್ರತಿಸುಂಕವನ್ನು ಅಮೆರಿಕದ ಸುಪ್ರೀಂ ಕೋರ್ಟ್ ಈ ಹಿಂದೆ ರದ್ದುಗೊಳಿಸಿತ್ತು. ಇದರಿಂದ ಟ್ರಂಪ್, ಭಾರತ ಸೇರಿದಂತೆ ವಿವಿಧ ದೇಶಗಳಿಂದ ಅಮೆರಿಕಕ್ಕೆ ಪ್ರವೇಶಿಸುವ ವಸ್ತುಗಳ ಮೇಲೆ ಶೇ 10ರಷ್ಟು ಸುಂಕವನ್ನು ವಿಧಿಸಿದ್ದರು. ಇದು ಫೆಬ್ರುವರಿ 24ರಿಂದ 150 ದಿನ ಜಾರಿಯಲ್ಲಿ ಇರಲಿದೆ ಎಂದು ಅಮೆರಿಕದ ಆಡಳಿತ ಹೇಳಿತ್ತು.

ಅಂತರರಾಷ್ಟ್ರೀಯ ವ್ಯಾಪಾರ ನ್ಯಾಯಾಲಯವು ಎರಡು ಪ್ರತ್ಯೇಕ ತೀರ್ಪಿನಲ್ಲಿ, ಶೇ 10ರಷ್ಟು ಸುಂಕ ವಿಧಿಸಲು ಪ್ರಸ್ತಾಪಿಸಿದ 1974ರ ವ್ಯಾಪಾರ ಕಾಯ್ದೆಯ ನಿಬಂಧನೆಗಳು, ಪಾವತಿ ಸಮತೋಲನ ಬಿಕ್ಕಟ್ಟಿನ ಸಂದರ್ಭದಲ್ಲಿ ಮಾತ್ರ ಪರಿಣಾಮಕಾರಿಯಾಗಬಹುದು ಎಂದು ತೀರ್ಪು ನೀಡಿದೆ.

ಈ ತೀರ್ಪಿನ ವಿರುದ್ಧ ಅಮೆರಿಕ ಆಡಳಿತವು ಮೇಲ್ಮನವಿ ಸಲ್ಲಿಸುವ ನಿರೀಕ್ಷೆಯಿದೆ.

ಅಡಿಕೆ ಧಾರಣೆ

ಕುಮಟಾ		ರಾಶಿ	45069-55611	ಬಿಳಿಗೋಟು	27199-37699
ಚಿಪ್ಪು	31809-36099	ಗೊರಬಲು	19010-41799	ಚಾಲಿ	44399-48981
ಕೋಕ	17569-35099	**ಸಿದ್ದಾಪುರ**		ಕೆಂಪುಗೋಟು	26899-37699
ಫ್ಯಾಕ್ಟರಿ	14089-28699	ಬಿಳಿಗೋಟು	26569-36969	ರಾಶಿ	50000-53960
ಹಳೆಚಾಲಿ	47589-49198	ಚಾಲಿ	40500-47809	**ಯಲ್ಲಾಪುರ**	
ಹೊಸಚಾಲಿ	43029-48099	ಕೋಕ	23299-34019	ಬಿಳಿಗೋಟು	20601-38299
ಪುತ್ತೂರು		ಕೆಂಪುಗೋಟು	34169-37109	ಚಾಲಿ	38309-48470
ಕೋಕ	20000-34500	ರಾಶಿ	46899-53699	ಕೋಕ	16786-35499
ಹೊಸತು	30000-47500	ತಟ್ಟಿಬೆಟ್ಟೆ	38339-48399	ಕೆಂಪುಗೋಟು	23000-37816
ಶಿವಮೊಗ್ಗ		**ಶಿರಸಿ**		ರಾಶಿ	50699-56921
ಸರಕು	55199-85559	ಬೆಟ್ಟೆ	41899-52999	ತಟ್ಟಿಬೆಟ್ಟೆ	38810-50209
ಬೆಟ್ಟೆ	56572-61899				

₹30 ಸಾವಿರ ಕೋಟಿ ನಷ್ಟ?

ಇಂಧನ ಬೆಲೆ ಹೆಚ್ಚಿಸದಿದ್ದಕ್ಕೆ ತೈಲೋತ್ಪನ್ನಗಳ ಮಾರಾಟ ಕಂಪನಿಗಳಿಗೆ ಆರ್ಥಿಕ ಹೊರೆ

ಮುಖ್ಯಾಂಶಗಳು

- ದಿನಕ್ಕೆ ಅಂದಾಜು ₹700ರಿಂದ ₹1 ಸಾವಿರ ಕೋಟಿವರೆಗೆ ನಷ್ಟ
- ಸೀಮಾ ಸುಂಕ ಕಡಿತ ಮಾಡಿದ್ದರಿಂದ ₹14 ಸಾವಿರ ಕೋಟಿ ಹೊರೆ
- ಸಂಘರ್ಷದಿಂದ ಸ್ಪೇನ್‌ನಲ್ಲಿ ಪೆಟ್ರೋಲ್ ದರ ಶೇ 34ರಷ್ಟು ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಮಾರಾಟ ಕಂಪನಿಗಳಿಗೆ ಮಾರ್ಚ್ ಮಧ್ಯಭಾಗದಿಂದ ತಿಂಗಳಿಗೆ ಅಂದಾಜು ₹30 ಸಾವಿರ ಕೋಟಿಯಷ್ಟು ನಷ್ಟ ಉಂಟಾಗಿದೆ.

ಪಶ್ಚಿಮ ಏಷ್ಯಾದ ಸಂಘರ್ಷದಿಂದ ಇಂಧನ ಮತ್ತು ಎಲ್‌ಪಿಜಿ ಸಾಗಣೆಯಲ್ಲಿ ಅಡಚಣೆ ಉಂಟಾಗಿದ್ದರಿಂದ ಇವುಗಳ ದರ ಏರಿಕೆಯಾಯಿತು. ಆದರೆ, ರಿಟೇಲ್ ಮಾರುಕಟ್ಟೆಯಲ್ಲಿ ಕಂಪನಿಗಳು ಇದರ ಬೆಲೆ ಏರಿಕೆ ಮಾಡಲಿಲ್ಲ. ಅಲ್ಲದೆ, ಪೆಟ್ರೋಲ್, ಡೀಸೆಲ್, ಎಲ್‌ಪಿಜಿ, ವಿಮಾನ ಇಂಧನ ಮತ್ತು ಇತರೆ ಪೆಟ್ರೋಲಿಯಂ ಉತ್ಪನ್ನಗಳ ನಿರಂತರ ಪೂರೈಕೆಯನ್ನು ಕಾಯ್ದುಕೊಂಡಿವೆ. ಹೀಗಾಗಿ ಇಂಡಿಯನ್ ಆಯಿಲ್ ಕಾರ್ಪೊರೇಷನ್, ಭಾರತ್ ಪೆಟ್ರೋಲಿಯಂ ಮತ್ತು ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್‌ಗೆ ನಷ್ಟ ಉಂಟಾಗಿದೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರ ಸರ್ಕಾರವು, ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಸೀಮಾ ಸುಂಕವನ್ನು (ಎಕ್ಸೈಸ್) ಇತ್ತೀಚೆಗೆ ಪ್ರತಿ ಲೀಟರ್‌ಗೆ ₹10 ಕಡಿತ ಮಾಡಿದೆ. ಇಲ್ಲದಿದ್ದರೆ, ಕಂಪನಿಗಳ ನಷ್ಟ ₹62,500 ಕೋಟಿಯಷ್ಟಾಗುತ್ತಿತ್ತು ಎಂದು ತಿಳಿಸಿವೆ.

‘ಸಂಘರ್ಷ ಆರಂಭವಾಗುವುದಕ್ಕೂ ಮುನ್ನ (ಫೆ.28) ಬ್ರೆಂಟ್ ಕಚ್ಚಾ ತೈಲದ ಬೆಲೆ ಪ್ರತಿ ಬ್ಯಾರಲ್‌ಗೆ 70 ಡಾಲರ್‌ನಷ್ಟಿತ್ತು. ಬಳಿಕ, ಹೊರ್ಮುಜ್ ಜಲಸಂಧಿಯಲ್ಲಿ ಸಾಗಣೆಗೆ ಅಡ್ಡಿ ಉಂಟಾಗಿದ್ದರಿಂದ ಬ್ಯಾರಲ್ ದರವು 120 ಡಾಲರ್‌ಗೆ ತಲುಪಿತು. ಗ್ರಾಹಕರಿಗೆ ಹೆಚ್ಚಳದ ಹೊರೆ ತಪ್ಪಿಸಲು, ಕಂಪನಿಗಳು ಬೆಲೆ ಏರಿಕೆ ಮಾಡಲಿಲ್ಲ. ಇದು ಕಂಪನಿಗಳ ಲಾಭದ ಮೇಲೆ ಪರಿಣಾಮ ಬೀರಲಿದೆ’ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿಕಾರ್ಯದರ್ಶಿ ಸುಜಾತಾ ಶರ್ಮ ತಿಳಿಸಿದ್ದಾರೆ.

ಪೆಟ್ರೋಲ್ ಮತ್ತು ಡೀಸೆಲ್‌ನ ರಿಟೇಲ್ ಬೆಲೆ ಯಥಾಸ್ಥಿತಿಯಲ್ಲಿ ಮುಂದುವರಿಯುತ್ತವೆಯೇ ಎಂದು ಹೇಳಲು ನಿರಾಕರಿಸಿದ ಅವರು, ಇದುವರೆಗಿನ ಪ್ರಯತ್ನವು ಬೆಲೆ ಏರಿಕೆಯಾಗದಂತೆ ನೋಡಿಕೊಳ್ಳುವುದಾಗಿದೆ. ಸೀಮಾ ಸುಂಕ ಕಡಿತಗೊಳಿಸುವ ಮೂಲಕ ಸರ್ಕಾರಕ್ಕೆ ತಿಂಗಳಿಗೆ ₹14 ಸಾವಿರ ಕೋಟಿಯಷ್ಟು ಹೊರೆಬಿದ್ದಿದೆ ಎಂದು ಹೇಳಿದ್ದಾರೆ.

ತುರ್ತು ಕಚ್ಚಾ ತೈಲ ಪೂರೈಕೆ, ಹಡಗುಗಳ ಮಾರ್ಗ ಬದಲಾವಣೆಯಿಂದ ಹೆಚ್ಚಿದ ಸಾಗಣೆ ವೆಚ್ಚ, ವಿಮಾ ಕಂತು ಏರಿಕೆ ಸೇರಿದಂತೆ ಕಂಪನಿಗಳು ಹೆಚ್ಚುವರಿ ವೆಚ್ಚವನ್ನು ಅನುಭವಿಸಿವೆ. ಇದು ಕಂಪನಿಗಳ ಬ್ಯಾಲೆನ್ಸ್‌ಶೀಟ್ ಮೇಲೆ ಪರಿಣಾಮ ಬೀರಲಿದೆ ಎಂದು ತಿಳಿಸಿದ್ದಾರೆ.

ಸಂಘರ್ಷ ಆರಂಭವಾದ ಬಳಿಕ ಸ್ಪೇನ್‌ನಲ್ಲಿ ಪೆಟ್ರೋಲ್ ದರ ಶೇ 34ರಷ್ಟು ಏರಿಕೆಯಾಗಿದ್ದರೆ, ಜಪಾನ್, ಇಟಲಿ ಮತ್ತು ಇಸ್ರೇಲ್‌ನಲ್ಲಿ ಶೇ 30, ಜರ್ಮನಿಯಲ್ಲಿ ಶೇ 27ರಷ್ಟು ಏರಿಕೆಯಾಗಿದೆ.

ಆದರೆ, ಭಾರತದಲ್ಲಿ, ಪೆಟ್ರೋಲ್ ಬೆಲೆ ಲೀಟರ್‌ಗೆ ₹94.77 ಮತ್ತು ಡೀಸೆಲ್ ₹87.67ರಷ್ಟಿದ್ದು, ಯಥಾಸ್ಥಿತಿಯಲ್ಲಿದೆ.

WAN-IFRA I COLOR QUALITY CLUB 2026-2028 I V2

ಸುದ್ದಿ 2 ನಿಮಿಷ

ಎಸ್‌ಬಿಐಗೆ ₹19,684 ಕೋಟಿ ಲಾಭ

ನವದೆಹಲಿ (ಪಿಟಿಐ): 2025-26ರ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ₹19,684 ಕೋಟಿ ನಿವ್ವಳ ಲಾಭ ಗಳಿಸಿದೆ.

2024-25ರ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್ ₹18,643 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 6ರಷ್ಟು ಹೆಚ್ಚಳವಾಗಿದೆ. ವಸೂಲಾಗದ ಸಾಲದ ಪ್ರಮಾಣ ಕಡಿಮೆ ಆಗಿದೆ. ಇದು ಲಾಭ ಹೆಚ್ಚಳಕ್ಕೆ ಒಂದು ಕಾರಣ ಎಂದು ಬ್ಯಾಂಕ್ ಷೇರುಪೇಟೆಗೆ ಶುಕ್ರವಾರ ತಿಳಿಸಿದೆ.

ಬ್ಯಾಂಕ್‌ನ ವರಮಾನವು ₹1.43 ಲಕ್ಷ ಕೋಟಿಯಿಂದ ₹1.40 ಲಕ್ಷ ಕೋಟಿಗೆ ಇಳಿದಿದೆ. ಬಡ್ಡಿ ವರಮಾನವು ₹1.23 ಲಕ್ಷ ಕೋಟಿಯಷ್ಟಾಗಿದೆ. ವಸೂಲಾಗದ ಸಾಲದ ಪ್ರಮಾಣ (ಜಿಎನ್‌ಪಿಎ) ಶೇ 1.82ರಿಂದ ಶೇ 1.49ಕ್ಕೆ ಇಳಿದಿದೆ. ನಿವ್ವಳ ಎನ್‌ಪಿಎ ಶೇ 0.47ರಿಂದ ಶೇ 0.39ಕ್ಕೆ ಇಳಿದಿದೆ.

2025-26ರ ಪೂರ್ಣ ಆರ್ಥಿಕ ವರ್ಷದಲ್ಲಿ ಬ್ಯಾಂಕ್‌ನ ಲಾಭದಲ್ಲಿ ಶೇ 13ರಷ್ಟು ಏರಿಕೆಯಾಗಿದ್ದು, ₹80,032 ಕೋಟಿಯಾಗಿದೆ. 2024-25ರ ಇದೇ ಅವಧಿಯಲ್ಲಿ ಇದು ₹70,901 ಕೋಟಿಯಷ್ಟಿತ್ತು.

₹1 ಮುಖಬೆಲೆಯ ಪ್ರತಿ ಈಕ್ವಿಟಿ ಷೇರಿಗೆ ₹17.35 ಲಾಭಾಂಶ ನೀಡಲು ಬ್ಯಾಂಕ್‌ನ ಆಡಳಿತ ಮಂಡಳಿಯು ಅನುಮೋದನೆ ನೀಡಿದೆ. ಅರ್ಹ ಸದಸ್ಯರು ಜೂನ್ 4ರಂದು ಲಾಭಾಂಶ ಪಡೆಯಲಿದ್ದಾರೆ ಎಂದು ಬ್ಯಾಂಕ್ ತಿಳಿಸಿದೆ.

ಷೇರಿನ ಮೌಲ್ಯ ಇಳಿಕೆ: ಹೂಡಿಕೆದಾರರ ನಿರೀಕ್ಷೆಯಂತೆ ಬ್ಯಾಂಕ್‌ನ ಫಲಿತಾಂಶ ಬಾರದಿದ್ದಕ್ಕೆ ಎಸ್‌ಬಿಐನ ಷೇರಿನ ಮೌಲ್ಯವು ಶೇ 7ರವರೆಗೆ ಇಳಿದಿದೆ. ಇದರಿಂದ ಬ್ಯಾಂಕ್‌ನ ಮಾರುಕಟ್ಟೆ ಬಂಡವಾಳ ಮೌಲ್ಯ ₹66,691 ಕೋಟಿ ಕರಗಿದೆ.

25,26ರಂದು ಎಸ್‌ಬಿಐ ನೌಕರರ ಪ್ರತಿಭಟನೆ

ಬೆಂಗಳೂರು: ಹೊರಗುತ್ತಿಗೆ ರದ್ದು, ಸಮರ್ಪಕ ಸಿಬ್ಬಂದಿ ನೇಮಕ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಆಲ್ ಇಂಡಿಯಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸ್ಟಾಫ್ ಫೆಡರೇಷನ್ (ಎಐಎಸ್‌ಬಿಐಎಸ್‌ಎಫ್) ಮೇ 25 ಮತ್ತು 26ರಂದು ರಾಷ್ಟ್ರವ್ಯಾಪಿ ಮುಷ್ಕರಕ್ಕೆ ಮುಂದಾಗಿದೆ.

ಶಸ್ತ್ರಸಜ್ಜಿತ ರಕ್ಷಕರ ನೇಮಕಾತಿಯನ್ನು ತಕ್ಷಣವೇ ಮಾಡುವುದು, 2019ರಿಂದ ಸೇರ್ಪಡೆಯಾದ ನೌಕರರಿಗೆ ಐಸಿಟಿ ವರ್ಗಾವಣೆ ಜಾರಿಗೆ ತರಬೇಕು, ಬ್ಯಾಂಕ್‌ನಲ್ಲಿನ ವೇತನ ಸಮಾನತೆ ಸಮಸ್ಯೆಗಳನ್ನು ಪರಿಹರಿಸಬೇಕು, ಎನ್‌ಪಿಎಸ್‌ಗೆ ಒಳಪಡುವ ನೌಕರರಿಗೆ ಪಿಂಚಣಿ ನಿಧಿ ನಿರ್ವಹಣೆ ಬದಲಾಯಿಸಲು ಆಯ್ಕೆಯನ್ನು ಒದಗಿಸುವುದು, ವೈದ್ಯಕೀಯ ಮರುಪಾವತಿ ಯೋಜನೆಯಲ್ಲಿ ಸುಧಾರಣೆ ಸೇರಿದಂತೆ ಇತರೆ ಬೇಡಿಕೆಗಳನ್ನು ಇರಿಸಿಕೊಂಡು ಹೋರಾಟ ಮಾಡಲಾಗುವುದು ಎಂದು ಸ್ಟೇಟ್ ಬ್ಯಾಂಕ್ ಸ್ಟಾಫ್ ಯೂನಿಯನ್‌ನ (ಕರ್ನಾಟಕ) ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ. ರವಿಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೆನ್ಸೆಕ್ಸ್, ನಿಫ್ಟಿ ಇಳಿಕೆ

ಮುಂಬೈ (ಪಿಟಿಐ): ಪಶ್ಚಿಮ ಏಷ್ಯಾದ ಸಂಘರ್ಷದಿಂದ ಹೂಡಿಕೆದಾರರು ಲಾಭದ ಗಳಿಕೆಗಾಗಿ ಷೇರುಗಳ ಮಾರಾಟಕ್ಕೆ ಮುಂದಾದರು. ಇದರಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಶುಕ್ರವಾರದ ವಹಿವಾಟಿನಲ್ಲಿ ಇಳಿಕೆ ಕಂಡಿವೆ.

ವಿದೇಶಿ ಬಂಡವಾಳದ ಹೊರಹರಿವು ಮತ್ತು ಏಷ್ಯಾದ ಮಾರುಕಟ್ಟೆಗಳ ಇಳಿಕೆ ಸಹ ದೇಶದ ಸೂಚ್ಯಂಕಗಳ ಇಳಿಕೆಗೆ ಕಾರಣವಾಯಿತು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 516 ಅಂಶ ಇಳಿಕೆಯಾಗಿ, 77,328ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 150 ಅಂಶ ಕಡಿಮೆಯಾಗಿ, 24,176ಕ್ಕೆ ಕೊನೆಗೊಂಡಿದೆ. ಬ್ರೆಂಟ್ ಕಚ್ಚಾ ತೈಲ ದರವು ಪ್ರತಿ ಬ್ಯಾರಲ್‌ಗೆ 100 ಡಾಲರ್‌ನಷ್ಟಿದೆ.

ರೂಪಾಯಿ ಮೌಲ್ಯ ಏರಿಕೆ: ಡಾಲರ್ ಎದುರು ರೂಪಾಯಿ ಮೌಲ್ಯವು 71 ಪೈಸೆ ಏರಿಕೆಯಾಗಿದ್ದು, ವಹಿವಾಟಿನ ಅಂತ್ಯದ ವೇಳೆಗೆ ಮೌಲ್ಯವು 93.51 ಆಗಿದೆ.

ಮುಂಬೈ ಧಾರಣೆ (ಶೇಂಗಾ)

08-05-2026	
ಜಾವಾ 70/80(ಹೊಸ)	11100-11200
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9300-9400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1620 (1650)
ಒಂದು ವಾರದ ಡೆಲಿವರಿ	1615 (1615)
ಪಾಮ್ ವಾರದ ಡೆಲಿವರಿ	1478 (1478)
ಸೂರ್ಯಕಾಂತಿ ಎಣ್ಣೆ ಕಚ್ಚಾ	1530 (1545)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,50,800 (1,51,000)
ಬೆಳ್ಳಿ ಕೆ.ಜಿಗೆ	2,55,000 (2,54,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸೌತ್ ಇಂಡಿಯನ್ ಬ್ಯಾಂಕ್ ಲಾಭ ಹೆಚ್ಚಳ

ಮುಂಬೈ (ಪಿಟಿಐ): ಮಾರ್ಚ್ ತ್ರೈಮಾಸಿಕದಲ್ಲಿ ನಿವ್ವಳ ಲಾಭವು ಶೇ 18.9ರಷ್ಟು ಹೆಚ್ಚಳ ಕಂಡಿದ್ದು ₹407 ಕೋಟಿಗೆ ತಲುಪಿದೆ ಎಂದು ಸೌತ್ ಇಂಡಿಯನ್ ಬ್ಯಾಂಕ್ ತಿಳಿಸಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್ ₹342 ಕೋಟಿ ನಿವ್ವಳ ಲಾಭ ಗಳಿಸಿತ್ತು. ‘ಸಾಲ ನೀಡಿಕೆಯನ್ನು ವಿವಿಧ ವಲಯಗಳಿಗೆ ವಿಸ್ತರಿಸಿರುವ ಪರಿಣಾಮವಾಗಿ ನಿವ್ವಳ ಬಡ್ಡಿ ವರಮಾನವು ಅಂದಾಜು ಶೇ 4ರಷ್ಟು ಜಾಸ್ತಿ ಆಗಿದೆ’ ಎಂದು ಬ್ಯಾಂಕ್‌ನ ಎಂ.ಡಿ ಹಾಗೂ ಸಿಇಒ ಪಿ.ಆರ್. ಶೇಷಾದ್ರಿ ಹೇಳಿದ್ದಾರೆ.

ಮಾರ್ಚ್ ತ್ರೈಮಾಸಿಕದಲ್ಲಿ ಬ್ಯಾಂಕ್‌ನ ಒಟ್ಟು ವರಮಾನವು ₹2,945 ಕೋಟಿ ಆಗಿದೆ.

ಪಶ್ಚಿಮ ಏಷ್ಯಾದಲ್ಲಿನ ಯುದ್ಧವು ದೀರ್ಘ ಅವಧಿಗೆ ಮುಂದುವರಿದು, ಅಲ್ಲಿ ನೆಲಸಿರುವ ಭಾರತೀಯರು ದೊಡ್ಡ ಸಂಖ್ಯೆಯಲ್ಲಿ ಸ್ವದೇಶಕ್ಕೆ ಮರಳಿದರೆ ದೀರ್ಘಾವಧಿಯ ಸಮಸ್ಯೆಯೊಂದು ಸೃಷ್ಟಿಯಾಗಬಹುದು ಎಂದು ಶೇಷಾದ್ರಿ ಹೇಳಿದ್ದಾರೆ.

ಬ್ಯಾಂಕ್‌ನ ಆಡಳಿತ ಮಂಡಳಿಯು ಷೇರುದಾರರಿಗೆ ಪ್ರತಿ ಷೇರಿಗೆ ₹0.45ರಷ್ಟು ಲಾಭಾಂಶ ನೀಡಲು ಶಿಫಾರಸು ಮಾಡಿದೆ.

ಟಾಟಾ ಸಭೆ ಮುಂದೂಡಿಕೆ

ನವದೆಹಲಿ (ಪಿಟಿಐ): ಟಾಟಾ ಸನ್ಸ್ ಮಂಡಳಿಗೆ ನಾಮನಿರ್ದೇಶನ ಮರುಪರಿಶೀಲನೆ ಸೇರಿದಂತೆ ವಿವಿಧ ವಿಷಯಗಳ ಕುರಿತು ಚರ್ಚಿಸಲು ಶುಕ್ರವಾರ ನಿಗದಿಯಾಗಿದ್ದ ಸರ್ ರತನ್ ಟಾಟಾ ಟ್ರಸ್ಟ್‌ನ ಆಡಳಿತ ಮಂಡಳಿ ಸಭೆಯು ಮೇ 16ಕ್ಕೆ ಮುಂದೂಡಿಕೆಯಾಗಿದೆ ಎಂದು ಮೂಲಗಳು ತಿಳಿಸಿವೆ.

ಯಾವುದೇ ಕಾರಣ ನೀಡದೇ ಸಭೆಯನ್ನು ಮುಂದೂಡಲಾಗಿದೆ. ಈಗ ಇದನ್ನು ಮೇ 16ರಂದು ನಡೆಸಲು ಪ್ರಸ್ತಾಪಿಸಲಾಗಿದೆ ಎಂದು ತಿಳಿಸಿವೆ.

ಶುಕ್ರವಾರ ನಡೆಯಬೇಕಿದ್ದ ಸಭೆಯನ್ನು ಮುಂದೂಡುವ ನಿರ್ಧಾರವನ್ನು ಟಾಟಾ ಟ್ರಸ್ಟ್‌ನ ಅಧ್ಯಕ್ಷ ನೋಯೆಲ್ ಟಾಟಾ ತೆಗೆದುಕೊಂಡಿದ್ದಾರೆ ಎಂದು ಮತ್ತೊಂದು ಮೂಲ ತಿಳಿಸಿದೆ.

ಬಿರುಕು ಬಿಟ್ಟ ನದಿ ಪಾತ್ರ

ಎಎಫ್‌ಪಿ ಚಿತ್ರ

ಅಹಮದಾಬಾದ್‌ನಲ್ಲಿ ಬಿಸಿಲಿನ ತಾಪ ಏರುತ್ತಿದ್ದು, ಬಿರುಕು ಬಿಟ್ಟ ಸಾಬರಮತಿ ನದಿ ಪಾತ್ರದಲ್ಲಿ ವ್ಯಕ್ತಿಯೊಬ್ಬರು ಶುಕ್ರವಾರ ಹಜ್ಜೆ ಹಾಕಿದರು

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1000-1400
ಮಧ್ಯಮ	₹600-1000
ಸಣ್ಣ	₹200-600

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹32000-32000
ಬಂಟ್ವಾಳ	₹13500-15000
ಹೊಸದುರ್ಗ	₹22000-22000

ಡಿಜಿಟಲ್ ಅರೆಸ್ಟ್ ವಂಚನೆಗಳಿಗೆ ಕಡಿವಾಣ ಹಾಕಲು ಪೊಲೀಸ್ ಇಲಾಖೆ ವಿಫಲವಾಗಿದೆಯೇ?

• ಹೌದು • ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ನಾಸಿಕ್: ನಿದಾ ಖಾನ್ ಬಂಧನ

ನಾಸಿಕ್ (ಪಿಟಿಐ): ಮಹಿಳಾ ಸಹೋದ್ಯೋಗಿಗಳ ಮೇಲಿನ ಲೈಂಗಿಕ ದೌರ್ಜನ್ಯ ಮತ್ತು ಬಲವಂತದ ಮತಾಂತರ ಪ್ರಕರಣಕ್ಕೆ ಸಂಬಂಧಿಸಿದಂತೆ ಟಿಸಿಎಸ್ ಕಂಪನಿಯ ನಾಸಿಕ್ ಘಟಕದ ಉದ್ಯೋಗಿ ನಿದಾ ಖಾನ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.

‘ನಿದಾ ಖಾನ್ ಅವರನ್ನು ಛತ್ರಪತಿ ಸಂಭಾಜಿನಗರದಲ್ಲಿ ಗುರುವಾರ ಬಂಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ನಿದಾ ಖಾನ್ ಅವರನ್ನು ಶುಕ್ರವಾರ ನಾಸಿಕ್ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ಅವರನ್ನು ಮೇ 11ರವರೆಗೆ ಪೊಲೀಸ್ ಕಸ್ಟಡಿಗೆ ವಹಿಸಲಾಗಿದೆ.

ಟಿಸಿಎಸ್ ಮಹಿಳಾ ಉದ್ಯೋಗಿಗಳ ಮೇಲಿನ ಲೈಂಗಿಕ ದೌರ್ಜನ್ಯ ಮತ್ತು ಬಲವಂತದ ಮತಾಂತರ ಆರೋಪಕ್ಕೆ ಸಂಬಂಧಿಸಿ ವಿವಿಧ ಠಾಣೆಗಳಲ್ಲಿ ದಾಖಲಾಗಿರುವ ಒಂಬತ್ತು ಪ್ರಕರಣಗಳ ಬಗ್ಗೆ ವಿಶೇಷ ತನಿಖಾ ತಂಡ(ಎಸ್‌ಐಟಿ) ತನಿಖೆ ನಡೆಸುತ್ತಿದೆ.

ದಿಯೋಲಾಲಿ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ನಿದಾ ಖಾನ್ ಆರೋಪಿಯಾಗಿದ್ದಾರೆ. ವಾಟ್ಸ್‌ಆ್ಯಪ್ ಗುಂಪುಗಳಲ್ಲಿ ಉದ್ಯೋಗಿಗಳನ್ನು ಗುರಿಯಾಗಿಸಿಕೊಂಡು, ಇಸ್ಲಾಂ ಪ್ರಾರ್ಥನೆ, ಮಾಂಸಹಾರ ಸೇವನೆ, ಇಸ್ಲಾಂ ಪದ್ಧತಿಗೆ ಅನುಗುಣವಾಗಿ ಬಟ್ಟೆ ಧರಿಸುವಂತೆ ಮತ್ತು ಆಚರಣೆಗಳನ್ನು ಪಾಲಿಸುವಂತೆ ನಿದಾ ಖಾನ್ ಒತ್ತಡ ಹೇರಿದ್ದರು ಎಂದು ದೂರುದಾರರು ಆರೋಪಿಸಿದ್ದಾರೆ.

ಪ್ರಕರಣ ದಾಖಲಾದ ಬಳಿಕ ತಲೆಮರೆಸಿಕೊಂಡಿದ್ದ ನಿದಾ ಖಾನ್‌ಗಾಗಿ ಎಸ್‌ಐಟಿ ಮಹಾರಾಷ್ಟ್ರದ ಹಲವೆಡೆ ಶೋಧ ನಡೆಸಿತ್ತು.

ತಾನು ಗರ್ಭ ಧರಿಸಿರುವ ಕಾರಣ ತನಗೆ ಬಂಧನದಿಂದ ಮಧ್ಯಂತರ ರಕ್ಷಣೆ ಮತ್ತು ನಿರೀಕ್ಷಣಾ ಜಾಮೀನು ನೀಡಬೇಕೆಂದು ಕೋರಿ ನಿದಾ ಖಾನ್ ಸಲ್ಲಿಸಿದ್ದ ಅರ್ಜಿಯನ್ನು ನಾಸಿಕ್ ನ್ಯಾಯಾಲಯವು ಮೇ 2ರಂದು ವಜಾಗೊಳಿಸಿತ್ತು.

ಒಪ್ಪಂದಕ್ಕೆ ಸಹಿ ಹಾಕದಿದ್ದರೆ ಅಪಾರ ನೋವು; ಟ್ರಂಪ್ ಎಚ್ಚರಿಕೆ

ಇರಾನ್ ದಾಳಿ: ಕದನ ವಿರಾಮ ಅನಿಶ್ಚಿತತೆ

ದುಬೈ (ಎಪಿ): ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಳಿಸಿ, ಶಾಶ್ವತ ಕದನ ವಿರಾಮ ಜಾರಿಗೊಳಿಸಲು ಪ್ರಯತ್ನಗಳು ನಡೆಯುತ್ತಿರುವ ಸಂದರ್ಭದಲ್ಲೇ, ಇರಾನ್ ಶುಕ್ರವಾರ ಮತ್ತೆ ಡ್ರೋನ್ ಮತ್ತು ಕ್ಷಿಪಣಿ ದಾಳಿ ನಡೆಸಿದೆ ಎಂದು ಅರಬ್ ಸಂಯುಕ್ತ ಸಂಸ್ಥಾನ (ಯುಎಇ) ಆರೋಪಿಸಿದೆ.

‘ಹೊರ್ಮುಜ್ ಜಲಸಂಧಿಯಲ್ಲಿ ಅಮೆರಿಕದ ನೌಕಾಪಡೆಯ ಮೂರು ಹಡಗುಗಳ ಮೇಲೆ ಇರಾನ್ ಅಪ್ರಚೋದಿತ ದಾಳಿ ನಡೆಸಿದ್ದು, ಇದನ್ನು ವಿಫಲಗೊಳಿಸಲಾಯಿತು’ ಎಂದು ಅಮೆರಿಕದ ಸೇನೆ ಹೇಳಿಕೊಂಡಿದೆ.

ಇರಾನ್ ಡ್ರೋನ್ ದಾಳಿಯಿಂದ ಆಗಿರುವ ಹಾನಿಯ ಬಗ್ಗೆ ಯುಎಇ ಇದುವರೆಗೆ ಅಧಿಕೃತ ಹೇಳಿಕೆ ನೀಡಿಲ್ಲ. ಆದರೆ, ಸಾರ್ವಜನಿಕರಿಗೆ ಕಟ್ಟಡಗಳ ಅವಶೇಷಗಳ ಬಳಿಗೆ ಹೋಗದಂತೆ ಹಾಗೂ ಛಾಯಾಚಿತ್ರಗಳನ್ನು ತೆಗೆಯದಂತೆ ಎಚ್ಚರಿಕೆ ನೀಡಿದೆ.

‘ಹೊರ್ಮುಜ್ ಜಲಸಂಧಿಯ ಕೆಶ್ಮ್ ದ್ವೀಪದಲ್ಲಿ ಅಮೆರಿಕದ ಪಡೆಯೊಂದಿಗೆ ಗುಂಡಿನ ದಾಳಿ ನಡೆದಿದೆ’ ಎಂದು ಇರಾನ್ ಸರ್ಕಾರಿ ಸ್ವಾಮ್ಯದ ಟಿವಿ ವಾಹಿನಿ ವರದಿ ಮಾಡಿದೆ.

ಅಪಾರ ನೋವು: ‘ಇರಾನ್-ಅಮೆರಿಕ ನಡುವೆ ಯಾವ ಕ್ಷಣದಲ್ಲಿ ಬೇಕಿದ್ದರೂ ಅಂತಿಮ ಒಪ್ಪಂದ ಏರ್ಪಡಬಹುದು’ ಎಂದು ಟ್ರಂಪ್ ಪುನರುಚ್ಚರಿಸಿದ್ದಾರೆ. ‘ನಾವು ಏನು ಹೇಳುತ್ತಿದ್ದೇವೆ ಎನ್ನುವುದನ್ನು ಅವರು (ಇರಾನ್) ಅರ್ಥ ಮಾಡಿಕೊಳ್ಳಬೇಕು. ಅಂತಿಮ ಒಪ್ಪಂದಕ್ಕೆ ಸಹಿ ಹಾಕದಿದ್ದರೆ ಅಪಾರ ನೋವು ಅನುಭವಿಸಬೇಕಾಗುತ್ತದೆ’ ಎಂದು ಟ್ರಂಪ್ ವಾಷಿಂಗ್ಟನ್‌ನಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಇಸ್ರೇಲ್ ನಡೆಸಿದ ವಾಯು ದಾಳಿಯಿಂದ ಲೆಬನಾನ್‌ನ ಅಲ್-ಹಲ್ಲೌಸಿಯಾಹ್‌ನಲ್ಲಿ ಹೊಗೆ ಆವರಿಸಿಕೊಂಡಿತ್ತು —ಎಎಫ್‌ಪಿ ಚಿತ್ರ

ಅಂತಿಮ ಸುತ್ತಿನ ಮಾತುಕತೆಗೆ ಅಡ್ಡಿ

ಪಶ್ಚಿಮ ಏಷ್ಯಾ ದೇಶಗಳ ಮೇಲೆ ಮತ್ತು ಹೊರ್ಮುಜ್ ಜಲಸಂಧಿಯಲ್ಲಿ ಇರಾನ್ ದಾಳಿ ಮುಂದುವರಿಸಿರುವುದರಿಂದ, ಪಾಕಿಸ್ತಾನ ಮಧ್ಯಸ್ಥಿಕೆಯಲ್ಲಿ ನಡೆಯಲಿರುವ ಅಂತಿಮ ಸುತ್ತಿನ ಮಾತುಕತೆಗೆ ಅಡ್ಡಿಯಾಗಿದೆ. ಸದ್ಯದ ಸ್ಥಿತಿಯಲ್ಲಿ ಅಮೆರಿಕ -ಇರಾನ್ ನಡುವಿನ ಕದನ ವಿರಾಮ ಅನಿಶ್ಚಿತತೆ ಇನ್ನಷ್ಟು ದಿನ ಮುಂದುವರಿಯುವ ಸಾಧ್ಯತೆಗಳಿವೆ ಎಂದು ಮೂಲಗಳು ಹೇಳಿವೆ.

ಪಾಕಿಸ್ತಾನದ ಮೂಲಕ ಅಮೆರಿಕ ಸಲ್ಲಿಸಿರುವ ಅಂತಿಮ ಒಪ್ಪಂದ ಪ್ರಸ್ತಾವದ ಬಗ್ಗೆ ಇರಾನ್ ಇದುವರೆಗೆ ಅಧಿಕೃತ ಪ್ರತಿಕ್ರಿಯೆ ನೀಡಿಲ್ಲ, ‘ಈ ಪ್ರಸ್ತಾವವನ್ನು ಪರಿಶೀಲಿಸುತ್ತಿದ್ದೇವೆ’ ಎಂದಷ್ಟೇ ಹೇಳಿದೆ.

ಇರಾನ್ ಯುರೇನಿಯಂ ಸಮೃದ್ಧೀಕರಣ ಮತ್ತು ಪರಮಾಣು ಅಭಿವೃದ್ಧಿ ಯೋಜನೆ ಬಗ್ಗೆ ಅಂತಿಮ ಒಪ್ಪಂದದಲ್ಲಿ ಏನಿದೆ ಎನ್ನುವುದು ಸ್ಪಷ್ಟವಾಗಿಲ್ಲ. ಇರಾನ್ ಪರಮಾಣು ಶಸ್ತ್ರಾಸ್ತ್ರ ಅಭಿವೃದ್ಧಿ ನಿಲ್ಲಿಸಬೇಕೆಂಬ ಪ್ರಮುಖ ಬೇಡಿಕೆಯೊಂದಿಗೆ ಅಮೆರಿಕ ಮತ್ತು ಇಸ್ರೇಲ್ ಪಡೆಗಳು ಫೆಬ್ರುವರಿ 28ರಿಂದ ಇರಾನ್ ಮೇಲೆ ದಾಳಿ ಆರಂಭಿಸಿದ್ದವು.

ಹೊರ್ಮುಜ್ ಜಲಸಂಧಿಯನ್ನು ಸಂಚಾರಕ್ಕೆ ಮುಕ್ತಗೊಳಿಸಬೇಕೆಂದು ಅಮೆರಿಕ ಮತ್ತು ಪಶ್ಚಿಮ ಏಷ್ಯಾ ದೇಶಗಳು ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಮೇಲೆ ಒತ್ತಡ ಮುಂದುವರಿಸಿವೆ.

ಇಸ್ರೇಲ್-ಲೆಬನಾನ್ ಮಾತುಕತೆ ಶೀಘ್ರ: ‘ಸಂಘರ್ಷ ಕೊನೆಗೊಳಿಸಲು ಇಸ್ರೇಲ್ ಮತ್ತು ಲೆಬನಾನ್ ನಡುವೆ ಮುಂದಿನ ವಾರ ವಾಷಿಂಗ್ಟನ್‌ನಲ್ಲಿ ನೇರ ಮಾತುಕತೆ ನಿಗದಿಯಾಗಿದೆ. ಮೇ 14 ಮತ್ತು 15ರಂದು ಮಾತುಕತೆ ನಡೆಯಲಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

> ಹೊರ್ಮುಜ್ ಜಲಸಂಧಿಯಲ್ಲಿ ಉದ್ವಿಗ್ನತೆ ಹೆಚ್ಚಿಸಲು ನಾವು ಪ್ರಯತ್ನಿಸುತ್ತಿಲ್ಲ. ಇರಾನ್ ಅಪ್ರಚೋದಿತವಾಗಿ ದಾಳಿ ನಡೆಸಿದಾಗ ಪ್ರತಿದಾಳಿ ನಡೆಸಿದ್ದೇವೆ
>
> **ಅಮೆರಿಕದ ನೌಕಾಪಡೆ**

ಹೊರ್ಮುಜ್: ಸಂಸ್ಥೆ ರಚಿಸಿದ ಇರಾನ್

ಹೊರ್ಮುಜ್ ಜಲಸಂಧಿ ಮೂಲಕ ಸಾಗುವ ಹಡಗುಗಳನ್ನು ಪರಿಶೀಲಿಸಿ ಅನುಮತಿ ನೀಡಲು ಮತ್ತು ತೆರಿಗೆ ವಿಧಿಸಲು ಇರಾನ್ ಸರ್ಕಾರಿ ಸಂಸ್ಥೆಯೊಂದನ್ನು ರಚಿಸಿದೆ ಎಂದು ಹಡಗುಗಳ ಸಂಚಾರದ ಮೇಲೆ ನಿಗಾ ವಹಿಸುವ ಲಾಯ್ಡ್ಸ್ ಕಂಪನಿ ವರದಿ ಮಾಡಿದೆ. ಇರಾನ್ ಹೊರ್ಮುಜ್ ಜಲಸಂಧಿಯಲ್ಲಿ ವಾಣಿಜ್ಯ ಹಡಗುಗಳ ಸಂಚಾರಕ್ಕೆ ನಿರ್ಬಂಧ ಹೇರಿರುವುದರಿಂದ ಅಂತರರಾಷ್ಟ್ರೀಯ ಮಾರುಕಟ್ಟೆಗೆ ಕಚ್ಚಾತೈಲ, ಅನಿಲ, ರಸಗೊಬ್ಬರ ಪೂರೈಕೆಗೆ ಭಾರಿ ಪ್ರಮಾಣದಲ್ಲಿ ಅಡ್ಡಿಯಾಗಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs

ಕರ್ನಾಟಕದಾದ್ಯಂತ ಮನೆಯಿಂದಲೇ ಕೆಲಸ. ಆಫೀಸ್‌ಗಳಿಗೆ, ಕಂಪನಿಗಳಿಗೆ ವಿದ್ಯಾರ್ಥಿನಿಯರು, ಮಹಿಳೆಯರು, ಯುವಕರು, ತಕ್ಷಣ ಬೇಕಾಗಿದ್ದಾರೆವಿದ್ಯಾರ್ಹತೆಯಿಲ್ಲದವರಿಗೂ. 20,000 / 25,000 ಕೊರಿಯರ್, 7090177446

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 7795874991

ವ್ಯಾಪಾರ

Business to Business

Business

ಗೋಲ್ಡ್ ಲೋನ್ 10 ರಿಂದ 20 ಗ್ರಾಂ ಬಂಗಾರವನ್ನು ಖರೀದಿಸಲು ಸಾಲ ಕೊಡಲಾಗುವುದು. Ph : 9036316959 , ಬೆಂಗಳೂರು

ಪ್ರವಾಸ

Travel Agencies

ಚಾರ್ಧಾಮ್ ಪ್ರವಾಸ 13 ದಿನಗಳು 26/5/26, ನೇಪಾಳ ಪ್ರವಾಸ 9 ದಿನಗಳು 4/6/26, ಕಾಮಾಕ್ಯ ಅಸ್ಸಾಂ ಮೇಘಾಲಯ ಪ್ರವಾಸ 9 ದಿನಗಳು 10/6/26 ಸುವರ್ಣಯಾತ್ರ 6360146483 9008381022

ಭಾರತೀಯರಿಬ್ಬರಿಗೆ ಹಂಟಾವೈರಸ್

ಲಂಡನ್/ನವದೆಹಲಿ (ಪಿಟಿಐ): ಐಷಾರಾಮಿ ನೌಕೆ ‘ಎಂವಿ ಹೊಂಡಿಯಸ್’ನಲ್ಲಿರುವ ಐವರು ಸಿಬ್ಬಂದಿಯಲ್ಲಿ ಹಂಟಾವೈರಸ್ ಸೋಂಕು ದೃಢಪಟ್ಟಿದ್ದು, ಇದರಲ್ಲಿ ಇಬ್ಬರು ಭಾರತೀಯರಿದ್ದಾರೆ ಎಂದು ಬಿಬಿಸಿ ವರದಿ ಮಾಡಿದೆ.

ಶಂಕಿತ ಎಂಟು ಪ್ರಕರಣಗಳಲ್ಲಿ ಐದು ದೃಢಪಟ್ಟಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆ ತಿಳಿಸಿದೆ. ಅರ್ಜೆಂಟೀನಾದಿಂದ ಏ.1ರಂದು ಪ್ರವಾಸ ಆರಂಭಿಸಿರುವ ವಿಹಾರ ನೌಕೆಯಲ್ಲಿ 28 ದೇಶಗಳ 150 ಪ್ರಯಾಣಿಕರು ಹಾಗೂ ಸಿಬ್ಬಂದಿ ಇದ್ದು, ಮೇ 10ರಂದು ಸ್ಪೇನ್‌ಗೆ ತಲುಪುವ ನಿರೀಕ್ಷೆಯಿದೆ.

ನೌಕೆಯಲ್ಲಿರುವ 12 ದೇಶಗಳ 29 ಪ್ರಯಾಣಿಕರು ಈಗಾಗಲೇ ತಮ್ಮ ಪ್ರವಾಸ ಮೊಟಕುಗೊಳಿಸಿ ಹಡಗಿನಿಂದ ಇಳಿದಿದ್ದಾರೆ. ವಿಹಾರ ನೌಕೆಯಲ್ಲಿ ಪ್ರಯಾಣಿಸುತ್ತಿರುವ ಎಲ್ಲರಿಗೂ ಕಡ್ಡಾಯವಾಗಿ ಮಾಸ್ಕ್ ಧರಿಸುವ ಜೊತೆಗೆ, ಅಗತ್ಯ ಸುರಕ್ಷತಾ ಕ್ರಮ ತೆಗೆದುಕೊಳ್ಳುವಂತೆ ಆರೋಗ್ಯ ಇಲಾಖೆಯ ಅಧಿಕಾರಿಗಳು ಸೂಚಿಸಿದ್ದಾರೆ.

‘ಭಾರತಕ್ಕೆ ಅಪಾಯವಿಲ್ಲ’: ಭಾರತೀಯರಿಬ್ಬರಲ್ಲಿ ಹಂಟಾವೈರಸ್ ಸೋಂಕು ದೃಢಪಟ್ಟಿದ್ದರೂ, ದೇಶದಲ್ಲಿ ಯಾವುದೇ ರೀತಿಯ ಆತಂಕ ಇಲ್ಲ ಎಂದು ಐಸಿಎಂಆರ್‌ನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ವೈರಾಲಜಿಯ ನಿರ್ದೇಶಕ ಡಾ. ನವೀನ್ ಕುಮಾರ್ ತಿಳಿಸಿದ್ದಾರೆ. ‘ಸಮುದಾಯಕ್ಕೆ ವೈರಸ್ ಹರಡಿದ ಪುರಾವೆ ಲಭ್ಯವಿಲ್ಲ’ ಎಂದಿದ್ದಾರೆ.

ಪಾಕಿಸ್ತಾನಕ್ಕೆ ಚೀನಾ ಬೆಂಬಲ

ಬೀಜಿಂಗ್ (ಪಿಟಿಐ): ‘ಕಳೆದ ವರ್ಷ ಭಾರತದ ಜೊತೆಗೆ ಪಾಕಿಸ್ತಾನ ನಡೆಸಿದ ಸಂಘರ್ಷದ ವೇಳೆ ಮಿತ್ರರಾಷ್ಟ್ರ ಪಾಕಿಸ್ತಾನಕ್ಕೆ ತಾಂತ್ರಿಕ ನೆರವು ನೀಡಿದ್ದೆವು’ ಎಂದು ಚೀನಾವು ಇದೇ ಮೊದಲ ಬಾರಿಗೆ ಬಹಿರಂಗವಾಗಿ ಒಪ್ಪಿಕೊಂಡಿದೆ.

ಚೀನಾದ ಸರ್ಕಾರಿ ಸ್ವಾಮ್ಯದ ಸುದ್ದಿವಾಹಿನಿ ‘ಸಿಸಿಟಿವಿ’ಯು ಗುರುವಾರ ಚೀನಾ ಏವಿಯೇಷನ್ ಇಂಡಸ್ಟ್ರಿ ಕಾರ್ಪೊರೇಷನ್ ಆಫ್ ಚೀನಾ (ಎವಿಐಸಿ) ಅಧೀನದ ಚೆಂಗ್ಡು ವಿಮಾನ ವಿನ್ಯಾಸ ಹಾಗೂ ಸಂಶೋಧನಾ ಸಂಸ್ಥೆಯ ಎಂಜಿನಿಯರ್ ಜಾಂಗ್ ಹೆಂಗ್ ಅವರ ಸಂದರ್ಶನವನ್ನು ಪ್ರಸಾರ ಮಾಡಿತು. ಈ ಸಂದರ್ಶನದಲ್ಲಿ ಅವರು ಈ ವಿಷಯ ಪ್ರಸ್ತಾಪಿಸಿದ್ದಾರೆ.

ಚೀನಾದ ಅತ್ಯಾಧುನಿಕ ಯುದ್ಧ ವಿಮಾನ ಹಾಗೂ ಮಾನವರಹಿತ ವೈಮಾನಿಕ ವಿನ್ಯಾಸದಲ್ಲಿ ಅತ್ಯುನ್ನತ ಸಂಸ್ಥೆಯಾಗಿ ಇದು ಗುರುತಿಸಿಕೊಂಡಿದೆ. ‘ಕಳೆದ ವರ್ಷ ಭಾರತದ ಜೊತೆಗಿನ ಸಂಘರ್ಷದ ವೇಳೆ ನಾವು ತಾಂತ್ರಿಕ ನೆರವು ಒದಗಿಸಿದ್ದೆವು’ ಎಂದು ಸಂದರ್ಶನದಲ್ಲಿ ತಿಳಿಸಿದ್ದಾರೆ ಎಂದು ಹಾಂಗ್‌ಕಾಂಗ್ ಮೂಲದ ‘ಸೌತ್ ಚೈನಾ ಮಾರ್ನಿಂಗ್ ಪೋಸ್ಟ್’ ವರದಿ ಮಾಡಿದೆ.

ಪಾಕಿಸ್ತಾನದ ವಾಯುಸೇನೆಯಲ್ಲಿ ‘ಎವಿಐಸಿ’ ಸಂಸ್ಥೆ ನಿರ್ಮಿಸಿರುವ ಚೀನಾ ನಿರ್ಮಿತ ‘ಜೆ-10ಸಿಇ’ ಯುದ್ಧವಿಮಾನಗಳನ್ನು ಕಾರ್ಯಾಚರಣೆಗೆ ಬಳಸಿಕೊಳ್ಳುತ್ತಿದೆ.

ಕರ್ನಾಟಕ ಹಾಗೂ ತಮಿಳುನಾಡು ನಡುವಿನ ದಕ್ಷಿಣ ಪಿನಾಕಿನಿ ಜಲ ವಿವಾದ

ನ್ಯಾಯಮಂಡಳಿ: 6 ತಿಂಗಳ ಕಾಲಾವಕಾಶ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಜಲಶಕ್ತಿ ಸಚಿವಾಲಯಕ್ಕೆ ಫೆಬ್ರುವರಿ 2ರಂದು ನಿರ್ದೇಶನ
- ನ್ಯಾಯಮಂಡಳಿ ರಚನೆಗೆ ಅಂತರ್ ಇಲಾಖೆಗಳ ಜತೆಗೆ ಸಮಾಲೋಚನೆ
- ಕೇಂದ್ರ ಸಚಿವ ಸಂಪುಟದ ಪರಿಗಣನೆಗೆ ಕರಡು ಟಿಪ್ಪಣಿ

ನವದೆಹಲಿ: ಕರ್ನಾಟಕ ಹಾಗೂ ತಮಿಳುನಾಡು ನಡುವಿನ ಪೆನ್ನಾರ್ (ದಕ್ಷಿಣ ಪಿನಾಕಿನಿ) ನದಿ ನೀರು ಹಂಚಿಕೆ ವಿವಾದಗಳನ್ನು ಬಗೆಹರಿಸಲು ನ್ಯಾಯಮಂಡಳಿ ಸ್ಥಾಪಿಸಲು ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಆರು ತಿಂಗಳ ಕಾಲಾವಕಾಶ ನೀಡಿದೆ.

ಜಲವಿವಾದ ಬಗೆಹರಿಸಲು ಒಂದು ತಿಂಗಳಲ್ಲಿ ನ್ಯಾಯಮಂಡಳಿ ರಚಿಸಬೇಕು ಎಂದು ನ್ಯಾಯಮೂರ್ತಿ ವಿಕ್ರಮ್‌ನಾಥ್ ನೇತೃತ್ವದ ಪೀಠವು ಜಲಶಕ್ತಿ ಸಚಿವಾಲಯಕ್ಕೆ ಫೆಬ್ರುವರಿ 2ರಂದು ನಿರ್ದೇಶನ ನೀಡಿತ್ತು.

ಈ ಸಂಬಂಧ ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದ್ದ ಜಲಶಕ್ತಿ ಸಚಿವಾಲಯ, ‘ನ್ಯಾಯಮಂಡಳಿ ರಚನೆಗೆ ಆರು ತಿಂಗಳ ಕಾಲಾವಕಾಶ ನೀಡಬೇಕು’ ಎಂದು ಮನವಿ ಮಾಡಿತ್ತು.

ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯ ಭಾಟಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠ ಶುಕ್ರವಾರ ಪುರಸ್ಕರಿಸಿತು. ಈ ವಿಷಯದಲ್ಲಿ ಸರ್ಕಾರವು ತ್ವರಿತ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದು ಭಾಟಿ ಅವರು ಪೀಠದ ಗಮನಕ್ಕೆ ತಂದರು.

ಕರ್ನಾಟಕ ಸರ್ಕಾರದ ಪರ ವಾದ ಮಂಡಿಸಿದ ಹೆಚ್ಚುವರಿ ಅಡ್ವೊಕೇಟ್ ಜನರಲ್ ನಿಶಾಂತ್ ಪಾಟೀಲ, ‘ಇದೊಂದು ಸಣ್ಣ ಜಲವಿವಾದ’ ಎಂದರು. ‘ನ್ಯಾಯಪೀಠದ ನಿರ್ದೇಶನ ಪಾಲಿಸಲು ಸಚಿವಾಲಯವು ಅಗತ್ಯ ಕ್ರಮ ಕೈಗೊಳ್ಳುತ್ತಿದೆ. ನ್ಯಾಯಮಂಡಳಿ ರಚನೆಗೆ ಅಂತರ್ ಇಲಾಖೆಗಳ ಜತೆಗೆ ಸಮಾಲೋಚನೆ ನಡೆಸಲಾಗಿದೆ. ವಿವಿಧ ಇಲಾಖೆಗಳ ಅಭಿಪ್ರಾಯ ಪಡೆದು ಸಚಿವ ಸಂಪುಟ ಟಿಪ್ಪಣಿ ಸಿದ್ಧಪಡಿಸಲಾಗಿದೆ. ಕೇಂದ್ರ ಸಚಿವ ಸಂಪುಟದ ಪರಿಗಣನೆಗೆ ಕರಡು ಟಿಪ್ಪಣಿಯನ್ನು ಸಂಪುಟ ಕಾರ್ಯದರ್ಶಿ ಅವರಿಗೆ ಕಳುಹಿಸಲಾಗಿದೆ’ ಎಂದು ಜಲಶಕ್ತಿ ಸಚಿವಾಲಯವು ಅರ್ಜಿಯಲ್ಲಿ ತಿಳಿಸಿತ್ತು.

‘ಸಂಪುಟದ ಅನುಮೋದನೆಯ ನಂತರ, ಅಂತರರಾಜ್ಯ ನದಿ ನೀರು ವಿವಾದ ಕಾಯ್ದೆ- 1956ರ ಪ್ರಕಾರ ನ್ಯಾಯಮಂಡಳಿಗೆ ಅಧ್ಯಕ್ಷರು ಮತ್ತು ಸದಸ್ಯರ ಹುದ್ದೆಗೆ ನಾಮನಿರ್ದೇಶನ ಮಾಡುವಂತೆ ಭಾರತದ ಮುಖ್ಯ ನ್ಯಾಯಮೂರ್ತಿ ಅವರಿಗೆ ಕೋರಿಕೆ ಸಲ್ಲಿಸಲಾಗುತ್ತದೆ. ನಾಮನಿರ್ದೇಶನ ಮಾಡಿದ ನಂತರ, ಕರಡು ಅಧಿಸೂಚನೆಯನ್ನು ಕಾನೂನು ವ್ಯವಹಾರಗಳ ಸಚಿವಾಲಯ ಸಿದ್ಧಪಡಿಸುತ್ತದೆ. ಆ ನಂತರ, ನ್ಯಾಯಮಂಡಳಿ ರಚನೆಯ ಅಧಿಸೂಚನೆ ಹೊರಡಿಸಲಾಗುತ್ತದೆ. ಈ ಪ್ರಕ್ರಿಯೆಗಳನ್ನು ನಡೆಸಲು ಸಮಯಾವಕಾಶ ಬೇಕಾಗುತ್ತದೆ’ ಎಂದು ಸಚಿವಾಲಯ ತಿಳಿಸಿತ್ತು.

ಸುಪ್ರೀಂ ಮೆಟ್ಟಿಲೇರಿದ್ದ ತಮಿಳುನಾಡು

ದಕ್ಷಿಣ ಪಿನಾಕಿನಿ ನದಿಯ ಕಣಿವೆಯಲ್ಲಿ ಕರ್ನಾಟಕ ಸರ್ಕಾರವು ಮಾರ್ಕಂಡೇಯ ನದಿಗೆ ಅಡ್ಡಲಾಗಿ ಅಣೆಕಟ್ಟೆ ನಿರ್ಮಿಸಿದೆ. ಬೆಂಗಳೂರಿನ ಎಲೆ ಮಲ್ಲಪ್ಪಚೆಟ್ಟಿ ಕೆರೆಯಿಂದ ಹೊಸಕೋಟೆಯವರೆಗೆ ನೀರು ಹರಿಸುವ ಕಾಮಗಾರಿ ಹಾಗೂ ಬ್ಯಾಲಹಳ್ಳಿ ಗ್ರಾಮದ ಹತ್ತಿರ ಪೆನ್ನಾರ್ ನದಿಯಿಂದ ನೀರು ಹರಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದೆ. ಈ ಯೋಜನೆಗೆ ವಿರೋಧ ವ್ಯಕ್ತಪಡಿಸಿ ತಮಿಳುನಾಡು ಸರ್ಕಾರವು 2018ರಲ್ಲಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು.

ದುಪ್ಪಟ್ಟು ಮನರಂಜನೆಯ ಅಯೋಗ್ಯ-2

ಸತೀಶ್ ನೀನಾಸಂ, ರಚಿತಾ ರಾಮ್

ಜೂನ್ ಅಥವಾ ಆಗಸ್ಟ್‌ನಲ್ಲಿ ತೆರೆಗೆ

• ಅಭಿಲಾಷ್ ಪಿ.ಎಸ್.

'ಅಯೋಗ್ಯ', 'ಮದಗಜ' ಸಿನಿಮಾ ಖ್ಯಾತಿಯ ಎಸ್.ಮಹೇಶ್ ಕುಮಾರ್ ನಿರ್ದೇಶನದ, ಸತೀಶ್ ನೀನಾಸಂ ಹಾಗೂ ರಚಿತಾ ರಾಮ್ ಮುಖ್ಯಭೂಮಿಕೆಯಲ್ಲಿರುವ 'ಅಯೋಗ್ಯ-2' ಮೊದಲ ಹೆಜ್ಜೆಯಲ್ಲೇ ಭರ್ಜರಿ ಗಳಿಕೆ ಮಾಡಿದೆ.

ಸಿನಿಮಾದ ಆಡಿಯೊ ಹಕ್ಕನ್ನು ಆನಂದ್ ಆಡಿಯೊ ₹2 ಕೋಟಿಗೆ ಖರೀದಿಸಿದೆ. ಚಿತ್ರತಂಡ ಮಾರಾಟ ಮೊತ್ತವನ್ನು ಅಧಿಕೃತವಾಗಿಯೇ ಘೋಷಿಸಿದೆ. ಎಂ.ಮುನೇಗೌಡ ಅವರು ತಮ್ಮ ಎಸ್ ವಿ ಸಿ ಪ್ರೊಡಕ್ಷನ್‌ನಡಿ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ.

ಮಹೇಶ್

ಈ ಕುರಿತು ಮಾಹಿತಿ ನೀಡಿರುವ ಮಹೇಶ್ ಕುಮಾರ್, 'ಸಿನಿಮಾದ ಚಿತ್ರೀಕರಣ ಪೂರ್ಣವಾಗಿದ್ದು, ಪೋಸ್ಟ್ ಪ್ರೊಡಕ್ಷನ್ ಕೆಲಸಗಳೂ ಮುಗಿದಿವೆ. ಸೆನ್ಸಾರ್ ಹಂತದಲ್ಲಿ ಸಿನಿಮಾವಿದೆ. ಚಿತ್ರವನ್ನು ಜೂನ್ ಅಂತ್ಯದಲ್ಲಿ ಅಥವಾ ಆಗಸ್ಟ್‌ನಲ್ಲಿ ತೆರೆಗೆ ತರುವ ಯೋಚನೆಯಲ್ಲಿದ್ದೇವೆ. 'ಟಾಕ್ಸಿಕ್' ಮುಂದೂಡಿಕೆಯಾದ ದಿನಾಂಕಕ್ಕೆ 'ಪೆದ್ದಿ' ಸಿನಿಮಾ ಬರುತ್ತಿದೆ. ಹೀಗಾಗಿ ಇತರೆ ದೊಡ್ಡ ಸಿನಿಮಾಗಳ ಬಿಡುಗಡೆ ನೋಡಿಕೊಂಡು ಬರಲಿದ್ದೇವೆ. ಮೊದಲ ಸಿನಿಮಾದ ಬಿಡುಗಡೆ ದಿನದಂದೇ 2ನೇ ಭಾಗವನ್ನೂ ರಿಲೀಸ್ ಮಾಡಬೇಕು ಎನ್ನುವ ಯೋಚನೆಯೂ ಇದೆ. ಸದ್ಯದಲ್ಲೇ ಅಧಿಕೃತ ಬಿಡುಗಡೆ ದಿನಾಂಕ ಘೋಷಿಸಲಿದ್ದೇವೆ' ಎಂದಿದ್ದಾರೆ.

₹9 ಲಕ್ಷದಿಂದ ₹2 ಕೋಟಿ!

'ಮೊದಲ ಭಾಗದ ಆಡಿಯೊ ಹಕ್ಕು ₹9 ಲಕ್ಷಕ್ಕೆ ಮಾರಾಟವಾಗಿತ್ತು. ಇದೀಗ ಎರಡನೇ ಭಾಗದ ಹಕ್ಕು ₹2ಕೋಟಿಗೆ ಮಾರಾಟವಾಗಿದೆ. ಈ ಏರಿಕೆಗೆ 'ಅಯೋಗ್ಯ' ಎಂಬ ಬ್ರ್ಯಾಂಡ್ ಹಾಗೂ ತಂಡ ಕಾರಣ. ಎರಡನೇ ಭಾಗದ ಹಾಡುಗಳನ್ನು ಕೇಳಿ ಆನಂದ್ ಆಡಿಯೊದವರು ಬಹಳ ಖುಷಿಪಟ್ಟರು. ಮೊದಲ ಭಾಗದ 'ಏನಮ್ಮಿ..ಏನಮ್ಮಿ..' ಹಾಡೊಂದೇ ಇಲ್ಲಿಯವರೆಗೆ 12.5 ಕೋಟಿಗೂ ಅಧಿಕ ವ್ಯೂವ್ಸ್ ಪಡೆದಿದೆ. ಉಳಿದ ಎಲ್ಲಾ ಹಾಡುಗಳನ್ನು ಸೇರಿಸಿದರೆ 20 ಕೋಟಿಗೂ ಅಧಿಕ ವ್ಯೂವ್ಸ್ ಆಗಿದೆ. ಅವರು ಹೂಡಿಕೆ ಮಾಡಿದ್ದಕ್ಕಿಂತ ನೂರು ಪಟ್ಟು ಗಳಿಕೆಯಾಗಿದೆ. ಆ ನಿರೀಕ್ಷೆ ಹಾಗೂ ಭರವಸೆಯೇ ಈ ಮೊತ್ತಕ್ಕೆ ಆಡಿಯೊ ಹಕ್ಕುಗಳು ಮಾರಾಟವಾಗಲು ಕಾರಣವಾಗಿವೆ. ಅದ್ದೂರಿಯಾಗಿ ಹಾಡುಗಳ ಚಿತ್ರೀಕರಣವನ್ನೂ ಮಾಡಿದ್ದೇವೆ. ಯಾರೂ ಹೇಳಿಕೊಳ್ಳದ ಸಂದರ್ಭದಲ್ಲಿ ಹಕ್ಕುಗಳ ಮಾರಾಟ ಮೊತ್ತವನ್ನು ಘೋಷಿಸಿದ್ದೇವೆ' ಎನ್ನುತ್ತಾರೆ ಮಹೇಶ್.

₹2 ಕೋಟಿಗೆ ಆಡಿಯೊ ಹಕ್ಕು ಮಾರಾಟ

ಸ್ಯಾಟಲೈಟ್, ಒಟಿಟಿಗೂ ಉತ್ತಮ ಬೇಡಿಕೆ

'ಗೆದ್ದ ಸಿನಿಮಾದ ಎರಡನೇ ಭಾಗ ಮಾಡಿದಾಗ 'ಬ್ರ್ಯಾಂಡ್'ನಿಂದಾಗಿ ವಹಿವಾಟುಗಳೂ ಚೆನ್ನಾಗಿ ಆಗುತ್ತವೆ. ಈಗಾಗಲೇ ಸ್ಯಾಟಲೈಟ್ ಹಕ್ಕು ಹಾಗೂ ಒಟಿಟಿ ಹಕ್ಕುಗಳಿಗೆ ಒಳ್ಳೆಯ ಬೇಡಿಕೆ ಬಂದಿದೆ. ಶೀಘ್ರದಲ್ಲೇ ಮೊದಲ ಪ್ರತಿ ಸಿದ್ಧಪಡಿಸಿ ಅವರಿಗೆ ತೋರಿಸುತ್ತೇವೆ. ಸಿನಿಮಾ ಬಿಡುಗಡೆ ಮೊದಲೇ ಈ ಹಕ್ಕುಗಳು ಮಾರಾಟವಾಗುವ ಭರವಸೆಯೂ ಇದೆ. ಮೊದಲ ಭಾಗವು ಟಿವಿಯಲ್ಲಿ ಅತ್ಯಧಿಕ ವೀಕ್ಷಣೆ ಪಡೆದಿತ್ತು. ಈಗಲೂ ಪ್ರಸಾರವಾದಾಗ ಒಳ್ಳೆಯ ವೀಕ್ಷಣೆ ಪಡೆಯುತ್ತಿದೆ. ಸಿನಿಮಾದ ಎರಡನೇ ಭಾಗದಲ್ಲಿ ದುಪ್ಪಟ್ಟು ಮನರಂಜನೆ ನೀಡಿದ್ದೇವೆ. ಇದಕ್ಕೆ ತಕ್ಕಂತೆ ನಿರ್ಮಾಪಕರಾದ ಮುನೇಗೌಡ ಅವರು ಅದ್ದೂರಿಯಾಗಿ ಸಿನಿಮಾ ನಿರ್ಮಾಣವನ್ನೂ ಮಾಡಿದ್ದಾರೆ. ದೊಡ್ಡ ತಾರಾಬಳಗವೇ ಸಿನಿಮಾದಲ್ಲಿದೆ' ಎಂದರು ಮಹೇಶ್.

ಚಿತ್ರಕ್ಕೆ ಅರ್ಜುನ್ ಜನ್ಯ ಸಂಗೀತ ನಿರ್ದೇಶನವಿದೆ. ರವಿಶಂಕರ್, ಶಿವರಾಜ್ ಕೆ.ಆರ್. ಪೇಟೆ ಸೇರಿದಂತೆ 'ಅಯೋಗ್ಯ' ಸಿನಿಮಾದಲ್ಲಿ ಅಭಿನಯಿಸಿದ ಬಹುತೇಕ ಕಲಾವಿದರು ಸೀಕ್ವೆಲ್‌ನಲ್ಲೂ ಇದ್ದಾರೆ. ಸೀಕ್ವೆಲ್‌ನಲ್ಲಿ ಮಂಜು ಪಾವಗಡ ಸೇರ್ಪಡೆಯಾಗಿದ್ದಾರೆ. ಮಾಸ್ತಿ ಸಂಭಾಷಣೆ, ವಿಶ್ವಜಿತ್ ರಾವ್ ಛಾಯಾಚಿತ್ರಗ್ರಹಣ ಸಿನಿಮಾಗಿದೆ.

ವಿನಯ್ ರಾಜ್‌ಕುಮಾರ್

ಮಾಚಿಸ್‌ನಲ್ಲಿ ಹೀಗಿದ್ದಾರೆ ವಿನಯ್ ರಾಜ್‌ಕುಮಾರ್

'ಗ್ರಾಮಾಯಣ' ಹಾಗೂ 'ಸಿಟಿ ಲೈಟ್ಸ್' ಸಿನಿಮಾ ಬಿಡುಗಡೆಗೆ ಎದುರು ನೋಡುತ್ತಿರುವ ವಿನಯ್ ರಾಜ್‌ಕುಮಾರ್ ನಟನೆಯ ಹೊಸ ಸಿನಿಮಾ 'ಮಾಚಿಸ್'ನ ಫಸ್ಟ್‌ಲುಕ್ ಬಿಡುಗಡೆಯಾಗಿದೆ.

ಸಿನಿಮಾವನ್ನು 'ಮರ್ಫಿ' ಸಿನಿಮಾ ನಿರ್ದೇಶಿಸಿದ್ದ ಬಿ.ಎಸ್.ಪಿ.ವರ್ಮಾ ನಿರ್ದೇಶಿಸುತ್ತಿದ್ದು, ಸುರೇಶ್ ಗೌಡ ಹೆಣ್ಣೂರು ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ. ಆದರ್ಶ ಆರ್. ಛಾಯಾ ಚಿತ್ರಗ್ರಹಣ, ಕಿರಣ್ ಸಂಕಲನ, ಗುಣ ಕಲಾನಿರ್ದೇಶನ, ಕೆ.ರವಿವರ್ಮಾ ಸಾಹಸ ನಿರ್ದೇಶನ ಚಿತ್ರಕ್ಕಿದೆ. ಜುಲೈನಿಂದ ಚಿತ್ರದ ಚಿತ್ರೀಕರಣ ಆರಂಭವಾಗಲಿದೆ ಎಂದು ಚಿತ್ರತಂಡ ತಿಳಿಸಿದೆ.

ಟಾಕ್ಸಿಕ್ ಯಶ್ ಮತ್ತೊಂದು ಲುಕ್

ಯಶ್ ನಟನೆಯ 'ಟಾಕ್ಸಿಕ್' ಸಿನಿಮಾದ ಬಿಡುಗಡೆ ದಿನಾಂಕ ಇತ್ತೀಚೆಗಷ್ಟೇ ಮುಂದೂಡಿಕೆಯಾಗಿತ್ತು. ಹೀಗಿದ್ದರೂ ಸಿನಿಮಾ ಬಗೆಗಿನ ನಿರೀಕ್ಷೆ ಕಡಿಮೆಯಾಗಿಲ್ಲ. ಈ ಸಂದರ್ಭದಲ್ಲೇ ಸಿನಿಮಾದೊಳಗಿನ ಅವರ ಪಾತ್ರದ ಮತ್ತೊಂದು ಫೋಟೊ ಬಿಡುಗಡೆಯಾಗಿದೆ.

ಇತ್ತೀಚೆಗೆ ಅಮೆರಿಕದ ಲಾಸ್ ವೇಗಸ್‌ನಲ್ಲಿ ನಡೆದ 'ಸಿನಿಮಾಕಾನ್'ನಲ್ಲಿ ಭಾಗವಹಿಸಿದ ಯಶ್ ಅಲ್ಲಿನ ಹಲವು ಮಾಧ್ಯಮಗಳ ಜೊತೆ 'ಟಾಕ್ಸಿಕ್' ಕುರಿತು ಮಾತನಾಡಿದ್ದಾರೆ. ಅಲ್ಲಿನ ಪ್ರಮುಖ ಅಂತರರಾಷ್ಟ್ರೀಯ ಸಿನಿಮಾ ನಿಯತಕಾಲಿಕದ ಮುಖಪುಟದಲ್ಲೂ ಯಶ್ ಅವರ ಈ ಫೋಟೊ ಪ್ರಕಟವಾಗಿದೆ. ಇದು ಪಾತ್ರದ ಕುರಿತ ನಿರೀಕ್ಷೆಯನ್ನು ಮತ್ತಷ್ಟು ಹೆಚ್ಚಿಸಿದೆ. ಕಳೆದ ಮಾರ್ಚ್ 19ರಂದೇ ತೆರೆಕಾಣಬೇಕಿದ್ದ ಸಿನಿಮಾ ಜೂನ್ 4ಕ್ಕೆ ಮುಂದೂಡಿಕೆಯಾಗಿತ್ತು. ಸಿನಿಮಾಕಾನ್‌ನಲ್ಲಿ ಸಿನಿಮಾದ ತುಣುಕುಗಳ ಪ್ರದರ್ಶನದ ಬಳಿಕ ಚಿತ್ರವನ್ನು ಅಂತರರಾಷ್ಟ್ರೀಯವಾಗಿ ಇನ್ನೂ ದೊಡ್ಡ ಮಟ್ಟದಲ್ಲಿ ಬಿಡುಗಡೆ ಮಾಡಲು ಚಿತ್ರತಂಡ ನಿರ್ಧರಿಸಿದೆ. ಹೀಗಾಗಿ ಮತ್ತೊಮ್ಮೆ ಬಿಡುಗಡೆಯನ್ನು ಮುಂದೂಡಿದೆ.

ಕೆವಿಎನ್ ಪ್ರೊಡಕ್ಷನ್ ಹಾಗೂ ಯಶ್ ಅವರ ಮಾನ್‌ಸ್ಟರ್ ಮೈಂಡ್ ಕ್ರಿಯೇಷನ್ಸ್ ನಿರ್ಮಾಣದ ಈ ಸಿನಿಮಾವನ್ನು ಗೀತು ಮೋಹನ್‌ದಾಸ್ ನಿರ್ದೇಶಿಸಿದ್ದಾರೆ. ನಯನತಾರಾ, ಕಿಯಾರಾ ಅಡ್ವಾಣಿ, ಹುಮಾ ಖುರೇಷಿ, ರುಕ್ಮಿಣಿ ವಸಂತ್ ಮುಂತಾದವರು ತಾರಾಬಳಗದಲ್ಲಿದ್ದಾರೆ.



ಕಿಶೋರ್ ಫಿಲ್ಮ್ಸ್ ತೆಕ್ಕೆಗೆ 'ಪೆದ್ದಿ'

ತೆಲುಗಿನ ಖ್ಯಾತ ನಟ ರಾಮ್‌ಚರಣ್ ನಟನೆಯ 'ಪೆದ್ದಿ' ಸಿನಿಮಾವನ್ನು ಕರ್ನಾಟಕದಲ್ಲಿ 'ಜೇಮ್ಸ್' ಸಿನಿಮಾ ನಿರ್ಮಾಪಕ ಕಿಶೋರ್ ಪತ್ತಿಕೊಂಡ ವಿತರಣೆ ಮಾಡಲಿದ್ದಾರೆ.

ನಿರ್ಮಾಪಕ ಹಾಗೂ ವಿತರಕ ಕಿಶೋರ್ ಪತ್ತಿಕೊಂಡ ಅವರ 'ಕಿಶೋರ್ ಫಿಲ್ಮ್ಸ್' ಬ್ಯಾನರ್ ಮುಖಾಂತರ ರಾಜ್ಯದಾದ್ಯಂತ ಜೂನ್ 4ರಂದು ಚಿತ್ರ ಬಿಡುಗಡೆಯಾಗಲಿದೆ. ಬುಚ್ಚಿ ಬಾಬು ಸನಾ ನಿರ್ದೇಶಿಸಿರುವ ಈ ಸಿನಿಮಾದಲ್ಲಿ ನಾಯಕಿಯಾಗಿ ಜಾಹ್ನವಿ ಕಪೂರ್ ನಟಿಸಿದ್ದು, ನಟ ಶಿವರಾಜ್‌ಕುಮಾರ್ ಪ್ರಮುಖ ಪಾತ್ರದಲ್ಲಿದ್ದಾರೆ. ಇದು ಅವರ ಮೊದಲ ತೆಲುಗು ಸಿನಿಮಾ. ಜಗಪತಿ ಬಾಬು, ದಿವೇಂದು ಶರ್ಮಾ ಸೇರಿದಂತೆ ದೊಡ್ಡ ತಾರಾಬಳಗವೇ ಸಿನಿಮಾದಲ್ಲಿದೆ.

'ಪೆದ್ದಿ' ಸ್ಪೋರ್ಟ್ಸ್ ಆ್ಯಕ್ಷನ್ ಡ್ರಾಮಾ ಆಗಿದ್ದು, ಎ.ಆರ್. ರೆಹಮಾನ್ ಸಂಗೀತ ನಿರ್ದೇಶನ ಮಾಡಿದ್ದಾರೆ. ವೃದ್ಧಿ ಸಿನಿಮಾಸ್ ಬ್ಯಾನರ್ ಅಡಿಯಲ್ಲಿ ವೆಂಕಟ ಸತೀಶ್ ಕಿಲಾರು ಈ ಸಿನಿಮಾ ನಿರ್ಮಾಣ ಮಾಡಿದ್ದು, ಮೈತ್ರಿ ಮೂವಿ ಮೇಕರ್ಸ್ ಮತ್ತು ಸುಕುಮಾರ್ ರೈಟಿಂಗ್ಸ್ ಬ್ಯಾನರ್‌ಗಳು ಚಿತ್ರವನ್ನು ಪ್ರಸ್ತುತಪಡಿಸುತ್ತಿವೆ.

ಕೋಲ್ಕತ್ತ ಸ್ಪಿನ್ ದಾಳಿಗೆ ಕುಸಿದ ಡೆಲ್ಲಿ

ಫಿನ್ ಅಲೆನ್ ಅಜೇಯ ಶತಕ • ಅಕ್ಷರ್ ಪಟೇಲ್ ಪಡೆಯ ಪ್ಲೇ ಆಫ್ ಕನಸು ಭಗ್ನ

ನವದೆಹಲಿ (ಪಿಟಿಐ): ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಸ್ಪಿನ್ನರ್‌ಗಳು ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಸಾಧಾರಣ ಮೊತ್ತಕ್ಕೆ ಕಟ್ಟಿಹಾಕಿದರು. ನಂತರ ಫಿನ್ ಅಲೆನ್ ಅಮೋಘ ಶತಕ ಹೊಡೆದು ಡೆಲ್ಲಿಯ ಗಾಯಕ್ಕೆ ಉಪ್ಪು ಸವರಿದರು. ಇದರೊಂದಿಗೆ ಕೋಲ್ಕತ್ತ ತಂಡವು ಎಂಟು ವಿಕೆಟ್‌ಗಳ ಭರ್ಜರಿ ಜಯ ದಾಖಲಿಸಿತು.

ಸತತ ನಾಲ್ಕು ಪಂದ್ಯಗಳನ್ನು ಗೆದ್ದ ಅಜಿಂಕ್ಯಾ ರಹಾನೆ ಪಡೆಯು ಪ್ಲೇ ಆಫ್ ಆಸೆಯನ್ನು ಜೀವಂತವಾಗಿ ಉಳಿಸಿಕೊಂಡಿತು. ತವರಿನಲ್ಲಿ ಸತತ ಐದನೇ ಪಂದ್ಯ ಸೋತ ಅಕ್ಷರ್ ಪಟೇಲ್ ಬಳಗದ ಪ್ಲೇಆಫ್ ಕನಸು ಭಗ್ನಗೊಂಡಿದೆ.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಐಪಿಎಲ್ ಪಂದ್ಯದಲ್ಲಿ ಕೋಲ್ಕತ್ತ ತಂಡದ ಸ್ಪಿನ್ ತ್ರಿವಳಿಗಳಾದ ಅನುಕೂಲ್ ರಾಯ್ (31ಕ್ಕೆ2), ಸುನಿಲ್ ನಾರಾಯಣ್ (17ಕ್ಕೆ1) ಹಾಗೂ ವರುಣ್ ಚಕ್ರವರ್ತಿ (4-0-28-0) ಅವರ ಪರಿಣಾಮಕಾರಿ ದಾಳಿಯಿಂದಾಗಿ ಡೆಲ್ಲಿ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 142 ರನ್ ಮಾತ್ರ ಗಳಿಸಿತು.

ಗುರಿ ಬೆನ್ನಟ್ಟಿದ ಅಲೆನ್ ಅಜೇಯ ಶತಕದ (100; 47ಎ) ಬಲದಿಂದ ತಂಡವು ಇನ್ನೂ 34 ಎಸೆತಗಳು ಬಾಕಿ ಇರುವಂತೆ 2 ವಿಕೆಟ್‌ಗಳಿಗೆ 147 ರನ್ ಗಳಿಸಿ ಜಯಿಸಿ ಸಂಭ್ರಮಿಸಿತು.

ತಂಡವು 31 ರನ್ ಗಳಿಸುವಷ್ಟರಲ್ಲಿ ರಹಾನೆ (13) ಮತ್ತು ಅಂಗಕ್ರಿಷ್ ರಘುವಂಶಿ (1) ಡಗೌಟ್ ಸೇರಿಕೊಂಡರು. ಅಲೆನ್ ಮತ್ತು ಕ್ಯಾಮರಾನ್ ಗ್ರೀನ್ (ಔಟಾಗದೇ 33;27ಎ) ಮುರಿಯದ ಮೂರನೇ ವಿಕೆಟ್ ಜೊತೆಯಾಟದಲ್ಲಿ ಬಿರುಸಿನ 116 (64ಎ) ರನ್ ಗಳಿಸಿ ತಂಡವನ್ನು ಗೆಲುವಿನ ಗಡಿ ದಾಟಿಸಿದರು. ಅಲೆನ್ ಇನಿಂಗ್ಸ್‌ನಲ್ಲಿ ಐದು ಬೌಂಡರಿ ಮತ್ತು 10 ಭರ್ಜರಿ ಸಿಕ್ಸರ್ ಒಳಗೊಂಡಿದ್ದವು. ಇದು ಅವರಿಗೆ ಐಪಿಎಲ್‌ನಲ್ಲಿ ಚೊಚ್ಚಲ ಶತಕವಾಗಿದೆ.

ಇದಕ್ಕೂ ಮೊದಲು ಟಾಸ್ ಗೆದ್ದ ಕೋಲ್ಕತ್ತ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಬ್ಯಾಟರ್ ನಿಸಾಂಕ (50; 29ಎ, 4X5, 6X3) ಮತ್ತು ಕೆ.ಎಲ್. ರಾಹುಲ್ (23; 14ಎ, 4X4) ಅವರು ಡೆಲ್ಲಿ ತಂಡಕ್ಕೆ ಉತ್ತಮ ಆರಂಭ ನೀಡಿದರು.

ಕೋಲ್ಕತ್ತ ತಂಡದ ಬೌಲರ್‌ಗಳು ತಮ್ಮ ಮೇಲಿನ ನಿರೀಕ್ಷೆಯನ್ನು ಹುಸಿಗೊಳಿಸಲಿಲ್ಲ. ಕೆ.ಎಲ್.ರಾಹುಲ್ ವಿಕೆಟ್ ಪಡೆದ ಕಾರ್ತಿಕ್ ತ್ಯಾಗಿ ಪವರ್‌ಪ್ಲೇ ಹಂತದಲ್ಲಿಯೇ ಆತಿಥೇಯರಿಗೆ ಆಘಾತ ನೀಡಿದರು. ಇನ್ನೊಂದೆಡೆ ಗ್ರೀನ್ ಅವರು ನಿತೀಶ್ ರಾಣಾ (8 ರನ್) ಅವರನ್ನು ಪೆವಿಲಿಯನ್‌ಗೆ ಮರಳಿಸಿದರು. ನಂತರ ತಂಡದ ಸ್ಪಿನ್ನರ್‌ಗಳು ಮಧ್ಯಮ ಕ್ರಮಾಂಕಕ್ಕೆ ಪೆಟ್ಟುಕೊಟ್ಟರು.

ವರುಣ್ ಅವರು ವಿಕೆಟ್ ಪಡೆಯದಿದ್ದರೂ ರನ್‌ಗಳಿಗೆ ಕಡಿವಾಣ ಹಾಕಿದರು. ಇದರಿಂದಾಗಿ ಬ್ಯಾಟರ್‌ಗಳು ಒತ್ತಡಕ್ಕೊಳಗಾದರು. ಅದರ ಲಾಭ ಸ್ಪಿನ್ ಬೌಲರ್‌ಗಳಾದ ಸುನಿಲ್ ಮತ್ತು ಅನುಕೂಲ್ ಅವರಿಗಾಯಿತು. ತಂಡವು 89 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿತ್ತು. ಆದರೆ ಆಶುತೋಷ್ ಅವರು ಬೀಸಾಟದ ಮೂಲಕ ಒಂದಿಷ್ಟು ಚೇತರಿಕೆ ನೀಡಿದರು. ಅವರು 28 ಎಸೆತಗಳಲ್ಲಿ 39 ರನ್ ಸಿಡಿಸದೇ ಹೋಗಿದ್ದರೆ ಡೆಲ್ಲಿ ತಂಡವು ಮೂರಂಕಿ ಮೊತ್ತ ಗಳಿಸುವುದೂ ದುಸ್ತರವಾಗುತ್ತಿತ್ತು. ಶರ್ಮಾ ಅವರು ಮೂರು ಬೌಂಡರಿ ಮತ್ತು ಅಷ್ಟೇ ಸಂಖ್ಯೆಯ ಸಿಕ್ಸರ್ ಬಾರಿಸಿದರು.

ಫಿನ್ ಅಲೆನ್
100* ರನ್ | 5 ಬೌಂಡರಿ
47 ಎಸೆತ | 10 ಸಿಕ್ಸರ್

ಸ್ಕೋರ್ ಕಾರ್ಡ್

ಡೆಲ್ಲಿ ಕ್ಯಾಪಿಟಲ್ಸ್: 8ಕ್ಕೆ 142 (20 ಓವರ್‌ಗಳಲ್ಲಿ)
ನಿಸಾಂಕ ಸ್ಟಂಪ್ಡ್ ಅಂಗಕ್ರಿಷ್ ಬಿ ಅನುಕೂಲ್ 50 (29ಎ, 4x5, 6x3)
ರಾಹುಲ್ ಸಿ ಗ್ರೀನ್ ಬಿ ಕಾರ್ತಿಕ್ 23 (14ಎ, 4x4)
ನಿತೀಶ್ ಸಿ ಸುನಿಲ್ ಬಿ ಗ್ರೀನ್ 8 (10ಎ, 4x1)
ರಿಜ್ವಿ ಸಿ ಪಾವೆಲ್ ಬಿ ಸುನಿಲ್ 3 (7ಎ)
ಸ್ಟಬ್ಸ್ ಬಿ ಅನುಕೂಲ್ 2 (4ಎ)
ಅಕ್ಷರ್ ಸಿ ಅನುಕೂಲ್ ಬಿ ವೈಭವ್ 11 (22ಎ)
ಆಶುತೋಷ್ ಸಿ ರಹಾನೆ ಬಿ ಕಾರ್ತಿಕ್ 39 (28ಎ, 4x3, 6x3)
ವಿಪ್ರಜ್ ನಿಗಂ ಔಟಾಗದೇ 3 (3ಎ)
ಸ್ಟಾರ್ಕ್ ರನೌಟ್ (ಅಂಗಕ್ರಿಷ್/ಕಾರ್ತಿಕ್) 0 (2ಎ)
ಲುಂಗಿ ಎನ್‌ಗಿಡಿ ಔಟಾಗದೇ 1 (1ಎ)
ಇತರೆ: 2 (ವೈಡ್ 2)
ವಿಕೆಟ್ ಪತನ: 1-49 (ಕೆ.ಎಲ್. ರಾಹುಲ್, 4.6), 2-74 (ನಿತೀಶ್ ರಾಣಾ, 7.6), 3-80 (ಸಮೀರ್ ರಿಜ್ವಿ, 9.5), 4-85 (ಪಥುಮ್ ನಿಸಾಂಕ, 10.1), 5-89 (ಟ್ರಿಸ್ಟನ್ ಸ್ಟಬ್ಸ್, 10.5), 6-128 (ಅಕ್ಷರ್ ಪಟೇಲ್, 18.3), 7-140 (ಅಶುತೋಷ್ ಶರ್ಮಾ, 19.2), 8-140 (ಮಿಚೆಲ್ ಸ್ಟಾರ್ಕ್, 19.4)
ಬೌಲಿಂಗ್: ಅನುಕೂಲ್ ರಾಯ್ 4-0-31-2, ವೈಭವ್ ಅರೋರಾ 3-0-29-1, ಸುನಿಲ್ ನಾರಾಯಣ್ 4-0-17-1, ಕಾರ್ತಿಕ್ ತ್ಯಾಗಿ 4-0-25-2, ವರುಣ್ ಚಕ್ರವರ್ತಿ 4-0-28-0, ಕ್ಯಾಮರಾನ್ ಗ್ರೀನ್ 1-0-12-1

ಕೋಲ್ಕತ್ತ ನೈಟ್‌ರೈಡರ್ಸ್: 2ಕ್ಕೆ147 (14.2 ಓವರ್)
ರಹಾನೆ ರನೌಟ್ (ಸ್ಟಾರ್ಕ್) 13 (9ಎ, 4x1, 6x1)
ಫಿನ್ ಅಲೆನ್ ಔಟಾಗದೇ 100 (47ಎ, 4x5, 6x10)
ಅಂಗಕ್ರಿಷ್ ಬಿ ಪಟೇಲ್ 1 (3ಎ)
ಕ್ಯಾಮರಾನ್ ಗ್ರೀನ್ ಔಟಾಗದೇ 33 (27ಎ, 6x2)
ವಿಕೆಟ್ ಪತನ: 1-29 (ಅಜಿಂಕ್ಯ ರಹಾನೆ, 2.6), 2-31 (ಅಂಗಕ್ರಿಶ್ ರಘುವಂಶಿ, 3.4)
ಬೌಲಿಂಗ್: ಮಿಚೆಲ್ ಸ್ಟಾರ್ಕ್ 3-0-31-0, ಅಕ್ಷರ್ ಪಟೇಲ್ 4-0-27-1, ಲುಂಗಿ ಎನ್‌ಗಿಡಿ 2-0-7-0, ವಿಪ್ರಜ್ ನಿಗಂ 2-0-34-0, ಕುಲದೀಪ್ ಯಾದವ್ 3-0-41-0, ಮುಕೇಶ್ ಕುಮಾರ್ 0.2-0-7-0
ಪಂದ್ಯದ ಆಟಗಾರ: ಫಿನ್ ಅಲೆನ್

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಎಸ್‌ಆರ್‌ಎಚ್	11	7	4	0	14	0.737
ಪಿಬಿಕೆಎಸ್	10	6	3	1	13	0.571
ಆರ್‌ಸಿಬಿ	10	6	4	0	12	1.234
ಆರ್ ಆರ್	10	6	4	0	12	0.510
ಜಿ ಟಿ	10	6	4	0	12	- 0.147
ಸಿಎಸ್‌ಕೆ	10	5	5	0	10	0.151
ಕೆಕೆಆರ್	10	4	5	1	9	- 0.169
ಡಿ ಸಿ	11	4	7	0	8	- 1.154
ಎಂ ಐ	10	3	7	0	6	- 0.649
ಎಲ್‌ಎಸ್‌ಜಿ	10	3	7	0	6	- 0.934

ಆರೆಂಜ್ ಕ್ಯಾಪ್: ಹೆನ್ರಿಚ್ ಕ್ಲಾಸೆನ್, ಎಸ್‌ಆರ್‌ಎಚ್ (494 ರನ್)
ಪರ್ಪಲ್ ಕ್ಯಾಪ್: ಭುವನೇಶ್ವರ್ ಕುಮಾರ್, ಆರ್‌ಸಿಬಿ (17 ವಿಕೆಟ್)

ಸತತ ನಾಲ್ಕನೇ ಗೆಲುವಿನ ನಿರೀಕ್ಷೆಯಲ್ಲಿ ಟೈಟನ್ಸ್

ಗಿಲ್ ಪಡೆಗೆ ರಾಯಲ್ಸ್ ಸವಾಲು

ಜೈಪುರ (ಪಿಟಿಐ): ಸತತ ಮೂರು ಪಂದ್ಯಗಳಲ್ಲಿ ಬಲಾಢ್ಯ ತಂಡಗಳನ್ನು ಸದೆಬಡಿದು ಭರ್ತಿ ಆತ್ಮವಿಶ್ವಾಸದಲ್ಲಿರುವ ಗುಜರಾತ್ ಟೈಟನ್ಸ್ ತಂಡವು ಶನಿವಾರ ಇಲ್ಲಿ ರಾಜಸ್ಥಾನ ರಾಯಲ್ಸ್ ಎದುರು ಹಣಾಹಣಿ ನಡೆಸಲಿದೆ.

ತಲಾ 10 ಪಂದ್ಯಗಳನ್ನು ಆಡಿರುವ ಉಭಯ ತಂಡಗಳು ಸೋಲು, ಗೆಲುವಿನ ಲೆಕ್ಕದಲ್ಲಿಯೂ ಸಮಬಲಶಾಲಿಗಳು. ಎರಡೂ ತಂಡಗಳು ಆರರಲ್ಲಿ ಗೆದ್ದು, ನಾಲ್ಕರಲ್ಲಿ ಸೋತಿವೆ. ಆದರೆ ನಿವ್ವಳ ರನ್ ರೇಟ್‌ನಲ್ಲಿ ಮಾತ್ರ ರಾಜಸ್ಥಾನ (0.510) ತಂಡವು ಗುಜರಾತ್ (-0.147) ಬಳಗಕ್ಕಿಂತ ಮುಂದಿದೆ. ರಿಯಾನ್ ಪರಾಗ್ ಪಡೆ ಅಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ.

ಆದರೆ ರಾಜಸ್ಥಾನ ತಂಡವು ತನ್ನ ಕಳೆದ ಐದು ಪಂದ್ಯಗಳಲ್ಲಿ ಮೂರರಲ್ಲಿ ಸೋತಿದೆ. ಅದೇ ಶುಭಮನ್ ಗಿಲ್ ನಾಯಕತ್ವದ ಗುಜರಾತ್ ತಂಡವು ಸತತ ಮೂರು ಪಂದ್ಯಗಳಲ್ಲಿ ಗೆದ್ದಿದೆ.

ಡೆಲ್ಲಿ ಕ್ಯಾಪಿಟಲ್ಸ್ ಎದುರಿನ ಪಂದ್ಯದಲ್ಲಿ ರಾಜಸ್ಥಾನ ತಂಡದ ನಾಯಕ ಪರಾಗ್ ಅವರು 90 ರನ್ ಗಳಿಸಿದ್ದರು. ಅದರಿಂದಾಗಿ 225 ರನ್‌ಗಳ ಗುರಿಯನ್ನು ಒಡ್ಡಿತ್ತು. ಆದರೂ ಡೆಲ್ಲಿ ತಂಡವು ಜಯಸಾಧಿಸಿತ್ತು.

ರಾಯಲ್ಸ್ ಬ್ಯಾಟಿಂಗ್ ಉತ್ತಮವಾಗಿದೆ. ವೈಭವ್ ಸೂರ್ಯವಂಶಿ (404 ರನ್), ಯಶಸ್ವಿ ಜೈಸ್ವಾಲ್ (312) ಮತ್ತು ಧ್ರುವ ಜುರೇಲ್ (290) ಅವರು ಅಗ್ರಕ್ರಮಾಂಕದಲ್ಲಿ ರನ್‌ಗಳ ಹೊಳೆ ಹರಿಸುತ್ತಿದ್ದಾರೆ. ಅದರಲ್ಲೂ ಮೂರನೇ ಕ್ರಮಾಂಕದಲ್ಲಿ ಜುರೇಲ್ ಅವರು ಸತತವಾಗಿ ಉಪಯುಕ್ತ ಕಾಣಿಕೆ ನೀಡುತ್ತಿದ್ದಾರೆ. ಕೆಳಮಧ್ಯಮ ಕ್ರಮಾಂಕದಲ್ಲಿ ಡೊನೊವಾನ್ ಫೆರಿರಾ (229) ಅಮೋಘಲಯದಲ್ಲಿದ್ದಾರೆ.

ಗುಜರಾತ್ ತಂಡದಲ್ಲಿ ನಾಯಕ ಗಿಲ್ (378 ರನ್), ಸಾಯಿ ಸುದರ್ಶನ್ (385) ಅವರು ಉತ್ತಮ ಆರಂಭ ನೀಡುತ್ತಿದ್ದಾರೆ. ಸಾಯಿ ಈಗಾಗಲೇ ಎರಡು ಅರ್ಧಶತಕ ಮತ್ತು ಒಂದು ಶತಕ ಕೂಡ ದಾಖಲಿಸಿದ್ದಾರೆ. ಜೋಸ್ ಬಟ್ಲರ್ (335) ಅವರು ಕೂಡ ತಮ್ಮ ಆಟದಲ್ಲಿ ಸ್ಥಿರತೆ ಕಾಪಾಡಿಕೊಂಡಿದ್ದಾರೆ. ತಂಡದ ಬೌಲಿಂಗ್ ವಿಭಾಗವೂ ಉತ್ತಮವಾಗಿದೆ.

ಕಗಿಸೊ ರಬಾಡ (16 ವಿಕೆಟ್), ಪ್ರಸಿದ್ಧ ಕೃಷ್ಣ (12) ಮತ್ತು ಮೊಹಮ್ಮದ್ ಸಿರಾಜ್ (11) ಅವರು ಎದುರಾಳಿ ಬ್ಯಾಟರ್‌ಗಳಿಗೆ ಸಿಂಹಸ್ವಪ್ನರಾಗಬಲ್ಲರು.

ರಾಯಲ್ಸ್ ತಂಡದ ಜೋಫ್ರಾ ಆರ್ಚರ್, ನಾಂದ್ರೆ ಬರ್ಗರ್, ಕರ್ನಾಟಕದ ಯಶ್‌ರಾಜ್ ಪೂಂಜಾ ಮತ್ತು ಸ್ಪಿನ್ನರ್ ರವಿ ಬಿಷ್ಣೋಯಿ ಅವರು ಗುಜರಾತ್ ಬ್ಯಾಟರ್‌ಗಳಿಗೆ ಸಿಂಹಸ್ವಪ್ನರಾಗಬಲ್ಲರು. ಟೂರ್ನಿಯ ಮೊದಲ ಸುತ್ತಿನಲ್ಲಿ ಉಭಯ ತಂಡಗಳು ಮುಖಾಮುಖಿಯಾದಾಗ ರವಿ ಬಿಷ್ಣೋಯಿ ದಾಳಿಯ ಮುಂದೆ ಗುಜರಾತ್ ಸೋತಿತ್ತು. ಆ ಸೋಲಿಗೆ ಗಿಲ್ ಬಳಗವು ಮುಯ್ಯಿ ತೀರಿಸಿಕೊಳ್ಳುವುದೇ?.

ಇಂದಿನ ಪಂದ್ಯ
ರಾಜಸ್ಥಾನ ರಾಯಲ್ಸ್ V/s ಗುಜರಾತ್ ಟೈಟನ್ಸ್
ತಾಣ: ಜೈಪುರ, ಆರಂಭ: ರಾತ್ರಿ 7.30
ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಶುಭಮನ್ ಗಿಲ್ ತಾಲೀಮು ಪಿಟಿಐ ಚಿತ್ರ

ರಾಜಸ್ಥಾನ ರಾಯಲ್ಸ್ ತಂಡದ ನಾಯಕ ರಿಯಾನ್ ಪರಾಗ್ ಅಭ್ಯಾಸ 'ಎಕ್ಸ್' ಚಿತ್ರ

ಬಲಾಬಲ — 9 ಒಟ್ಟು ಪಂದ್ಯ

ಟೈಟನ್ಸ್ ಗೆಲುವು	6
ರಾಯಲ್ಸ್ ಜಯ	3

ಭಾರತ ವನಿತೆಯರು ಕ್ವಾರ್ಟರ್‌ಗೆ

ಏಷ್ಯಾ ಕಪ್ ಫುಟ್‌ಬಾಲ್: ಭಾರತಕ್ಕೆ ಮಣಿದ ಲೆಬನಾನ್

ಸುಝೌ (ಚೀನಾ), (ಪಿಟಿಐ): ಭಾರತ ತಂಡವು ಎಎಫ್‌ಸಿ 17 ವರ್ಷದೊಳಗಿನವರ ಮಹಿಳಾ ಏಷ್ಯಾ ಕಪ್ ಫುಟ್‌ಬಾಲ್ ಟೂರ್ನಿಯ ಬಿ ಗುಂಪಿನ ತನ್ನ ಕೊನೆಯ ಪಂದ್ಯದಲ್ಲಿ 4–0 ಗೋಲುಗಳಿಂದ ಲೆಬನಾನ್ ತಂಡದ ವಿರುದ್ಧ ಭರ್ಜರಿ ಜಯ ಸಾಧಿಸಿತು. ಅದರೊಂದಿಗೆ, ಕ್ವಾರ್ಟರ್‌ಫೈನಲ್ ಪ್ರವೇಶಿಸಿ, ಐತಿಹಾಸಿಕ ಸಾಧನೆ ಮೆರೆಯಿತು.

'ಸುಝೌ ತೈಹು ಫುಟ್‌ಬಾಲ್ ಸ್ಪೋರ್ಟ್ಸ್ ಸೆಂಟರ್'ನಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಭಾರತದ ಪ್ರೀತಿಕಾ ಬರ್ಮನ್ (6ನೇ ಹಾಗೂ 85ನೇ ನಿ.) ಅವಳಿ ಗೋಲು ಗಳಿಸಿದರೆ, ಅಲ್ವಾ ದೇವಿ ಸೆಂಜಮ್ (35ನೇ ನಿ.) ಹಾಗೂ ಜೋಯಾ (72ನೇ ನಿ.) ತಲಾ ಒಂದು ಗೋಲು ಹೊಡೆದರು.

ಈ ಗೆಲುವಿನೊಂದಿಗೆ ಭಾರತ ತಂಡವು (3 ಅಂಕ) ಬಿ ಗುಂಪಿನಲ್ಲಿ ಮೂರನೇ ಸ್ಥಾನ ಪಡೆಯಿತು. ಗೋಲು ಗಳಿಕೆಯ ಆಧಾರದಲ್ಲಿ ಎಂಟರ ಘಟ್ಟಕ್ಕೆ ಪ್ರವೇಶಿಸಿತು. ಇದೇ ಗುಂಪಿನಲ್ಲಿದ್ದ ಜಪಾನ್ (9 ಅಂಕ) ಹಾಗೂ ಆಸ್ಟ್ರೇಲಿಯಾ (4 ಅಂಕ) ಕ್ವಾರ್ಟರ್‌ಫೈನಲ್‌ಗೆ ಮುನ್ನಡೆದವು.

ಗೋಲು ಗಳಿಸಿದ ಸಂಭ್ರಮದಲ್ಲಿ ಅಲ್ವಾ ದೇವಿ ಸೆಂಜಮ್ 'ಎಕ್ಸ್' ಚಿತ್ರ

ಟೂರ್ನಿಯ ಇತಿಹಾಸದಲ್ಲಿ ಇದೇ ಮೊದಲ ಬಾರಿ ಭಾರತ ತಂಡ ಕ್ವಾರ್ಟರ್ ಫೈನಲ್ ಪ್ರವೇಶಿಸಿತು. ಅಲ್ಲದೆ, ಇದಕ್ಕೆ ಮೊದಲು ಯಾವುದೇ ಪಂದ್ಯದಲ್ಲಿ ಭಾರತ ವನಿತೆಯರಿಗೆ ಗೆಲುವು ದಕ್ಕಿರಲಿಲ್ಲ.

ಭಾರತವು 2005ರಲ್ಲಿ ಕೊನೆಯ ಬಾರಿ ಈ ಟೂರ್ನಿಯಲ್ಲಿ ಆಡಿತ್ತು.

ಕ್ವಾರ್ಟರ್‌ಫೈನಲ್ ನಿರ್ಧಾರ ಹೇಗೆ?: ಮೂರೂ ಗುಂಪುಗಳಲ್ಲಿ ಅಗ್ರ ಎರಡು ಸ್ಥಾನ ಪಡೆದ ತಂಡಗಳು ಎಂಟರ ಘಟ್ಟಕ್ಕೆ ನೇರ ಪ್ರವೇಶ ಪಡೆದವು. ಅಂಕಪಟ್ಟಿಯಲ್ಲಿ ಮೂರನೇ ಸ್ಥಾನ ಪಡೆದ ಎರಡು ತಂಡಗಳಿಗೆ ಗೋಲು ಗಳಿಕೆಯ ಆಧಾರದಲ್ಲಿ ಅವಕಾಶ ನೀಡಲಾಗುತ್ತದೆ. ಇದೇ ನಿಯಮದಡಿ ಭಾರತ ಹಾಗೂ ಥಾಯ್ಲೆಂಡ್‌ಗೆ ಅವಕಾಶ ದೊರೆಯಿತು.

ಭಾರತ ತಂಡವು ಸೋಮವಾರ ನಡೆಯುವ ಎಂಟರ ಘಟ್ಟದ ಪಂದ್ಯದಲ್ಲಿ ಆತಿಥೇಯ ಚೀನಾ ತಂಡವನ್ನು ಎದುರಿಸಲಿದೆ. ಇಲ್ಲಿ ಸೆಮಿಫೈನಲ್ ಪ್ರವೇಶಿಸುವ ತಂಡಗಳು ಮೊರೊಕ್ಕೊದಲ್ಲಿ ಈ ವರ್ಷ ನಡೆಯುವ ಫಿಫಾ 17 ವರ್ಷದೊಳಗಿನವರ ಮಹಿಳಾ ವಿಶ್ವಕಪ್ ಟೂರ್ನಿಯಲ್ಲಿ ಆಡುವ ಅರ್ಹತೆಯನ್ನೂ ಪಡೆದುಕೊಳ್ಳಲಿವೆ.

ಆಟಗಾರರು, ನೆರವು ಸಿಬ್ಬಂದಿ ಕೋಣೆಗಳಿಗೆ ಅನಧಿಕೃತ ವ್ಯಕ್ತಿಗಳಿಗೆ ಪ್ರವೇಶ ನಿಷೇಧ

ಐಪಿಎಲ್ 'ಹನಿಟ್ರ್ಯಾಪ್' ತಡೆಗೆ ಬಿಸಿಸಿಐ ನಿಯಮ

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ 'ಹನಿಟ್ರ್ಯಾಪ್, ಕಾನೂನು ಉಲ್ಲಂಘನೆ ಮತ್ತು ಭದ್ರತೆಗೆ ಅಪಾಯ' ಉಂಟಾಗುವುದನ್ನು ತಡೆಯಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಕಟ್ಟುನಿಟ್ಟಾದ ನಿಯಮ ಜಾರಿಗೊಳಿಸುತ್ತಿದೆ.

ಆಟಗಾರರು, ತಂಡದ ನೆರವು ಸಿಬ್ಬಂದಿ ಮತ್ತು ಅಧಿಕಾರಿಗಳು ತಂಗಿರುವ ಹೋಟೆಲ್ ಕೋಣೆಗಳಿಗೆ ಅನಧಿಕೃತ ವ್ಯಕ್ತಿಗಳ (ಪೂರ್ವಾನುಮತಿ ಪಡೆಯದವರು/ಅಪರಿಚಿತರು) ಪ್ರವೇಶವನ್ನು ನಿರ್ಬಂಧಿಸಲಾಗಿದೆ. ಐಪಿಎಲ್‌ನಲ್ಲಿ 'ದುರ್ನಡತೆ ಮತ್ತು ಶಿಷ್ಟಾಚಾರ ಉಲ್ಲಂಘನೆ' ನಡೆದಿರುವ ಕುರಿತು ಮಂಡಳಿಯ ಭ್ರಷ್ಟಾಚಾರ ನಿಗ್ರಹ ಘಟಕ (ಎಸಿಯು) ವರದಿ ನೀಡಿತ್ತು.

ಈ ಬಗ್ಗೆ ಐಪಿಎಲ್ ಟೂರ್ನಿಯ ಹತ್ತು ಫ್ರ್ಯಾಂಚೈಸಿಗಳಿಗೆ ಬಿಸಿಸಿಐ ಮಾರ್ಗಸೂಚಿಗಳನ್ನು ನೀಡಿದೆ. ಆಟಗಾರರು ಮತ್ತು ಅಧಿಕಾರಿಗಳ ಕೋಣೆಗಳಿಗೆ ಭೇಟಿ ನೀಡುವ ಅತಿಥಿಗಳು ತಂಡದ ವ್ಯವಸ್ಥಾಪಕರಿಂದ ಅಧಿಕೃತ ಅನುಮತಿ ಪತ್ರ ಪಡೆಯುವುದು ಕಡ್ಡಾಯ ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ದೇವಜೀತ್ ಸೈಕಿಯಾ

'ಪ್ರಸಕ್ತ ಐಪಿಎಲ್ ಆವೃತ್ತಿಯಲ್ಲಿ ನಡೆದಿರುವ ಕೆಲವು ಘಟನೆಗಳನ್ನು ಅವಲೋಕಿಸಿದ ನಂತರ ಮಾರ್ಗದರ್ಶಿ ಸೂತ್ರಗಳನ್ನು ಸಿದ್ಧಪಡಿಸಿ ನೀಡಲಾಗಿದೆ. ವೃತ್ತಿಪರತೆ, ಶಿಸ್ತು, ಸುರಕ್ಷತೆ ಕುರಿತ ಜಾಗೃತಿ ಮತ್ತು ಶಿಷ್ಟಾಚಾರ ಪಾಲನೆಯನ್ನು ಎಲ್ಲ ಭಾಗಿದಾರರೂ ಮಾಡಬೇಕು ಎಂಬುದು ನಮ್ಮ ಉದ್ದೇಶ' ಎಂದು ಬಿಸಿಸಿಐ ಕಾರ್ಯದರ್ಶಿ ದೇವಜೀತ್ ಸೈಕಿಯಾ ಅವರು ಫ್ರ್ಯಾಂಚೈಸಿಗಳ ಸಿಇಒಗಳಿಗೆ ಬರೆದಿರುವ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಈ ಪತ್ರವು ಪಿಟಿಐ ಸುದ್ದಿಸಂಸ್ಥೆಗೆ ಲಭ್ಯವಾಗಿದೆ.

'ಅನುಚಿತ ಘಟನೆಗಳನ್ನು ಯಾವುದೇ ಕ್ರಮ ಕೈಗೊಳ್ಳದೇ ಬಿಟ್ಟರೆ ಟೂರ್ನಿಯ ಘನತೆಗೆ ಧಕ್ಕೆಯಾಗುವ ಅಪಾಯವಿರುತ್ತದೆ. ಸಂಬಂಧಪಟ್ಟ ಫ್ರ್ಯಾಂಚೈಸಿಗಳು ಮತ್ತು ಆಡಳಿತ ಸಂಸ್ಥೆಯಾಗಿ ಬಿಸಿಸಿಐ ಹೊಣೆಹೊತ್ತು ಟೂರ್ನಿಯ ಘನತೆ, ಗೌರವ ಕಾಪಾಡಬೇಕು' ಎಂದು ಹೇಳಿದ್ದಾರೆ.

ಕೆಲವು ಆಟಗಾರರು ಮತ್ತು ನೆರವು ಸಿಬ್ಬಂದಿಯು ಅನಧಿಕೃತ ವ್ಯಕ್ತಿಗಳು ತಮ್ಮ ಕೋಣೆಗಳಿಗೆ ಪ್ರವೇಶಿಸಲು ಅವಕಾಶ ಕೊಟ್ಟಿರುವುದನ್ನು ಬಿಸಿಸಿಐ ಗಮನಿಸಿದೆ. ಈ ಪ್ರಕರಣಗಳಲ್ಲಿ ತಂಡದ ವ್ಯವಸ್ಥಾಪಕರಿಗೆ ಅನಧಿಕೃತ ವ್ಯಕ್ತಿಗಳ ಕುರಿತ ಯಾವುದೇ ಮಾಹಿತಿ ಇರಲಿಲ್ಲ ಮತ್ತು ಅವರಿಂದ ಅನುಮತಿ ಕೂಡ ಪಡೆದಿರಲಿಲ್ಲವೆನ್ನಲಾಗಿದೆ.

'ಕೆಲವು ಸಂದರ್ಶಕರ ಕುರಿತು ತಂಡದ ಮ್ಯಾನೇಜರ್‌ಗಳಿಗೆ ಯಾವುದೇ ಮಾಹಿತಿಯೇ ಇರಲಿಲ್ಲ. ಇಂತಹ ಪರಿಪಾಠವನ್ನು ತಕ್ಷಣದಿಂದಲೇ ನಿರ್ಬಂಧಿಸಲಾಗಿದೆ' ಎಂದು ಸೂಚಿಸಲಾಗಿದೆ.

'ಅನಧಿಕೃತ ವ್ಯಕ್ತಿಗಳು ಆಟಗಾರರು, ನೆರವು ಸಿಬ್ಬಂದಿ ಅಥವಾ ಅಧಿಕಾರಿಗಳನ್ನು ಹನಿಟ್ರ್ಯಾಪ್ ಮಾಡಬಹುದು. ಇದರಿಂದಾಗಿ ತಂಡದ ರಹಸ್ಯ ಮಾಹಿತಿಗಳ ಸೋರಿಕೆ ಮತ್ತಿತರ ಅಪರಾಧ ಕೃತ್ಯಗಳೂ ನಡೆಯಬಹುದು. ಇದರಿಂದಾಗಿ ಲೈಂಗಿಕ ದುರ್ನಡತೆಯಂತಹ ಪ್ರಕರಣಗಳನ್ನು ಭಾರತೀಯ ದಂಡ ಸಂಹಿತೆಯಲ್ಲಿ ಗಂಭೀರವಾಗಿ ಪರಿಗಣಿಸಲಾಗುತ್ತದೆ. ಇಂತಹ ಕೃತ್ಯಗಳು ನಡೆಯದಂತೆ ಫ್ರ್ಯಾಂಚೈಸಿಗಳು ಜಾಗೃತವಾಗಿರಬೇಕು. ದುರ್ನಡತೆ, ನಿಯಮಬಾಹಿರ ಪ್ರಕರಣಗಳು ನಡೆಯದಂತೆ ತಡೆಯಬೇಕು' ಎಂದು ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿದೆ.

ತಂಡಗಳಿಗೆ ನೇಮಕ ಮಾಡಲಾಗಿರುವ ಭದ್ರತಾ ಸಂಪರ್ಕ ಅಧಿಕಾರಿ (ಎಸ್‌ಎಲ್‌ಒ) ಮತ್ತು ತಂಡದ ಸಮನ್ವಯ ಅಧಿಕಾರಿ (ಟಿಐಒ)ಯ ಅನುಮತಿ ಇಲ್ಲದೇ ಹೋಟೆಲ್‌ಗಳಿಂದ 'ಅವೇಳೆ'ಯಲ್ಲಿ ಹೊರ ಹೋದ ಕೆಲ ಆಟಗಾರರು ಮತ್ತು ನೆರವು ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ.

'ಪಂದ್ಯಗಳು ಪ್ರಗತಿಯಲ್ಲಿರುವಾಗಲೇ ಫ್ರ್ಯಾಂಚೈಸಿ ಮಾಲೀಕರು ಅಥವಾ ಅವರ ಪ್ರತಿನಿಧಿಗಳು ತಮ್ಮ ತಂಡದ ಆಟಗಾರರೊಂದಿಗೆ ಭೇಟಿಯಾಗುವುದು, ಚರ್ಚಿಸುವುದು, ಒಡನಾಡುವುದನ್ನು ನಿರ್ಬಂಧಿಸಲಾಗಿದೆ' ಎಂದೂ ಮಂಡಳಿ ತಿಳಿಸಿದೆ.

'ಇ ಸಿಗರೇಟ್ ಮತ್ತು ನಿಷೇಧಿತ ವಸ್ತುಗಳನ್ನು ಪಂದ್ಯದ ಸಂದರ್ಭದಲ್ಲಿ ಬಳಸುವುದು ಐಪಿಎಲ್ ಮತ್ತು ಬಿಸಿಸಿಐ ನಿಯಮಗಳ ಉಲ್ಲಂಘನೆ ಮಾತ್ರವಲ್ಲ. ಭಾರತೀಯ ದಂಡಸಂಹಿತೆಯ ಪ್ರಕಾರವೂ ಅಪರಾಧವೇ. ಅಂತಹವರು ಕಾನೂನು ಕ್ರಮಕ್ಕೆ ಒಳಗಾಗುತ್ತಾರೆ' ಎಂದಿದ್ದಾರೆ.

ಈಚೆಗೆ ಪಂದ್ಯದೊಂದರ ಸಂದರ್ಭದಲ್ಲಿ ರಾಜಸ್ಥಾನ ರಾಯಲ್ಸ್ ನಾಯಕ ರಿಯಾನ್ ಪರಾಗ್ ಅವರು ಇ ಸಿಗರೇಟ್ ಸೇದುವ ವಿಡಿಯೊ ದೊಡ್ಡ ಸುದ್ದಿ ಮಾಡಿತ್ತು. ನಂತರ ಅವರಿಗೆ ಬಿಸಿಸಿಐ ದಂಡ ವಿಧಿಸಿತ್ತು. ಭಾರತದಲ್ಲಿ ಇ ಸಿಗರೇಟ್ ಬಳಕೆ, ಉತ್ಪಾದನೆಯನ್ನು ನಿಷೇಧಿಸಲಾಗಿದೆ.

ವೈದೇಹಿ, ಝೀಲ್ ಸೆಮಿಫೈನಲ್‌ಗೆ

‘ತುಮಕೂರು ಓಪನ್’ ಐಟಿಎಫ್ ಮಹಿಳಾ ಟೆನಿಸ್: ಯೂಸ್ಟಿನಾ ಮುನ್ನಡೆ

ಪ್ರಜಾವಾಣಿ ವಾರ್ತೆ

ತುಮಕೂರು: ಭಾರತದ ವೈದೇಹಿ ಚೌಧರಿ ಮತ್ತು ಝೀಲ್ ದೇಸಾಯಿ ಅವರು ಶುಕ್ರವಾರ ‘ತುಮಕೂರು ಓಪನ್’ ಐಟಿಎಫ್ ಡಬ್ಲ್ಯು–35 ಮಹಿಳಾ ಟೆನಿಸ್ ಟೂರ್ನಿಯ ಸಿಂಗಲ್ಸ್‌ನಲ್ಲಿ ಸೆಮಿಫೈನಲ್‌ಗೆ ಲಗ್ಗೆ ಹಾಕಿದರು.

ನಗರದ ವಿಶ್ವವಿದ್ಯಾಲಯದ ಟೆನಿಸ್ ಕ್ರೀಡಾಂಗಣದಲ್ಲಿ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಮೂರನೇ ಶ್ರೇಯಾಂಕದ ವೈದೇಹಿ 6–4, 6–7 (5), 7–5 ಅಂತರದಿಂದ ಆರನೇ ಶ್ರೇಯಾಂಕದ ಇಕತೆರಿನಾ ಯಶೀನಾ (ರಷ್ಯಾ) ಅವರನ್ನು ಹಿಮ್ಮೆಟ್ಟಿಸಿದರು

ನಾಲ್ಕನೇ ಶ್ರೇಯಾಂಕದ ಝೀಲ್ 4–6, 6–3, 7–5ರ ಅಂತರದಲ್ಲಿ ಪೋಲೆಂಡ್‌ನ ಅರಿನಾ ಅರಿಫುಲಿನಾ ವಿರುದ್ಧ ಗೆಲುವು ದಾಖಲಿಸಿದರು. ಐದನೇ ಶ್ರೇಯಾಂಕದ ಅರಿನಾ ಮೊದಲ ಸೆಟ್‌ನಲ್ಲಿ ಮೇಲುಗೈ ಸಾಧಿಸಿದ್ದರು. ನಂತರ ಪುಟಿದೆದ್ದ ಗುಜರಾತ್‌ನ ಝೀಲ್ ಮುಂದಿನ ಎರಡೂ ಸೆಟ್‌ಗಳನ್ನು ವಶ ಮಾಡಿಕೊಂಡರು.

ಅಗ್ರ ಶ್ರೇಯಾಂಕಿತ ಯೂಸ್ಟಿನಾ ಮಿಕೂಲ್‌ಸ್ಕೀಟೆ (ಲಿಥುವೇನಿಯಾ) 5-7, 6-0, 6-2ರಿಂದ ಸೇನಿಯಾ ಲೆಸ್ಕುಟೋವಾ ವಿರುದ್ಧ ಜಯ ಗಳಿಸಿ, ನಾಲ್ಕರ ಘಟ್ಟ ಪ್ರವೇಶಿಸಿದರು.

ಮತ್ತೊಂದು ಪಂದ್ಯದಲ್ಲಿ ಪೋಲೆಂಡ್‌ನ ಝುಝಾನ ಪಾವ್ಲಿಕೊವಾಸ್ಕಾ 1–6, 7–5, 3–0 ಅಂಕ ಗಳಿಸಿದ್ದಾಗ ಎದುರಾಳಿ ಆಟಗಾರ್ತಿ ಎಲಿನಾ ನೆಪ್ಲಿ ಗಾಯಗೊಂಡು ಅಂಕಣದಿಂದ ಹೊರನಡೆದರು.

ಸೆಮಿಫೈನಲ್ ತಲುಪಿದ ಭಾರತದ ವೈದೇಹಿ ಚೌಧರಿ

ಡಬಲ್ಸ್ ಫೈನಲ್ ಇಂದು: ಭಾರತದ ವೈದೇಹಿ ಚೌಧರಿ ಮತ್ತು ಝುಝಾನ ಪಾವ್ಲಿಕೊವಾಸ್ಕಾ ಜೋಡಿಯು 6–1, 6–2 ಸೆಟ್‌ಗಳಿಂದ ಆಕಾಂಕ್ಷಾ ದಿಲೀಪ್ ನಿಟ್ಟುರೆ (ಭಾರತ), ಮಿಚಿಕಾ ಒಝುಕಿ (ಜಪಾನ್) ಅವರನ್ನು ಸೋಲಿಸಿ ಡಬಲ್ಸ್‌ನಲ್ಲಿ ಫೈನಲ್ ಪ್ರವೇಶಿಸಿತು.

ಮತ್ತೊಂದು ಸೆಮಿಫೈನಲ್‌ನಲ್ಲಿ ಸೇನಿಯಾ ಲೆಸ್ಕುಟೋವಾ- ಎಲಿನಾ ನೆಪ್ಲಿ ಜೋಡಿಯು 6–1, 6–2ರಿಂದ ನೇರ ಸೆಟ್‌ಗಳಲ್ಲಿ ಭಾರತದ ಶ್ರಾವ್ಯಾ ಶಿವಾನಿ ಚಿಕಲಪುಡಿ ಮತ್ತು ಝೀಲ್ ಅವರನ್ನು ಸೋಲಿಸಿತು. ಶನಿವಾರ ಫೈನಲ್ ಹಣಾಹಣಿ ನಡೆಯಲಿದೆ.

ಚೆಸ್: ನಾಲ್ಕನೇ ಸ್ಥಾನದಲ್ಲಿ ಗುಕೇಶ್



ವಾರ್ಸಾ (ಪೋಲೆಂಡ್), (ಪಿಟಿಐ): ಹಾಲಿ ವಿಶ್ವ ಚಾಂಪಿಯನ್ ಡಿ. ಗುಕೇಶ್ ಅವರು ರ್‍ಯಾಪಿಡ್ ಸ್ಪರ್ಧೆಯ ಒಂಬತ್ತನೇ ಮತ್ತು ಅಂತಿಮ ಸುತ್ತಿನಲ್ಲಿ ಅಮೆರಿಕದ ಗ್ರ್ಯಾಂಡ್‌ಮಾಸ್ಟರ್ ಫ್ಯಾಬಿಯಾನೊ ಕರುವಾನ ಅವರನ್ನು ಮಣಿಸಿ ಸೂಪರ್ ರ್‍ಯಾಪಿಡ್ ಮತ್ತು ಬ್ಲಿಟ್ಝ್ ಟೂರ್ನಿಯಲ್ಲಿ ನಾಲ್ಕನೇ ಸ್ಥಾನ ಗಳಿಸಿದ್ದಾರೆ.

ಬ್ಲಿಟ್ಝ್ ವಿಭಾಗದ ಸ್ಪರ್ಧೆಗಳು ಶನಿವಾರ ಆರಂಭವಾಗಲಿವೆ. ಅದರಲ್ಲಿ ಒಟ್ಟು 18 ಸುತ್ತುಗಳು ಇರಲಿವೆ.

ರ್‍ಯಾಪಿಡ್ ಸ್ಪರ್ಧೆಯಲ್ಲಿ ಅಮೆರಿಕದ ಗ್ರ್ಯಾಂಡ್ ಮಾಸ್ಟರ್ ಹ್ಯಾನ್ಸ್ ನೀಮನ್ 13 ಅಂಕಗಳೊಂದಿಗೆ ಅಗ್ರಸ್ಥಾನ ದಲ್ಲಿದ್ದಾರೆ. ಅದೇ ದೇಶದ ಮತ್ತೊಬ್ಬ ಆಟಗಾರ ವೆಸ್ಲಿ ಸೊ (12 ಅಂಕ) ಎರಡನೇ ಸ್ಥಾನದಲ್ಲಿದ್ದಾರೆ. 19 ವರ್ಷದ ಗುಕೇಶ್ 9 ಅಂಕ ಗಳಿಸಿದ್ದಾರೆ.

ಆರ್ಚರಿ: ಸೆಮಿಗೆ ಸಿಮ್ರನ್‌ಜೀತ್, ಸಾಹಿಲ್

ಸಿಮ್ರನ್‌ಜೀತ್

ಶಾಂಘೈ (ಪಿಟಿಐ): ಭಾರತದ ಬಿಲ್ಗಾರರಾದ ಸಿಮ್ರನ್‌ಜೀತ್ ಕೌರ್ ಮತ್ತು ಸಾಹಿಲ್ ಜಾಧವ್ ಅವರು ಇಲ್ಲಿ ನಡೆಯುತ್ತಿರುವ ಆರ್ಚರಿ ವಿಶ್ವಕಪ್‌ನಲ್ಲಿ ಅಮೋಘ ಪ್ರದರ್ಶನ ನೀಡಿ ಸೆಮಿಫೈನಲ್ ಪ್ರವೇಶಿಸಿದ್ದಾರೆ.

ಏಷ್ಯನ್ ಗೇಮ್ಸ್ ತಂಡ ವಿಭಾಗದಲ್ಲಿ ಕಂಚು ಗೆದ್ದಿದ್ದ ಸಿಮ್ರನ್‌ಜೀತ್ ಅವರು ವೈಯಕ್ತಿಕ ರಿಕರ್ವ್ ಸ್ಪರ್ಧೆಯಲ್ಲಿ ನಾಲ್ಕರ ಘಟ್ಟ ಪ್ರವೇಶಿಸುವ ಮೂಲಕ ಪದಕದ ಭರವಸೆ ಮೂಡಿಸಿದ್ದಾರೆ.

ಅರ್ಹತಾ ಸುತ್ತಿನಲ್ಲಿ ಅನುಭವಿ ದೀಪಿಕಾ ಕುಮಾರಿ ಅವರಿಗಿಂತ ಮೂರು ಅಂಕ ಹಿಂದಿದ್ದ ಹರಿಯಾಣದ 27 ವರ್ಷದ ಸಿಮ್ರನ್‌ಜೀತ್ ಅವರು ಭಾರತ ಮಹಿಳಾ ತಂಡದಲ್ಲಿ ಸ್ವಲ್ಪ ದರಲ್ಲೇ ಸ್ಥಾನ ಕಳೆದುಕೊಂಡರು. ಆದರೆ, ವೈಯಕ್ತಿಕ ಸ್ಪರ್ಧೆಯಲ್ಲಿ ಅಮೋಘ ಪ್ರದರ್ಶನ ನೀಡಿದರು. ಕ್ವಾರ್ಟರ್ ಫೈನಲ್‌ನಲ್ಲಿ 6-0 (27-24, 28-26, 29-26) ಯಿಂದ ತೈವಾನ್‌ನ ಫಾಂಗ್ ಯೂ ಜು ಅವರನ್ನು ಸೋಲಿಸಿದರು.

ಪುರುಷರ ಕಾಂಪೌಂಡ್ ವೈಯಕ್ತಿಕ ಸ್ಪರ್ಧೆಯಲ್ಲಿ ಸಾಹಿಲ್ ಜಾಧವ್ ಅವರು ಆಸ್ಟ್ರಿಯಾದ ನಿಕೊ ವೀನರ್ ಅವರನ್ನು ಶೂಟ್ ಆಫ್‌ನಲ್ಲಿ ಸೋಲಿಸುವ ಮೂಲಕ ಸೆಮಿಫೈನಲ್‌ಗೆ ಮುನ್ನಡೆದರು.

ಆದರೆ, ಕಾಂಪೌಂಡ್ ವಿಭಾಗದ ಸ್ಪರ್ಧೆಯಲ್ಲಿ ಭಾರತ ಪುರುಷರ ತಂಡ, ಮಹಿಳೆಯರ ತಂಡ ಮತ್ತು ಮಿಶ್ರ ತಂಡವು ನಿರಾಸೆ ಅನುಭವಿಸಿತು.

ಜೆಎಫ್‌ಸಿಗೆ ಬಿಎಫ್‌ಸಿ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಲಿ ಆವೃತ್ತಿಯಲ್ಲಿ ತವರಿನಾಚೆ ಅಜೇಯ ದಾಖಲೆ ಹೊಂದಿರುವ ಬೆಂಗಳೂರು ಎಫ್‌ಸಿ ತಂಡವು ಶನಿವಾರದ ಇಂಡಿಯನ್ ಸೂಪರ್ ಲೀಗ್‌ನ ಪಂದ್ಯದಲ್ಲಿ ಜಮ್ಶೆಡ್‌ಪುರ ಎಫ್‌ಸಿ ತಂಡವನ್ನು ಎದುರಿಸಲಿದೆ.

ಈ ಬಾರಿಯ ಆವೃತ್ತಿಯಲ್ಲಿ ಪ್ಲೇ ಆಫ್ ಮತ್ತು ಫೈನಲ್ ಪಂದ್ಯ ಇರುವುದಿಲ್ಲ. 14 ತಂಡಗಳು ಲೀಗ್ ಹಂತದಲ್ಲಿ 13 ಪಂದ್ಯಗಳನ್ನು ಆಡಿ, ಅಂಕಪಟ್ಟಿಯಲ್ಲಿ ಅಗ್ರಸ್ಥಾನ ಪಡೆಯುವ ತಂಡವು ಚಾಂಪಿಯನ್ ಆಗಲಿದೆ. 10 ಪಂದ್ಯಗಳಿಂದ 21 ಅಂಕ ಗಳಿಸಿರುವ ಈಸ್ಟ್ ಬೆಂಗಾಲ್ ತಂಡವು ಸದ್ಯ ಅಗ್ರಸ್ಥಾನದಲ್ಲಿದೆ.

ಬಿಎಫ್‌ಸಿ ಮತ್ತು ಜಮ್ಶೆಡ್‌ಪುರ (ಜೆಎಫ್‌ಸಿ) ತಂಡಗಳು ಈಗಾಗಲೇ 11 ಪಂದ್ಯಗಳಲ್ಲಿ ಆಡಿದ್ದು, ಅವುಗಳಿಗೆ ಇನ್ನೆರಡು ಪಂದ್ಯಗಳು ಮಾತ್ರ ಉಳಿದಿವೆ. 11 ಪಂದ್ಯಗಳಿಂದ 21 ಅಂಕ ಗಳಿಸಿರುವ ಜಮ್ಶೆಡ್‌ಪುರ ತಂಡವು ಅಂಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದ್ದು, ಪ್ರಶಸ್ತಿ ರೇಸ್‌ನಲ್ಲಿ ಭದ್ರವಾಗಿ ನೆಲೆಯೂರಲು ಪ್ರಯತ್ನಿಸುತ್ತಿದೆ. ಆ ತಂಡದ ಚೊಚ್ಚಲ ಕಿರೀಟದ ಕನಸಿಗೆ ಅಡ್ಡಿಯಾಗಲು ಬಿಎಫ್‌ಸಿ ಸಜ್ಜಾಗಿದೆ.

ಸುನಿಲ್ ಚೆಟ್ರಿ ಬಳಗವು 11 ಪಂದ್ಯಗಳಿಂದ 17 ಅಂಕ (4 ಗೆಲುವು, 5 ಡ್ರಾ, 2 ಸೋಲು) ಗಳಿಸಿದ್ದು, ಪ್ರಶಸ್ತಿಯ ಆಸೆ ಕಮರಿದೆ. ಸದ್ಯ ಏಳನೇ ಸ್ಥಾನದಲ್ಲಿರುವ ತಂಡವು ಮುಂದಿನ ಎರಡೂ ಪಂದ್ಯಗಳನ್ನು ಗೆದ್ದು, ಅಂಕಪಟ್ಟಿಯಲ್ಲಿ ಉತ್ತಮ ಸ್ಥಾನದೊಂದಿಗೆ ಅಭಿಯಾನ ಮುಗಿಸುವ ಛಲದಲ್ಲಿದೆ.

ತಾಲೀಮು ನಡೆಸಿದ ಬಿಎಫ್‌ಸಿ ಆಟಗಾರ ರಯಾನ್ ವಿಲಿಯಮ್ಸ್

ಬಿಎಫ್‌ಸಿ ತಂಡವು ತನ್ನ ಕೊನೆಯ ನಾಲ್ಕು ಪಂದ್ಯಗಳ ಪೈಕಿ ಮೂರರಲ್ಲಿ ಡ್ರಾ ಸಾಧಿಸಿದ್ದರೆ, ಒಂದರಲ್ಲಿ ಸೋತಿದೆ. ಜಮ್ಶೆಡ್‌ಪುರದ ಜೆಆರ್‌ಡಿ ಟಾಟಾ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಮೈದಾನದಲ್ಲಿ ನಡೆಯುವ ಹಣಾಹಣಿಯಲ್ಲಿ ಗೆಲುವಿನ ಹಳಿಗೆ ಮರಳುವತ್ತ ಚಿತ್ತ ಹರಿಸಿದೆ.

ಐಎಸ್‌ಎಲ್‌ನಲ್ಲಿ ಉಭಯ ತಂಡಗಳು ಈತನಕ 18 ಬಾರಿ ಮುಖಾಮುಖಿಯಾಗಿದ್ದು, ಈ ಪೈಕಿ 9 ಬಾರಿ ಬಿಎಫ್‌ಸಿ ತಂಡ ಜಯ ಗಳಿಸಿದೆ. ಐದು ಸಲ ಜಮ್ಶೆಡ್‌ಪುರ ಗೆಲುವು ಸಾಧಿಸಿದ್ದರೆ, ಉಳಿದ ನಾಲ್ಕು ಪಂದ್ಯಗಳು ಡ್ರಾನಲ್ಲಿ ಮುಕ್ತಾಯವಾಗಿವೆ.

ಬೆಂಗಳೂರು ತಂಡದ ಸ್ಟಾರ್ ಆಟಗಾರರಾದ ಆಶಿಕ್ ಕುರುಣಿಯನ್ ಮತ್ತು ನಿಖಿಲ್ ಪೂಜಾರಿ ಅವರು ಈ ಪಂದ್ಯಕ್ಕೂ ಅಲಭ್ಯರಾಗಿದ್ದಾರೆ. ಗಾಯದ ಸಮಸ್ಯೆಯಿಂದ ಅವರು ಹೊರಗುಳಿದಿರುವುದು ತಂಡಕ್ಕೆ ದೊಡ್ಡ ಹಿನ್ನಡೆಯಾಗಿದೆ.

ಪಂದ್ಯ ಆರಂಭ: ರಾತ್ರಿ 7.30

*₹ 10.99 lakh for e VITARA Delta. Battery EMI: ₹ 3.99/km (subject to financier terms). Taxes and statutory charges are extra. Visit dealership for full T&Cs. | *As certified by Kantar IMRB for an OEM platform for end-to-end usage as on November 28, 2025. | *543 km range: Certified range; actual results may vary by driving conditions and usage. | *ADAS features are for driver assistance only. Driver is responsible for safe and attentive driving. | *Always wear your seatbelt. | *Mentioned ownership plan is for e VITARA Delta variant. Calculation is done assuming vehicle is running 60 km per day, excluding charging cost. Valid on retail sales for the e VITARA till 31st May '26, capped at 1 000 units of electricity (kWh) per customer or 1 Year from the purchase of the vehicle, whichever is earlier. Assured buyback plan is available on payment basis with the option of 3 years/45 000 km or 4 years/60 000 km ownership plans (whichever is earlier). The program is offered through an Insurance company. e VITARA comes with standard warranty of 3 years/1 00 000 km with an option of extending the same on payment basis to 5 years/1 40 000 km and service activated coverage for 6th to 8th year for EV related components.

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

The California Holiday Village

RK ENTERPRISES

Residential

DTCP APPROVED Sites

DTCP APPROVED

E-KHATA SITES

ದೇವನಹಳ್ಳಿ

ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ 45 ನಿಮಿಷಗಳ ಪ್ರಯಾಣ

ಈಶಾ ಫೌಂಡೇಶನ್‌ನಿಂದ ಕೇವಲ 25 ನಿಮಿಷಗಳ ಪ್ರಯಾಣ

OFFER PRICE Rs.699 per sq ft Onwards

• ಸೈಟುಗಳು ನೋಂದಣಿ ಮತ್ತು ಮನೆ ನಿರ್ಮಾಣಕ್ಕೆ ಸಿದ್ಧವಾಗಿದೆ. • 100% ಕಾನೂನಾತ್ಮಕ ದಾಖಲೆ ಪತ್ರಗಳು • ಅಭಿವೃದ್ಧಿಪಡಿಸಿದ ಲೇಔಟ್ • ನಿವೇಶನ ಖರೀದಿಸಲು ಬ್ಯಾಂಕ್ ಸಾಲ ಸೌಲಭ್ಯವಿದೆ

ಸೌಲಭ್ಯಗಳು : • ನೀರು • ಬೀದಿ ದೀಪ • ರಸ್ತೆಗಳು • ಪಾರ್ಕ್ • ವಿದ್ಯುತ್ • ಅಂಡರ್ ಗ್ರೌಂಡ್ ವಾಟರ್ ಲೈನ್ಸ್

Site dimension: 30x40 onwards

www.rkcalifornia.com

ಸೈಟ್ ಭೇಟಿಗಾಗಿ ಕರೆ ಮಾಡಿ : 8880665577

Prime Location Premium Plots for Sale

Triveni GARDENIA

BMRDA/NPA ಅನುಮೋದಿತ 'E' ಖಾತಾ ಸೈಟುಗಳು

ದಾಬಸ್ ಪೇಟೆ ಹತ್ತಿರ

ಬೆಂಗಳೂರು-ತುಮಕೂರು (NH-48)
10 ಲೈನ್ ಗ್ರೀನ್ ಎಕ್ಸ್‌ಪ್ರೆಸ್‌ವೇ ಗೆ ಹೊಂದಿಕೊಂಡಿದೆ

STRR ಗೆ ರಸ್ತೆಗೆ ಸಂಪರ್ಕವಿದೆ, ಕ್ವಿನ್ ಸಿಟಿ (ಜ್ಞಾನ ಆರೋಗ್ಯ ಸೇವೆ, ನವೀನತೆ ಮತ್ತು ಸಂಶೋಧನಾ ನಗರ) ದಾಬಸಪೇಟೆ ಸಮೀಪ ₹40,000 ಕೋಟಿ ಮೆಗಾ ಪ್ರಾಜೆಕ್ಟ್

• ಪ್ರತ್ಯೇಕ ನೀರಿನ ಸಂಪರ್ಕ • ಮಕ್ಕಳ ಆಟದ ಉದ್ಯಾನ • ರಸ್ತೆ ದೀಪಗಳು • ಅವಿನ್ಯೂ ಮರಗಳ ನೆಡುವಿಕೆ • ಗ್ರಾಂಡ್ ವೆಲ್ಕಮ್ ಆರ್ಚ್ • ಚರಂಡಿ ನೀರು ಶುದ್ಧೀಕರಣ ಘಟಕ • 24x7 ಭದ್ರತೆ ಮತ್ತು ನಾಗರಿಕ ಸೌಲಭ್ಯಗಳು • ಗೇಟೆಡ್ ಸಮುದಾಯ • ವಿದ್ಯುತ್ ಸರಬರಾಜು • ವಾಸ್ತು ಆಧಾರಿತ ಲೇಔಟ್ • 30 ಮತ್ತು 40 ಅಡಿ ಸಿಸಿ ರಸ್ತೆಗಳು

ನಿವೇಶನ ನೋಂದಣಿ ಮತ್ತು ಮನೆ ನಿರ್ಮಾಣಕ್ಕೆ ಸಿದ್ಧವಾಗಿದೆ, ಬ್ಯಾಂಕ್ ಸಾಲ ಲಭ್ಯವಿದೆ

ಸೈಟ್ ಭೇಟಿಗಾಗಿ ಕರೆ ಮಾಡಿ: 97392 92375, 96988 16816

THE HINDU GROUP

YOUR CAREER JOURNEY STARTS HERE

The 24th edition of The Hindu Education Plus Career Counselling Fair 2026 brings you expert guidance on entrance exams, admissions, and career paths. Interact with leading specialists in Medicine, Engineering, UPSC, CET, NEET, CA, and CMA. Explore top colleges and make informed decisions about your future.

THE HINDU EDUCATIONPLUS career counselling fair '26

Karnataka

9:30 AM - 1:00 PM
Registration : 9:00 AM

Today | SJRC Auditorium
Sri Jagadguru Renukacharya College of Science, Arts and Commerce, No: 9, Race Course Road, Ananda Rao Circle, Bengaluru

FREE ENTRY FOR ALL STUDENTS

FREE CAREER HANDBOOK

To register, Scan the QR code or visit newsth.live/CET2026PA

Chief Guest — Dr MC Sudhakar, Honourable Minister for Higher Education, Government of Karnataka

Engineering — Dr Venugopal K R, Former Vice-Chancellor, Bangalore University

Medicine — Balakrishna Shetty, MBBS, MD, DNB, MD (USA), Vice Chancellor, Sri Balaji Vidyapeeth, Puducherry,

CET Nodal — Mr Islauddin Gadyal, KAS - Administrative Officer, Karnataka Examinations Authority

General — Mr Ameen e Mudassar, Founder & CEO, CIGMA International Career Counsellor

Commerce — Ms Kavitha Paramesh, CA - Chairperson, ICAI Bengaluru Branch SIRC

Management Studies — Dr Nitu Ghosh, Professor and Director in the School of Management Studies, REVA University

Platinum Sponsors

The Institute of Chartered Accountants of India (Set up by an Act of Parliament) · CA INDIA · PRESIDENCY UNIVERSITY · REVA UNIVERSITY Bengaluru, India

Gold Sponsors

CMR UNIVERSITY · NAAC A GRADE · CHANAKYA UNIVERSITY Rooted in ideals • Ascending with ideas · EAST POINT GROUP OF INSTITUTIONS · HINDUSTAN GROUP OF INSTITUTIONS CHENNAI · RAMAIAH College of Law AUTONOMOUS

Silver Sponsors

ACS COLLEGE OF ENGINEERING · ALLIANCE UNIVERSITY · ADICHUNCHANAGIRI UNIVERSITY · BKIT, BHALKI · Credila The Education Loan Specialist · IIBS · idp · JSS SCIENCE AND TECHNOLOGY UNIVERSITY MYSURU · JSS ACADEMY OF HIGHER EDUCATION & RESEARCH MYSURU · KHAJA BANDANAWAZ UNIVERSITY · KAMMAVARI SANGHAM · Karnataka Bank · KLE Technological University · NITTE (Deemed to be University) · Navkis College of Engineering Hassan · RAJARAJESWARI COLLEGE OF ENGINEERING AUTONOMOUS INSTITUTION · SMVITM AN AUTONOMOUS INSTITUTION · SOUNDARYA INSTITUTE OF MANAGEMENT AND SCIENCE · SHANTHIVANA · SDM PUBLICATION TRUST (R), UJIRE · SHARNBASVA UNIVERSITY · SHAHEEN GROUP OF INSTITUTIONS · VVCE

Associate Sponsors

Azim Premji University · ICFAI Foundation for Higher Education (Deemed-to-be University under Section 3 of the UGC Act, 1956) · Mahindra University · MS ENGINEERING COLLEGE

Regional Sponsor

KRISTU JAYANTI (DEEMED TO BE UNIVERSITY) · ROYAL COLLEGE OF MANAGEMENT STUDIES

For more details contact: Bengaluru 97421 77743 | Mangaluru 94481 60126 | Mysuru 94488 71815 | North Karnataka 97314 00992

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Agricultural Land

Jigani

FOR SALE Agriculture land 4 ACRES ON HILLTOP, FACING BANNERGHATTA FOREST, 4 KMS TO IIM (INDIAN INSTITUTE OF MANAGEMENT) 250 acres New campus, 1 km to proposed STRR (Satellite town Ring Road), 1 km to IRR (Intermediate Ring Road), 4.5 kms to Proposed and Work Commencing of International Sports Stadium, 4.5 kms to Suryacity 6th phase, 10 kms to Anekal, Jigani and Harohalli, Rate 5 lakhs per gunta. Contact Victory Properties (a 35 yrs Real Estate company). Phone: 7411692219

FOR SALE Agriculture Prime Land 2 acres on IRR (Intermediate Ring Road) main Road, Anekal/ Jigani-Harohalli main road, 700 mtrs to STRR (Satellite town Ring Road), 4.5 kms to Proposed and Work Commencing of International Sports Stadium, 4.5 kms to Suryacity 6th phase, 10 kms to Anekal, Jigani and Harohalli, Rate 5 lakhs per gunta. Contact Victory Properties (a 35 yrs Real Estate company). Phone 7411692219

Flat

Nagarabhavi

FLATS FOR-SALE @ Nagarabhavi/ Chandra Layout 2 & 3 BHK Ready to Move In Good Location Call:9538472420 9845066608

House

Hanumanthnagar

HANUMANTHNAGAR TRIVENI Road 12th main House For Sale 2500sft Built-up 1695sft Site. Contact: 9342815025/ 9964898640

Vishweshwariah Layout

"VISHVESHWARAIAH 3RD-BLOCK 20x30 East`face 3floor House ₹1,30,00,000/- Negotiable`& 40x60`West facing`Site 40`ft`Road, ₹14000/- Negotiable. 9845793121"

Residential/ Commercial

Devanahalli

24360 SQ.FT Converted EKhata Furnished 15AC Rooms Garden 4kms Before Prestige Golfshire 15Cr No-Nego Ph:9677002197

Sites

Banashankari

BANASHANKARI 6TH STAGE- BDA-AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BDA SITE For Sale Banashankari 6th Stage 7th Block 40x60 E/F Anjanapura 7th Block 30x40 S/F: 9964627255

Electronic City

"ELECTRONIC CITY 30x40 DC.conversion E-Katha, Gated`Community 38`Sites`Sale total`1.5`acres with`Basic Amenities, Bank`Loan Available, Ready`for Registration near`VIBGYOR School, 1.75kms`from Hosa_Road, Metro_Station. 9620424103/ 9448670671"

Kempegowda Layout

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80. Contact Kumar 9945119449

BDA SITE for Sale at Kempegowda Layout, 3rd Block, F Sector, 30x40 North Facing Mob: 9901549488

Multiple Locations

RERA Approved PLOTS
Mysore, Hubli, Haveri
Near likely Airport
Nelamangala
Starting @ Rs.1599/sqft
Farm Plots Rs. 599/sqft
For Special Offer and Free Visit Contact
9916 356 000

Nagarabhavi

BDA 30X50 RHCS Layout 'A' Block, Nagarbhavi 2nd Stage, South Facing, Clear titles. Contact. 9019962007.

Nelamangala

BYRASHETTYHALLI AISHWARYA County BMRDA 40X60,East And Banashankari BDA 30X40,Sites For Sale : 9620117773/9845857006

SITE SALE 35x50 West face, Rashi gateway near D-mart, Nelamangala-Tumkur toll. Mob-9880093622

R T Nagar

R.T.NAGAR HMT Layout 30X50, Building For Sale East South Corner Excellent Location Contact 9738227522 9886904569

Vijayanagar

PRIME LOCATION SITE SALE 60x90 WEST FACING WOC ROAD RPC LAYOUT VIJAYANAGAR CONTACT: 9845038343/ 6363250343

WEEKEND CORNER ಕ್ಲಾಸಿಫೈಡ್ಸ್

Sulakshmi Silks Proudly Presents
Seere Utsava
6th SEERE UTSAVA
6ನೇ ಸೀರೆ ಉತ್ಸವ
A Celebration of Elegance
PRE VARAMAHALAKSHMI SALE
FLAT 50% OFF
on all Pure Mysore Silk Saree collections

Exclusive Health Offer!
Get a FREE Blood Checkup
(Includes 50 comprehensive tests)
on every bill above Rs. 10,000
ನಿಮ್ಮ ಆರೋಗ್ಯವೇ ನಮ್ಮ ಭಾಗ್ಯ!
6th - 17th May 2026
Address: Hemachandra Sagara Kalyana Mantapa, Jayanagar, Bengaluru
Call: 99727 18898 | 96631 27606
Experience the legacy

Vidyaranyapura

NEAR SAMBRAM College Best County 2, DC Conversion A/E Katha 40x60 WF, 30x40, 37.5x40 WF BBMP B/E Katha, Amba Bhavani Temple Back Side: 8296895858

Rajanukunte

RAJANUKUNTE, YELAHANKA, Near Presidency University, 20x30 site, DC Converted fully developed, ready for construction. 9844392575

Mysore

FOR SALE 45,500 Sqft Residential Site in the Heart of Mysuru City. Rs.17,000 per Sqft. email - linamys54@gmail.com

Vishweshwariah Layout

DIRECT OWNER 20x30, 30x40 Sites Near BDA Complex, North East Corner Kempegowda Layout: 9620696913/ 9880781399

BDA SITES Sale Sir.M Vishweshwaraiah Layout 30×40, 20×30 Narth & East Face Good Location: 8217392686

REAL ESTATE BUYING

Sites

Banashankari

BDA SITES WANTED ARKAVATI ANJANAPURA BANASHANKARI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

Kanakapura Road

WANTED SITE 40x60 30x40 BCCHS LAYOUT NARAYANNAGAR BANASHANKARI 6th STAGE, ANJANAPURA KANAKAPURA ROAD BROKER EXCUSE. Call 9663454878.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Industrial And Factory

AVAILABLE INDUSTRIAL Warehouse 160000 sqft Vijipura Hoskote Contact: 9341234288/ 9663224353/ 9845417487.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

BHARATH EDUCATION SOCIETY®
BES DEGREE COLLEGE
Recognised by UGC. Approved by AICTE.
Affiliated to Dr. MMS BCU, Re-accredited B++ Grade by NAAC.
27, Sahakara Rathna B.L. Lakke Gowda Road, 16th Main, Jayanagar 4th Block, Bengaluru-560011

Sahakara Rathna
B.L. Lakke Gowda
Founder
B.E.S Institutions

✆ 080 - 2663 7295 / 94488 48416
Email: besddcol@yahoo.co.in
besdegreecol@gmail.com
Website: www.besinstitutions.com
SHAPE YOUR CAREER WITH INTEGRATED SKILL ENHANCEMENT PROGRAMMES

Sri S.T. Somashekhar
Hon. President, Bharath Education Society
MLA, Yeshwanthpura Constituency,
Former Minister, Govt of Karnataka

PROGRAMMES OFFERED FOR : 2026-27
B.Com | BBA | BCA
BA | HEP | HES | HEK
Languages Offered: English, Kannada, Hindi & Sanskrit
As per Dr. MMS BCU Syllabus

BES EVENING DEGREE COLLEGE
Re-accredited B Grade by NAAC.
✆ 080-26638415 / 99455 46840 E-mail: besedceve@gmail.com
PROGRAMMES OFFERED FOR : 2026-27
B.Com | BA | HEP | HES | HEK

Sri..Nirmal Kumar K.R., President, Bharath Education Society
Prof N.S. Vijaya, Secretary, Bharath Education Society
Dr. N. Ashok Kumar, Principal, BES Degree College
Dr. Rekha Kowshik P.R., Principal, BES Evening Degree College
HOSTEL FACILITY AVAILABLE FOR GIRLS
BES-26701

FOR SALE
80% STAKE IN RUNNING GRANITE QUARRY ILKAL KARNATAKA
Licensed Area : 8 Acres
MINING LEASE HOLDER :
MAARA GRANITES PVT LTD
ILKAL PINK GRANITE
ALL REQUIRED LICENSE AND CLEARANCES IN PLACE
Price : Slightly Negotiable ₹20Crores
Interested Parties Contact maaragranites@gmail.com

Godown

GODOWN FOR Rent 1800-2000 sft at 100/14-2,1st cross Nagappastreet, Seshadripuram Bangalore-20.Contact: 9900632406/ 9845132406

JOB OPPORTUNITIES

Wanted

WANTED CIVIL Engineers/ Architects. Fresh/ Retired for reputed firm. Whatsapp: 9916965369. ramesh_ridp@yahoo.co.in

BUSINESS

Business to Business

Business

FOR BRANDING, DIGITAL, SOCIAL MEDIA MARKETING, BUS BACK, AUTO BACK, HOARDINGS, NO PARKING BOARDS, FLIERS, FOUR, THREE WHEELER BRANDING FOR CORPORATES, GOVERNMENT DEPARTMENTS, EDUCATIONAL INSTITUTIONS, BOUTIQUES, JEWELLERY AND ALL BUSINESS NEEDS. CONTACT VENUSCAST TECHNOLOGIES PVT LTD. UAE & INDIA. www.Venuscast.com Call: 9482303339/ 8618576685

AUTOMOTIVE

Four Wheelers Selling

Tata

TATA HEXA 2017 Model, White. Done 56,000 kms. Three new tyres are in good condition. Single owner, excellent condition. Price expected 8.30 lakhs. No loan, insurance paid. Immediate settlement. No Brokers. Negotiable to some extent. Contact: 9845885199.

PERSONAL

Change of Name

CHANGE OF NAME
I, **Ramakrishna M G,** R/at No.10, Borewell Road, Annasandrapalya, HAL, Bengaluru - 560017, have changed our minor son's name from **MANYAM RAMAKRISHNA TEJASWIN ACHARI** to **TEJASWIN MANYAM ACHARY**, vide affidavit dated 08.05.2026 before notary S. Samuel Solomon, Bengaluru. Henceforth he shall be called as **TEJASWIN MANYAM ACHARY**only.

I, RASHMI W/o Manish Kumar R/a #G12 Block C Sumadhura Srinivasam Seetharampalya, Hoodi Bangalore 560048 have changed my Name to RASHMI SINGH vide affidavit dated 5.5.2026 before notary J Anand Kumar Bangalore

I, VEENA OMPRAKASH resident of No.56, G1 Windsor Zenith Charles Campbell Road, Cox Town, Fraser Town, Bengaluru-560005 have changed my name to VEENA OMPRAKASH LUND vide affidavit dated 06/05/2026 sworn before notary Jalandhara, Bengaluru

I, SHAKUNTALA resident of No.617, 8th Main, 4th Cross, BHCS Layout, Chikkallasandra, Bengaluru-560061 have changed my name to SHAKUNTHALA vide affidavit dated 06/05/2026 sworn before notary Jalandhara, Bengaluru

PUBLIC NOTICE

PUBLIC NOTICE

Public at large are hereby informed that Smt.Vijayalakshmi W/o Late Mr.Nagaraja Reddy, Mr.Chethan and Mr.Dhanpal Reddy N., who are the children of Late Mr.Nagaraja Reddy are also the legal heirs of Mr.Hanumappa.

Mr.Hanumappa was the absolute owner of Sy.No.12/2 and Mr.S.N.Kashyap was the absolute owner of Sy.No.12/3, both situated at Arakere Village, Begur Hobli, Bangalore South Taluk. Earlier Mr.Hanumappa filed a Suit for Injunction in O.S.No.2294/1991, claiming that Mr.S.N.Kashyap was interfering with 06 Guntas of Land, which claimed to be the part of Sy.No.12/2. In the said Suit, Commissioner/Surveyor was appointed and based on his Report, the said Suit came to be dismissed stating Mr.S.N.Kashyap/his legal heirs are the owners of the said 06 Guntas of Land. The same was appealed before the Hon'ble High Court of Karnataka in RFA No.1241/2006, in which the Order of the Lower Court was upheld.

During the pendency of the said Suit, to defeat the claim of Mr.S.N.Kashyap, a collusive Partition Deed dated 16/08/2002 came to be executed by showing as if the said 06 Guntas were allotted to the share of wife and children of Mr.Nagaraja Reddy. M/s Rose Garden Housing Developers Pvt Ltd., subsequently became the absolute owner of the said 06 Guntas of Land in Sy.No.12/3 stated above. Since the aforesaid legal heirs of Mr.Hanumappa were encroaching upon the said land,M/s Rose Garden Housing Developers Pvt Ltd., filed a Suit for Declaration in O.S.No.7613/2023 and obtained Interim Order of Restraint. The same was challenged in MFA No.6250/2024 by the aforesaid legal heirs of Mr.Hanumappaon the ground that based on the Partition, Sy.No.12/2 was poded and the said 06 Guntas was numbered as Sy.No.12/4 and Khatha is standing in the name of Mrs.Vijayalakshmi, Mr.Chethan and Mr.Dhanpal Reddy N. The said MFA came to be dismissed. M/s Rose Garden Housing Developers Pvt Ltd., has now amalgamated with our clients i.e., M/s Nambiar International Investment Pvt Ltd.

Now, Smt.Vijayalakshi, Mr.Chethan and Mr.Dhanpal Reddy N are now trying to alienate the said property under Sy.No. 12/4. The said 06 Guntas of land earlier in dispute in the cases is the same piece of land on which now the said parties are claiming as Sy.No.12/4.

Therefore, Public at Large are hereby warned not to deal with the above said property in any manner and whoever are doing so are doing so at their own risk.

M.G.C.& Co.,
Advocates and Solicitors
No.66, 4th Cross, Xavier Layout,
Bangalore - 560047
E-Mail - mgcnco@hotmail.com

Date:06.05.2026
Place: Bangalore

DH Classifieds
DECCAN HERALD
More value, more impact
ಪ್ರಜಾವಾಣಿ
RECRUITMENT
BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY
@ 825/-*
PER SQCM
SINGLE / DOUBLE / MULTIPLE COLUMN

www.dhclassifieds.com
BOOK NOW
For more details contact:
+91 9845114560 | +91 9900428036
+91 9731810277 | +91 9886213331
080- 45557163/164
* Conditions apply

DH Classifieds
DECCAN HERALD
More value, more impact
ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
For more details contact:
+91 9731810277 | +91 9886213331
+91 9845114560 | +91 9900428036
080- 45557163/164
*Conditions apply

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

PRESTIGE GROUP OF INSTITUTIONS

ARKAWATHY LAYOUT | RAMPURA | GEDDALAHALLI

ICSE EXAMINATION RESULTS 2025-2026

Congratulations

TO OUR PROUD PRESTIGIANS

- DHANVITHA B M — 98% — PRESTIGE INTERNATIONAL SCHOOL
- SAKSHAM PATIL — 94.6% — PRESTIGE SCHOOL
- DEVIKA A M — 93.8% — PRESTIGE SCHOOL
- BABITHA M — 93% — PRESTIGE INTERNATIONAL SCHOOL
- MADHU SUDHAN G — 92.2% — PRESTIGE SCHOOL
- BHAVANA SHREE M — 92% — PRESTIGE INTERNATIONAL SCHOOL
- RISHIK A S — 91% — PRESTIGE SCHOOL
- TANMAY YOHANNES NASA 91% — PRESTIGE INTERNATIONAL SCHOOL
- RAMNA CHOUDHARY — 87.6% — PRESTIGE SCHOOL
- PRAJWAL J — 87% — PRESTIGE INTERNATIONAL SCHOOL

100% RESULTS

DELIVERING SUCCESS WITH CONSISTENCY

+919611745454 +919108664753
www.prestigegroupofinstitutions.com

MARTIN LUTHER SCHOOL

Girinagar, BSK 3rd Stage, Bengaluru – 50.

FOUNDATION FOR TOMORROW

Congratulations to all our Students for their excellent achievement in X Board Examination 2025 - 26

- 96.8% POSHIKA NAIDU THUMMALA
- 96.4% GAURAV R
- 95.6% HIRANMAYEE PRADEEP
- 94.56% MITHUN KUMAR M S
- 94.2% HARSHIL S
- 94.00% SRIHARI K R
- 91.8% SAMARTH KUMAR M
- 91.36% SUPRIYA R
- 91.2% NAVANEETH K GOWDA
- 90.8% B K DHANUSH
- 90.2% AYUSH M NAIR
- 90.00% ABHINAV KUMAR S
- 90.00% TANUSHA B K
- 89.8% PINKY JAIN
- 89.6% ACHINTHYA K
- 89.6% VISMAYA B V
- 89.6% SIRI S S
- 89.4% SAANIKA C
- 89.4% SAANVI R
- 89.2% SAMVITH R S
- 88.8% VISHESH R ACHAR
- 88.4% SUPREETH D KASHYAP
- 87.8% ARYAN B R
- 87.2% BHAKTI V GOYAL
- 87.2% GAGAN S
- 87.2% SRAJAN HEGDE
- 86.8% TRISHA D
- 86.2% DHAATHRI N
- 85.92% DIGANTH S D
- 85.6% KAVYA B
- 85.2% HARSH HIREN DHAKAN
- 85.00% SAANVI S GRAMOPADHYE
- 85.00% YAMUNA H N
- 85.00% KUSHAL M PATEL
- 84.7% SHARADA H RAGHAVENDRA

St.MARY'S HIGH SCHOOL & PUBLIC SCHOOL

Recognised by the Government of Karnataka & Affiliated to CISCE, New Delhi –KA160

#1, T.Dasarahalli, Bengaluru -560057. Tel : 080-28392711 E-mail: sln.smps@gmail.com, www: stmarys-school.in

CONGRATULATIONS

We extend our Heartfelt Congratulations to our achievers for their outstanding performance in the SSLC and ICSE Board Examinations 2026. The institution proudly records a 100% results, marking the 27th consecutive year of success in SSLC and the 17th consecutive year of success in ICSE

STUDENTS APPEARED	143
Distinctions	112
I Class	30
II Class	01
Students Scored 95% and above	36
Centum	86

SHAMITHA P — 99.20% — 620/625

100% RESULTS

S.S.L.C. TOPPERS 2025-26

- ROHINI ARER 99.04%-619/625
- NISHMITHA V 99.04%-619/625
- THANUSH GOWDA M S 98.72%-617/625
- DEVANK REDDY M 98.56%-616/625
- SHREYAS N R 98.24%-614/625
- GOUNIPURAM SANDHYA 97.76%-611/625
- SRUJAN BALU R 97.60%-610/625
- SRISTI KHANDELIA 97.44%-609/625
- THANMAYEE J S 97.44%-609/625
- HARSHA R SHIDENUR 97.44%-609/625
- MANJUNATH 97.12%-607/625
- SHRIVARSHA B AVATAGI 97.12%-607/625
- MAHALAKSHMI M 97.12%-607/625
- TRIVENI B C 96.64%-604/625
- DEVESH M 96.64%-604/625
- ADVAIT MURARI 96.64%-604/625
- B N SEVANTHI 96.64%-604/625
- MOHAMMED ASHRAF I NADAF 96.48%-603/625
- YASHASWINI P 96.32%-602/625
- AINIKA BANU M K 96.32%-602/625
- SHRESHTA N 96.32%-602/625
- DHANUSH GOWDA N 96%-600/625
- SNEHA K M 96%-600/625
- RUTHVIK H 95.84%-599/625
- SIDDARTHA G S 95.84%-599/625
- NAMRATHA H 95.68%-598/625
- YASHAS GOWDA H 95.68%-598/625
- KANISHKAR M 95.68%-598/625
- KARUNYA SANGEETHA N 95.68%-598/625
- TANUSHREE B R 95.52%-597/625
- AMAYA K PRADEEP 95.52%-597/625
- AKSHAY N 95.20%-595/625
- SEVANTH D B 95.20%-595/625
- POORVITHA S M 95.04%-594/625
- SUPREETH K M 95.04%-594/625

STUDENTS APPEARED	138
Distinctions	67
I Class	68
II Class	03
Students Scored 90% and above	38
Centums	09

D THEJAS — 98.2% — 491/500

100% RESULTS

ICSE TOPPERS 2025-26

- S NAVATEJ GOWDA 97.4%
- PRIYA PATIL 97.2%
- ADITI M HUDEDMANI-96.8%
- SWAPNA B PUJARI 96.2%
- DEEKSHITH DINESH SHETTY - 96%
- SHIVANI A 95.6%
- VARSHA M S 95%
- ANUSHKAA CHAKRABORTI-94.8%
- LIKITH G GOWDA 94.4%
- SUMANA R 94.4%
- YASHICA KULKARNI 94.2.%
- M KIRAN 94%
- PRAGNA H C 93%
- SINCHANA SHANKAR GOUDA - 93%
- SANJANA BHIMA GOUDA- 92.8%
- VAISHNAVI M 92.8%
- ANANYA K 92.6%
- RAKSHIIT M N 92.4%
- GNANA GANGA S P 92%
- MITHUN G 92%
- NEETHU SHREE D 92%
- K S RAJESWARI 92%
- KUSUMANJALI T 91.8%
- DRUPAD B S 91.6%
- HARI S KUMAR 91.6%
- VIJAYA LAXMI 91.6%
- ABHISHEK C 91.4%
- THARUN B R 91.4%
- PRUTHVI K N 91.2%
- DHANUSH P GOWDA - 91%
- SREYA SUJESH 90.8%
- KARTHIK 90.6%
- P HEMANTH 90.6%
- MONISHA R 90.6%
- M HRUTHIK 90%
- NAMITHA G 90%
- V VILVATHARINI 90%

ADMISSION OPEN - 2026-27

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331